

ಪ್ರಧಾನ ಸಂಪಾದಕರು

ಡಾ. ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಪಿಎಚ್.ಡಿ. ಪದವಿಯನ್ನು (ಸಂಕೇತಿ ಒಂದು ಅಧ್ಯಯನ:1993) ಪಡೆದಮೇಲೆ ಸಂಕೇತಿ ಸಮುದಾಯದ ಬಗೆಗಿನ ಅಧ್ಯಯನವನ್ನು ಮುಂದುವರೆಸಿದರು. ತಾವು ಕಲೆಹಾಕಿದ ಅಪಾರ ಮಾಹಿತಿಯನ್ನು ವಿಂಗಡಿಸಿ, ಪರಿಷ್ಕರಿಸಿ, ವಿಮರ್ಶಿಸಿ ಪ್ರಕಟಿಸಿದರು. ಅವರು ಪಿಎಚ್.ಡಿ. ಅಧ್ಯಯನಕ್ಕಾಗಿ ಪ್ರಾರಂಭಿಸಿದಾಗ ಇದ್ದ ಒಂದೆರಡು ನೂರು ಪುಟಗಳ ಆಕರ ಮಾಹಿತಿಯನ್ನು ಈ ವರೆಗೆ 10 ಸಾವಿರ ಪುಟಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆಯ 12 ಸಂಪುಟಗಳು ಪ್ರಕಟವಾಗಿವೆ, 8 ಸಂಪುಟಗಳು ಮುದ್ರಣಗೊಳ್ಳುತ್ತಿವೆ. 1983ರಲ್ಲಿ ಅವರು ಪ್ರಾರಂಭಿಸಿದ ಈ ಅಧ್ಯಯನವು ಇಂದಿಗೂ ಮುಂದು-ವರಿದಿದೆ. ಆಳವಾದ ಮತ್ತು ವಿಸ್ತಾರವಾದ ಅಧ್ಯಯನ, ಅನುಭವಗಳಿಗೆ ದಕ್ಕುವ ಕಾಣ್ಕೆಯಿಂದಾಗಿ (Vision) ಸಂಕೇತಿ ಅಧ್ಯಯನಕ್ಕೆ ವೈವಿಧ್ಯಪೂರ್ಣ ಆಯಾಮ ದೊರೆತಿದೆ.



Thanks Anima shree

Anima Anandkumar is currently a principal scientist at Amazon Web Services and a Bren professor at Caltech CMS department. Her research interests are in the areas of large-scale machine learning, non-convex optimization and high-dimensional statistics. In particular, she has been spearheading the development and analysis of tensor algorithms. She is the recipient of several awards such as the Alfred. P. Sloan Fellowship, Microsoft Faculty Fellowship, Google research award, ARO and AFOSR Young Investigator Awards, NSF Career Award, Early Career Excellence in Research Award at UCI, Best Thesis Award from the ACM Sigmetrics society, IBM Fran Allen PhD fellowship, and several best paper awards. She has been featured in a number of forums such as the yourstory, Quora ML session, Huffington post, Forbes, O'Reilly media, and so on. She received her B.Tech in Electrical Engineering from IIT Madras in 2004 and her PhD from Cornell University in 2009. She was a postdoctoral researcher at MIT from 2009 to 2010, an assistant professor at U.C. Irvine between 2010 and 2016, and a visiting researcher at Microsoft Research New England in 2012 and 2014.

ಸಂಕೇತಿ ಅಧ್ಯಯನ ಮಾಲೆ
ಪ್ರಧಾನ ಸಂಪಾದಕ
ಡಾ.ಬಿ.ಎಸ್. ಪ್ರಣತಾರ್ತಿಹರನ್



ಸಾರ್ಥ

ಕನ್ನಡ ಮೂಲ : ಎಸ್.ಎಲ್. ಭೈರಪ್ಪ
ಸಂಕೇತಿ ರೂಪ : ಬಿ.ಎಸ್. ಪ್ರಣತಾರ್ತಿಹರನ್

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು

sanketi E-lib-12 Web : 6-6-2018

ಸಂಕೇತಿ ಅಧ್ಯಯನ ಯೋಜನೆ
ಸಂಪುಟ ೧೨

SAARTHU

A Sankethi Translation of
Dr. S.L. Bhyrappa's Kannada Novel **SAARTHA**

By : Dr. B.S. Pranatartiharan
3059, 4th Cross, Gokulam Park Road, Mysore-570 002
email: bspharan@gmail.com

Published by: ....
For Samudaya Adhyayana Kendra, Mysore

Pages : lxiv+270

Price : Rs. 500-00

ಸಾರ್ಥು

ಡಾ. ಎಸ್.ಎಲ್. ಭೈರಪ್ಪನವರ
'ಸಾರ್ಥ' ಕನ್ನಡ ಕಾದಂಬರಿಯ ಸಂಕೇತಿ ರೂಪ

ಭಾಷಾಂತರ : ಡಾ. ಬಿ.ಎಸ್. ಪ್ರಣತಾರ್ತಿಹರನ್
3059, 4ನೇ ಅಡ್ಡ ರಸ್ತೆ,
ಗೋಕುಲಂ ಪಾರ್ಕ್ ರಸ್ತೆ, ಮೈಸೂರು–570 002
email: bspharan@gmail.com


ಪ್ರಕಾಶಕರು : ಸಮುದಾಯ ಅಧ್ಯಯನ ಕೇಂದ್ರದ ಪರವಾಗಿ

ಪುಟ : lxiv+270

ಬೆಲೆ: ರೂ.: 500–00

ಡಿ.ಟಿ.ಪಿ. : ಗಿರೀಶ್, ಹೇಮಲತಾ

ಒಂಬೈನೂರು ವರ್ಷಗಳ ಹಿಂದೆ
ಸಂಕಷ್ಟದ ಸಮಯದಲ್ಲಿ
ಸಹಸ್ರಾರು ಸಂಕೇತಿ ಕುಟುಂಬಗಳ
ಮಹಾವಲಸೆಯನ್ನು
ಶೆಂಕೊಟ್ಟೈ ಪ್ರಾಂತದಿಂದ ಮೈಸೂರು ಪ್ರಾಂತಕ್ಕೆ
ಯಶಸ್ವಿಯಾಗಿ ಮುನ್ನಡೆಸಿದ
ಸರಸ್ವತಿಯ ಅವತಾರವೆಂದು ಪರಿಗಣಿತಳಾದ
ಮಹಾಮಹಿಮಳಾದ
ಸಾಧ್ವಿ ಶ್ರೀನಾಚಾರಮ್ಮನ ದಿವ್ಯಸ್ಮರಣೆಗೆ



ಸಂಕೇತಿ ಅಧ್ಯಯನ

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು 900 ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟ ಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ.

ಜ್ಞಾನಗಂಗೆಗೆ ದಂಡೆಗಳಿಲ್ಲ; ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು ನಾವು. ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲ ಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹು ಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟ ಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ. ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟ ಸರಣಿ ಪ್ರಕಾಶಗೊಳ್ಳುತ್ತಿದೆ.

ಮೈಸೂರು
ವಿಜಯದಶಮಿ
೪-೧೦-೨೦೧೪

ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಸಂಕೇತಿ ಅಧ್ಯಯನ ಮಾಲೆ

ಸಂಪುಟ ೧	*ಸಂಕೇತಿ ಒಂದು ಅಧ್ಯಯನ (ಸಂಸ್ಕೃತಿ – ಸಮೀಕ್ಷೆ)*	ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೦೩
ಸಂಪುಟ ೨	*ಸಂಕೇತಿ ಶತಮಾನದ ಪತ್ರಗಳು (೧೮೯೧–೨೦೦೩)*	ಸಂ. ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೦೪
ಸಂಪುಟ ೩	*ಸಂಕೇತಿ ಅಭಿನಂದನ*	ಸಂ. ಪೂಮಗಾಮೆ ಗೋಪಿ, ೨೦೦೫
ಸಂಪುಟ ೪	*ಸಂಕೇತಿ ಭಾಷಾಧ್ಯಯನ*	ಸಂ. ಪ್ರೊ. ಎಚ್.ಎಸ್. ಅನಂತನಾರಾಯಣ, ೨೦೦೭
ಸಂಪುಟ ೫	*ಸಂಕೇತಿ ಇತಿವೃತ್ತಗಳು*	ಸಂ. ಎನ್.ಎಸ್. ಶಾರದಾ ಪ್ರಸಾದ್, ೨೦೦೮
ಸಂಪುಟ ೬	*ಸಂಕೇತಿ ಆತ್ಮಕಥೆಗಳು*	ಸಂ. ಸುಮನಾ ವಿಶ್ವನಾಥ್, ೨೦೦೮
ಸಂಪುಟ ೭	*Vibrant India*	ಸಂ. ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೦೯
ಸಂಪುಟ ೮	*ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು*	ಎನ್. ಕೇಶವಮೂರ್ತಿ, ೨೦೧೦
ಸಂಪುಟ ೯	*ಸಂಕೇತಿ ಬೇಸಾಯದ ಬದುಕು*	ವಿಜಯ್ ಅಂಗಡಿ, ಡಾ. ಎಂ.ಎಸ್. ವಿಜಯಾ ಹರನ್, ೨೦೧೦
ಸಂಪುಟ ೧೦	*Sanketi Autobiographies*	ಸಂ. ಕೆ. ಸುಂದರರಾಜು, ೨೦೧೦
ಸಂಪುಟ ೧೧	*ಸಮೀಕ್ಷೆ*	ಸಂ. ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೧೪
ಸಂಪುಟ ೧೨	ಸಾರ್ಥ (ಡಾ. ಎಸ್.ಎಲ್. ಭೈರಪ್ಪನವರ ಕಾದಂಬರಿಯ ಸಂಕೇತಿ ರೂಪ)	ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೧೪

ಮುನ್ನುಡಿ

ಅಖಿಲ ಭಾರತೀಯ ಖ್ಯಾತಿಯ ಕಾದಂಬರಿಕಾರರಾಗಿರುವ ಡಾ. ಎಸ್.ಎಲ್. ಭೈರಪ್ಪನವರ 'ಸಾರ್ಥ' ಕಾದಂಬರಿಯ ಸಂಕೇತಿ ಭಾಷೆಯ ಅನುವಾದವೇ 'ಸಾರ್ಥು'. ಈ ಅನುವಾದವನ್ನು ಸಿದ್ಧಪಡಿಸಿರುವವರು ಶ್ರೀ ಬಿ.ಎಸ್. ಪ್ರಣತಾರ್ತಿಹರನ್ ಅವರು. 'ಸಾರ್ಥ' ಈಗಾಗಲೇ ಹಿಂದೀ, ಇಂಗ್ಲಿಷ್, ಮರಾಠೀ ಮೊದಲಾದ ಭಾಷೆಗಳಿಗೆ ಅನುವಾದಗೊಂಡಿದೆ. ಈ ಭಾಷೆಗಳಿಗೆ ಅನುವಾದಗೊಳ್ಳುವುದು ವಿಶೇಷ ಸಂಗತಿಯೇನೂ ಅಲ್ಲ. ಈ ಭಾಷೆಗಳನ್ನು ಆಡುವ ಮತ್ತು ಇವುಗಳಲ್ಲಿನ ಓದುಗರ ಸಂಖ್ಯೆ ಗಣನೀಯವಾಗಿರುವುದೇ ಇದಕ್ಕೆ ಕಾರಣ. ಆದರೆ ಸಂಕೇತಿಯಂಥ ಒಂದು ಬಹು ಅಲ್ಪಸಂಖ್ಯಾತ ಭಾಷೆಗೆ ಅನುವಾದಿಸುವುದು ಮತ್ತು ಪ್ರಕಟಿಸುವುದು ನಿಜಕ್ಕೂ ಮಹಾಸಾಹಸದ ಸಂಗತಿಯೇ ಸರಿ. ಇದಕ್ಕಾಗಿ ಶ್ರೀ ಹರನ್ ಅವರನ್ನು ಮತ್ತು .... ಪ್ರಕಾಶನದ ಮಿತ್ರರನ್ನು ಹೃತ್ಪೂರ್ವಕವಾಗಿ ಅಭಿನಂದಿಸಬಯಸುತ್ತೇನೆ.

ಶ್ರೀ ಹರನ್ ಅವರು ವ್ಯಾಪಕವೂ, ಆಳವೂ ಆಗಿರುವ ಮುನ್ನುಡಿಯಲ್ಲಿ 'ಸಾರ್ಥ'ದ ಕಥೆಯನ್ನೂ, ಅದರ ವಿಶಿಷ್ಟ ಮುಖಗಳನ್ನೂ ಸಮರ್ಥವಾಗಿ ಪರಿಚಯಿಸಿರುವುದರಿಂದ ಮತ್ತೆ ಈ ಅಂಶಗಳನ್ನು ಪುನರಾವರ್ತಿಸುವ ಅಗತ್ಯವಾಗಲೀ, ಅಪೇಕ್ಷಣೀಯತೆಯಾಗಲೀ ಇಲ್ಲ. ಭೈರಪ್ಪನವರು ಇದಕ್ಕಾಗಿ ನಡೆಸಿರುವ ಅಧ್ಯಯನ, ನಡೆಸಿರುವ ಸಂಶೋಧನೆ, ಅವುಗಳ ಸ್ವಾದುಫಲವನ್ನು ಕಾದಂಬರಿಯಲ್ಲಿ ಅಳವಡಿಸಿಕೊಂಡಿರುವ ಬಗೆ ಓದುಗರಿಗೆ ಅಚ್ಚರಿಯನ್ನುಂಟುಮಾಡುತ್ತವೆ. ಶಂಕರಾಚಾರ್ಯರ ಕಾಲಕ್ಕೆ ಸಂಬಂಧಿಸಿರುವ ಈ ಕಾದಂಬರಿ ಭಾರತೀಯ ಭಾಷೆಗಳಲ್ಲಿಯೇ ವಿಶಿಷ್ಟವಾದುದು. ಅನುವಾದಕ್ಕೆ ಇಂಥದೊಂದು ಅಪೂರ್ವವೂ, ಮಹತ್ವಪೂರ್ಣವೂ ಆದ ಕಾದಂಬರಿಯನ್ನು ಆಯ್ದುಕೊಂಡಿರುವುದು ಶ್ರೀ ಹರನ್ ಅವರ ಸಾಹಸ ಪ್ರಿಯತೆಯನ್ನು ಮಾತ್ರವಲ್ಲದೆ ಅವರ ರುಚಿಶುದ್ಧಿಯನ್ನೂ ಸಾರಿ ಹೇಳುತ್ತದೆ. ಸಂಕೇತಿ ಸಮುದಾಯ ಇದಕ್ಕಾಗಿ ಶ್ರೀ ಹರನ್ ಅವರಿಗೆ ಋಣಿಯಾಗಿರಬೇಕಾಗಿದೆ.

ಸಂಕೇತಿ ಭಾಷೆಗೆ ತನ್ನದೇ ಆದ ಲಿಪಿಯಿಲ್ಲ. ಕನ್ನಡ ಲಿಪಿಯಲ್ಲಿಯೇ ಶ್ರೀ ಹರನ್ ಅವರು ಇದನ್ನು ಅಳವಡಿಸಿದ್ದಾರೆ. ಕನ್ನಡ ಸಂಸ್ಕೃತಿಯ ಅವಿಭಾಜ್ಯ ಅಂಗವೇ ಆಗಿರುವ ಸಂಕೇತಿ ಸಮುದಾಯದವರು ಕನ್ನಡ ಭಾಷೆಯನ್ನು ಚೆನ್ನಾಗಿ ಬಲ್ಲವರು. ಆ ಸಮುದಾಯದ ಸಹೃದಯರು ಕನ್ನಡದಲ್ಲಿಯೇ ಭೈರಪ್ಪನವರ ಹಾಗೂ ಕನ್ನಡದ ಇತರ ಮಹಾನ್ ಸಾಹಿತಿಗಳ ಕೃತಿಗಳನ್ನು ಸವಿದು ಆನಂದಿಸಬಲ್ಲವರಾಗಿದ್ದಾರೆ. ಹೀಗಾಗಿ, ಸಂಕೇತಿ ಭಾಷೆಯ ಅನುವಾದದ ಅಗತ್ಯವೇನು ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಆದರೆ ತಮ್ಮದೇ ಆದ ಭಾಷೆಯಲ್ಲಿ ಅದನ್ನು ಪಡೆದುಕೊಂಡು ಓದುವುದು ಹೆಚ್ಚು ಪ್ರಿಯವಾದ, ಹೃದ್ಯವಾದ ವಿಚಾರವೇ ಆಗಿರುತ್ತದೆ. ಈ ಸೌಲಭ್ಯವನ್ನು ಕಲ್ಪಿಸಿಕೊಟ್ಟಿರುವುದಕ್ಕಾಗಿ ಸಂಕೇತಿ ಸಮುದಾಯದವರು ಶ್ರೀ ಹರನ್ ಅವರನ್ನು ಅಭಿನಂದಿಸುತ್ತಾರೆಂದೂ, ಇಂಥ ಇನ್ನಷ್ಟು ಸಾಹಸಗಳನ್ನು ಕೈಗೊಳ್ಳುವಂತೆ ಅವರಿಗೆ ಪ್ರೇರಣೆ–ಪ್ರೋತ್ಸಾಹಗಳನ್ನು ನೀಡುತ್ತಾರೆಂದೂ ನಂಬಿದ್ದೇನೆ.

ಶ್ರೀ ಹರನ್ ಕನ್ನಡ ಭಾಷೆಯಲ್ಲಿ ವಿಶೇಷವಾದ ಪಾಂಡಿತ್ಯವನ್ನು ಪಡೆದುಕೊಂಡಿರುವಂಥವರು. ಹಲವಾರು ದಶಕಗಳಿಂದ ಕನ್ನಡದ ಅಧ್ಯಯನ ಮತ್ತು ಅಧ್ಯಾಪನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಸದಭಿರುಚಿಯ ಪ್ರಾಧ್ಯಾಪಕರು. ಪ್ರವಾಸ ಸಾಹಿತ್ಯವೂ ಸೇರಿದಂತೆ ತಮ್ಮ ಅಭಿರುಚಿಯ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಮಾಡಿರುವಂಥವರು. ಸಂಕೇತಿ ಭಾಷೆಯ ಮತ್ತು ಆ ಸಮುದಾಯದ ಹಿರಿಯರ ಸಾಧನೆಗಳನ್ನು ಪರಿಚಯಿಸಿಕೊಡುವ ಹೊತ್ತಗೆಗಳನ್ನು ತರುವುದರ ಮೂಲಕ ಆ ಸಮುದಾಯಕ್ಕೆ ಚಿರಪರಿಚಿತರಾಗಿರುವಂಥವರು. ತಮ್ಮ ಈ 'ಸಾರ್ಥ' ಕಾದಂಬರಿಯ ಅನುವಾದದ ಮೂಲಕ ಈ ಎರಡೂ ಭಾಷೆಗಳ ಕೊಳುಕೊಡೆಯ ಇತಿಹಾಸಕ್ಕೆ ಹೊಸ ಆಯಾಮವನ್ನೇ ಅವರು ಕಲ್ಪಿಸಿದ್ದಾರೆ. ಈ ಪರಂಪರೆಯನ್ನು ಅವರು ಮುಂದುವರಿಸಲಿ. ಈ ಸಮುದಾಯದ ಇತರ ತರುಣ ಭಾಷಾ ವಿದ್ವಾಂಸರು ಈ ದಿಕ್ಕಿನಲ್ಲಿ ಕೈ ಜೋಡಿಸುವಂತಾಗಲಿ ಎಂದು ಹಾರೈಸುತ್ತೇನೆ.

ಮೂಲವನ್ನು ಮತ್ತು ಶ್ರೀ ಹರನ್ ಅವರ ಅನುವಾದವನ್ನು ಜೊತೆ–ಜೊತೆಯಾಗಿ ಇಟ್ಟುಕೊಂಡು ನೋಡಿದರೆ, ಶ್ರೀ ಹರನ್ ಅವರ ಉಭಯ ಭಾಷಾ ಪರಿಣತಿ ಎದ್ದುಕಾಣುತ್ತದೆ. ಯಾವ ಒಂದು ಸೂಕ್ಷ್ಮಾಂಶವನ್ನಾಗಲೀ, ಮೂಲದ ಕಾವ್ಯಮಯ ನಿರೂಪಣೆಯ ಧ್ವನಿವೈಶಿಷ್ಟ್ಯಗಳನ್ನಾಗಲೀ ಬಿಡದಂತೆ ಅಳವಡಿಸಿಕೊಂಡಿರುವುದರಲ್ಲಿ ಅವರು ಸಂಪೂರ್ಣವಾಗಿ

ಯಶಸ್ವಿಯಾಗಿದ್ದಾರೆ. ಆ ಮೂಲಕ ಸಂಕೇತಿ ಭಾಷೆಗೆ ಹೆಚ್ಚಿನ ಕಸುವನ್ನೂ, ನೂತನತೆಯನ್ನೂ ತಂದುಕೊಟ್ಟಿದ್ದಾರೆ; ಈ ಬಗೆಯ ಸಾಹಸವನ್ನು ಕೈಗೊಳ್ಳಬಯಸುವಂಥವರಿಗೆ ಒಂದು ಆದರ್ಶಮಾದರಿಯನ್ನೂ ಒದಗಿಸಿದ್ದಾರೆ. ಈ ದೃಷ್ಟಿಯಿಂದಲೂ ಶ್ರೀ ಹರನ್ ವಿಶೇಷ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಹೊಚ್ಚ ಹೊಸ ಸಾಹಸಗಳನ್ನು ಕೈಗೊಳ್ಳುವುದರಲ್ಲಿ ಅಂಥ ಸಾಹಸಗಳಿಗೆ ಬೆಂಬಲ–ಪ್ರೋತ್ಸಾಹ–ಪ್ರಚೋದನೆಗಳನ್ನು ನೀಡುವಲ್ಲಿ ಸಂಕೇತಿ ಸಮುದಾಯ ಯಾವಾಗಲೂ ಮುಂದಿರುವಂಥದು. ಸಮಕಾಲೀನ ಸಾಹಿತ್ಯದ ಮಹತ್ವದ ಕೃತಿಯೊಂದನ್ನು ಶ್ರೀಹರನ್ ಅವರ ಮೂಲಕ ಪಡೆದುಕೊಂಡಿರುವ ಸಂಕೇತಿ ಸಮುದಾಯದ ಸಹೃದಯ ಬಾಂಧವರು ಅನುವಾದ ಕ್ಷೇತ್ರದ ಈ ಹೊಸ ಪರಂಪರೆಗೆ ನಾಂದಿಯನ್ನು ಹಾಡಿಸಿದ್ದಾರೆ. ಇತರ ಉಪಭಾಷಾವಲಯಗಳೂ ಈ ಮಾದರಿಯನ್ನು ಅನುಸರಿಸುವಂತಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಶ್ರೀ ಹರನ್ ಅವರ ಈ ಸಾಹಸ ಇತೋಪ್ಯತಿಶಯವಾಗಿ ಮುಂದುವರಿಯಲಿ ಎಂದೂ ಹಾರೈಸುತ್ತೇನೆ. ಈ ಕಾರ್ಯಕ್ಕೆ ಬೆಂಬಲವಾಗಿ ನಿಂತಿರುವ ಶ್ರೀ ಹರನ್ ಅವರ ಪತ್ನಿ ಡಾ. ವಿಜಯಾ ಹರನ್ ಅವರೂ ಅಭಿನಂದನೀಯರಾಗಿದ್ದಾರೆ. ಕನ್ನಡ–ಸಂಕೇತಿ ಭಾಷೆಗಳ ಹಾರ್ದಿಕ ಬಾಂಧವ್ಯ ಚೆನ್ನಾಗಿ ಬಾಳ್ಗೆ, ಗೆಲ್ಗೆ.

ಪ್ರಧಾನ್ ಗುರುದತ್ತ

೩೩೪, 'ಇ' ಮತ್ತು 'ಎಫ್' ಬ್ಲಾಕ್
೪ನೆಯ ಅಡ್ಡ ರಸ್ತೆ, ಮನುಜಪಥ, ಕುವೆಂಪುನಗರ
ಮೈಸೂರು–೫೭೦ ೦೨೩
ದೂ. ೨೫೪೦೫೩೮, ೯೪೪೯೮೦೫೫೩೮

ಸಾರ್ಥ

1. ಸ್ಥಳಗಳು, ಪಾತ್ರಗಳು

ಅಮರುಕ	–	ತಾರಾವತಿಯ ರಾಜ, ವಯಸ್ಸು 27–28
ತಾರಾವತಿ	–	ಒಂದು ಪುಟ್ಟ ರಾಜ್ಯ. ಅದರ ಉತ್ತರಕ್ಕೆ ಗುರ್ಜರ ಪ್ರತೀಹಾರರ ಸಾಮ್ರಾಜ್ಯವಿತ್ತು; ದಕ್ಷಿಣಕ್ಕೆ ರಾಷ್ಟ್ರಕೂಟರ ಸಾಮ್ರಾಜ್ಯ, ಪೂರ್ವಕ್ಕೆ ಪಾಲಸಾಮ್ರಾಜ್ಯ
ನಾಗಭಟ್ಟ	–	ತಾರಾವತಿಯ ವೈದಿಕ ಬ್ರಾಹ್ಮಣ. ಮಾಹಿಷ್ಮತಿಯ ಮಂಡನಮಿಶ್ರರ ಗುರುಕುಲದಲ್ಲಿ ವಿದ್ಯೆ ಕಲಿತವನು. ಅಮರುಕನ ಸಹಪಾಠಿ, ವಯಸ್ಸು 27–28
ಕೃಷ್ಣಾನಂದ	–	ಮಥುರೆಯಲ್ಲಿ ನಡೆಯುತ್ತಿದ್ದ ನಾಟಕಗಳಲ್ಲಿ ನಾಗಭಟ್ಟನು ಕೃಷ್ಣನ ಪಾತ್ರವನ್ನು ಅದ್ಭುತವಾಗಿ ನಿರ್ವಹಿಸುತ್ತಿದ್ದ; ಕೃಷ್ಣಾನಂದ ಎಂದೇ ಖ್ಯಾತನಾದ ನಟ
ಶಾಲಿನಿ	–	ನಾಗಭಟ್ಟನ ಪತ್ನಿ; ಮುಂದೆ ಅಮರುಕನ ವಶವಾದವಳು
ಯಜ್ಞಭಟ್ಟ	–	ನಾಗಭಟ್ಟನ ತಂದೆ; ಅಮರುಕನ ತಂದೆಯ ಆಸ್ಥಾನದಲ್ಲಿ ಸೇವೆಯಲ್ಲಿದ್ದವರು
ಬುಧಶ್ರೇಷ್ಠಿ	–	ತಾರಾವತಿಯಿಂದ ಹೊರಟಿದ್ದ ಸಾರ್ಥದ ಮುಖ್ಯ ಸಾರ್ಥವಾಹ
ನಾರಾಯಣದೀಕ್ಷಿತ	–	ತಾರಾವತಿಯ ಇನ್ನೊಬ್ಬ ವೈದಿಕರು. ಮಥುರೆಯಲ್ಲಿದ್ದ ನಾಗಭಟ್ಟನಿಗೆ ಅವನ ಹೆಂಡತಿ ಮತ್ತು ತಾಯಿಯ ಬಗೆಗೆ ಸುದ್ದಿಕೊಟ್ಟವರು. ವಯಸ್ಸು 60
ಆದಿತ್ಯಶ್ರೇಷ್ಠಿ	–	ತಾರಾವತಿಯಿಂದ ಹೊರಟ ಸಾರ್ಥದ ಮುಖ್ಯ ನಿರ್ಯಾಮಕ
ವಜ್ರಪಾದ ಭಿಕ್ಕು	–	ಮಥುರೆಯ ಚೈತ್ಯದ ಮುಖ್ಯರು, ವಯಸ್ಸು 50
ವತ್ಸದೇಶ	–	ತಾರಾವತಿಯಿಂದ ಮಥುರೆಗೆ ಹೋಗುತ್ತಿದ್ದ ಸಾರ್ಥದ ಮೇಲೆ ದರೋಡೆಕೋರರು ದಾಳಿ ಮಾಡಿದ ಜಾಗ
ವಿಶ್ವಕರ್ಮಸ್ಥಪತಿ	–	ಮಥುರೆಯ ಚೈತ್ಯಾಲಯವನ್ನು ಕಟ್ಟುತ್ತಿದ್ದ ಶಿಲ್ಪಿ
ಜಯಸಿಂಹ	–	ಗುರ್ಜರ ಪ್ರತೀಹಾರರ ರಾಜಪ್ರತಿನಿಧಿ, ವಯಸ್ಸು 40
ವಾಸುದೇವಶರ್ಮ	–	ಕೃಷ್ಣನ ಬಗೆಗಿನ ನಾಟಕಸರಣಿಯನ್ನು ಬರೆದವರು
ಆನಂದದತ್ತ	–	ನಾಟಕದ ಸೂತ್ರಧಾರ
ಚಂದ್ರಿಕಾ	–	ಮಥುರೆಯಲ್ಲಿ ಜಯಸಿಂಹನು ಏರ್ಪಡಿಸಿದ ಕೃಷ್ಣನಾಟಕಗಳ ನಟಿ. ವಯಸ್ಸು 27–28
ಸುಗಂಧಿ	–	ಮಥುರೆಯಲ್ಲಿ ನಡೆಯುತ್ತಿದ್ದ ನಾಟಕಗಳಲ್ಲಿ ಸ್ವಲ್ಪಕಾಲ ಚಂದ್ರಿಕೆಗೆ ಬದಲು ಪಾತ್ರವಹಿಸುತ್ತಿದ್ದ ನಟಿ.
ಸಾಧು	–	ಮಥುರೆಯಲ್ಲಿ ನಾಗಭಟ್ಟನನ್ನು ಯೋಗಮಾರ್ಗದಲ್ಲಿ ತೊಡಗಿಸಿದವರು
ತಾಂತ್ರಿಕಸಾಧು	–	ಮಥುರೆಯಲ್ಲಿ ನಾಗಭಟ್ಟನನ್ನು ತಂತ್ರಮಾರ್ಗಕ್ಕೆ ಎಳೆದವನು
ಪಾಟಲಿಪುತ್ರ	–	ಜಯಸಿಂಹರ ಏರ್ಪಾಟಿನ ನಾಟಕ ಮಂಡಳಿಯು ನಾಟಕಗಳನ್ನಾಡಿಸಿದ ಜಾಗ. ನಾಗಭಟ್ಟನು ಚಂದ್ರಿಕೆಯನ್ನವಲಂಬಿಸಿ ಯೋನಿಪೂಜೆ ಮಾಡಿದ್ದು ಇಲ್ಲಿ
ಚಾರುಮತಿ	–	ಚಂದ್ರಿಕೆಯ ಸೇವಕಿ, ಅಡುಗೆ ಮಾಡುತ್ತಿದ್ದವಳು
ಬ್ರಹ್ಮಪುರ	–	ಚಂದ್ರಿಕೆಯ ತವರು
ಯದುಭದ್ರ	–	ಆ ಊರಿಗೆ ಬಂದ ಅಂಧ ಗಾಯಕ, ವಯಸ್ಸು 30. ಆಗ ಚಂದ್ರಿಕೆಗೆ 17 ವರ್ಷ
ಸಾಲ್ವಪುರ	–	ಮನೆಯನ್ನು ತೊರೆದು ಚಂದ್ರಿಕೆಯು ಯದುಭದ್ರನೊಡನೆ ನೆಲೆಸಿದ ಊರು

ಶ್ರೀಮುಖ	–	ತಕ್ಷಶಿಲೆಯಿಂದ ಸಾಲ್ವಪುರಕ್ಕೆ ಸಂಗೀತ ಕಲಿಯಲು ಬಂದ ಯುವಕ; ಯದುಭದ್ರನ ಸೋದರಳಿಯ. ವಯಸ್ಸು 23; ಆಗ ಚಂದ್ರಿಕೆಯ ವಯಸ್ಸು 19
ಯೋಗಗುರು	–	ಚಂದ್ರಿಕೆಯನ್ನು ಯೋಗಮಾರ್ಗಕ್ಕೆ ಪ್ರವರ್ತಿಸಿದವರು
ಕುಮಾರಿಲಭಟ್ಟ	–	ಪ್ರಯಾಗದಲ್ಲಿ ಆಶ್ರಮವಿದ್ದು ಗುರುಕುಲ ನಡೆಸುತ್ತಿದ್ದವರು, ಕರ್ಮಮಾರ್ಗದ ಪ್ರತಿಪಾದಕ
ಪ್ರಜ್ಞಾಘನ	–	ನಾಲಂದದಲ್ಲಿದ್ದ 80 ವರ್ಷ ವಯಸ್ಸಿನ ವಿದ್ಯಾರ್ಥಿ. (ಕುಮಾರಿಲಭಟ್ಟರೇ ಬೌದ್ಧಮತದ ರಹಸ್ಯಗಳನ್ನು ತಿಳಿಯಲು ಬೌದ್ಧಭಿಕ್ಕುವಾಗಿ ಆ ಹೆಸರಿನಲ್ಲಿ ಅಲ್ಲಿ ಸೇರಿದ್ದರು)
ಧರ್ಮಪಾಲ	–	ನಾಲಂದ ವಿಶ್ವವಿದ್ಯಾಲಯದ ಮುಖ್ಯರು. ಪ್ರಜ್ಞಾಘನರ ಗುರು
ಬುದ್ಧಗಯೆ	–	ಬುದ್ಧನಿಗೆ ಜ್ಞಾನೋದಯವಾದ ಜಾಗ
ಮಂಡನಮಿಶ್ರ	–	ಕುಮಾರಿಲಭಟ್ಟರ ಶಿಷ್ಯ; ಕರ್ಮಮಾರ್ಗದ ಪ್ರತಿಪಾದಕ; ಮಾಹಿಷ್ಮತಿಯಲ್ಲಿ ಗುರುಕುಲವನ್ನು ನಡೆಸುತ್ತಿದ್ದವರು. ನಾಗಭಟ್ಟನ ಸೋದರಮಾವ
ಭಾರತೀದೇವಿ	–	ಕುಮಾರಿಲಭಟ್ಟರ ತಂಗಿ ಮತ್ತು ಶಿಷ್ಯೆ; ಮಂಡನಮಿಶ್ರರ ಪತ್ನಿ
ಉಷಾದೇವಿ	–	ಜಯಸಿಂಹರ ಪತ್ನಿ
ವಿಶ್ವರೂಪ	–	ಮಂಡನಮಿಶ್ರರ ನಿಜನಾಮ
ಮೈತ್ರೇಯಿ	–	ಮಂಡನರ ಹಿರಿಯ ಮಗಳು, ವಿವಾಹವಾಗಿ ಹೋಗಿದ್ದುದು ಉಜ್ಜಯಿನಿಗೆ
ಮಾಲಿನಿ	–	ಮಂಡನರ ಎರಡನೆಯ ಮಗಳು, ವಿವಾಹವಾಗಿದ್ದುದು ಚಂಪಾವತಿಗೆ
ಶಂಕರಯತಿ	–	ಶ್ರೀ ಶಂಕರಾಚಾರ್ಯರೆಂದು ಪ್ರಸಿದ್ಧರಾದವರು. ಆಗ ಅವರಿಗೆ 25 ವರ್ಷ
ತೇಜೇಶ್ವರಿ	–	ಅಮರುಕನ ಪಟ್ಟದರಸಿ
ಪದ್ಮಪಾದರು	–	ಶಂಕರಯತಿಯ ಶಿಷ್ಯರು
ಕನ್ಯಾಕುಬ್ಜ	–	ಗುರ್ಜರ ಪ್ರತೀಹಾರರ ರಾಜಧಾನಿ
ನವಾಬ	–	ಮೂಲಸ್ಥಾನದ ರಾಜಾಧಿಕಾರಿ. ಚಂದ್ರಿಕೆಯ ಮೇಲೆ ಸತತವಾಗಿ ಅತ್ಯಾಚಾರವೆಸಗಿದವನು
ಚಂದ್ರಪುರ	–	ಮಥುರೆಯ ಸಮೀಪದ ಹಳ್ಳಿ. ಚಂದ್ರಿಕೆಯ ಯೋಗಗುರುವಿನ ಗುಹಾಮಂಟಪವಿದ್ದ ಜಾಗ.

2. ಕಥಾಸಾರ

ತಾರಾವತಿಯ ನಾಗಭಟ್ಟನೆಂಬ ವೈದಿಕ ಬ್ರಾಹ್ಮಣನೊಬ್ಬನು ರಾಜನ ಅಪೇಕ್ಷೆಯಂತೆ ಸಾರ್ಥದ ರಹಸ್ಯಗಳನ್ನು ಕಲಿಯಲು ಹೊರಟ. ಮಥುರೆಯವರೆಗೂ ಒಂದು ಸಾರ್ಥದ ಜತೆಯಲ್ಲಿ ಹೋದ. ಸಾರ್ಥದ ಬಗೆಗೆ ಅವನಿಗೆ ಬೇಕಾದಷ್ಟು ಮಾಹಿತಿ ಸಿಕ್ಕಿತು. ಆದರೆ ಕಾರಣಾಂತರದಿಂದ ಅವನು ಮಥುರೆಯಲ್ಲಿ ಬಹಳದಿನ ಉಳಿಯಬೇಕಾಯಿತು. ಬೌದ್ಧವಿಚಾರಗಳ ಸಂಪರ್ಕಕ್ಕೂ ಬಂದ. ಯಾವುದೇ ಕೆಲಸವಿಲ್ಲದ ಸ್ಥಿತಿಯಲ್ಲಿ ಅವನ ಮನಸ್ಸನ್ನು ಶೂನ್ಯವು ಆವರಿಸಿತು. ಜಯಸಿಂಹನೆಂಬ ರಾಜಪ್ರತಿನಿಧಿಯೊಬ್ಬನ ಪರಿಚಯವಾಯಿತು; ಅವನ ಪ್ರಚೋದನೆಯ ಮೇಲೆ ನಾಟಕದ ನಟನಾದ. ಆ ರಂಜಕ ಪ್ರಪಂಚವು ಸರ್ವಂ ದುಃಖಮಯಂ ಎಂಬ ಮಾತನ್ನು ಪ್ರಶ್ನೆಗೀಡುಮಾಡಿತ್ತು. ಚಂದ್ರಿಕೆ ಎಂಬ ನಟಿಯ ಪರಿಚಯವಾಯಿತು. ಹೆಂಡತಿಯಿಂದ ದೀರ್ಘಕಾಲ ದೂರವಿದ್ದ ಕಾರಣದಿಂದಾಗಿ ಕಾಮಬಾಧೆಯು ಅವನನ್ನು ಆವರಿಸಿತ್ತು. ಚಂದ್ರಿಕೆಯು ಅವನನ್ನು ಪ್ರೀತಿಸುತ್ತಿದ್ದಳು. ಆದರೆ ದೇಹಗಳ ಆಕರ್ಷಣೆಯನ್ನು ಮೀರಿದ ನೆಲೆಯ ಪ್ರೀತಿ ಅದು. ತರ್ಕಕ್ಕಿಂತ ನಾಟಕದಲ್ಲಿ ರಸವಿದ್ದುದರಿಂದ ಅದು ಉತ್ತಮವೆನಿಸಿತ್ತು. ಆದರೆ ಜೀವನದ ಅರ್ಥವನ್ನು ಹುಡುಕಲು ಅದು ಸಾಲದೆನಿಸಿತು. ಅಷ್ಟು ಹೊತ್ತಿಗೆ ಊರು ಬಿಟ್ಟುಬಂದು ನಾಲ್ಕು ವರ್ಷವಾಗಿತ್ತು. ತಾನು ಊರುಬಿಟ್ಟು ಬಂದಮೇಲೆ ರಾಜನಾದ ಅಮರುಕನು

ತನ್ನ ಪತ್ನಿಯಲ್ಲಿ ಅನುರಕ್ತನಾದುದು ಮತ್ತು ಆ ಕೊರಗಿನಲ್ಲಿ ತನ್ನ ತಾಯಿ ಸತ್ತುದು ಅವನಿಗೆ ಯಾರಿಂದಲೋ ತಿಳಿಯಿತು. ಈಗಲಂತೂ ತಿರಸ್ಕೃತ ಭಾವ ಹೆಚ್ಚಿತು. ತಾನು ಒಂಟಿ ಎನಿಸಿತು. ಗುರುವೊಬ್ಬರ ಕೃಪಾಕಟಾಕ್ಷದಿಂದ ಯೋಗಸಾಧನೆಗೆ ತೊಡಗಿದ. ಅದರಿಂದ ದೊರೆತ ಸಿದ್ಧಿಯನ್ನು, ಗುರುವಿನ ಆಣತಿಯನ್ನು ಮೀರಿಯೂ ಬಳಸಿದ; ಪಥಚ್ಯುತನಾದ. ತಾಂತ್ರಿಕನೊಬ್ಬನನ್ನು ಆಶ್ರಯಿಸಿದ. ಆದರೆ ಅಧಃಪತನಕಾರಿಯಾದ ಆ ಮಾರ್ಗದಿಂದ ಅವನನ್ನು ಚಂದ್ರಿಕೆಯೇ ರಕ್ಷಿಸಿದಳು. ಆದರೆ ಅವಳು ಅವನನ್ನು ಎಷ್ಟೇ ಉಪಚರಿಸಿದರೂ ಪ್ರೇಮಿಸಿದರೂ ದೇಹಸಂಬಂಧದಿಂದ ದೂರವಿರುವ ಅವಳ ನಿಲುವು ಅವನಿಗೆ ಕೋಪವನ್ನೇ ತರಿಸಿತು. ಅವಳನ್ನು ತೊರೆದು ನಾಲಂದದ ವಿಶ್ವವಿದ್ಯಾಲಯಕ್ಕೆ ಸೇರಿ ಶೂನ್ಯದ ಸ್ವರೂಪವನ್ನು ಅಭ್ಯಾಸಮಾಡತೊಡಗಿದ. ಕರ್ಮಸಿದ್ಧಾಂತದಲ್ಲಿ ಪೂರ್ಣ ಶ್ರದ್ಧೆಯನ್ನಿರಿಸಿದ್ದ ಕುಮಾರಿಲಭಟ್ಟರಿಂದ ಪ್ರಭಾವಿತನಾದ. ಕರ್ಮವಿಲ್ಲದ ಸ್ಥಿತಿಯೇ ಶೂನ್ಯ ಮತ್ತು ಅದು ಶಾಶ್ವತವಲ್ಲ ಎಂಬುದನ್ನು ಮನಗಂಡ. ಜ್ಞಾನವೇ ಎಲ್ಲಕ್ಕೂ ಇರುವ ಪರಿಹಾರ ಎಂಬುದನ್ನು ಕಂಡ. ಅಷ್ಟರಲ್ಲಿ ಭರತಖಂಡದ ಪಶ್ಚಿಮ ಮತ್ತು ವಾಯವ್ಯದೇಶಗಳು ಮ್ಲೇಚ್ಛರ ವಶವಾಗಿದ್ದವು. ಮತಾಂತರಗಳೂ ನಡೆಯುತ್ತಿದ್ದವು. ಹಿಂಸೆ ತಾಂಡವವಾಡುತ್ತಿತ್ತು. ಭರತಖಂಡದ ಸಾರ್ಥಗಳಿಗೆ ಧಕ್ಕೆ ಬಂದಿತ್ತು. ಆ ಪ್ರದೇಶಗಳನ್ನು ಮತ್ತೆ ವಶಪಡಿಸಿಕೊಂಡು ಸುವ್ಯವಸ್ಥೆಗೆ ದಾರಿಮಾಡಬೇಕೆಂದು ಗುರ್ಜರ ಪ್ರತೀಹಾರರು ಸಂಕಲ್ಪಿಸಿದರು. ಜಯಸಿಂಹನ ನೇತೃತ್ವದಲ್ಲಿ ಮೂಲಸ್ಥಾನವನ್ನು ಮುತ್ತಿದರು. ಮ್ಲೇಚ್ಛರ ತಂತ್ರ ಮತ್ತು ಭರತಖಂಡದ ರಾಜರ ಅನೈಕ್ಯತೆಯಿಂದಾಗಿ ಗುರ್ಜರ ಪ್ರತೀಹಾರರ ಸೈನ್ಯವು ಸುಮ್ಮನೆ ಮರಳಿತು. ಈ ಯುದ್ಧದ ಅಂಗವಾಗಿ ಮೂಲಸ್ಥಾನದಲ್ಲಿ ನಾಟಕಗಳನ್ನಾಡಿ ಅಲ್ಲಿನ ಜನರಲ್ಲಿ ಜಾಗೃತಿಯನ್ನುಂಟುಮಾಡಲೆಂದು ಹೋಗಿದ್ದವರ ಪೈಕಿ ಚಂದ್ರಿಕೆ ಮತ್ತು ನಾಗಭಟ್ಟ ಹಿಂಸೆಯನ್ನನುಭವಿಸಿದರು; ನವಾಬನಿಂದ ಅತ್ಯಾಚಾರಕ್ಕೊಳಗಾದ ಚಂದ್ರಿಕೆಯು ಗರ್ಭಿಣಿಯಾದಳು. ಹೇಗೋ ಪಾರಾಗಿ ಬಂದರು. ಇಚ್ಛಾಮರಣಿಗಳಾದ ಯೋಗಗುರುಗಳು ಸಮಾಧಿಹೊಂದಿದರು, ಆನಂತರವೂ ಚಂದ್ರಿಕೆಯು ಧ್ಯಾನದಲ್ಲಿ ಮೊರೆ ಇಟ್ಟಾಗ ಮಾರ್ಗದರ್ಶನ ಮಾಡುವ ಮಾತುಕೊಟ್ಟರು. ಸಾವು ಎನ್ನುವುದು ಆನಂದದ ಸ್ವರೂಪವೆಂಬುದನ್ನು ಕಂಡು ನಾಗಭಟ್ಟನು ಬೆರಗುಗೊಂಡ. ಗುರುಗಳ ಆದೇಶದಂತೆ ಚಂದ್ರಿಕೆಯ ಗರ್ಭದಲ್ಲಿದ್ದ ಮಗುವಿಗೂ ಸಂಸ್ಕಾರ ನೀಡಿ ತಮ್ಮದಾಗಿಸಿಕೊಂಡು ವಿವಾಹಜೀವನ ನಡೆಸಲು ನಾಗಭಟ್ಟನೂ ಚಂದ್ರಿಕೆಯೂ ಸಂಕಲ್ಪಿಸಿದರು. ವೈವಾಹಿಕ ಜೀವನ ಎನ್ನುವುದು ಒಂದು ವ್ರತ ಎಂಬುದು ಇಬ್ಬರಿಗೂ ಅರ್ಥವಾಗತೊಡಗಿತು.

3. ಕಥೆ

೧. ಅಮರುಕನ ಸಂಚು

ಅಮರುಕನು ಒಬ್ಬ ರಸಿಕನಾದ ರಾಜ. ಅವನ ರಾಜಧಾನಿ ತಾರಾವತಿ. ಅವನದು ಸಣ್ಣ ರಾಜ್ಯ. ಅವನ ರಾಜ್ಯದ ಉತ್ತರಕ್ಕೆ ಗುರ್ಜರ ಪ್ರತೀಹಾರರ ಸಾಮ್ರಾಜ್ಯವಿತ್ತು. ದಕ್ಷಿಣಕ್ಕೆ ರಾಷ್ಟ್ರಕೂಟರ ಸಾಮ್ರಾಜ್ಯವಿತ್ತು. ಇಬ್ಬರೂ ಪ್ರಬಲರು. ಆದರೆ ಅಮರುಕನು ಸ್ವತಂತ್ರಪ್ರವೃತ್ತಿಯ ರಾಜ. ಯಾರಿಗೂ ಸಾಮಂತನಾಗದೆ ತನ್ನ ಅಧಿಕಾರವನ್ನು ಭದ್ರಪಡಿಸಿಕೊಳ್ಳಬೇಕು ಎಂಬ ಧೋರಣೆ ಅವನದು. ತನ್ನ ರಾಜ್ಯದ್ದೇ ಆದ ಸಾರ್ಥವೊಂದನ್ನು ಕಟ್ಟಿ ಆರ್ಥಿಕವಾಗಿಯೂ ಬಲಿಷ್ಠನಾಗಬೇಕು ಎಂಬ ಮಹತ್ವಾಕಾಂಕ್ಷೆಯೂ ಅವನಿಗಿತ್ತು.

ನಾಗಭಟ್ಟನು ಅಮರುಕನ ಬಾಲ್ಯದ ಗೆಳೆಯ. ನಾಗಭಟ್ಟನ ತಂದೆ ಯಜ್ಞಭಟ್ಟರು ಅಮರುಕನ ತಂದೆಯು ಆಳುವಾಗ ಸಿಂಹಾಸನದ ಸೇವೆಯಲ್ಲಿದ್ದರು. ಈಗ ಆ ದೊಡ್ಡರಾಜರೂ ಇಲ್ಲ, ನಾಗಭಟ್ಟನ ತಂದೆಯೂ ಇಲ್ಲ. ನಾಗಭಟ್ಟನಿಗೆ ವಿವಾಹವಾಗಿದೆ, ಹೆಂಡತಿಯ ಹೆಸರು ಶಾಲಿನಿ, ಸುಂದರಿ. ಅವರ ಮನೆಯಲ್ಲಿರುವ ಇನ್ನೊಬ್ಬರೆಂದರೆ ನಾಗಭಟ್ಟನ ತಾಯಿ.

ನಾಗಭಟ್ಟನೂ ಅಮರುಕನೂ ಸಮವಯಸ್ಕರು, ಸಹಪಾಠಿಗಳು. ಇಬ್ಬರೂ ಮಾಹಿಷ್ಮತಿಯ ಗುರುಕುಲದಲ್ಲಿ ಒಟ್ಟಿಗೆ ಓದಿದವರು. ನಾಗಭಟ್ಟನು ಎಂದೂ ಆ ಸಲಿಗೆಯನ್ನು ದುರುಪಯೋಗ ಮಾಡಿಕೊಂಡಿರಲಿಲ್ಲ. ಆದರೆ ರಾಜನಿಗೆ ನಾಗಭಟ್ಟನಲ್ಲಿ ಆತ್ಮೀಯತೆ ಇತ್ತು, ಅಥವಾ ಹಾಗೆ ನಟಿಸುತ್ತಿದ್ದ.

ರಾಜನು ಒಂದು ಯೋಜನೆ ಹಾಕಿದ. ಅದರಂತೆ ನಾಗಭಟ್ಟನು ಯಾವುದಾದರೊಂದು ಸಾರ್ಥದ ಜತೆಯಲ್ಲಿ ಸೇರಬೇಕು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಹೋಗುತ್ತಿರುವುದಾಗಿ ಎಲ್ಲರಲ್ಲೂ ನಂಬಿಕೆ ಹುಟ್ಟಿಸಬೇಕು. ಆದರೆ ಸಾರ್ಥದ

ರಹಸ್ಯಗಳನ್ನು ತಿಳಿದುಕೊಂಡು ಆ ವ್ಯವಹಾರವನ್ನು ಕರತಲಾಮಲಕ ಮಾಡಿಕೊಳ್ಳಬೇಕು. ಅವನು ಮರಳಿಬಂದಮೇಲೆ ತನ್ನ ರಾಜ್ಯದಲ್ಲಿ ಸ್ವತಂತ್ರವಾದ ಸಾರ್ಥವೊಂದನ್ನು ಸ್ಥಾಪಿಸಬೇಕು; ಆಗ ನಾಗಭಟ್ಟನೇ ರಾಜ್ಯದ ವಾಣಿಜ್ಯಾಧಿಕಾರಿಯಾಗಬೇಕು.

ಆನೆ, ಕುದುರೆ, ಹೇಸರಗತ್ತೆ, ನೂರಾರು ಗಾಡಿಗಳ ಮೇಲೆ ವಾಣಿಜ್ಯ ಪದಾರ್ಥಗಳನ್ನು ಹೇರಿಕೊಂಡು ವ್ಯಾಪಾರಮಾಡುತ್ತ ದೂರದೂರ ದೇಶಗಳಲ್ಲಿ ಸಂಚರಿಸುವುದನ್ನು ಕ್ರಿ.ಶ. ಎಂಟನೆಯ ಶತಮಾನದಲ್ಲಿ 'ಸಾರ್ಥ' ಎನ್ನುತ್ತಿದ್ದರು. ಅಂಥ ವೇಳೆಯಲ್ಲಿ ಸಾರ್ಥವೊಂದು ತಾರಾವತಿಯಿಂದ ಉಜ್ಜಯಿನಿಯ ಮಾರ್ಗವಾಗಿ ಮಥುರೆಗೆ ಹೋಗಲಿತ್ತು. ಐವತ್ತು ವಯಸ್ಸಿನ ಬುಧಶ್ರೇಷ್ಠಿ ಅದರ ಮುಖ್ಯ ಸಾರ್ಥವಾಹರಾಗಿದ್ದರು. ಅಲ್ಲಿಂದ ನಾಗಭಟ್ಟನು ಇನ್ನೊಂದು ಸಾರ್ಥದ ಜತೆಯಲ್ಲಿ ಕಾಶಿಗೆ ಹೋಗಬಹುದಿತ್ತು. ಅದೆಲ್ಲದರ ವೆಚ್ಚಕ್ಕಾಗಿ ಅಮರುಕನು ಸಾರ್ಥವಾಹರಿಗೆ ಸುವರ್ಣನಾಣ್ಯಗಳನ್ನು ಒಪ್ಪಿಸಿದುದೂ ಆಯಿತು. ಹೀಗೆ ಸಾರ್ಥದ ಜತೆಯಲ್ಲಿ ನಾಗಭಟ್ಟನು ಹೊರಟುಹೋಗಿ ನಾಲ್ಕು ವರ್ಷಗಳೇ ಆಗಿಹೋಯಿತು. ಅವನು ಮಥುರೆಯಲ್ಲೇ ಇದ್ದುಬಿಟ್ಟಿದ್ದ.

೨. ವಜ್ರಪಾದರ ಪರಿಚಯ; ಕೃಷ್ಣಾನಂದನಾದ ನಾಗಭಟ್ಟ

ಮಥುರೆಯು ಮಹಾಪಥಗಳು ಸಂಧಿಸುವ ದೊಡ್ಡ ವಾಣಿಜ್ಯ ಕೇಂದ್ರವಾಗಿತ್ತು. ಅನೇಕ ಸಾರ್ಥಗಳು ಅಲ್ಲಿ ಸಂಧಿಸುತ್ತಿದ್ದವು. ಹದಿನೈದಿಪ್ಪತ್ತು ಸಾರ್ಥಗಳು ಒಟ್ಟಿಗೆ ಬಂದರೂ ಅವನ್ನು ನಿಭಾಯಿಸುವಷ್ಟು ನೀರುನಿಡಿಗಳ ಸೌಕರ್ಯ ಅಲ್ಲಿತ್ತು. ತಾರಾವತಿಯಿಂದ ಮಥುರೆಗೆ ಸಾರ್ಥದ ಜತೆಯಾಗಿ ಬಂದರೆ ಎರಡೂವರೆ ತಿಂಗಳು ಹಿಡಿಯುತ್ತಿತ್ತು.

ಮಥುರೆಗೆ ತಲುಪಿದ ತತ್‌ಕ್ಷಣ ಮುಖ್ಯಸಾರ್ಥವಾಹರಾಗಿದ್ದ ಬುಧಶ್ರೇಷ್ಠಿಯವರೂ, ಆದಿತ್ಯಶ್ರೇಷ್ಠಿಯವರೂ ಮಣಿಭದ್ರಯಕ್ಷನ ದೇವಾಲಯಕ್ಕೆ ಹೋಗಿ ಕಾಣಿಕೆ ಸಲ್ಲಿಸಿದರು. ಅವರ ಜತೆ ನಾಗಭಟ್ಟನೂ ಇದ್ದ. ಪೂಜೆ ಮುಗಿದ ಮೇಲೆ ಎಲ್ಲರೂ ಆ ಬೌದ್ಧಕೇಂದ್ರದ ಮುಖ್ಯರಾದ ವಜ್ರಪಾದಭಿಕ್ಕುಗಳನ್ನು ನೋಡಲು ಹೋದರು. ವಜ್ರಪಾದರಿಗೆ ಆಗ ವಯಸ್ಸು ಐವತ್ತು. ಅಲ್ಲೊಂದು ಚೈತ್ಯವನ್ನು ಕಟ್ಟಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದರು. ಬುಧಶ್ರೇಷ್ಠಿಯವರು ಅಲ್ಲಿಗೆ ಎರಡು ವರ್ಷದ ಹಿಂದೆ ಹೋಗಿದ್ದರು. ಆದಿತ್ಯಶ್ರೇಷ್ಠಿಯವರು ಹೋಗಿದ್ದು ಹನ್ನೆರಡು ವರ್ಷಗಳ ಹಿಂದೆ. ಆದರೂ ವಜ್ರಪಾದರು ಅವರಿಬ್ಬರನ್ನೂ ಗುರುತುಹಿಡಿದರು, ಆಶೀರ್ವದಿಸಿ ಸ್ವಾಗತಿಸಿದರು. ವೈದಿಕ ಪಂಡಿತರಾದ ನಾಗಭಟ್ಟರಿಗೆ ವಿಶೇಷವಾದ ಆಹ್ವಾನವೇ ಸಿಕ್ಕಿತು. ಅನೇಕ ಪ್ರಸಿದ್ಧ ಬೌದ್ಧಾಚಾರ್ಯರು ಪೂರ್ವಾಶ್ರಮದಲ್ಲಿ ವೈದಿಕರಾಗಿದ್ದವರೇ, ನಾಗ ಎಂದು ಆರಂಭವಾಗುವ ಹೆಸರುಗಳೂ ಬೌದ್ಧರಲ್ಲಿ ಹೇರಳವಾಗಿದ್ದವು. ದೇಶದ ನಾನಾಭಾಗಗಳಲ್ಲಿ ಸಾರ್ಥ ಹೇಗೆ ನಡೆಯುತ್ತಿದೆ ಎಂಬ ವಿವರಗಳನ್ನೆಲ್ಲಾ ವಜ್ರಪಾದರು ನಾಗಭಟ್ಟನ ಎದುರಿಗೇ ಬಿಚ್ಚುಮನಸ್ಸಿನಿಂದ ಚರ್ಚಿಸಿದರು.

ಮಥುರೆಯು ಗುರ್ಜರ ಪ್ರತೀಹಾರರ ರಾಜ್ಯದ ಭಾಗವಾಗಿತ್ತು. ಪೂರ್ವದಲ್ಲಿದ್ದುದು ಪಾಲಸಾಮ್ರಾಜ್ಯ. ಗುರ್ಜರ ಪ್ರತೀಹಾರರು ಸಾಮ್ರಾಜ್ಯವನ್ನು ವಿಸ್ತರಿಸುವುದರಲ್ಲಿಯೂ ಸೇನೆಯನ್ನು ಹೆಚ್ಚಿಸುವುದರಲ್ಲಿಯೂ ಆಸಕ್ತರು; ಹಾಗಾಗಿ ಅವರ ರಾಜ್ಯದಲ್ಲಿ ವಾಣಿಜ್ಯಕ್ಕೆ ಕ್ಷೇಮವಿಲ್ಲ; ರಾಷ್ಟ್ರಕೂಟರು ವಾಣಿಜ್ಯವನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂಬುದು ವಜ್ರಪಾದರ ಅಭಿಪ್ರಾಯವಾಗಿತ್ತು. ರಾಷ್ಟ್ರಕೂಟರು ಗುರ್ಜರ ಪ್ರತೀಹಾರರ ಪ್ರತಿಸ್ಪರ್ಧಿಗಳೇ ಆಗಿದ್ದರು. ವಜ್ರಪಾದರು ಕಟ್ಟಿಸುತ್ತಿದ್ದ ಚೈತ್ಯಕ್ಕೆ ಬುಧಶ್ರೇಷ್ಠಿಯವರೂ ನೆರವು ಕೊಡುವ ವಾಗ್ದಾನ ಮಾಡಿದರು. ವತ್ಸದೇಶದಲ್ಲಿ ದರೋಡೆಕೋರರು ದಾಳಿಮಾಡಿದ್ದು, ಸಾರ್ಥದವರು ಮಣಿಪದ್ಮೇ ಹುಂ ಎಂದು ಕೂಗುತ್ತ ತಿರುಗೇಟುನೀಡಿ ಜಯಗಳಿಸಿದ್ದು ಅದಾಗಲೇ ಪ್ರಸ್ತಾಪವಾಗಿತ್ತು.

ಬುಧಶ್ರೇಷ್ಠಿಯವರ ನೇತೃತ್ವದ ಸಾರ್ಥವು ತನ್ನ ಯಾನವನ್ನು ಮುಂದುವರಿಸಿತ್ತು. ಸಿಂಧೂ ದೇಶವು ಮ್ಲೇಚ್ಛರ ವಶವಾಗಿ ಹೋಗಿತ್ತು; ಮಥುರೆಯಿಂದ ಹೋದ ಸಾರ್ಥಗಳು ತಮ್ಮ ಸರಕುಗಳನ್ನು ಅವರು ಕೇಳಿದ ಬೆಲೆಗೆ ತೆತ್ತು ಬರಬೇಕಾಗಿತ್ತು. ಅಲ್ಲಿಂದ ಮುಂದಿನ ಯಾವ ದೇಶಗಳೊಡನೆಯೂ ಈ ಸಾರ್ಥಗಳು ನೇರವಾಗಿ ವ್ಯವಹಾರ ಮಾಡುವಂತಿರಲಿಲ್ಲ. ಮತಾಂತರಗಳೂ ನಡೆಯುತ್ತಿದ್ದವು. ಪಶ್ಚಿಮ ಮತ್ತು ವಾಯವ್ಯ ಮಾರ್ಗಗಳ ವಾಣಿಜ್ಯಕ್ಕೆ ದುರ್ದೆಶೆ ಬಂದಿತ್ತು. ಆದರೂ ಆ ಪ್ರದೇಶಗಳಿಗಾಗಿಯೇ ಕೊಂಡುತಂದಿದ್ದ ವಸ್ತುಗಳನ್ನು ಅಲ್ಲಿಯೇ ಮಾರಬೇಕಾದ ಅನಿವಾರ್ಯವಿತ್ತು. ಹೀಗಾಗಿ ಬುಧಶ್ರೇಷ್ಠಿಯವರು ತಮ್ಮ ಸಾರ್ಥವನ್ನು ಆ ಅಪಾಯದ ದೇಶಗಳತ್ತಲೇ ನಡೆಸುತ್ತಿದ್ದರು. ನಾಗಭಟ್ಟನನ್ನು ಮಥುರೆಯಲ್ಲಿ ಬಿಟ್ಟು ಅವರು ಮುಂದೆ ಸಾಗಿದರು. ಮತ್ತೆ ಅವರದೊಂದು ಸಾರ್ಥವು ಬಂದು ಕಾಶಿಗೆ ಹೋಗುವವರೆಗೆ ನಾಗಭಟ್ಟನಿಗೆ ಯಾವ ಕೆಲಸವೂ ಇರಲಿಲ್ಲ. ನಾಗಭಟ್ಟನಿಗೆ ಮಥುರೆಯಲ್ಲಿ ಸಾರ್ಥದ ಬಗೆಗಿನ ವಿವರವು ಬೇಕಾದಷ್ಟು

ತಿಳಿಯುತ್ತಿತ್ತು. ಬೌದ್ಧಧರ್ಮ ಮತ್ತು ಆಚಾರಗಳನ್ನು ತನ್ನ ವೈದಿಕ ಧರ್ಮದ ವಿವರಗಳೊಡನೆ ಹೋಲಿಸಿ ನೋಡಿಕೊಳ್ಳುವ ಅವಕಾಶಗಳೂ ಸಿಗುತ್ತಿದ್ದವು.

ಚೈತ್ಯದ ಕೆಲಸ ಮುಂದುವರಿದಿತ್ತು. ಒಬ್ಬ ಸ್ಥಪತಿಯು ಅರ್ಧದಲ್ಲೇ ಬಿಟ್ಟುಹೋದ. ಅವನ ಜಾಗಕ್ಕೆ ವಿಶ್ವಕರ್ಮಸ್ಥಪತಿ ಎಂಬ ಇನ್ನೊಬ್ಬನು ಬಂದ. ಅವನು ಸ್ವಧರ್ಮನಿಷ್ಠ, ಆಚಾರಶೀಲ, ತನ್ನ ಕೆಲಸವನ್ನು ಚೆನ್ನಾಗಿ ತಿಳಿದವನು. ವಜ್ರಪಾದರು ವೈದಿಕ ದೇವತೆಗಳನ್ನು ಬೌದ್ಧಮಾದರಿಗಳಾಗಿ ರೂಪಾಂತರಿಸುತ್ತಿದ್ದ ತಂತ್ರಗಳನ್ನು ಅವನು ಸುಲಭವಾಗಿ ಪತ್ತೆಹಚ್ಚುತ್ತಿದ್ದ. ಆದರೆ ಅದು ತನ್ನ ಮತ್ತು ತನ್ನ ಸಹಚರರ ಅನ್ನದ ಪ್ರಶ್ನೆ, ಅಸ್ತಿತ್ವದ ಪ್ರಶ್ನೆ; ಹಾಗಾಗಿ ಅದನ್ನೆಲ್ಲ ಸಹಿಸಿಕೊಂಡು ಮುಂದುವರಿಯುತ್ತಿದ್ದ. ಒಂದು ದೇವತೆಯ ಆವಿಷ್ಕಾರವು ಋಷಿಗಳ ತಪಸ್ಸಿನಿಂದ ಆಗುವಂಥದು, ಅದನ್ನು ಧ್ಯಾನಿಸಿಯೇ ಶಿಲ್ಪಿಯು ಶಿಲ್ಪದಲ್ಲಿ ಪಡಿಮೂಡಿಸುವುದು, ಆ ರೂಪವೇ ಭಕ್ತರ ಮನದಲ್ಲಿ ಸ್ಥಾಯಿಯಾಗಿ ನಿಲ್ಲುವಂಥದು. ಹಾಗಾಗಿ ಆ ಸ್ಥಪತಿಗೆ ವೈದಿಕ ದೇವತೆಗಳನ್ನು ಬೌದ್ಧದೇವತೆಗಳಾಗಿ ಪರಿವರ್ತಿಸುವುದು ಧರ್ಮಸಂಕಟವೆನಿಸುತ್ತಿತ್ತು.

ಕ್ರಮೇಣ ನಾಗಭಟ್ಟನಿಗೆ ಸಾರ್ಥದ ಬೀಡನ್ನು ಪರಿಶೀಲಿಸುವ ರಾಜಾಧಿಕಾರಿ ಜಯಸಿಂಹರೊಡನೆ ಸ್ನೇಹ ಬೆಳೆಯಿತು. ಜಯಸಿಂಹರು ಕ್ಷತ್ರಿಯ ವಂಶದವರು; ವಯಸ್ಸು ನಲವತ್ತು; ರಾಜಕೀಯದಲ್ಲಿ ಹೇಗೋ ಅಧ್ಯಾತ್ಮದಲ್ಲೂ ಹಾಗೆಯೇ ಆಸಕ್ತರು. ಮಥುರೆಯ ಕೃಷ್ಣಮಹಿಮೆಯ ಮಹಾ ಅಭಿಮಾನಿ. ರಾಜಾಧಿಕಾರಿಯಾದರೂ ರಸಿಕತೆಗೆ ಮಿತಿಇಟ್ಟುಕೊಂಡು ನಡೆಯುತ್ತಿದ್ದವರು.

ಕೃಷ್ಣಭಕ್ತಿಯ ಆವೇಶವು ನಾನಾ ಕಲೆ ಹಬ್ಬ ಆಚರಣೆ ಸಂಭ್ರಮಗಳಲ್ಲಿ ತುಂಬಿಹೋಗಿ ಪ್ರಕಟವಾಗುತ್ತಿದ್ದ ಅಲ್ಲಿ ಕೃಷ್ಣನಾಟಕಗಳಿಗೆ ಏರ್ಪಾಟು ಮಾಡಿದವರು ಜಯಸಿಂಹ. ಆ ನಾಟಕಸರಣಿಯನ್ನು ಬರೆದವರು ವಾಸುದೇವಶರ್ಮರು, ಸೂತ್ರಧಾರರು ಆನಂದದತ್ತರು. ಎಲ್ಲರೂ ಏಕಕಂಠದಿಂದ ಕೃಷ್ಣನಪಾತ್ರಕ್ಕೆ ಆಹ್ವಾನಿಸಿದ್ದು ನಾಗಭಟ್ಟನನ್ನು. ಅದಕ್ಕೆ ಬೇಕಾದ ರೂಪು, ವಿದ್ಯೆ, ಮಾತು ಎಲ್ಲವೂ ಅವನಲ್ಲಿ ಅಚ್ಚುಕಟ್ಟಾಗಿತ್ತು. ನಾಟಕದ ಯಾವ ಅನುಭವವೂ ಇಲ್ಲದ ಅವನನ್ನು ಅವರೆಲ್ಲ ಸೇರಿ ನಟನನ್ನಾಗಿ ಪರಿವರ್ತಿಸಿಬಿಟ್ಟಿದ್ದರು.

ಇಷ್ಟರಲ್ಲಾಗಲೆ ನಾಗಭಟ್ಟನು ಮಥುರೆಗೆ ಬಂದು ಒಂದು ವರ್ಷದ ಹತ್ತಿರವಾಗುತ್ತ ಬಂದಿತ್ತು. ತನ್ನ ತಾಯಿ ಮತ್ತು ಕಿರುವಯಸ್ಸಿನ ಪತ್ನಿಯ ನೆನಪು ಬಾಧಿಸುತ್ತಿತ್ತು. ಊರಿಗೆ ಹಿಂತಿರುಗುವ ಯೋಚನೆಯೂ ಬರುತ್ತಿತ್ತು. ಅಷ್ಟರಲ್ಲಿ ಅವನಿಗೆ ಹೊಸದೊಂದು ಆಕರ್ಷಣೆ ಕಾಣಿಸಿಕೊಂಡಿತು. ಅದು ಚಂದ್ರಿಕಾ ಎಂಬ ನಟಿಯದು.

ನಾಟಕದಲ್ಲಿ ರುಕ್ಮಿಣಿಯ ಪಾತ್ರ ಮಾಡುತ್ತಿದ್ದವಳು ಚಂದ್ರಿಕಾ. ಅವಳಿಗೆ ಸಂಗೀತವೆಂದರೆ ಪ್ರಾಣ; ನರ್ತನವೂ ಬರುತ್ತಿತ್ತು. ರೂಪವೂ ಭಾವಪೂರ್ಣವಾದದ್ದು. ಭಾವಪ್ರಕಾಶವೇ ಅವಳ ಸೌಂದರ್ಯಶಕ್ತಿ. ಅವಳಿಗೂ ನಾಗಭಟ್ಟನಂತೆಯೇ 27–28 ವರ್ಷ. ಹಿಂದೆ ನಗರದ ಶ್ರೀಮಂತರೊಡನೆ ಸ್ನೇಹವಾಗಿದ್ದವಳು; ಈಗ ಅವರನ್ನೆಲ್ಲ ದೂರಮಾಡಿದ್ದಳು. ಕಲಾರಾಧನೆಗೆ ಮಾತ್ರ ಅವಕಾಶವಿತ್ತು.

ಇಷ್ಟಾದರೂ ನಾಲ್ಕು ತಿಂಗಳುಗಳಿಂದಲೂ ನಾಗಭಟ್ಟನು ಅವಳ ಮನೆಯಕಡೆಗೆ ಸುಳಿದಿರಲಿಲ್ಲ. ಅವನ ಪಾಲಿಗೆ ಅವಳು ರುಕ್ಮಿಣಿ ಮತ್ತು ರುಕ್ಮಿಣಿ ಮಾತ್ರವೇ ಆಗಿದ್ದಳು. ಈ ನಾಟಕವು ಬಹು ಜನಪ್ರಿಯವಾಗಿತ್ತು. ಇದನ್ನು ಬೇರೆ ಬೇರೆ ಎಡೆಗಳಲ್ಲಿ ಆಡಿಸಬೇಕೆಂಬ ಸಿದ್ಧತೆಯೂ ನಡೆದಿತ್ತು.

ಪರಿಚಯವಾಗಿ ನಾಲ್ಕು ತಿಂಗಳ ಮೇಲೆ ನಾಗಭಟ್ಟನು ಚಂದ್ರಿಕೆಯ ಮನೆಗೆ ಹೋದ. ಆವರೆಗೆ ಅವಳೊಬ್ಬ ಗಾಯಕಿ, ಹೆಚ್ಚೆಂದರೆ ಗಣಿಕೆ ಎಂದೇ ಅವನು ತಿಳಿದಿದ್ದ. ಅವನು ಹೋದಾಗ ಅವಳು ಧ್ಯಾನಮಗ್ನಳಾಗಿದ್ದಳು. ದಿನದ ಬಹುಸಮಯವನ್ನು ಧ್ಯಾನದಲ್ಲಿಯೇ ಕಳೆಯುತ್ತಾಳೆಂಬುದೂ ಅವನಿಗೆ ತಿಳಿಯಿತು. ಅದರಿಂದ ಅವಳಿಗೆ ಅನೇಕ ಸಿದ್ಧಿಗಳೂ ವಶವಾಗಿದ್ದವು. ಹೊರ ಪ್ರಪಂಚದಲ್ಲಿ ನಡೆಯುತ್ತಿರುವ ಅಥವಾ ನಡೆಯಲಿರುವ ಅನೇಕ ಸಂಗತಿಗಳು ಅವಳಿಗೆ ಧ್ಯಾನದಲ್ಲಿ ಗೋಚರವಾಗುತ್ತಿದ್ದವು. ಅವನು ಅಂದು ಅವಳ ಮನೆಗೆ ಬರುವ ವಿಷಯವೂ ನಾಟಕದ ಸಂದರ್ಭದಲ್ಲಿ ಆಗುತ್ತಿರುವ ಬೆಳವಣಿಗೆಗಳೂ ಅವಳಿಗೆ ಅದಾಗಲೇ ಧ್ಯಾನದಲ್ಲಿ ಗೋಚರವಾಗಿದ್ದುವು. ಅವಳು ನಾಗಭಟ್ಟನನ್ನು ತುಲಸೀಮಾಲೆ ಹಾಕಿ ಸ್ವಾಗತಿಸಿದ್ದಳು. ಏಕವಚನದಲ್ಲಿ ಸಂಬೋಧಿಸುತ್ತಿದ್ದಳು, ಸರಸವಾದ ಮಾತುಗಳನ್ನಾಡಿ ಪ್ರೀತಿಯಿಂದ ಕಟ್ಟಿಹಾಕುತ್ತಿದ್ದಳು.

ಈ ಬಾರಿ ನಾಟಕವು ಇನ್ನೂ ಹೆಚ್ಚು ಜನಮನವನ್ನಾಕ್ರಮಿಸಿತು. ಎಲ್ಲರಿಗೂ ಅದೇ ನೆನಪು, ಅದೇ ಮಾತು, ಅದೇ ಚರ್ಚೆ. ಬೌದ್ಧರೂ ಅಷ್ಟೇ ಆಸಕ್ತಿಯಿಂದ ನಾಟಕವನ್ನು ನೋಡಿದರು, ಆಕರ್ಷಿತರಾದರು, ತಲ್ಲೀನರಾದರು. ನಾಗಭಟ್ಟನು ಕೃಷ್ಣಾನಂದ ಎಂದೇ ಖ್ಯಾತನಾದ. ನಗರದ ಶ್ರೀಮಂತರೊಬ್ಬರು ಅವನಿಗಾಗಿಯೇ ಒಂದು ಮನೆಯನ್ನು ಬಿಟ್ಟುಕೊಟ್ಟರು. ಎಲ್ಲೆಡೆ ಜೀವನೋತ್ಸಾಹವನ್ನು ಚಿಮ್ಮಿಸಿದ ಸನ್ನಿವೇಶವದು; ಸರ್ವಂ ದುಃಖಮಯಂ ಎನ್ನುವುದನ್ನು ಅದು ಪ್ರಶ್ನೆಗೀಡಾಗುವಂತೆ ಮಾಡಿತ್ತು.

೩. ಚಂದ್ರಿಕೆಯೊಂದಿಗೆ ವಿರಸ; ಕವಿದ ಶೂನ್ಯ

ಹೊಸ ಹೊಸ ಕಡೆಗಳಲ್ಲಿ ಕೃಷ್ಣನನ್ನು ಕುರಿತ ನಾಟಕಗಳು ನಡೆದು ಹೊಸಗಾಳಿಯೇ ಬೀಸಿತು. ನಾಗಭಟ್ಟ ಅಂದರೆ ಕೃಷ್ಣಾನಂದನು ಕೃಷ್ಣನ ಅವತಾರವೆಂದೇ ಜನರು ಭಕ್ತಿಯಿಂದ ಭಾವಿಸಿದರು. ಹೀಗೇ ಒಂದು ವರ್ಷದ ಸಂಚಾರವಾಯಿತು. ಒಟ್ಟಾಗಿ ನಾಗಭಟ್ಟನು ಊರುಬಿಟ್ಟು ಎರಡು ವರ್ಷವಾಗಿತ್ತು. ಕಾಮಬಾಧೆ ಅತಿಯಾಯಿತು. ಮನಸ್ಸು ಚಂದ್ರಿಕೆಯನ್ನೇ ನೆನೆಸುತ್ತಿತ್ತು.

ಹಾಗೆ ಅಪೇಕ್ಷಿಸಿದ್ದರೆ ನಾಗಭಟ್ಟನಿಗೆ ಜತೆಯಾಗಲು ಹಲವು ಸಹನಟಿಯರು ಸಿದ್ಧರಿದ್ದರು. ಆದರೆ ಅವನ ಮನಸ್ಸಿನಲ್ಲಿ ಚಂದ್ರಿಕೆ ನಿಂತಿದ್ದಳು. ಅವಳು ಹತ್ತಿರದಲ್ಲಿರುವಾಗ ಆ ಪ್ರಸ್ತಾಪಮಾಡಲು ಮಾತ್ರ ಹಿಂಜರಿಕೆ. ಚಂದ್ರಿಕೆಯು ನಾಗಭಟ್ಟನ ಕ್ಷೇಮಕ್ಕಾಗಿ ವಿಶೇಷವಾಗಿ ತುಡಿಯುತ್ತಿದ್ದಳು, ಅವನಲ್ಲಿ ಪ್ರೀತಿಯನ್ನು ಪ್ರಕಟಿಸುತ್ತಿದ್ದಳು. ಆದರೆ ದೇಹದ ಮಟ್ಟದಲ್ಲಿ ಮಾತ್ರ ತುಸುವೂ ಹತ್ತಿರವಾಗುತ್ತಿರಲಿಲ್ಲ. ಅವಳು ಸದಾ ಧ್ಯಾನಮಗ್ನಳು, ನಾಟಕದ ನಟನೆಗಳನ್ನು ನಿಭಾಯಿಸುತ್ತಿದ್ದರೂ ಸಂನ್ಯಾಸಿಯಭಾವದಲ್ಲಿರುತ್ತಿದ್ದಳು. ಅದು ತಿಳಿದ ನಾಗಭಟ್ಟನ ಕಾಮಾಸಕ್ತಿ ಮತ್ತೂ ಹಿಂದೆ ಸರಿಯಿತು. ಅವಳು ಇಂದ್ರಿಯನಿಗ್ರಹದ ಆವಶ್ಯಕತೆ ಮತ್ತು ಮಹತ್ತ್ವದ ಬಗೆಗೆ ಹೇಳಿದಾಗ ನಾಗಭಟ್ಟನಿಗೂ ಅದೇ ಮಾರ್ಗ ಹಿಡಿಯುವ ಅಪೇಕ್ಷೆ ಹುಟ್ಟಿತು.

ಆದರೆ ವಾಸ್ತವವಾಗಿ ಇಂದ್ರಿಯನಿಗ್ರಹವು ನಾಗಭಟ್ಟನಿಗೆ ಕಷ್ಟವಾಗಿತ್ತು. ಚಂದ್ರಿಕೆಯ ಮೇಲೆ ಕೋಪವೇ ಬಂತು. ಅವಳನ್ನು ನಾಟಕ ಮಂಡಲಿಯಿಂದಲೇ ಹೊರಹಾಕಿಸಬೇಕೆಂಬ ಯೋಚನೆಯೂ ಬಂತು. ಚಂದ್ರಿಕೆಯು ಧ್ಯಾನದಿಂದ ಇದನ್ನರಿತಳು. ತಾನು ಹತ್ತಿರದಲ್ಲಿರುವವರೆಗೆ ಅವನು ಬೇರೊಬ್ಬ ಹೆಂಗಸಿನ ಸಹವಾಸ ಮಾಡಲಾರ ಎಂಬುದೂ ಅವಳಿಗೆ ತಿಳಿದಿತ್ತು. ತಾನಾಗಿಯೇ ನಾಟಕವನ್ನು ತೊರೆದು ದೂರಹೋದಳು. ಅವಳ ಜಾಗಕ್ಕೆ ಬಂದ ಸುಗಂಧಿಯೂ ಚೆಲುವೆಯೇ. ನಾಗಭಟ್ಟನೂ ಸುಗಂಧಿಯೂ ಒಟ್ಟಿಗೆ ಇರತೊಡಗಿದರು. ಅವನ ಕಾಮಬಾಧೆಯು ಶಮನವಾಯಿತು; ಆದರೆ ಪೂರ್ಣವಾಗಿ ತಣಿಯದ ದಾಹ ಅದು. ಅದನ್ನು ಮೀರಿದ ಶುದ್ಧ ಸ್ನೇಹಮಾತ್ರವನ್ನು ಕೊಡಬಲ್ಲ ಚಂದ್ರಿಕೆಗಾಗಿಯೇ ಮನಸ್ಸು ಹಾತೊರೆಯುತ್ತಿತ್ತು. ಅವಳ ಬಗೆಗಿನ ಅಮೂಲ್ಯಭಾವಗಳು ಜೀವಂತವಾಗಿಯೇ ಇದ್ದವು. ಜೀವನವೆಂದರೆ ನಶ್ವರ ಬಯಕೆಗಳ ಹುಟ್ಟು ಸಾವುಗಳ ಸರಮಾಲೆಯೆ? ಮೇಲಿನದರಲ್ಲಿ ಶ್ರದ್ಧೆ ಇಲ್ಲದಿದ್ದರೆ ಈ ಕ್ಷಣಿಕತೆಗೆ ಬಲಿಯಾಗಬೇಕಾಗುತ್ತದೆಯೇ? ಈ ಪ್ರಶ್ನೆಗಳ ನಡುವೆಯೇ ಪತ್ನಿ ಶಾಲಿನಿಯ ನೆನಪಾಗಿ ತನ್ನ ಕರ್ತವ್ಯಭ್ರಷ್ಟತೆಯ ಪಾಪಪ್ರಜ್ಞೆಯೂ ಕಾಡತೊಡಗಿತು. ಇದೀಗ ಊರುಬಿಟ್ಟು ಮೂರುವರ್ಷವಾಗಿತ್ತು. ನಾಗಭಟ್ಟನ ಪಾತ್ರ ಸತ್ತು ಆ ಜಾಗದಲ್ಲಿ ಕೃಷ್ಣಾನಂದನು ಎದ್ದು ನಿಂತಿದ್ದ; ಆದರೆ ಅದೂ ಒಂದು ಪಾತ್ರ ಮಾತ್ರ, ಆ ಪಾತ್ರವಾದಮೇಲೆ ಶೂನ್ಯವೇ ಕವಿಯುತ್ತಿತ್ತು.

೪. ಹೆಚ್ಚಿದ ಶೂನ್ಯ; ಯೋಗಸಾಧನೆ

ನಾಟಕಸಂಚಾರ ಮುಗಿದು ಮಥುರೆಗೆ ಹಿಂತಿರುಗುವ ವೇಳೆಗೆ ಒಂದೂವರೆ ವರ್ಷವಾಗಿತ್ತು. ಆಮೇಲೆ ನಾಟಕದ ಚಟುವಟಿಕೆಗೆ ವಿರಾಮ. ನಿರಂತರವಾಗಿ ರುಚಿಯಿಂದ ತೊಡಗಿಸಿಕೊಂಡಿದ್ದ ಕೆಲಸವು ಇಲ್ಲದಾಗ ಎಲ್ಲ ನಟರಲ್ಲೂ ಶೂನ್ಯವು ಆವರಿಸಿತು. ಕೃಷ್ಣಾನಂದನಂತೂ ಒಂಟಿ. ನಾಗಭಟ್ಟನು ಸತ್ತು ಕೃಷ್ಣಾನಂದನಾಗಿ ಹುಟ್ಟಿದುದರಿಂದಾಗಿ ಅವನಿಗೆ ಆ ಶೂನ್ಯವು ಇನ್ನೂ ಹೆಚ್ಚು.

ಇಂಥ ಹೊತ್ತಿನಲ್ಲಿಯೇ ನಾರಾಯಣ ದೀಕ್ಷಿತರು ಸಿಕ್ಕಿದ್ದು. ತಾರಾವತಿಯ ಇನ್ನೊಬ್ಬ ಹಿರಿಯ ವೈದಿಕರು ನಾರಾಯಣ ದೀಕ್ಷಿತರು. ಅರುವತ್ತರ ಪ್ರಾಯ. ಅವರ ತಂದೆ ತೀರಿಕೊಂಡರು. ಅವರ ಅಸ್ಥಿಯನ್ನು ಪ್ರಯಾಗದಲ್ಲೇ ವಿಸರ್ಜಿಸಬೇಕೆಂದು ದೀಕ್ಷಿತರು ನಿಶ್ಚಯಿಸಿಕೊಂಡು ಸಾರ್ಥವೊಂದರ ಜತೆಯಲ್ಲಿ ಹೊರಟರು. ಅದು ಮಥುರೆಯ ಮಾರ್ಗವಾಗಿ ಹೋಗುವುದಿತ್ತು. ಮಥುರೆಯಲ್ಲಿ ಅಕಸ್ಮಾತ್ತಾಗಿ ಅವರಿಗೆ ನಾಗಭಟ್ಟನು ಕಂಡ.

ನಾಗಭಟ್ಟನು ಕಾಶಿಯಲ್ಲಿರುವನೆಂಬುದು ದೀಕ್ಷಿತರ ನಂಬಿಕೆಯಾಗಿತ್ತು. ನಾಗಭಟ್ಟನಿಗೆ ಸಂಬಂಧಿಸಿದ ಮುಖ್ಯವಾದ ವಿಷಯವನ್ನು ತಿಳಿಸಲು ಕಾಶಿಗೂ ಹೋಗಬೇಕೆಂದು ಅವರು ಸಂಕಲ್ಪಿಸಿದ್ದರು. ಆ ಕೆಲಸ ಸುಲಭವಾಯಿತು; ಇಲ್ಲೇ ಹೇಳಿದರು. ನಾಗಭಟ್ಟನು ಇತ್ತ ಬರುತ್ತಲೇ ಅತ್ತ ಅಮರುಕನೂ ಶಾಲಿನಿಯೂ ಒಂದಾಗಿದ್ದರು; ಒಂದು ಮಗುವೂ ಹುಟ್ಟಿತ್ತು. ಈ ಕೆಟ್ಟವಿದ್ಯಮಾನದ ಚಿಂತೆಯಲ್ಲಿ ನಾಗಭಟ್ಟನ ತಾಯಿ ಸತ್ತುಹೋಗಿದ್ದಳು.

ಈ ಸುದ್ದಿ ಕೇಳಿದ ನಾಗಭಟ್ಟನಿಗೆ ದುಃಖವೂ ರೋಷವೂ ಒಟ್ಟಿಗೆ ಉಂಟಾದವು. ರಾಜನನ್ನೂ ಶಾಲಿನಿಯನ್ನೂ ಕೊಂದು ಸೇಡು ತೀರಿಸಿಕೊಳ್ಳುವ ಕೋಪಹುಟ್ಟಿತು. ಅದು ಆಗಬಹುದಾದ ಕೆಲಸವೂ ಆಗಿರಲಿಲ್ಲ, ಅದು ಅವನ ಮನೋಧರ್ಮಕ್ಕೆ ಒಗ್ಗುವಂಥದೂ ಆಗಿರಲಿಲ್ಲ. ಅಮರುಕನು ಲಂಪಟನೆಂಬುದು ತಿಳಿದಿತ್ತು. ಆದರೆ ಮಿತ್ರದ್ರೋಹದ ಇಂಥ ಕೆಲಸ ಮಾಡಬಹುದೆಂದು ಅವನು ನಿರೀಕ್ಷಿಸಿರಲಿಲ್ಲ. ಇದರಲ್ಲಿ ಶಾಲಿನಿಯ ಸಂಚೂ ಸೇರಿದೆಯೆ ಎಂಬ ಅನುಮಾನವೂ ಬಂತು.

ಇದೀಗ ಊರುಬಿಟ್ಟು ಬಂದು ನಾಲ್ಕೂವರೆ ವರ್ಷವಾಗಿತ್ತು. ತನ್ನ ಸಂಸಾರದ ನೆನಪು ನೋವಾಗಿ ಕಾಡಿತ್ತು. ದೇಶಸಂಚಾರದ ಆಸೆಯಿಂದ ಸಾರ್ಥಸಾಹಸವನ್ನು ಒಪ್ಪಿ ಹೊರಟುಬಂದು ಅಮರುಕನ ಮಿತ್ರದ್ರೋಹಕ್ಕೆ ಬಲಿಯಾದುದಕ್ಕೆ ಪಶ್ಚಾತ್ತಾಪವಾಗಿತ್ತು. ಊರಿಗೆ ಹೋಗಲಾರದ ಅಸಹಾಯಕ ಸ್ಥಿತಿಯಲ್ಲಿ ಅವನಿದ್ದ. ಕೃಷ್ಣಾನಂದನಾಗಿ ಬದುಕುವುದೊಂದೇ ಈಗ ಆತನಿಗೆ ಉಳಿದಿದ್ದ ದಾರಿ. ಒಂಟಿಯಾಗಿದ್ದಾಗ ಈ ನೋವಿನ ನೆನಪುಗಳು ತೀವ್ರವಾಗಿ ಕಾಡುತ್ತಿದ್ದವು.

ನಾಗಭಟ್ಟನು ಅದನ್ನು ನಿವಾರಿಸಿಕೊಳ್ಳಲೆಂದು ವಿಶ್ವಕರ್ಮಸ್ಥಪತಿಯನ್ನು ಕಾಣಲು ಹೋದ. ವಜ್ರಪಾದರು ಕಟ್ಟಿಸುತ್ತಿದ್ದ ಚೈತ್ಯದ ಕೆಲಸವು ನಿಧಾನವಾಗಿ ಸಾಗುತ್ತಿತ್ತು. ಸ್ಥಪತಿಗೆ ಈಗ ಮೂರು ಮಕ್ಕಳು, ಹೆಂಡತಿ ಮತ್ತೆ ಬಸುರಿ. ಅವನಿಗೆ ವಜ್ರಪಾದರು ಎಲ್ಲ ಸೌಕರ್ಯಗಳನ್ನೂ ಮಾಡಿಕೊಟ್ಟಿದ್ದರು. ಅವನು ಬೌದ್ಧನಾಗಬೇಕೆಂಬ ಒತ್ತಡವೂ ಬರುತ್ತಿತ್ತು. ಬೌದ್ಧಶಿಲ್ಪದಲ್ಲಿ ತಾದಾತ್ಮ್ಯ ಬರಲು ಅವನು ಬೌದ್ಧನಾಗಬೇಕಾದುದು ಅಗತ್ಯ ಎಂದೂ ಹೇಳಲಾಗುತ್ತಿತ್ತು. ಪ್ರತಿ ಬೌದ್ಧನಿಗೂ ತನ್ನ ಧರ್ಮವನ್ನು ಪ್ರಚಾರಮಾಡುವ ಉತ್ಸಾಹವಿರುತ್ತಿತ್ತು. ಮೊದಮೊದಲು ನಿರ್ಲಿಪ್ತನಾಗಿರುತ್ತಿದ್ದ ಸ್ಥಪತಿಯು ಬೌದ್ಧಧರ್ಮದ ಬಗೆಗೆ ಒಲಿಯಲು ಬೇಕಾದ ಸನ್ನಿವೇಶಗಳು ಸಾಂಸಾರಿಕವಾಗಿಯೂ ಬರುತ್ತಿದ್ದವು. ತನ್ನ ಮತವೇ ಸತ್ಯವೆಂದು ವಾದಿಸುವುದು ಅಹಂಕಾರ, ಅಲ್ಲದೆ ಇದು ತರ್ಕದಿಂದ ತೀರ್ಮಾನವಾಗಬಹುದಾದ ಮಾತಲ್ಲ; ನಾಗಭಟ್ಟನು ತನ್ನ ಸ್ವಂತ ಸಂಸಾರದ ಬಗೆಗಿನ ನೋವಿನಲ್ಲಿದ್ದ ಹೊತ್ತಿನಲ್ಲಿ ಇದೆಲ್ಲವೂ ಅವನ ಶೂನ್ಯಭಾವವನ್ನು ಹೆಚ್ಚಿಸಿತು. ಇಂಥ ಹೊತ್ತಿನಲ್ಲಿ ಅದೇ ವಜ್ರಪಾದರು ಬೌದ್ಧನಾಟಕಗಳಲ್ಲಿ ಬುದ್ಧನ ಪಾತ್ರವಹಿಸುವಂತೆ ಕರೆಯುತ್ತಿದ್ದರು; ಬೌದ್ಧನಾಗದೆಯೂ ಆ ಪಾತ್ರದಲ್ಲಿ ತಾದಾತ್ಮ್ಯವು ಸಾಧ್ಯವೆಂದು ಪ್ರತಿಪಾದಿಸುತ್ತಿದ್ದರು. ಅದರಿಂದ ಶೂನ್ಯಭಾವವು ನೀಗುತ್ತದೆಂದೂ ಹೇಳುತ್ತಿದ್ದರು. ಹಿಂದೊಮ್ಮೆ ಶಾಸ್ತ್ರಗಳ ತರ್ಕಕ್ಕಿಂತಲೂ ನಾಟಕದ ರಸವು ಮುಖ್ಯವೆಂದು ಚಂದ್ರಿಕೆ ಹೇಳಿದ್ದಳು. ಆದರೆ ತನ್ನ ಮನಸ್ಸನ್ನು ತೊಳಲಿಸುತ್ತಿದ್ದ ಕ್ಷಣಭಂಗುರ ಭಾವವನ್ನು ನಾಟಕದ ಪಾತ್ರಗಳು ನಿವಾರಿಸುವುದಿಲ್ಲವೆಂಬುದನ್ನು ನಾಗಭಟ್ಟನಿಗೆ ಅವನ ಅನುಭವವೇ ತೋರಿಸುತ್ತಿತ್ತು. ಮತ್ತೆ ಮಹಾಭಾರತ ಮತ್ತು ರಾಮಾಯಣವನ್ನಾಧರಿಸಿದ ನಾಟಕಗಳಲ್ಲಿ ಕೃಷ್ಣನಾಗಿಯೂ ರಾಮನಾಗಿಯೂ ಪಾತ್ರವಹಿಸುವಂತೆ ನಾಗಭಟ್ಟನಿಗೆ ಕರೆ ಬಂದಿದ್ದರೂ ಇದೇ ಕಾರಣಕ್ಕಾಗಿ ಅವನ್ನೂ ನಿರಾಕರಿಸಿದ್ದ. ತನ್ನನ್ನು ಆವರಿಸಿರುವ ಶೂನ್ಯಕ್ಕೆ ಕಾರಣವು ಬೌದ್ಧರು ಹೇಳುವಂತೆ ಬುದ್ಧಿಯ ಕಲ್ಪನೆಗಳನ್ನು ದಾಟಿರುವ ವಸ್ತುಸ್ಥಿತಿಯೇ ಅಥವಾ ವೈದಿಕರು ಹೇಳುವಂತೆ ಕರ್ಮಹೀನಸ್ಥಿತಿಯೇ ಎಂಬುದನ್ನು ಅವನು ಮಥಿಸುತ್ತಿದ್ದ. ತಾರಾವತಿಯ ಬಾಗಿಲು ಮುಚ್ಚಿದ್ದರಿಂದ ಶೂನ್ಯದ ಅನುಭವವು ಮರುಕಳಿಸುತ್ತಿತ್ತು. ಚಂದ್ರಿಕೆಯು ಧ್ಯಾನಕ್ಕೆ ಒಲಿದು ದೈಹಿಕ ಸಂಬಂಧಗಳಿಂದ ದೂರವಿರುವುದೂ ಅದನ್ನೇ ಮಾಡುತ್ತಿತ್ತು. ಆದರೆ ಈ ಸಂಗತಿಗಳಿಗೂ ಮೊದಲೇ ತನ್ನನ್ನು ಶೂನ್ಯಭಾವವು ಆವರಿಸಿದ್ದುದನ್ನು ನೆನೆದು ಅಧ್ಯಾತ್ಮದಾಹದಿಂದಾಗಿಯೇ ತನ್ನಲ್ಲಿ ಶೂನ್ಯವು ಹುಟ್ಟಿದೆ ಎಂಬುದನ್ನು ಗುರುತಿಸಿಕೊಳ್ಳುತ್ತಿದ್ದ.

ಅಂಥ ವೇಳೆಯಲ್ಲೇ ಅವನಿಗೆ ಸಾಧುವೊಬ್ಬರು ಸಿಕ್ಕಿ ಯೋಗಸಾಧನೆಯ ಮೂಲಕ ಶೂನ್ಯವನ್ನು ತೊಡೆದುಕೊಳ್ಳಬಹುದೆಂಬ ಆಸೆಯನ್ನು ಹುಟ್ಟಿಸಿದ್ದು; ದಿಗಿಲಾಗಲಿ ಅಪಾಯವಾಗಲಿ ಶೂನ್ಯಕ್ಕಿಂತ ಹಿತ ಎಂಬ ಅನುಭವವಾದದ್ದು; ಧ್ಯಾನಮಾಡುವಂತೆ ಸಾಧುವೊಬ್ಬರಿಂದ ಆದೇಶಬಂದದ್ದು; ಆಸನವಿನ್ಯಾಸಗಳಷ್ಟರಿಂದಲೇ ಚಿತ್ತಶಾಂತಿಯ ಬಾಗಿಲು ತೆರೆಯುತ್ತದೆ ಎಂಬುದು ಕಂಡದ್ದು. ಅದರಂತೆ ಅನುಷ್ಠಾನವನ್ನು ಮಾಡಿದ, ಒಂದು ವರ್ಷದಲ್ಲಿ ಪ್ರಗತಿಯೂ ಆಯಿತು; ಅನ್ಯಮನಃಪ್ರವೇಶದ ಹೊಸ ಶಕ್ತಿಯೂ ಬಂತು.

ಅಂಥ ವೇಳೆಯಲ್ಲಿ ಚಂದ್ರಿಕೆಯ ಮನಃಪ್ರವೇಶ ಮಾಡಿದ. ಅವಳ ಅಂತರಂಗದ ಒಳಪದರದಲ್ಲಿ ಅವನ ನೆನಪನ್ನು ಜೋಪಾನಮಾಡಿ ಇಟ್ಟುಕೊಂಡಿದ್ದಳು. ಅದು ತಿಳಿದಮೇಲೆ, ಜೀವನಕ್ಕೊಂದು ಅರ್ಥವಿದೆ ಎನಿಸಿತು ಅವನಿಗೆ. ತನ್ನ ಕಾಮದಾಹವನ್ನು ಬೇರೆಯವರಿಂದ ತೀರಿಸಿಕೊಳ್ಳಲು ಅನುಕೂಲವಾಗಲೆಂದೇ ಅವಳು ನಾಟಕಮಂಡಲಿಯನ್ನು ತೊರೆದು ದೂರ ನಿಂತಿದ್ದಳು ಎಂಬುದು ತಿಳಿದಾಗ ಅವಳ ಬಗೆಗೆ ಮನಸ್ಸು ಇನ್ನೂ ಕೋಮಲವಾಯಿತು. ಆನಂದದತ್ತರು ರಾಮಾಯಣದ ನಾಟಕವನ್ನಾಡಿಸುತ್ತಿರುವಾಗ ನಾಗಭಟ್ಟನೇ ಇದ್ದಿದ್ದರೆ ರಾಮನಪಾತ್ರವು ಜೀವಂತವಾಗಿರುತ್ತಿತ್ತು ಎಂದು ನೆನಪಿಸಿಕೊಳ್ಳುತ್ತಿದ್ದರು; ಧ್ಯಾನದಲ್ಲಿ ಅದು ತಿಳಿದು ಮತ್ತೂ ಸಂಭ್ರಮವಾಯಿತು. ಆದರೂ ಜೀವನದ ಅರ್ಥವನ್ನು ನಾಟಕದ ಮೂಲಕ ಹುಡುಕುವುದು ಸಾಧ್ಯವಿಲ್ಲ ಎಂದೇ ಅವನಿಗನಿಸಿತು.

ಇನ್ನೊಂದೆಡೆ ಜಯಸಿಂಹರ ಮನಸ್ಸನ್ನು ಹೊಕ್ಕಾಗ ರಾಷ್ಟ್ರರಾಜಕಾರಣದ ವಿಷಮಸ್ಥಿತಿಯೇ ಕಂಡಿತು. ಗುರ್ಜರಪ್ರತೀಹಾರರು ಮತ್ತು ರಾಷ್ಟ್ರಕೂಟರ ನಡುವಿನ ಪೈಪೋಟಿಯ ಮಧ್ಯೆ ಮ್ಲೇಚ್ಛರು ಕ್ರಮಕ್ರಮವಾಗಿ ಭಾರತದ ಭಾಗಗಳನ್ನು ಆಕ್ರಮಿಸಿ ಧರ್ಮಾಕ್ರಮಣವನ್ನೂ ಮಾಡುತ್ತಿದ್ದರು. ಭಾರತದ ರಾಜರಲ್ಲಿ ಸಾಮರಸ್ಯವನ್ನು ತರಲು ಜಯಸಿಂಹರು ಹೆಣಗುತ್ತಿದ್ದರು.

ಅಮರುಕ ಮತ್ತು ಶಾಲಿನಿಯರ ನೆನಪಾಗುತ್ತಲೇ ನಾಗಭಟ್ಟನ ಸಂಯಮವು ಹಾರಿಹೋಗುತ್ತಿತ್ತು. ಧ್ಯಾನವು ಕೂರುತ್ತಿರಲಿಲ್ಲ. ಅವರಿಬ್ಬರ ಮನಸ್ಸನ್ನೂ ತಿಳಿಯುವ ಕುತೂಹಲ ನಾಗಭಟ್ಟನಿಗೆ. ಅದು ಬೇಡ, ಅಧಃಪತನಕ್ಕೆ ಕಾರಣವಾಗುತ್ತದೆ ಎಂಬ ಗುರುಗಳ ಅಂತರ್ಘೋಷಣೆಯನ್ನು ಮೀರಿ ಅವನು ಅವರ ಮನಸ್ಸನ್ನು ಪ್ರವೇಶಿಸಿದ.

ಶಾಲಿನಿಗೆ ಅಮರುಕನಿಂದ ಹುಟ್ಟಿದ ಹೆಣ್ಣುಮಗುವಿಗೆ ಈಗ ಐದುವರ್ಷ. ಬೇಳುವೆಯ ಮಾತಾಡಿ ಗಂಡನನ್ನು ಸಾಗಹಾಕಿ ವಶಪಡಿಸಿಕೊಂಡ ಅಮರುಕನು ಈಗ ಅವಳನ್ನು ನಿರ್ಲಕ್ಷಿಸಿದ್ದಾನೆ. ಆ ನೋವು ಅವಳಿಗೆ. ಅದರಿಂದ ನಾಗಭಟ್ಟನಿಗೆ ಹಿತವೆನಿಸಿತು. ಅದು ತಾಮಸಿಕ ಸಮಾಧಾನ. ಅದರಿಂದ ಧ್ಯಾನಕ್ಕೆ ವಿಘ್ನ. ಜೀವನದಲ್ಲಿ ರುಚಿಕಾಣದಾಗ ಮತ್ತೆ ಶೂನ್ಯಭಾವ. ಗುರುವಿನ ಆದೇಶವನ್ನು ಮೀರಿ ಧ್ಯಾನಶಕ್ತಿಯ ದುರುಪಯೋಗ ಮಾಡಿಕೊಂಡಿದ್ದ; ಹಾಗಾಗಿ ಕೆಳಗೆ ಎಸೆಯಲ್ಪಟ್ಟಿದ್ದ. ಈಗಲಾದರೂ ಚಿತ್ತವೃತ್ತಿನಿರೋಧ ಮಾಡಿ ಧ್ಯಾನಮಗ್ನನಾಗಬೇಕೆಂಬ ಜ್ಞಾನೋದಯವೇನೋ ಆಯಿತು. ಆದರೆ ಅಮರುಕನ ನೆನಪು ಹೆಡೆಬಿಟ್ಟ ಹಾವಿನಂತೆ ಕಾಡಿತ್ತು, ಅಸಹಾಯಕನಾಗಿದ್ದ.

೫. ತಾಂತ್ರಿಕನ ಸಹವಾಸ; ಚಂದ್ರಿಕೆಗಾಗಿ ಹುಡುಕಾಟ

ಆ ದಿನಗಳಲ್ಲಿ ಗೊತ್ತುಗುರಿ ಇಲ್ಲದೆ ಅಲೆಯುತ್ತಿದ್ದ ನಾಗಭಟ್ಟ ಒಂದು ದಿನ ಮಥುರಾ ನಗರಕ್ಕೆ ಎಂಟುಕ್ರೋಶದೂರದವರೆಗೆ ಹೋಗಿಬಿಟ್ಟಿದ್ದ. ಆಗಲೇ ವಾಮಾಚಾರಿಯಾದ ಒಬ್ಬ ಸಾಧುವನ್ನು ಕಂಡಿದ್ದು. ಮಾಂಸ, ಮದ್ಯ, ಮಲ ಇವುಗಳಿಗೆ ಸಂಬಂಧಿಸಿದ ಅಸಹ್ಯ ಚರ್ಯೆ ಅವನದಾಗಿತ್ತು. ಅವನದು ಯೋಗಮಾರ್ಗಕ್ಕಿಂತ ಭಿನ್ನವಾದ ಮಾರ್ಗ. ಭೇದ, ತಾರತಮ್ಯ, ಉತ್ತಮಿಕೆಯ ಅಹಂಕಾರ, ಸಿದ್ಧಿಸಿದ ಶಕ್ತಿಗಳನ್ನು ಬಳಸಬಾರದೆಂಬ ನಿಷೇಧ, ಮೇಧ್ಯ–ಅಮೇಧ್ಯ, ಭಕ್ಷ್ಯ–ಅಭಕ್ಷ್ಯ, ಸ್ಪೃಶ್ಯ–ಅಸ್ಪೃಶ್ಯ ಭೇದಗಳು ಇವು ಯಾವುವೂ ಆ ಮಾರ್ಗದಲ್ಲಿರಲಿಲ್ಲ. ಯೋನಿಲಿಂಗಗಳನ್ನು ಬಿಡಿಸಿ ನಿಸ್ತೇಜಗೊಳಿಸುವ ಬರಡು ಮಾರ್ಗವೂ ಅವರದಲ್ಲ. ಕೇವಲ ನಾಗಭಟ್ಟನನ್ನು ಸ್ಪರ್ಶಿಸಿದ ಮಾತ್ರದಿಂದಲೇ ಆ ಸಾಧುವು ಅಮರುಕನ ಮನಃಪ್ರವೇಶಕ್ಕೆ ದಾರಿಮಾಡಿಕೊಟ್ಟಿದ್ದ. ಆಗಲೇ, ತಾನು ಮಾಡಿದ ತಪ್ಪನ್ನು ಶಾಲಿನಿಯ ಮೇಲೆ ಹಾಕಿ ನಾಗಭಟ್ಟನನ್ನು ಸಮಾಧಾನಗೊಳಿಸುವ ಠಕ್ಕು ಯೋಚನೆ ಅವನಲ್ಲಿ ತುಂಬಿರುವುದು ತಿಳಿದದ್ದು. ಈಗಲಂತೂ ತಾನು ಒಂಟಿ, ದೇಶಹೀನ, ಮಿತ್ರಹೀನ, ಬಂಧುಹೀನ ಎಂಬ ಭಾವನೆಯು ನಾಗಭಟ್ಟನಿಗೆ ತೀವ್ರವಾಯಿತು.

ಅಮರುಕನ ಮನಸ್ಸನ್ನು ಇನ್ನೂ ಶೋಧಿಸಬೇಕು ಎಂಬ ಕುತೂಹಲವು ಹೆಚ್ಚಿತು. ತಾಂತ್ರಿಕನೇ ಅದಕ್ಕೆ ಸರಿಯಾದ ಗುರು ಎನಿಸಿತು. ಹಿಂದೆ ಅವನು ಕಂಡಿದ್ದ ಸ್ಥಳಕ್ಕೇ ಹುಡುಕಿಕೊಂಡು ಹೋದ. ನಾಲ್ಕುದಿನ ಕಾಡಿನಲ್ಲಿಯೇ ಮಲಗಿದ. ಭಯ, ಹಸಿವುಗಳನ್ನು ಎದುರಿಸಿದ. ಐದನೆಯ ಸಂಜೆ ಆ ತಾಂತ್ರಿಕನು ಅಲ್ಲಿಗೆ ಬಂದ; ಜತೆಗೆ ಒಬ್ಬ ವೇಶ್ಯೆಯೂ ಇದ್ದಳು. ಆ ಅಮಾವಾಸ್ಯೆಯ ರಾತ್ರಿಯಲ್ಲಿ ಯೋನಿಪೂಜೆ ಮಾಡಲೆಂದೇ ಅವಳನ್ನು ಕರೆತಂದಿದ್ದ. ನಾಗಭಟ್ಟನು ಅಲ್ಲಿಗೆ ಬಂದು ತನಗಾಗಿ ಕಾಯುತ್ತಿರುವುದು ಧ್ಯಾನದಿಂದಲೇ ಅವನಿಗೆ ತಿಳಿದಿತ್ತು; ಅವನ ನಿಷ್ಠೆಯನ್ನು ಕಂಡೇ ಅಲ್ಲಿಗೆ ಮತ್ತೆ ಬಂದಿದ್ದ.

ಯೋನಿಪೂಜೆಯು ಶಕ್ತಿಯನ್ನು ಆರಾಧಿಸಿ ಆಹ್ವಾನಿಸಿಕೊಳ್ಳುವ ಒಂದು ಕ್ರಿಯೆ, ಮೈಥುನವು ಅದರ ಒಂದು ಅಂಗ. ಆ ರಾತ್ರಿ ತಾಂತ್ರಿಕನು ವೇಶ್ಯೆಯೊಂದಿಗೆ ಅದನ್ನು ನಡೆಸುವಾಗ ನಾಗಭಟ್ಟನು ಒಂದು ಕ್ರೋಶದೂರದಲ್ಲಿ ಉಳಿದುಕೊಂಡಿದ್ದ. ಅರುಣೋದಯಕ್ಕೆ ಎದ್ದು ಮತ್ತೆ ಅಲ್ಲಿಗೆ ಹೋದಾಗ ಯೋನಿಪೂಜೆ ಮುಗಿದ ಗುರುತುಗಳು ಕಂಡವು. ಆ ವೇಶ್ಯೆಯನ್ನು ಮಥುರೆಗೆ ತಲುಪಿಸುವ ಜವಾಬ್ದಾರಿ ಅವನ ಮೇಲೇ ಬಿತ್ತು.

ತಾಂತ್ರಿಕನ ಶಿಷ್ಯನಾದ ಮೇಲೆ ನಾಗಭಟ್ಟನು ಮದ್ಯ, ಮಾಂಸ, ಮತ್ಸ್ಯ, ಮುದ್ರೆಗಳನ್ನೆಲ್ಲ ರೂಢಿಸಿಕೊಂಡ. ಎರಡುವರ್ಷ ಅವನೊಡನೆ ತಿರುಗಿದ. ಧ್ಯಾನವನ್ನೂ ಅಭ್ಯಾಸ ಮಾಡಿದ, ಆಸನ ಪ್ರಾಣಾಯಾಮಗಳನ್ನೂ ಅಭ್ಯಾಸ ಮಾಡಿಕೊಂಡ. ಅದರ ಬಲದಿಂದ ಶಾಲಿನಿಯ ಮನಸ್ಸನ್ನು ಹೊಕ್ಕು ನೋಡುತ್ತಿದ್ದ. ಆರಂಭದಲ್ಲಿ ಅವಳು ರಾಜನ ಪ್ರೇಮದ ಭರದಲ್ಲಿ ಮೈಮರೆತಿದ್ದಳು. ಮಗುವಾಗಿ ಮೈಮಾಟ ಕೆಟ್ಟಮೇಲೆ ಅವಳ ಬಳಿಗೆ ಬರುವುದನ್ನು ಅಮರುಕನು ಕಡಮೆ ಮಾಡುತ್ತ ಬಂದ. ಕೊನೆಗೆ ಮೂರನೆಯ ಮದುವೆಗೆ ಸಿದ್ಧನಾದ. ಅವಳು ಕಂಗೆಟ್ಟಿದ್ದಳು. ಆದರೆ ನಾಗಭಟ್ಟನನ್ನು ಒಮ್ಮೆಯೂ ನೆನೆಸಿಕೊಳ್ಳಲಿಲ್ಲ. ಇದರಿಂದ ನಾಗಭಟ್ಟನಿಗೆ ಅವಳ ಮೇಲೆ ಕೋಪ ಉಕ್ಕುತ್ತಿತ್ತು.

ಹಿಮಾಲಯದಲ್ಲಿ ತಿರುಗುವಾಗ ಒಂದು ದಿನ ತಾಂತ್ರಿಕನು ನಾಗಭಟ್ಟನನ್ನು ಸ್ವತಂತ್ರಗೊಳಿಸಿ ಒಬ್ಬನೇ ಮುನ್ನಡೆದ. ಯೋನಿಪೂಜೆಯನ್ನು ಮಾಡಿ ತನ್ನ ಸಾಧನೆಯನ್ನು ಪರಿಸಮಾಪ್ತಿಗೊಳಿಸುವಂತೆ ಆದೇಶಿಸಿದ. ಅಗತ್ಯಬಿದ್ದಾಗ ಧ್ಯಾನದಲ್ಲಿ ಸಮೀಪಿಸಿ ಮಾರ್ಗದರ್ಶನ ಪಡೆಯುವಂತೆಯೂ ಸೂಚಿಸಿದ.

ನಾಗಭಟ್ಟನು ಚಂದ್ರಿಕೆಯನ್ನು ನೋಡಿ ನಾಲ್ಕು ವರ್ಷವಾಗಿತ್ತು. ಯೋನಿಪೂಜೆಗೆ ಅವಳನ್ನೇ ಆರಿಸಿಕೊಳ್ಳಲು ನಿರ್ಧರಿಸಿದ. ಧ್ಯಾನದಲ್ಲಿ ಅವಳ ಮನಃಪ್ರವೇಶಮಾಡಿ ಅವಳ ಈಗಿನ ಸ್ಥಿತಿಗತಿಗಳನ್ನು ತಿಳಿಯಲು ಪ್ರಯತ್ನಿಸಿದ. ಆದರೆ ಎಷ್ಟು ಪ್ರಯತ್ನಿಸಿದರೂ ಪ್ರವೇಶ ಸಿಗಲಿಲ್ಲ.

ಆನಂದದತ್ತರ ಮನಃಪ್ರವೇಶಮಾಡಿ ಚಂದ್ರಿಕೆಯ ವಿವರಗಳನ್ನು ಗ್ರಹಿಸಿದ. ಅವರೀಗ ಪಾಟಲಿಪುತ್ರದಲ್ಲಿದ್ದಾರೆ. ರಾಮಾಯಣವನ್ನಾಡಿದ ನಂತರ ಕೃಷ್ಣಚರಿತೆಯನ್ನಾಡುತ್ತಿದ್ದಾರೆ. ಈಗಲೂ ಚಂದ್ರಿಕೆ ತನ್ನ ಪಾತ್ರಗಳಲ್ಲಿ ಮಿಂಚುತ್ತಿದ್ದಾಳೆ. ಅವಳದು ಈಗಲೂ ಸಂನ್ಯಾಸಿಯಂತಹ ಸಾತ್ತ್ವಿಕ ಆಹಾರ. ವಿರಾಮ ವೇಳೆಯಲ್ಲಿ ಧ್ಯಾನದಲ್ಲಿ ಮಗ್ನಳು; ಅದನ್ನು ಬಿಟ್ಟರೆ ಗಾಯನದಲ್ಲಿ ತೊಡಗಿಕೊಳ್ಳುತ್ತಾಳೆ. ಯಾರಿಗೂ ಅವಳು ಅಲಭ್ಯಳು. ಅವಳಿಗಾಗಿ ಪಾಟಲಿಪುತ್ರಕ್ಕೆ ನಡೆಯತೊಡಗಿದ. ಗಂಡಕೀ ನದಿಯ ದಡದಲ್ಲಿ ನಡೆದರೆ ಅದು ಹನ್ನೆರಡು ದಿನದ ದಾರಿ.

೬. ಚಂದ್ರಿಕೆಯ ಕಥೆ; ವಾಮಮಾರ್ಗವನ್ನು ತೊರೆದ ಕೃಷ್ಣಾನಂದ

ಕೃಷ್ಣಾನಂದನು ಚಂದ್ರಿಕೆಯ ಮುಖ ನೋಡದೆ ನಾಲ್ಕು ವರ್ಷವಾಗಿತ್ತು. ಅವಳ ಸೌಂದರ್ಯವು ಈಗ ಮೊದಲಿಗಿಂತಲೂ ಪ್ರಖರವಾಗಿತ್ತು. ನೇರವಾಗಿ ಹೇಳಿದ, 'ತಂತ್ರಸಾಧನೆಗೆ ತೊಡಗಿ ಎರಡು ವರ್ಷವಾಗಿದೆ. ಇನ್ನೊಂದು ಪೂಜೆ ಮಾಡಬೇಕು, ಅದನ್ನು ಮಾಡಿದರೆ ಒಂದು ಹಂತ ಮುಕ್ತಾಯವಾಗುತ್ತದೆ. ಸಾಧಕನಾದ ನನಗೆ ಒಬ್ಬಳು ಶಕ್ತಿ ಬೇಕು. ಅಮಾವಾಸ್ಯೆಯ ರಾತ್ರಿ ಶ್ಮಶಾನ ಅಥವಾ ನಿರ್ಜನ ಪ್ರದೇಶದಲ್ಲಿ ಅವಳ ಯೋನಿಪೂಜೆ ಮಾಡಬೇಕು, ಮೈಥುನವೂ ಅದರ ಭಾಗ. ನೀನು ನನ್ನ ಶಕ್ತಿಯಾಗಬೇಕು' ಬಹಳ ಒತ್ತಾಯ ಮಾಡಿದ. ಯೋಚಿಸಿ ಕೊನೆಗೆ ಒಪ್ಪಿದಳು. ಪಾಟಲಿಪುತ್ರದಿಂದ ಏಳುಕ್ರೋಶದೂರದ ಏಕಾಂತ ಪ್ರದೇಶದಲ್ಲಿ ಅದು ನಡೆಯಿತು. ಅವಳನ್ನು ಮತ್ತೆ ಪಾಟಲಿಪುತ್ರಕ್ಕೆ ತಲುಪಿಸಿದ. ಅವಳು ಮುಂದಿನ ಅಮಾವಾಸ್ಯೆಯವರೆಗೆ ತನ್ನ ಮನೆಯಲ್ಲಿರುವಂತೆ ಪ್ರೀತಿಯಿಂದ ಒತ್ತಾಯ ಮಾಡಿದಳು. ತನಗಾಗಿ ಅಷ್ಟುದೊಡ್ಡ ತ್ಯಾಗಮಾಡಿದ್ದಳು, ಕೃತಜ್ಞತೆ ತುಂಬಿ ಬಂದಿತ್ತು. ಒಪ್ಪಿದ.

ಕಾಡುಮೇಡುಗಳನ್ನು ಅಲೆದು ಅನಿಶ್ಚಿತ ಜೀವನ ಮಾಡುತ್ತಿದ್ದವನಿಗೆ ಅವನ ಸಾಧನೆಗೆ ಭಂಗ ಬರದಂತೆ ಅವನಿಗಾಗಿಯೇ ಒಂದು ಕೋಣೆ ಇತ್ತು. ಎರಡು ವರ್ಷಗಳಲ್ಲಿ ಮೊದಲಬಾರಿ ಮಂಚ, ಹಾಸಿಗೆ ದೊರೆತಿತ್ತು. ನಿತ್ಯವೂ ಚಂದ್ರಿಕೆಯೇ ಎಣ್ಣೆ ಒತ್ತಿ ಸ್ನಾನ ಮಾಡಿಸುತ್ತಿದ್ದಳು. ನಿತ್ಯವೂ ಬಗೆಬಗೆಯ ಭಕ್ಷ್ಯಗಳಿರುವ ಮೃಷ್ಟಾನ್ನಭೋಜನ. ಅಮ್ಮನ ನೆನಪು ತರುವಂಥ ಉಪಚಾರ, ಪ್ರೀತಿ. ಆದರೆ ತಾಂತ್ರಿಕನ ರೀತಿಗೆ ವಿರುದ್ಧವಾಗಿ ಈ ಉಪಚಾರಗಳನ್ನು ಪಡೆಯುತ್ತಿದ್ದ ಕೃಷ್ಣಾನಂದನಿಗೆ ಇದೊಂದು ಬಂಧನ ಎನಿಸುತ್ತಿತ್ತು, ವ್ರತಭ್ರಷ್ಟನಾಗುತ್ತಿರುವ ಭೀತಿ ಕಾಡುತ್ತಿತ್ತು. ಧ್ಯಾನವೂ ಸಾಧ್ಯವಾಗುತ್ತಿರಲಿಲ್ಲ. ಈ

ಜಾಗವನ್ನು ಬೇಗ ಬಿಟ್ಟುಹೋಗಬೇಕು ಎಂದೇ ಯೋಚಿಸುತ್ತಿದ್ದ. ಒಂದು ದಿನವಂತೂ ಚಂದ್ರಿಕೆ ಮಾತೃಯೋನಿಯ ಪೂಜೆ ಆಗಬಹುದೆ ಎಂದು ಕೇಳಿದಳು, ತರ್ಕದಲ್ಲಿ ಅವನನ್ನು ಕಟ್ಟಿಹಾಕಿ ಅವನಲ್ಲಿ ಗಲಿಬಿಲಿಯನ್ನುಂಟುಮಾಡಿಬಿಟ್ಟಳು. ಆಗಲಂತೂ ಧ್ಯಾನಕ್ಕೆ ಕೂತರೆ ಪ್ರತೀಕವೂ ಇರುತ್ತಿರಲಿಲ್ಲ, ಗುರಿಯೂ ಇರುತ್ತಿರಲಿಲ್ಲ. ಚಂದ್ರಿಕೆಯನ್ನು ಇರಿದು ಕೊಂದುಬಿಡುವಷ್ಟು ಕೋಪಬಂತು. ಒಳ್ಳೆಯ ಊಟದಿಂದ ಒಂದೇ ವಾರದಲ್ಲಿ ಅವನ ಎದೆಗೂಡುಗಳೆಲ್ಲ ತುಂಬಿಕೊಂಡವು. ತಾಂತ್ರಿಕನ ವ್ರತಭ್ರಷ್ಟಜೀವನ ಅವನಿಗೇ ಮತ್ತೆ ಒಗ್ಗದಂತಾಗಬೇಕು ಎಂಬ ಒಳ್ಳೆಯ ಉದ್ದೇಶವೇ ಅವಳಿಗಿತ್ತು.

ಯಾವ ಭೋಗಪ್ರೀತಿಯೂ ಇಲ್ಲದ ಅವಳು ಯೋನಿಪೂಜೆಗೆ ಒಪ್ಪಿಕೊಂಡಿದ್ದೂ ಅದಕ್ಕಾಗಿಯೆ. ತಾನು ಒಪ್ಪಿ ಅಲ್ಲಿಗೆ ಹೋದರೆ ಎಂಥ ಹೀನ ಮಾರ್ಗವನ್ನು ಹಿಡಿದಿದ್ದಾನೆ ಎನ್ನುವುದು ಅವನಿಗೇ ಅರ್ಥವಾಗಿ ಅದನ್ನು ತೊರೆಯುತ್ತಾನೆ ಎಂಬ ಆಸೆ ಅವಳಿಗಿತ್ತು. ಕೃಷ್ಣಾನಂದನು ಸಾಧಿಸಬೇಕೆಂದು ಗುರಿ ಇಟ್ಟುಕೊಂಡಿದ್ದ ಅನೇಕ ರೀತಿಯ ಸಿದ್ಧಿಗಳೆಲ್ಲವೂ ಅಧಃಪತನಕ್ಕೆ ದಾರಿಮಾಡುವಂಥವು ಎಂಬುದನ್ನು ತಿಳಿಸಿಕೊಟ್ಟಳು. ಗುರುಗಳ ಆಜ್ಞೆಯಂತೆ ಅವನನ್ನು ಮೇಲೆತ್ತಲೆಂದೇ ಇಷ್ಟೆಲ್ಲವನ್ನೂ ಮಾಡಿದ್ದಳು. ತನ್ನ ಪತ್ನಿಯಿಂದ ವಂಚಿತನಾದ ಅವನಿಗೆ ಅವಳ ಮನಃಪ್ರವೇಶ ಮಾಡಿ ಎಲ್ಲ ವಿವರಗಳನ್ನೂ ತಿಳಿಯುವ ಅದಮ್ಯವಾದ ಕುತೂಹಲವಿದ್ದ ಬಗೆಗೆ ಅವಳಿಗೆ ಸಹಾನುಭೂತಿ ಇತ್ತು. ಚಂದ್ರಿಕೆಯು ತನ್ನನ್ನು ಪ್ರೀತಿಸುತ್ತಿಲ್ಲ ಎಂಬ ತಪ್ಪುಗ್ರಹಿಕೆಯಿಂದಾಗಿ ತಾಂತ್ರಿಕರ ವಾಮಮಾರ್ಗವನ್ನು ತುಳಿದಿದ್ದ. ಚಂದ್ರಿಕೆಯು ಕೃಷ್ಣಾನಂದನಲ್ಲಿ ಅಪಾರವಾದ ಪ್ರೀತಿಯನ್ನಿಟ್ಟುಕೊಂಡಿದ್ದಳು. ಆದರೆ ಇಂದ್ರಿಯನಿಗ್ರಹವನ್ನು ಸಾಧಿಸಿದ್ದಳು. ಅವನು ಆ ಬಗೆಗೆ ಆಕ್ಷೇಪಿಸಿದಾಗ ಅಂತರ್ಮುಖಿಯಾದಳು. ಆ ನೋವಿನಿಂದ ಜ್ವರವೇ ಬಂತು.

ಇಷ್ಟು ಆತ್ಮೀಯತೆ ಇದ್ದರೂ ಚಂದ್ರಿಕೆಯು ಎಂದೂ ಕೃಷ್ಣಾನಂದನಿಗೆ ತನ್ನ ಬಗೆಗಿನ ವಿವರಗಳನ್ನು ಹೇಳಿರಲಿಲ್ಲ. ಕೃಷ್ಣಾನಂದನು ತನ್ನ ಇಷ್ಟದಂತೆ ವಾಮಮಾರ್ಗದಿಂದ ವಿಮುಖನಾಗುತ್ತಿದ್ದಾನೆಂಬ ತಿಳಿವಿನಲ್ಲಿ ಅದನ್ನೆಲ್ಲ ಹೇಳಿದಳು.

ಚಂದ್ರಿಕೆ ಬ್ರಹ್ಮಪುರದವಳು. ತಾಯಿ ದೇವರಸ್ತುತಿಗಳನ್ನು ಚೆನ್ನಾಗಿ ಹಾಡುತ್ತಿದ್ದರು, ತಂದೆ ವೇದಪಂಡಿತರು. ಚಂದ್ರಿಕೆಗೆ ಸಂಗೀತದಲ್ಲಿ ಬಹಳ ಒಲವು. ಆ ಸಮಯಕ್ಕೆ ಆ ಊರಿಗೆ ಒಬ್ಬ ಗಾಯಕನು ಬಂದ; ವಯಸ್ಸು ಮೂವತ್ತು ವರ್ಷ, ಹುಟ್ಟುಕುರುಡ, ಹೆಸರು ಯದುಭದ್ರ. ಕೃಷ್ಣಮಂದಿರದಲ್ಲಿ ಹಾಡುತ್ತಿದ್ದ. ಸಂಗೀತವನ್ನು ಸೃಷ್ಟಿಸಬಲ್ಲ ಪ್ರತಿಭಾವಂತ. ಅನೇಕರು ಅವನ ಶಿಷ್ಯರಾದರು. ಚಂದ್ರಿಕೆಯೂ ಶಿಷ್ಯಳಾದಳು; ಅವಳ ಧ್ವನಿ ಮಧುರವಾಗಿತ್ತು; ಅವಳಿಗೂ ಕಾವ್ಯದ ಚೌಕಟ್ಟುಮೀರಿದ ಸಂಗೀತದಲ್ಲಿ ಆಸಕ್ತಿಯೂ ಪ್ರತಿಭೆಯೂ ಇತ್ತು. ಚೆನ್ನಾಗಿ ಕಲಿತಳು. ಅವನು ಸಭೆಗಳಲ್ಲಿ ಹಾಡಿದಾಗ ತಾನೂ ಜತೆಗೆ ಕೂರುತ್ತಿದ್ದಳು. ಹೀಗೆ ನಾಲ್ಕು ವರ್ಷ ಕಲಿತಳು. ಅವಳಿಗೆ ಆಗ ಹದಿನೇಳು ವರ್ಷ. ಅವನ ಸಂಗೀತಕ್ಕೆ ಎಷ್ಟು ಮಾರುಹೋಗಿದ್ದಳೆಂದರೆ, ಅವನ ಕುರುಡುಗಣ್ಣುಗಳು ಅವನ ಸೌಂದರ್ಯವನ್ನು ಹೆಚ್ಚಿಸಿವೆ ಎಂದೇ ಭಾವಿಸಿದ್ದಳು. ಅವನನ್ನು ಮದುವೆಯಾಗುವ ಕನಸು ಕಟ್ಟಿದಳು. ಜೀವನವಿಡೀ ಅವನೊಡನೆ ಹಾಡಿಕೊಂಡಿರಬಹುದು ಎಂಬ ಕನಸು ಒಂದು ಕಡೆ, ಅವನನ್ನು ರಕ್ಷಿಸಿದ ದೇವಿಯಾಗಬೇಕೆಂಬ ಹಂಬಲ ಒಂದು ಕಡೆ. ಮನೆಯಲ್ಲಿ ವಿರೋಧಿಸಿದರು. ಆದರೆ ಅವಳ ನಿರ್ಧಾರವು ದಿನದಿನಕ್ಕೆ ಗಟ್ಟಿಯಾಯಿತು. ಒಂದು ದಿನ ಮನೆಯನ್ನು ತೊರೆದು ಅವನನ್ನು ಕರೆದುಕೊಂಡು ಊರನ್ನೇ ತೊರೆದು ಹೋದಳು.

ಊರೂರು ದಾಟಿ ಕೊನೆಗೆ ಸಾಲ್ವಪುರದಲ್ಲಿ ಇಬ್ಬರೂ ನೆಲೆನಿಂತರು. ಅಲ್ಲೊಂದು ಸಂಗೀತಶಾಲೆ ನಡೆಸಿ ಸುಸ್ಥಿತಿಗೆ ಬಂದರು. ಅವಳ ಸಂಗೀತವನ್ನೂ ಅದಕ್ಕಿಂತ ಹೆಚ್ಚಾಗಿ ಅವಳ ಚೆಲುವನ್ನೂ ಆರಾಧಿಸುವ ರಸಿಕರ ಒತ್ತಡ ಇದ್ದೇ ಇತ್ತು. ಅದನ್ನೆಲ್ಲ ಧಿಕ್ಕರಿಸಿ ನಿಂತಳು. ಆದರೆ ಯದುಭದ್ರನಿಗೆ ಸಂಶಯ. ಅವನು ಅದನ್ನು ವ್ಯಕ್ತಪಡಿಸುತ್ತಿದ್ದ ರೀತಿಗಳಿಂದಾಗಿ ಅವನ ಕುರುಡು ಅವಳ ಮನಸ್ಸಿಗೆ ತಾಕುವಂತಾಯಿತು. ಆದರೂ ಅವಳು ಅವನಲ್ಲಿ ನಿಷ್ಠಳಾಗಿಯೇ ಇದ್ದಳು.

ಒಂದು ದಿನ ಯದುಭದ್ರನನ್ನು ಹುಡುಕಿಕೊಂಡು ತಕ್ಷಶಿಲೆಯಿಂದ ಒಬ್ಬ ಯುವಕ ಬಂದ. ಹೆಸರು ಶ್ರೀಮುಖ, ಯದುಭದ್ರನ ಅಕ್ಕನ ಮಗ, ವಯಸ್ಸು ಇಪ್ಪತ್ತಮೂರು; ಚಂದ್ರಿಕೆಗಿಂತ ನಾಲ್ಕು ವರ್ಷ ದೊಡ್ಡವನು. ಅವನು ಸಂಗೀತವನ್ನು ಕಲಿಯಲೆಂದೇ ತನ್ನ ಮಾವ ಯದುಭದ್ರನನ್ನು ಹುಡುಕಿಕೊಂಡು ಬಂದಿದ್ದ. ಅವನೂ ಪ್ರತಿಭಾವಂತ, ಚಂದ್ರಿಕೆಯಂತೆಯೇ ಅವನಿಗೂ ಕಾವ್ಯವನ್ನು ಮೀರಿದ ಗಾಯನಕ್ಕೇರಬೇಕೆಂಬ ಪ್ರೀತಿ.

ಶ್ರೀಮುಖನು ಚಂದ್ರಿಕೆಯಿಂದಲೇ ಹೆಚ್ಚು ಕಲಿತ. ಅವಳ ಜತೆ ಸಂಗೀತಸಭೆಗಳನ್ನು ನಡೆಸುವಷ್ಟಾದ. ನೇತ್ರಾಭಿವ್ಯಕ್ತಿಯ ಪರಸ್ಪರ ಹೊಂದಾಣಿಕೆಯ ಗಾಯನವೇ ಒಂದು ಹೊಸ ಅನುಭವ. ಉಪ್ಪರಿಗೆಯಲ್ಲಿ ಅವರಿಬ್ಬರೇ ಕೂತು ಸಂಗೀತಾಭ್ಯಾಸ

ಮಾಡುವಾಗಲೂ ಅವನು ಅವಳ ರೂಪವನ್ನು ಮೆಚ್ಚಿ ಕಣ್ಣುಗಳಿಂದಲೇ ಆರಾಧಿಸುತ್ತಿರುವುದು ಚಂದ್ರಿಕೆಗೆ ತಿಳಿಯುತ್ತಿತ್ತು; ಆಗೆಲ್ಲಾ ತನ್ನ ಸೌಂದರ್ಯವು ಸಾರ್ಥಕವಾದ ಅನುಭವವಾಗುತ್ತಿತ್ತು. ಏಕವಚನದಲ್ಲೇ ಸಂಬೋಧಿಸತೊಡಗಿ ಇನ್ನೂ ಹತ್ತಿರವಾದ, ಅವಳ ಉಡುಗೆತೊಡುಗೆಗಳನ್ನು ಮೆಚ್ಚಿ ಹೇಳತೊಡಗಿದ; ಭಾವಭಂಗಿಗಳನ್ನು ಹೊಗಳಿದ. ಹೆಣ್ಣಾದ ಮೇಲೆ ಅವಳ ಸಹಜ ಸೌಂದರ್ಯವನ್ನು ಯಾರೂ ನೋಡಿರಲಿಲ್ಲ. ತನ್ನ ಸೌಂದರ್ಯವು ಜೀವ ಪಡೆಯುತ್ತಿರುವುದು ಅವನ ಕಣ್ಣುಗಳಲ್ಲಿ ಎಂಬ ಹೊಸ ಅನುಭವವಾಯಿತು. ಇಬ್ಬರೂ ಒಂದಾಗತೊಡಗಿದರು. ಅವನು ಸ್ತುತಿಕಾವ್ಯಗಳನ್ನೇ ಸೃಷ್ಟಿಸಿ ಆರಾಧಿಸುತ್ತಿದ್ದ. ಮೂರು ತಿಂಗಳು ಹೀಗೇ ನಡೆಯಿತು. ಒಂದು ದಿನ ಯದುಭದ್ರನಿಗೆ ಸಿಕ್ಕಿಬಿದ್ದರು. ಶ್ರೀಮುಖನು ಊರುಬಿಟ್ಟು ಓಡಿಹೋದ. ಯದುಭದ್ರನು ಸೇಡಿನಿಂದ ಆತ್ಮಹತ್ಯೆ ಮಾಡಿಕೊಂಡ. ಚಂದ್ರಿಕೆಗೆ ಎರಡು ವರ್ಷ ಕಾರಾಗೃಹ ಶಿಕ್ಷೆಯಾಯಿತು. ಮೊದಮೊದಲು ಪಶ್ಚಾತ್ತಾಪವಿತ್ತು, ತನಗೆ ಶಿಕ್ಷೆಯಾದುದು ಸರಿಯಾಗಿದೆ ಎನಿಸಿತು, ಆಮೇಲೆ ಯದುಭದ್ರನ ಬಗೆಗೆ ಧಿಕ್ಕಾರ ಬೆಳೆಯಿತು; ಶಿಕ್ಷೆಯಾಗಿರುವುದರಿಂದ ಇನ್ನು ತನಗೂ ಅವನಿಗೂ ಸಂಬಂಧವಿಲ್ಲ ಎನಿಸಿತು.

ಬಿಡುಗಡೆಯಾದಮೇಲೆ ಸಾಲ್ವಪುರವನ್ನು ತೊರೆದು ಮಥುರೆಗೆ ಬಂದಳು. ಕೃಷ್ಣಮಂದಿರದಲ್ಲಿರತೊಡಗಿದಳು; ಅವಳಂಥ ಎಷ್ಟೋ ಅನಾಥ ಹೆಂಗಸರು ಅಲ್ಲಿದ್ದರು. ಹಾಡುತ್ತಿದ್ದರು, ಭಜನೆಮಾಡುತ್ತಿದ್ದರು, ಕೃಷ್ಣಪ್ರೇಮದಿಂದ ನರ್ತಿಸುತ್ತಿದ್ದರು. ಅವಳೂ ಹಾಡತೊಡಗಿದಳು. ಆ ದಿವ್ಯಗಾಯನವು ಎಲ್ಲರನ್ನೂ ಆಕರ್ಷಿಸಿತು. ಜಯಸಿಂಹರಿಗೆ ಅವಳ ಸಂಗೀತದ ಪರಿಚಯವು ಈ ಮೊದಲೇ ಇತ್ತು. ಅವಳು ಪ್ರಸಿದ್ಧ ಗಾಯಕಿಯಾದ ಚಂದ್ರಿಕೆ ಎಂದು ಗುರುತು ಹಿಡಿದರು. ಅವಳಿಗಾಗಿ ಒಂದು ನೆಲೆಯನ್ನು ಮಾಡಿಕೊಟ್ಟರು, ಗೌರವದಿಂದಲೇ ನಡೆಸಿಕೊಂಡರು.

ಇದನ್ನೆಲ್ಲ ಕೇಳಿ ಕೃಷ್ಣಾನಂದನು ಅವಳಿಗೆ ಆಗಿರುವ ಅನ್ಯಾಯವನ್ನೂ ಅವಳಿಗಿರುವ ಶಕ್ತಿಯನ್ನೂ ಕುರಿತು ಧ್ಯಾನಿಸುತ್ತಿದ್ದ. ಅವಳದು ಯೋಗಮಾರ್ಗ; ಯೋಗ್ಯಗುರುಗಳಿಂದಲೇ ಆದೇಶಿತಳಾದವಳು. ಅವಳು ಗುರುಗಳು ಹಾಕಿದ ವಿಧಿನಿಷೇಧಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಳು. ಅವರ ಆದೇಶದಂತೆಯೇ ಕೃಷ್ಣಾನಂದನನ್ನು ಮೇಲೆತ್ತುವ ಉದ್ದೇಶದಿಂದ ಯೋನಿಪೂಜೆಗೆ ಒಪ್ಪಿದಳು. ಅದಕ್ಕೆ ಪ್ರತಿಯಾಗಿ ತಂತ್ರವು ಪ್ರೀತಿಯನ್ನೇ ಹಾಳುಮಾಡಿಬಿಡುವ ಸ್ವಾರ್ಥಸಾಧನೆ ಎನಿಸಿತು. ಆ ಮಾರ್ಗವನ್ನು ತೊರೆಯುವ ನಿರ್ಧಾರಮಾಡಿದ; ಅದನ್ನು ಚಂದ್ರಿಕೆಗೆ ಹೇಳಿದಾಗ ಅವಳ ಮುಖ ಅರಳಿತು.

೭. ಮತ್ತೆ ಶೂನ್ಯ; ನಾಲಂದಕ್ಕೆ

ಬರುವ ಅಮಾವಾಸ್ಯೆಯವರೆಗೆ ಚಂದ್ರಿಕೆಯ ಮನೆಯಲ್ಲೇ ಇರಬೇಕು. ಅದು ಚಂದ್ರಿಕೆಗೆ ಕೊಟ್ಟಿರುವ ಮಾತು. ಆಮೇಲೆ? ಮತ್ತೆ ಶೂನ್ಯದ ಅನುಭವವಾಗತೊಡಗಿತು. ಧ್ಯಾನದಲ್ಲಿ ಸೋತಾಗಿತ್ತು, ತಂತ್ರದಲ್ಲೂ ದಡಮುಟ್ಟಲಿಲ್ಲ. ತನ್ನ ಊರು ತಾರಾವತಿಯಲ್ಲೇ ಹೆಂಡತಿಯ ಜತೆಯಲ್ಲಿದ್ದರೂ ಅವಳ ಮನಸ್ಸು ಪೂರ್ಣವಾಗಿ ತನ್ನಲ್ಲಿರುತ್ತಿತ್ತೆ ಎಂಬುದು ಅನುಮಾನದ ಮಾತಾಗಿತ್ತು. ಇತ್ತ ಚಂದ್ರಿಕೆಯೇ ಹೆಂಡತಿಯಾಗಲಿ ಎಂದರೆ 'ದೇಹಸಂಪರ್ಕವನ್ನು ಹೊರತುಪಡಿಸಿ' ಎನ್ನುತ್ತಾಳೆ. ಅವಳಿಗೆ ಸ್ನೇಹ ಮಾತ್ರ ಸಾಕು. ಇದು ಸಿಟ್ಟುಬರಿಸುವ ವಿಷಯ. ನಾಟಕದಲ್ಲೂ ಆಸಕ್ತಿ ಉಳಿದಿರಲಿಲ್ಲ. ಕ್ಷತ್ರಿಯನೇ ಆದ ಬುದ್ಧನ ಧರ್ಮಕ್ಕೆ ಪ್ರತಿಯಾಗಿ ಕ್ಷತ್ರಿಯರೇ ಆದ ರಾಮಕೃಷ್ಣರನ್ನು ಮೆರೆಸುವುದರಲ್ಲಿ ಅರ್ಥ ಕಾಣುತ್ತಿರಲಿಲ್ಲ.

ಹೀಗೆ ದಿಕ್ಕುತಪ್ಪಿದ ಸ್ಥಿತಿಯಲ್ಲಿ ನಗರದಲ್ಲಿ ಅಲೆಯುತ್ತಿದ್ದಾಗಲೇ ವಜ್ರಪಾದ ಭಿಕ್ಕು ಮತ್ತು ವಿಶ್ವಕರ್ಮ ಸ್ಥಪತಿ ಎದುರಿಗೆ ಸಿಕ್ಕಿದ್ದು. ಅವರು ಕಟ್ಟಿಸುತ್ತಿದ್ದ ಚೈತ್ಯದಲ್ಲಿ ಅಳವಡಿಸಬೇಕಿದ್ದ ಕೆಲವು ವಿಗ್ರಹಗಳ ಮಾದರಿಯನ್ನು ನೋಡಲು ಅವರೀಗ ನಾಲಂದಕ್ಕೆ ಹೋಗುತ್ತಿದ್ದರು. ವಿಶ್ವಕರ್ಮನು ಬೌದ್ಧಧರ್ಮಕ್ಕೆ ಪರಿವರ್ತಿತನಾಗಿ ಹೊಸ ನಿಷ್ಠೆಯಲ್ಲಿದ್ದ.

ಶೂನ್ಯದ ಸ್ವರೂಪವನ್ನರಿಯುವುದೇ ಕೃಷ್ಣಾನಂದರು ಶೂನ್ಯದಿಂದ ಪಾರಾಗಲು ಇರುವ ಉಪಾಯವೆಂಬುದು ವಜ್ರಪಾದರ ಅಭಿಪ್ರಾಯವಾಗಿತ್ತು. ನಾಲಂದದಲ್ಲಿ ಅದನ್ನು ಎರಡು ಮೂರು ವರ್ಷ ಅಧ್ಯಯನ ಮಾಡಬಹುದು. ಅದಕ್ಕೆ ಅವಕಾಶ ಕಲ್ಪಿಸಿಕೊಡುವುದಾಗಿಯೂ ಅಭಯವಿತ್ತರು.

೮. ತರ್ಕದ ಕಗ್ಗಂಟು; ರುಚಿಹೀನ ನಾಲಂದ

ನಾಲಂದವನ್ನು ಬೆಳೆಸುವುದರಲ್ಲಿ ವೈದಿಕರಾಜರ ಪಾತ್ರವೂ ಇತ್ತು. ವೈದಿಕ ವಿದ್ಯೆಗಳನ್ನು ಅಲ್ಲಿ ಕಲಿಸಲಾಗುತ್ತಿತ್ತು. ಆದರೆ ಏನು ಕಲಿಸಿದರೂ ಕೊನೆಗೆ ಅದಕ್ಕೆ ಬೌದ್ಧಧರ್ಮದ ಶ್ರೇಷ್ಠತೆಯ ತಿರುವುಕೊಡಲಾಗುತ್ತಿತ್ತು. ಇದರಿಂದಾಗಿ ಬೌದ್ಧೇತರ

ವಿದ್ಯಾರ್ಥಿಗಳು ಬೌದ್ಧತತ್ತ್ವಗಳಿಗೆ ಮಾರುಹೋಗುವ ಸಂದರ್ಭಗಳೂ ಇರುತ್ತಿದ್ದವು. ಕೆಲವು ಬೌದ್ಧೇತರರು ತಮ್ಮ ಮತದ ಹಿನ್ನೆಲೆಯಲ್ಲಿ ಬೌದ್ಧಮತದ ಇತಿಮಿತಿಗಳನ್ನು ತಿಳಿಯಲೂ ಬರುತ್ತಿದ್ದುದುಂಟು.

ಅಲ್ಲಿನ ಕಟ್ಟಡ, ವಿದ್ಯಾರ್ಥಿ ಅಧ್ಯಾಪಕರ ಸಂಖ್ಯೆ, ಗ್ರಂಥಭಂಡಾರ ಎಲ್ಲವೂ ದೊಡ್ಡವೇ; ಇಡೀ ವಾತಾವರಣವು ಬೌದ್ಧಮಯ, ಆದರೆ ಬುದ್ಧಿಪ್ರಚೋದಕ. ಇಲ್ಲಿನ ಕಾರ್ಯಭಾರದಿಂದಾಗಿ ಕೃಷ್ಣಾನಂದನಿಗಿದ್ದ ಶೂನ್ಯಭಾವವು ಹಿಂದೆ ಸರಿಯುತ್ತಿತ್ತು.

ವೈದಿಕ ಪಂಡಿತರನೇಕರು ಬೌದ್ಧಧರ್ಮಕ್ಕೆ ಪರಿವರ್ತಿತರಾಗುತ್ತಿದ್ದುದು ಆ ಕಾಲದ ವಿದ್ಯಮಾನ. ಅಂಥವರಲ್ಲಿ ಪ್ರಜ್ಞಾಘನ ಎಂಬುವವರೂ ಒಬ್ಬರು. ಅವರಿಗೆ ಎಂಬತ್ತು ವರ್ಷ ವರ್ಷವಾಗಿತ್ತು. ಅವರಿಗೆ ವಿಶ್ವವಿದ್ಯಾಲಯದ ಮುಖ್ಯರಾದ ಧರ್ಮಪಾಲರೇ ಪಾಠ ಮಾಡುತ್ತಿದ್ದರು. ಪ್ರಜ್ಞಾಘನರು ಗುರುಗಳ ಸೇವೆ ಮಾಡುತ್ತ ಅವರ ಕೋಣೆಯಲ್ಲೇ ಇರುತ್ತಿದ್ದರು. ಅವರ ವ್ಯಾಸಂಗವ್ಯಾಪ್ತಿಯೂ ವ್ಯಾಸಂಗತೀಕ್ಷ್ಣತೆಯೂ ಅಪೂರ್ವವಾಗಿತ್ತು.

ಹೀಗೆ ಹುಟ್ಟಿನಿಂದ ವೈದಿಕರಾದ ಘಟಾನುಘಟಿ ಪಂಡಿತರೆಲ್ಲ ಕ್ಷಣಿಕತ್ವವೇ ಸತ್ಯ, ಶಾಶ್ವತ ವಸ್ತುವಿನ ಕಲ್ಪನೆಯೇ ಸಕಲ ಆಶೆಗಳಿಗೆ ಆಧಾರ, ಆಶೆಯೇ ದುಃಖಕ್ಕೆ ಕಾರಣ, ಶೂನ್ಯವೇ ಸತ್ಯ ಎಂದು ನಂಬಿಯೇ ಬೌದ್ಧಧರ್ಮಕ್ಕೆ ಪರಿವರ್ತಿತರಾದರೆ ಎಂಬ ಜಿಜ್ಞಾಸೆ ಕೃಷ್ಣಾನಂದನನ್ನು ಕಾಡುತ್ತಿತ್ತು.

ವೈದಿಕರಲ್ಲಿ ವಿಗ್ರಹಾರಾಧನೆ ಇರಲಿಲ್ಲ, ನಿಶ್ಶಬ್ದವಾಗಿ ಮಾಡುವ ಸಂಧ್ಯಾವಂದನೆ ಇತ್ತು. ಬೌದ್ಧರಲ್ಲಿ ವಿಗ್ರಹಾರಾಧನೆ, ಸಾಮೂಹಿಕ ಪೂಜೆ, ಉತ್ಸವ ಮೊದಲಾದ ಕರ್ಮಕಾಂಡ ಹೆಚ್ಚು. ಚೈತ್ಯವಂದನೆಯೂ ಅದರ ಭಾಗ.

ವಿಶ್ವಕರ್ಮಸ್ಥಪತಿಯು ಅಲ್ಲೇ ಒಂದು ವರ್ಷವಿದ್ದು ಬೌದ್ಧ ಶಿಲ್ಪಗಳನ್ನೂ ಬೌದ್ಧ ತಂತ್ರಸಾಧನೆಗಳನ್ನೂ ಅಭ್ಯಾಸ ಮಾಡಬೇಕಾಗಿತ್ತು. ತಂತ್ರಯಾನಿಯೊಬ್ಬನು ಮಾಡಿದ ಯುಗನದ್ಧಸಾಧನೆಯನ್ನೂ ಕಂಡು ಅದರ ಪ್ರತಿಕೃತಿಯನ್ನೂ ರೂಪಿಸಿದ. ಅದ್ವಯಸ್ಥಿತಿಯನ್ನು ಅದರಲ್ಲಿ ಸಮರ್ಪಕವಾಗಿ ಮೂಡಿಸಲಾಗಿದೆಯೆಂದು ಬೌದ್ಧ ಆಚಾರ್ಯರು ಮೆಚ್ಚಿಕೊಂಡರು. ಹೆಣ್ಣಾದ ಪ್ರಜ್ಞೆ ಮತ್ತು ಗಂಡಾದ ಉಪಾಯಗಳ ಅಭಿನ್ನತ್ವ ಅದು ಎಂಬುದು ಅದಕ್ಕಿದ್ದ ತಾತ್ತ್ವಿಕ ವಿವರಣೆ. ಶೂನ್ಯತೆ ಎಂಬುದು ಅದೇ. ಅದೇ ತಥಾಗತ ಗುಹ್ಯ. ಅದೇ ಬದಲಾವಣೆಯಾಗದ ಅನಂತಸತ್ಯ. ಬೇರೆಯವರಿಗಾದರೆ ಅಲ್ಲಿ ಕಾಣುತ್ತಿದ್ದುದು ದೀರ್ಘಮೈಥುನದ ನಂತರ ಪಡೆಯುವ ಶಾಂತಿ.

ಈ ಕ್ಷಣಿಕತೆಯ ವಾದವೆಲ್ಲವೂ ಪರಿಣಾಮವಾದ, ವಿವರ್ತವಾದ ಮೊದಲಾದವುಗಳ ಅಧ್ಯಯನಮಾಡಿದಾಗ ರಂಜಕತೆಯನ್ನು ಕಳೆದುಕೊಳ್ಳುವಂಥದು. ಗಂಡುಹೆಣ್ಣುಗಳ ಆಕರ್ಷಣೆಯನ್ನು ದಾಟಿಕೊಂಡಲ್ಲದೆ ಅಧ್ಯಾತ್ಮ ಸಿದ್ಧಿಸುವುದಿಲ್ಲ; ಬುದ್ಧನು ಹೇಳಿದ್ದು ಅಂಥದು. ಆದರೆ ಅವನ ಸರಳತತ್ತ್ವದ ಸುತ್ತ ತರ್ಕದ ಕಗ್ಗಂಟು ಬೆಳೆದುಹೋಗಿತ್ತು.

ಈ ಸರಳತತ್ತ್ವವನ್ನು ನೇರವಾಗಿ ಅನುಸಂಧಾನ ಮಾಡಲೆಂದೇ ಕೃಷ್ಣಾನಂದನು ಬುದ್ಧಗಯೆಗೆ ಹೋದ, ಬೋಧಿವೃಕ್ಷದ ಕೆಳಗೆ ಧ್ಯಾನಮಾಡಿದ. ಅದು ನೆಮ್ಮದಿಯನ್ನು ಕೊಟ್ಟಿತು. ವೈದಿಕರಾದವರೂ ಅಷ್ಟೇ ಭಕ್ತಿಯಿಂದ ಬುದ್ಧನಿಗೆ ನಮಿಸಿ ಹೋಗುತ್ತಿದ್ದರು. ಬುದ್ಧನು ವೇದವನ್ನು ತಿರಸ್ಕರಿಸಿದನೆಂಬುದು ತಿಳಿದಿದ್ದರೂ ಅವನದು ವಿಷ್ಣುವಿನ ದಶಾವತಾರಗಳಲ್ಲಿ ಒಂದು ಎಂಬ ಅಚಲವಿಶ್ವಾಸ ಅವರಿಗಿತ್ತು. ಆ ನಿಲುವಿನಲ್ಲಿ ಒಂದು ಅಧ್ಯಾತ್ಮದ ಹೊಳಹೂ ಇರುವಂತಿತ್ತು.

ಅವರೆಲ್ಲರೂ ಗಯಾಶ್ರಾದ್ಧಮಾಡಿ ಅಲ್ಲಿಗೆ ಬಂದಿದ್ದರು. ಬುದ್ಧನ ಅಭಿಮತದಂತೆ ಎಲ್ಲವೂ ಕ್ಷಣಿಕತೆಯ ಸರಣಿ; ಒಟ್ಟಾದಾಗ ನಿರಂತರವೆಂಬಂತೆ ಕಾಣುತ್ತದೆ. ಅದರಂತೆ ಜೀವವೂ ಕ್ಷಣಿಕ. ಹಾಗಾಗಿ ಶ್ರಾದ್ಧ ಮಾಡುವುದರಲ್ಲಿ ಅರ್ಥವಿರುವಂತಿರಲಿಲ್ಲ. ಆದರೆ ಆತ್ಮವು ಶಾಶ್ವತ ಎಂಬ ಶ್ರದ್ಧೆಯಮೇಲೆ ಶ್ರಾದ್ಧಕರ್ಮವು ನಿಂತಿತ್ತು; ಅದು ವೈದಿಕರ ಮಾರ್ಗ. ರೋಗ ಮುಪ್ಪು ಸಾವು ಇವುಗಳಿಂದ ಪ್ರಚೋದಿತನಾಗಿ ಅರ್ಥ ಹುಡುಕಲು ಹೊರಟ ರಾಜಕುಮಾರನು ಸರ್ವಂ ಕ್ಷಣಿಕಂ ಎಂದ. ಮುಂದೆ ಮೇಧಾವಿಗಳು ಸೇರಿ ಅದರ ಸುತ್ತ ತರ್ಕದ ಹುತ್ತವನ್ನೇ ಕಟ್ಟಿದರು. ವೈದಿಕ ಪುರಾಣಗಳನ್ನೂ ಅದಕ್ಕಾಗಿ ತಮ್ಮದೇ ರೀತಿಯಲ್ಲಿ ದುಡಿಸಿಕೊಂಡರು.

ಇದೆಲ್ಲದರ ಹಿನ್ನೆಲೆಯಲ್ಲಿ – ಬೌದ್ಧಪ್ರಭಾವದಿಂದ ಶ್ರಾದ್ಧದಲ್ಲಿ ಶ್ರದ್ಧೆಯನ್ನು ಕಳೆದುಕೊಂಡಿದ್ದ ಕೃಷ್ಣಾನಂದನಿಗೆ, ಈಗ ಬೋಧಿವೃಕ್ಷವು ಅರ್ಥ ಕಳೆದುಕೊಂಡಿತ್ತು, ನಾಲಂದವು ರುಚಿಹೀನವಾಗಿತ್ತು.

೯. ಕರ್ಮಪಾರಮ್ಯ; ತುಷಾನಲ ಪ್ರಾಯಶ್ಚಿತ್ತ

ಅಷ್ಟರಲ್ಲಿ ನಾಲಂದದಲ್ಲಿ ಕ್ಷೋಭೆಯನ್ನುಂಟುಮಾಡುವ ಘಟನೆಯೊಂದು ನಡೆದಿತ್ತು. ಪ್ರಜ್ಞಾಘನರಿಗೆ ಸ್ವತಃ ಧರ್ಮಪಾಲರೇ ಪಾಠಮಾಡುತ್ತಿದ್ದರು. ಹೀಗೆ ಧರ್ಮಪಾಲರ ನೇರ ಶಿಷ್ಯರಾಗುವ ಭಾಗ್ಯ ದೊರೆಯುತ್ತಿದ್ದುದು ಬಹು ಪ್ರೌಢರೂ ಶ್ರದ್ಧಾಳುಗಳೂ ಆದವರಿಗೆ ಮಾತ್ರ.

ನಾಲಂದದಲ್ಲಿ ಬೌದ್ಧ ಆಚಾರ್ಯರು ತಮ್ಮ ಮತದ ಶ್ರೇಷ್ಠತೆಯನ್ನು ಸ್ಥಾಪಿಸುವುದಕ್ಕೆ ಪೂರಕವಾಗಿ ವೇದನಿಂದನೆ ಮಾಡುವುದು ಸಾಮಾನ್ಯವಾಗಿತ್ತು. ಒಂದು ದಿನ ಪ್ರವಚನ ಮಾಡುವಾಗ ಧರ್ಮಪಾಲರೂ ಅದನ್ನೇ ಮಾಡಿದರು. ಅದರಲ್ಲಿ ಕುಹಕವಿರುತ್ತಿತ್ತು, ಕಲ್ಪಿತ ಅಂಶಗಳೂ ಇರುತ್ತಿದ್ದವು. ಇದನ್ನು ಕೇಳಿ ಪ್ರಜ್ಞಾಘನರ ಕಣ್ಣಲ್ಲಿ ನೀರು ಬಂತು. ಅದನ್ನು ಕಂಡು ಧರ್ಮಪಾಲರು ವೇದಋಷಿಗಳು ಠಕ್ಕರೆಂದು ಇನ್ನಷ್ಟು ಜರೆದರು.

ಪ್ರಜ್ಞಾಘನರ ಪೂರ್ವನಾಮವು ಕುಮಾರಿಲಭಟ್ಟ. ಅವರು ಅದಾಗಲೇ ಬೌದ್ಧಪಂಡಿತರನ್ನು ವಾದದಲ್ಲಿ ಸೋಲಿಸಿದ್ದರು, ಬೌದ್ಧಧರ್ಮವನ್ನು ಖಂಡಿಸುವ ಪುಸ್ತಕಗಳನ್ನು ಬರೆದಿದ್ದರು. ಅದನ್ನು ಇನ್ನೂ ತೀಕ್ಷ್ಣವಾಗಿ ಮಾಡುವ ಉದ್ದೇಶ ಅವರಿಗಿತ್ತು. ಆದ್ದರಿಂದಲೇ ಬೌದ್ಧಧರ್ಮದ ಸೂಕ್ಷ್ಮಗಳನ್ನು ಧರ್ಮಪಾಲರಿಂದಲೇ ಕಲಿಯಲು ಅವರು ನಾಲಂದಕ್ಕೆ ಬಂದಿದ್ದರು. ಅದಕ್ಕಾಗಿಯೇ ಬೌದ್ಧಭಿಕ್ಕುವೂ ಆಗಿ ಪರಿವರ್ತನೆಗೊಂಡಿದ್ದರು. ಆದರೆ ಧರ್ಮಪಾಲರು ಅನೇಕ ರೀತಿಯಲ್ಲಿ ಪ್ರಜ್ಞಾಘನರ ಪ್ರಾಮಾಣಿಕತೆಯನ್ನು ಶಂಕಿಸಿ ನಿಂದಿಸಿದರು. ಇದರಿಂದ ಪ್ರಜ್ಞಾಘನರ ಶಿಷ್ಯತ್ವದ ವಿಮೋಚನೆಯಾದಂತಾಯಿತು. ಆ ಸ್ಥಿತಿಯಲ್ಲಿ ಪ್ರಜ್ಞಾಘನರು ಬೌದ್ಧಪಂಡಿತರನ್ನು ವಾಗ್ವಾದಕ್ಕೆ ಕರೆದರು. ತಾವು ಸೋತರೆ ಬೌದ್ಧನಾಗಿ ಮುಂದುವರಿಯುವುದಾಗಿಯೂ, ಬೌದ್ಧಪಂಡಿತರು ಸೋತರೆ ಅವರು ವೈದಿಕಮತಕ್ಕೆ ಪರಿವರ್ತನೆಗೊಳ್ಳಬೇಕೆಂದೂ ಸವಾಲು ಹಾಕಿದರು. ಆದರೆ ಕುಮಾರಿಲಭಟ್ಟರ ಹೆಸರು ಕೇಳಿದರೇ ನಡುಗುತ್ತಿದ್ದ ಬೌದ್ಧಪಂಡಿತರು ಅವರನ್ನು ಬೈದರು, ಅವರ ಮೇಲೆ ದೈಹಿಕವಾಗಿ ಆಕ್ರಮಣ ಮಾಡಿದರು. ಕುಮಾರಿಲಭಟ್ಟರು ನಾಲಂದವನ್ನು ಬಿಟ್ಟು ಹೊರನಡೆದರು.

ನಾಗಭಟ್ಟನಿಗೆ ಕುಮಾರಿಲಭಟ್ಟರೆಂದರೆ ಗೌರವ. ಏಕೆಂದರೆ ಅವನು ಮಾಹಿಷ್ಮತಿಯಲ್ಲಿ ವಿದ್ಯಾರ್ಥಿಯಾಗಿದ್ದುದು ಮಂಡನಮಿಶ್ರರ ಆಶ್ರಮದಲ್ಲಿ. ಮಂಡನರಿಗೆ ಗುರುಗಳಾಗಿದ್ದವರು ಕುಮಾರಿಲಭಟ್ಟರು. ಮಂಡನರ ಪತ್ನಿ ಭಾರತೀದೇವಿ ಕುಮಾರಿಲರ ತಂಗಿ; ಆಕೆಯೂ ಪಂಡಿತೆ, ಆಕೆಯೂ ನಾಗಭಟ್ಟನಿಗೆ ಗುರು.

ಆ ಕಾಲದಲ್ಲಿ ಕುಲವಿದ್ಯೆಗಳನ್ನು ಅನ್ಯರಿಗೆ ಹೇಳಿಕೊಡುತ್ತಿರಲಿಲ್ಲ. ಎಲ್ಲ ಕಸುಬಿನವರಲ್ಲೂ ಅದು ಇದ್ದುದು ಹೀಗೆ; ಶಿಲ್ಪಿಗಳಲ್ಲೂ ಹೀಗೆಯೇ ಇತ್ತು ಎಂಬುದನ್ನು ವಿಶ್ವಕರ್ಮಸ್ಥಪತಿಯೂ ಹೇಳುತ್ತಿದ್ದ. ಹಾಗಾಗಿ ವೇಷಾಂತರದಲ್ಲಿ ವಿದ್ಯೆ ಕಲಿತುಹೋಗುವುದು ಅಪೂರ್ವವೇನಾಗಿರಲಿಲ್ಲ. ಕುಮಾರಿಲಭಟ್ಟರು ಮಾಡಿದ್ದೂ ಅಂಥ ಒಂದು ಸಾಹಸವನ್ನು. ಹಾಗಾಗಿ ನಾಗಭಟ್ಟನಿಗೆ ಅವರ ಎಂಬತ್ತರ ವೃದ್ಧಾಪ್ಯದಲ್ಲೂ ಇದ್ದ ಉತ್ಸಾಹದ ಬಗೆಗೆ ಗೌರವವೇ ಇತ್ತು. ಅವರನ್ನು ಹುಡುಕಿಕೊಂಡು ಹೊರಟ. ಕುಮಾರಿಲಭಟ್ಟರು ಇದ್ದುದು ಪ್ರಯಾಗದ ತಮ್ಮ ಆಶ್ರಮದಲ್ಲಿ; ನಾಲಂದದಿಂದ ಅಲ್ಲಿಗೇ ಮರಳಿದ್ದರು. ನಾಗಭಟ್ಟನು ಅಲ್ಲಿಗೇ ಹೋದ. ಈಗ ಅವನ ಚಿತ್ತದಲ್ಲಿ ಶೂನ್ಯವಿರಲಿಲ್ಲ. ಶೂನ್ಯವೆಂಬುದು ತಾತ್ಕಾಲಿಕವಾಗಿ ಮನಸ್ಸನ್ನು ಮುಸುಗುವ ಸ್ಥಿತಿಮಾತ್ರ ಎಂದು ತರ್ಕಿಸಿದ.

ಕುಮಾರಿಲರ ಆಶ್ರಮದಲ್ಲಿ ತ್ಯಾಗಭಾವವಿತ್ತೇ ಹೊರತು ಬಡತನವಿರಲಿಲ್ಲ. ಕುಮಾರಿಲರ ಕಣ್ಣುಗಳಲ್ಲಿ ಪ್ರಖರತೆಯ ಜೊತೆಗೆ ನಿಯಮಪಾಲನೆಯ ಬಿಗಿ ಇತ್ತು. ನಾಟಕ, ಯೋಗಸಾಧನೆ, ತಂತ್ರಸಾಧನೆ, ಬೌದ್ಧಧರ್ಮ ಹೀಗೆ ನಾನಾ ಅನುಭವಗಳಿಗೆ ಒಡ್ಡಿಕೊಂಡಿದ್ದ ನಾಗಭಟ್ಟನು ದಿಕ್ಕುತಪ್ಪಿದವನಾಗಿದ್ದ; ಕುಮಾರಿಲಭಟ್ಟರು ತನಗೆ ಸರಿಯಾದ ದಿಕ್ಕು ತೋರಿಸುವರೆಂಬ ಆಸೆಯಿಂದಲೇ ಅವರನ್ನು ಹುಡುಕಿಕೊಂಡು ಬಂದಿದ್ದ. ಯಾವುದಾದರೂ ತಕ್ಕ ಪ್ರಾಯಶ್ಚಿತ್ತ ಮಾಡಿಕೊಂಡು ಮನಶ್ಶಾಂತಿ ಪಡೆಯುವ ಉದ್ದೇಶ ಅವನಿಗಿತ್ತು. ಆದರೆ ಕರ್ಮಪಾರಮ್ಯವನ್ನು ಪ್ರತಿಪಾದಿಸುವವರಲ್ಲಿ ಅದ್ವಿತೀಯರಾಗಿದ್ದವರು ಕುಮಾರಿಲಭಟ್ಟರು. ಕುಮಾರಿಲರೇ ಈಗ ಪಶ್ಚಾತ್ತಾಪದ ಅವಸ್ಥೆಯಲ್ಲಿದ್ದರು. ಪರಮತದೀಕ್ಷೆ ಪಡೆದುದು ಒಂದು ಪಾಪ, ಬಿಟ್ಟ ವೈದಿಕ ಮತ ಮತ್ತು ಸೇರಿದ ಬೌದ್ಧ ಮತ ಈ ಎರಡೂ ಶ್ರದ್ಧೆಗಳಿಗೆ ಮಾಡಿದ ಮೋಸವು ಎರಡನೆಯ ಪಾಪ, ತನ್ನನ್ನು ನಂಬಿ ಶ್ರದ್ಧೆಯಿಂದ ಪಾಠಮಾಡುತ್ತಿದ್ದ ಗುರುಗಳಿಗೆ ಪ್ರತಿನಿಮಿಷವೂ ಮೋಸಮಾಡುತ್ತಿದ್ದ ಭಾವವು ತುಂಬಿಕೊಂಡಿದ್ದುದು ಮೂರನೆಯ ಪಾಪ. ವೇದದ್ರೋಹಿಯಾದ ತನಗೆ ನಿಧಾನವಾಗಿ ಸುಟ್ಟು ಕೊಲ್ಲುವ ತುಷಾಗ್ನಿಯೇ ಸರಿಯಾದ ಶಿಕ್ಷೆ

ಎಂದೂ ಅವರು ನಿರ್ಣಯಿಸಿಕೊಂಡಿದ್ದರು. ಹತ್ತಿರದ ದಿನಗಳಲ್ಲೇ ಸಂಭವಿಸುವ ಸೂರ್ಯಗ್ರಹಣದ ಮುಹೂರ್ತಕ್ಕಾಗಿ ಕಾಯುತ್ತಿದ್ದರು.

ಕುಮಾರಿಲಭಟ್ಟರ ಈ ಭಯಂಕರ ಸಂಕಲ್ಪವನ್ನು ತಪ್ಪಿಸಲು ಅವರ ಶಿಷ್ಯರೂ, ನಾಗಭಟ್ಟನೂ ಪ್ರಯತ್ನಿಸಿ ವಿಫಲರಾದರು. ಅಪ್ರತಿಮ ಯತಿ ಶಂಕರಾಚಾರ್ಯರಂತೂ 'ಪಾಪವು ಅಜ್ಞಾನಜನ್ಯ, ಅದನ್ನು ಸುಡುವ ಶಕ್ತಿ ಇರುವುದು ಜ್ಞಾನಕ್ಕೆ ಮಾತ್ರ' ಎಂದು ಹೇಳಿ ಕುಮಾರಿಲಭಟ್ಟರು ತಮ್ಮ ಸಂಕಲ್ಪದಿಂದ ಹಿಂದೆ ಸರಿಯುವಂತೆ ಕರೆಕೊಟ್ಟರು. 'ಮನುಷ್ಯನು ತಾನು ಮಾಡಿದ ಕರ್ಮಕ್ಕೆ ತಾನೇ ಹೊಣೆ. ತನ್ನ ತಪ್ಪನ್ನು ಗ್ರಹಿಸಿ ತಾನೇ ಶಿಕ್ಷಿಸಿಕೊಳ್ಳುವವನೇ ನೈತಿಕ ಶಕ್ತಿಯುಳ್ಳ ವ್ಯಕ್ತಿ. ನೈತಿಕ ಶಿಥಿಲತೆಯ ಹೊಣೆಯನ್ನು ಜ್ಞಾನಾಜ್ಞಾನಗಳ ಮೇಲೆ ಹಾಕುವುದು ಪಲಾಯನವಾದವಾಗುತ್ತದೆ' ಎಂಬುದು ಕುಮಾರಿಲಭಟ್ಟರ ಮೊದಲ ಮತ್ತು ಕೊನೆಯ ನಿರ್ಧಾರವಾಗಿತ್ತು. ಕರ್ಮಮಾರ್ಗದ ಗೌಣತೆಯನ್ನು ಪ್ರತಿಷ್ಠಾಪಿಸಲೆಂದೇ ಬಂದಿದ್ದವರು ಶಂಕರಾಚಾರ್ಯರು; ಅವರ ಸೂಚನೆಯಂತೆಯೇ ವಾಗ್ವಾದಕ್ಕಾಗಿ ಮಂಡನಮಿಶ್ರರನ್ನು ಹುಡುಕಿಕೊಂಡು ಹೊರಟರು. ಅಲ್ಲಿ ಉಳಿದು ಒಂಟಿತನದ ಭಾವದಲ್ಲಿ ಮುಳುಗಿದ ನಾಗಭಟ್ಟನು ಕುಮಾರಿಲಭಟ್ಟರಂತೆಯೇ ತಾನೂ ಮಾಡುವುದಾದರೆ ತಾನು ಮಾಡಿರುವ ತಪ್ಪುಗಳಿಗಾಗಿ ಸಾವಿರಸಲ ತುಷಾನಲಶಿಕ್ಷೆಯನ್ನನುಭವಿಸಬೇಕಾಗುತ್ತದೆ ಎಂದು ಕಲ್ಪಿಸಿಕೊಂಡು ಕಂಪಿಸುತ್ತಿದ್ದ.

ಶ್ರಮಣರೂ ಜೈನರೂ ತಳೆದ ನಿಲುವಿನಿಂದಾಗಿ ಕ್ಷತ್ರಿಯಧರ್ಮವು ತೇಜೋಹೀನವಾಗಿದೆ. ಭರತಖಂಡವು ನಿರ್ವೀರ್ಯವಾಗಿದೆ. ಇಂಥ ಹೊತ್ತಿನಲ್ಲಿ ಗುರ್ಜರ ಪ್ರತೀಹಾರ ಚಕ್ರವರ್ತಿಗಳು ಅಶ್ವಮೇಧಯಾಗ ಮಾಡಲು ಹೊರಟಿರುವುದು ಉಚಿತವಾಗಿದೆ. ವೈದಿಕಮತದ ಜೀರ್ಣೋದ್ಧಾರವಾಗಬೇಕಾಗಿದೆ, ಅದೆಲ್ಲವೂ ಸರಿ, ಆದರೆ ಆ ಯಾಗಕ್ಕೆ ಬ್ರಹ್ಮನಾಗಿ ಹೋಗಲು ಕುಮಾರಿಲಭಟ್ಟರು ಬದುಕಿ ಉಳಿದಿರುವುದಿಲ್ಲ. ಅವರಂತೆಯೇ ಯಜ್ಞಯಾಗಗಳ ಔಚಿತ್ಯವನ್ನು ಸಮರ್ಥವಾಗಿ ಪ್ರತಿಪಾದಿಸಬಲ್ಲ ಇನ್ನೊಬ್ಬರೆಂದರೆ ಮಂಡನಮಿಶ್ರರು. ಗುರ್ಜರ ಪ್ರತೀಹಾರರ ಯಾಗಕ್ಕೆ ಬ್ರಹ್ಮನಾಗಲು ಅವರೇ ತಕ್ಕವರೆಂದು ಕುಮಾರಿಲಭಟ್ಟರೇ ಸೂಚಿಸಿದರು.

ಅಶ್ವಮೇಧದ ಮಹತ್ತ್ವವು ರಾಜಪ್ರತಿನಿಧಿಯಾದ ಜಯಸಿಂಹರಿಗೆ ಮೂರ್ತವಾಗಿಯೇ ತಿಳಿದಿತ್ತು. ಸಿಂಧೂ ದೇಶದಲ್ಲಿ ಮ್ಲೇಚ್ಛರಿಂದ ಅತಿಕ್ರಮಣವಾಗಿತ್ತು, ಅತ್ಯಾಚಾರ ನಡೆದಿತ್ತು, ಮತಾಂತರ ನಡೆದಿತ್ತು. ಮೂಲವಾಸಿಗಳ ಮೂಲೋತ್ಪಾಟವಾಗಿತ್ತು. ಬೌದ್ಧಭಿಕ್ಕುಗಳ ದ್ರೋಹವೂ ಇದಕ್ಕೆಲ್ಲ ಪೂರಕವಾಗಿ ನೆರವಾಗಿತ್ತು. ಅಂಥ ಹೊತ್ತಿನಲ್ಲಿ ವೇದಧರ್ಮವನ್ನು ಉಳಿಸಬಲ್ಲ ಪ್ರಬಲನೈಷ್ಠಿಕರಾದ ಕುಮಾರಿಲಭಟ್ಟರು ತುಷಾನಲದಲ್ಲಿ ತಮ್ಮನ್ನು ತಾವು ಸುಟ್ಟುಕೊಂಡು ಅಸುನೀಗಿದ್ದರು. ಕ್ಷತ್ರಿಯರಲ್ಲಿ ಕೂಡ ಇಂಥ ಕ್ಷಾತ್ರವು ಸೊರಗಿಹೋಗಿ ಭಾರತಕ್ಕೆ ಆಪತ್ತು ಎದುರಾಗಿರುವ ಸ್ಥಿತಿಯನ್ನು ಕಂಡು ಜಯಸಿಂಹರು ವಿಷಾದಿಸುತ್ತಿದ್ದರು.

೧೦. ಜ್ಞಾನಪಾರಮ್ಯ; ಮಂಡನಮಿಶ್ರರ ಸಂನ್ಯಾಸ

ಜಯಸಿಂಹ ಮತ್ತು ನಾಗಭಟ್ಟ ಮಥುರೆಗೆ ಹೋದರು. ಒಂದು ವಾರ ಬಿಟ್ಟು ಇಬ್ಬರೂ ಮಾಹಿಷ್ಮತಿಗೆ ಹೋಗುವುದೆಂದು ತೀರ್ಮಾನಿಸಿಕೊಂಡಿದ್ದರು. ಆದರೆ ಜಯಸಿಂಹರ ಪತ್ನಿ ಉಷಾದೇವಿಗೆ ಸನ್ನಿಪಾತ ಜ್ವರ ಬಂತು. ಅದು ಬೇಗ ಗುಣವಾಗುವಂತಿರಲಿಲ್ಲ. ಆದುದರಿಂದ ನಾಗಭಟ್ಟನನ್ನು ಮಾಹಿಷ್ಮತಿಗೆ ಕಳಿಸಿಕೊಟ್ಟರು. ಉಷಾದೇವಿಗೆ ಗುಣವಾದ ಮೇಲೆ ಜಯಸಿಂಹರು ಕೂಡ ಅಲ್ಲಿ ಹೋಗಿ ಅವರನ್ನು ಕೂಡಿಕೊಳ್ಳುವುದೆಂದು ತೀರ್ಮಾನಿಸಿದರು.

ವಾಯವ್ಯದ ನಾಡುಗಳು ಪೂರ್ಣವಾಗಿ ಮ್ಲೇಚ್ಛಮಯವಾಗಿ ಹೋಗಿದ್ದವು. ಮಥುರೆಯಲ್ಲಿ ನಾಟಕ ಮಂಡಲಿಯಲ್ಲಿ ಹೆಚ್ಚು ಚಟುವಟಿಕೆಗಳಿರಲಿಲ್ಲ. ಚಂದ್ರಿಕೆಯನ್ನು ನೋಡುವ ಮನಸ್ಸಿದ್ದರೂ ಅದನ್ನು ನಿಗ್ರಹಿಸಿ ನಾಗಭಟ್ಟನು ಮಾಹಿಷ್ಮತಿಗೆ ಹೊರಟುಹೋದ.

ಮಂಡನಮಿಶ್ರರು ವಾವೆಯಲ್ಲಿ ನಾಗಭಟ್ಟನ ಸೋದರಮಾವ. ಆದರೆ ನಿಯಮಗಳಲ್ಲಿ ಕಟ್ಟುನಿಟ್ಟು. ಅಧ್ಯಯನ, ಅಧ್ಯಾಪನ, ಗ್ರಂಥರಚನೆ, ನಿತ್ಯನೈಮಿತ್ತಿಕ ಕರ್ಮಗಳಲ್ಲಿ ಅವರ ಸಮಯವು ಕಳೆದುಹೋಗುತ್ತಿತ್ತು. ಅತ್ತೆ ಭಾರತೀದೇವಿಯವರು ಸರಳವಾಗಿದ್ದ, ಸಂಪ್ರದಾಯಶೀಲೆಯಾಗಿದ್ದ, ವಿದ್ಯಾವತಿಯಾಗಿದ್ದ ಪರಿಪೂರ್ಣಮಹಿಳೆಯಾಗಿದ್ದರು. ಕರುಣಾಮಯಿ ಕೂಡ.

ಹಿಂದೆ ವಿದ್ಯಾರ್ಥಿಯಾಗಿದ್ದಾಗ ನಾಗಭಟ್ಟನು ಪಾಠಶಾಲೆಯ ವಿದ್ಯಾರ್ಥಿನಿಲಯದಲ್ಲಿ ತಂಗಿಕೊಂಡಿದ್ದ. ಈಗ ನೇರವಾಗಿ ಮನೆಗೇ ಹೋದ. ಕುಮಾರಿಲಭಟ್ಟರು ತುಷಾಗ್ನಿಪ್ರವೇಶಮಾಡಿದ ದಾರುಣಸುದ್ದಿಯನ್ನು ತಿಳಿಸುವ ಕೆಲಸವು ಅವನ ಮೇಲೇ ಬಂದಿತ್ತು. ಇದ್ದಕ್ಕಿದ್ದಂತೆ ಬರಸಿಡಿಲಿನಂತೆ ಬಡಿದ ಆ ಸುದ್ದಿಯಿಂದ ಭಾರತೀದೇವಿಯು ಪ್ರಜ್ಞೆ ತಪ್ಪಿಬಿದ್ದರು. ಮಂಡನಮಿಶ್ರರು ಮಾಹಿಷ್ಮತೀ ನರ್ಮದೆಗಳ ಸಂಗಮಕ್ಕೆ ಹೋಗಿ ಭಾವನೂ ಗುರುಗಳೂ ಆಗಿದ್ದ ಕುಮಾರಿಲಭಟ್ಟರಿಗೆ ಪಿಂಡಪ್ರದಾನ ಮಾಡಿ ಬಂದರು. ಯಾವಾಗಲೂ ಕುಲಾಚರಣೆಯನ್ನು ಎತ್ತಿ ಹಿಡಿಯುತ್ತಿದ್ದವರು ಅವರು. ವೇದಬಾಹಿರವಾದ ಕ್ಷೇತ್ರಗಳಿಗೆ ಕಾಲಿಡುವುದೆಂದರೆ ವೇದದಲ್ಲಿ ಶ್ರದ್ಧೆ ಇಲ್ಲ ಎಂದೇ ಅರ್ಥ ಎಂಬುದು ಅವರ ನಿರ್ಣಯ. ಗುರ್ಜರ ಪ್ರತೀಹಾರರು ನಡೆಸುವ ಯಾಗಕ್ಕೆ ಬಂದು ಬ್ರಹ್ಮಸ್ಥಾನವನ್ನು ವಹಿಸಿ ಯಶಸ್ವಿಯಾಗಿ ನಡೆಸಿಕೊಡುವುದಾಗಿ ಮಾತುಕೊಟ್ಟರು.

ಭಾರತೀದೇವಿಯು ವಿವಾಹವಾಗಿ ಮಾಹಿಷ್ಮತಿಗೆ ಬಂದು ಮೂವತ್ತೈದು ವರ್ಷವಾಗಿತ್ತು. ಇಷ್ಟರಲ್ಲಿ ಕುಮಾರಿಲಭಟ್ಟರು ಮಾಹಿಷ್ಮತಿಗೆ ಬಂದುದು ಒಮ್ಮೆ ಮಾತ್ರ. ಆಗಲೂ ಪಾಠಶಾಲೆಯ ಕಲ್ಪನೆಯನ್ನು ಕೊಟ್ಟು ಮಾಹಿಷ್ಮತಿಯ ವಿದ್ವಾಂಸರಲ್ಲಿ ವಿದ್ಯಾಪ್ರಸಾರದ ಉತ್ಸಾಹವನ್ನು ಹೆಚ್ಚಿಸುವ ಕೆಲಸವನ್ನೇ ಅವರು ಮಾಡಿದ್ದು.

ಭಾರತೀದೇವಿಯ ತಂದೆಯೂ ವಿದ್ವಾಂಸರು. ಅಣ್ಣ ಕುಮಾರಿಲಭಟ್ಟರು ಅವರಿಗಿಂತ ದೊಡ್ಡ ವಿದ್ವಾಂಸರು. ಭಾರತಿಗಿಂತ ಕುಮಾರಿಲಭಟ್ಟರು ಇಪ್ಪತ್ತು ವರ್ಷ ದೊಡ್ಡವರು. ಅವರ ಒತ್ತಾಯದ ಮೇಲೆಯೇ ಗುರುಕುಲದಲ್ಲಿ ಭಾರತಿಗೂ ವಿಧ್ಯುಕ್ತವಾಗಿ ವೇದ ಶಾಸ್ತ್ರಗಳ ಪಾಠವಾದದ್ದು. ಚುರುಕಾಗಿದ್ದ ಹುಡುಗಿಗೆ ಅವಳು ಹೆಣ್ಣುಮಗಳು ಎಂಬ ಕಾರಣಕ್ಕೆ ಅವಕಾಶವನ್ನು ತಪ್ಪಿಸಬಾರದು ಎಂಬುದು ಅವರ ನಿಲುವಾಗಿತ್ತು. ಉಳಿದ ಬ್ರಹ್ಮಚಾರೀ ಬಾಲಕರ ಜೊತೆಯೇ ಭಾರತಿಯೂ ಕಲಿತರು.

ಕುಮಾರಿಲಭಟ್ಟರಿಗೆ ಮದುವೆಯಾದಾಗ ಇಪ್ಪತ್ನಾಲ್ಕು ವರ್ಷ. ಮೊದಲ ಹೆರಿಗೆಯಲ್ಲೇ ಅವರ ಹೆಂಡತಿಯೂ ಮಗುವೂ ಸತ್ತುಹೋಗಿದ್ದರು. ಕುಮಾರಿಲರು ಮತ್ತೆ ಮದುವೆಯಾಗಲಿಲ್ಲ. ಅಧ್ಯಯನ ಅಧ್ಯಾಪನ ಗ್ರಂಥ ರಚನೆಗಳಲ್ಲಿ ನಿರತರಾಗಿರುತ್ತಿದ್ದ ಅವರಿಗೆ ಗೃಹಕೃತ್ಯದಲ್ಲಿ ಮನಸ್ಸು ಹರಿಯುತ್ತಿರಲಿಲ್ಲ. ಮೊದಲಿನಿಂದಲೂ ಗೃಹಕೃತ್ಯದ ಹೊಣೆ ಬಿದ್ದುದು ಭಾರತೀದೇವಿಯ ಮೇಲೆ. ಆಕೆ ಅದರ ಜತೆಗೇ ವಿದ್ಯೆ ಕಲಿತರು.

ಮಂಡನಮಿಶ್ರರು ಕುಮಾರಿಲಭಟ್ಟರ ಗುರುಕುಲದಲ್ಲಿ ಹನ್ನೆರಡು ವರ್ಷ ವಿದ್ಯೆ ಕಲಿತರು. ಬಹು ಪ್ರಬುದ್ಧರು. ಅವರು ವಿಷಯಗಳನ್ನು ಮಂಡಿಸುತ್ತಿದ್ದ ವೈಖರಿಯನ್ನು ನೋಡಿಯೇ ಕುಮಾರಿಲಭಟ್ಟರು ಅವರಿಗೆ ಮಂಡನಮಿಶ್ರ ಎಂಬ ಬಿರುದು ಕೊಟ್ಟಿದ್ದು. ಹಾಗಾಗಿ ಮುನ್ನಿನ ವಿಶ್ವರೂಪ ಎಂಬ ಹೆಸರು ಮರೆಯಾಗಿತ್ತು. ಭಾರತಿಗಿಂತ ಅವರು ನಾಲ್ಕು ವರ್ಷ ದೊಡ್ಡವರು. ವಿದ್ಯಾಭ್ಯಾಸವು ಮುಗಿದ ಮೇಲೆ ಮಂಡನರು ಗುರುವಿನ ಸೂಚನೆಯಂತೆ ಭಾರತಿಯನ್ನೇ ವರಿಸಿದರು. ಭಾರತಿಯನ್ನು ಮದುವೆಮಾಡಿಕೊಟ್ಟಮೇಲೆ ಕುಮಾರಿಲರು ದಿಗ್ವಿಜಯಕ್ಕೆ ಹೊರಟರು. ಅನ್ಯದಾರ್ಶನಿಕ ಮತಗಳನ್ನು ಅದರಲ್ಲೂ ಬೌದ್ಧರನ್ನು ಸೋಲಿಸಿದರು. ಕರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿದರು.

ಭಾರತೀದೇವಿ ಮತ್ತು ಮಂಡನಮಿಶ್ರರದು ಅನ್ಯೋನ್ಯ ದಾಂಪತ್ಯ. ಮಂಡನರಿಗೆ ಈಗ ಅರುವತ್ತೈದು ವರ್ಷ. ಪತಿ ಪತ್ನಿ ಇಬ್ಬರೂ ಪಂಡಿತರು. ಮಾಹಿಷ್ಮತಿ ಮತ್ತು ಸುತ್ತಮುತ್ತಣ ನಾಡಿನಲ್ಲಿ ಕರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿದಿದ್ದರು. ಹಾಗಾಗಿ ಕುಮಾರಿಲಭಟ್ಟರಿಗೆ ಇತ್ತ ಕಡೆ ಸಂಚಾರಕ್ಕೆ ಬರಬೇಕಾದ ಕಾರಣವಿರಲಿಲ್ಲ. ಭಾರತಿ ಮತ್ತು ಮಂಡನರು ಕಳೆದಬಾರಿ ಕುಮಾರಿಲಭಟ್ಟರನ್ನು ನೋಡಿದ್ದು ಇಪ್ಪತ್ತೈದು ವರ್ಷಗಳ ಹಿಂದೆ.

ಭಾರತಿ ಮತ್ತು ಮಂಡನರಿಗೆ ಇಬ್ಬರು ಹೆಣ್ಣುಮಕ್ಕಳು. ಹಿರಿಯಳು ಮೈತ್ರೇಯಿ, ಮದುವೆಯಾಗಿ ಹೋಗಿದ್ದುದು ಉಜ್ಜಯನಿಗೆ; ಎರಡನೆಯವಳು ಮಾಲಿನಿ, ಮದುವೆಯಾಗಿರುವುದು ಚಂಪಾವತಿಗೆ, ಅವಳ ಕೊನೆಯ ಗಂಡುಮಗುವಿಗೆ ಈಗ ಒಂದೂವರೆ ವರ್ಷವಾಗಿತ್ತು. ಅದನ್ನೇ ದತ್ತುಪಡೆಯುವ ಹವಣಿಕೆಯಲ್ಲಿ ಭಾರತಿ ಮತ್ತು ಮಂಡನಮಿಶ್ರರಿದ್ದರು.

ಅವತ್ತೊಂದು ದಿನ ಮಂಡನರ ತಂದೆಯವರ ಶ್ರಾದ್ಧ ನಡೆಯುತ್ತಿತ್ತು. ಯತಿಗಳಾದ ಶಂಕರಾಚಾರ್ಯರೂ ಅವರ ಶಿಷ್ಯರೂ ಅಂದೇ ಬಂದು ವಾದಕ್ಕೆ ಆಹ್ವಾನವನ್ನಿತ್ತು ಹೋದರು. ಕರ್ಮಮಾರ್ಗಿಗಳೊಡನೆ ವಾದಮಾಡಲು ಅವರಿಗಿರುವ ಅಷ್ಟೊಂದು ತೀವ್ರವಾದ ಛಲವನ್ನು ಕಂಡು ನಾಗಭಟ್ಟನಿಗೆ ಆಶ್ಚರ್ಯವಾಯಿತು. ಮಂಡನರಿಗೆ ಕರ್ತವ್ಯಗಳನ್ನೂ ಕರ್ಮಗಳನ್ನೂ ನಿರ್ವಹಿಸಿ ಸಮಾಜವನ್ನು ಪೋಷಿಸುವ ಹೊಣೆಗಾರಿಕೆಯುಳ್ಳ ಗೃಹಸ್ಥಾಶ್ರಮದಲ್ಲಿ ಶ್ರದ್ಧೆ ಇತ್ತು, ಸಂನ್ಯಾಸಿಗಳೆಂದರೆ ಗೌರವವಿರಲಿಲ್ಲ. ಆದರೂ ವಾಕ್ಯಾರ್ಥವು ಏರ್ಪಟ್ಟಿತು.

ನಾಡಿನ ವಿದ್ವಾಂಸರು ಪಾಠಶಾಲೆಯ ಸಭಾಭವನದಲ್ಲಿ ಸೇರಿದರು. ಯತಿ ಶಂಕರರು ಬಹು ಚುರುಕುಬುದ್ಧಿಯವರೆಂಬುದು ಎದ್ದು ಕಾಣುತ್ತಿತ್ತು. ಮಂಡನರೂ ಸಮಾನ ವಿದ್ವಾಂಸರು. ಪಾಂಡಿತ್ಯ, ಜ್ಞಾನ, ಸಮಚಿತ್ತವಿದ್ದ ಭಾರತೀದೇವಿಯವರೇ ವಾಕ್ಯಾರ್ಥಕ್ಕೆ ಮಧ್ಯಸ್ಥರು.

ಸತ್‌ಚಿತ್‌ರೂಪವಾದ ಬ್ರಹ್ಮವೊಂದೇ ಸತ್ಯ, ಅದರ ಜ್ಞಾನವು ಲಭ್ಯವಾಗುವುದೇ ಮೋಕ್ಷ. ಉಪನಿಷತ್ತುಗಳೇ ಅದಕ್ಕೆ ಪ್ರಮಾಣ; ಅದನ್ನು ಸಾಧಿಸಲು ಸಂನ್ಯಾಸವು ಅತ್ಯಗತ್ಯಸಾಧನ. ಇದು ಯತಿ ಶಂಕರರ ವಾದ. ಜ್ಞಾನಸ್ವರೂಪವಾದ ಸ್ಥಿತಿಯ ವಿಷಯದಲ್ಲಿ ವೇದಗಳ ಪೂರ್ವಭಾಗವಾದ ಕರ್ಮಕಾಂಡವೇ ಪ್ರಮಾಣ. ವೇದಶಬ್ದಗಳ ಗುರಿಯು ಕ್ರಿಯಾಪ್ರಚೋದನೆಯೇ ಹೊರತು ವಸ್ತುಸ್ಥಿತಿ ನಿರೂಪಣೆಯಲ್ಲ. ಮುಕ್ತಿಯು ಕರ್ಮಗಳಿಂದ ಮಾತ್ರ ಸಾಧ್ಯ, ಮರಣಾನಂತರ ಮಾತ್ರ ಸಾಧ್ಯ. ಅದು ಸಾಧ್ಯವಾಗುವುದು ಗೃಹಸ್ಥಾಶ್ರಮದಿಂದ; ಹಾಗಾಗಿ ಅದೇ ಶ್ರೇಷ್ಠ. ಇದು ಮಂಡನಮಿಶ್ರರ ವಾದ.

ವಾಕ್ಯಾರ್ಥ ಮುಗಿದಮೇಲೆ ನೀಡುತ್ತಿದ್ದ ಪ್ರವಚನಗಳಲ್ಲಿ ಯತಿ ಶಂಕರರು ದೇವರಪೂಜೆ ಮತ್ತು ದೇವಾಲಯಗಳನ್ನು ಪ್ರೋತ್ಸಾಹಿಸಿ ಮಾತನಾಡುತ್ತಿದ್ದರು. ರೂಪಾತೀತವನ್ನು ರೂಪದಲ್ಲಿ ಭಾವಿಸಿ ಉಪಾಸಿಸುವ ಅವಕಾಶವಿಲ್ಲದಿದ್ದರೆ ಜನ ಸಾಧಾರಣರಿಗೆ ಶೂನ್ಯಕವಿಯುತ್ತದೆ ಎಂಬುದು ಅವರು ನೀಡುತ್ತಿದ್ದ ಕಾರಣ.

ಮಂಡನಮಿಶ್ರರಿಗೆ ಅರುವತ್ತೈದು ವರ್ಷ. ಜ್ಞಾಪಕಶಕ್ತಿ ಕುಂದುವ ವಯಸ್ಸು. ಯತಿ ಶಂಕರರಿಗೆ ಆಗ ಇಪ್ಪತ್ತೈದು ವರ್ಷ, ಬುದ್ಧಿ ಮನಸ್ಸುಗಳು ಅತ್ಯಂತ ಚುರುಕಾಗಿರುವ ವಯಸ್ಸು. ಹೀಗಾಗಿ ಇಬ್ಬರೂ ಪ್ರಕಾಂಡಪಂಡಿತರಾದರೂ ಅಲ್ಲೊಂದು ರೀತಿಯ ಅಸಮತೋಲವಿತ್ತು. ಯತಿ ಶಂಕರರ ಬುದ್ಧಿಯು ಪ್ರಖರವಾಗಿದ್ದುದೂ ಸತ್ಯ; ಅವರು ವಿಜೃಂಭಿಸಿದರು. ವೇದಾಂತವು ಕರ್ಮಕಾಂಡದಷ್ಟೇ ಪ್ರಮಾಣ, ವೇದಾಂತವು ಮೋಕ್ಷವೆಂಬ ಪರಮಪುರುಷಾರ್ಥವನ್ನು ನಿರೂಪಿಸುತ್ತದೆ ಮತ್ತು ಅದಕ್ಕೆ ಸಾಧನವು ಕೇವಲ ಜ್ಞಾನ ಎಂದೂ ತಿಳಿಸುತ್ತದೆ. ವೈರಾಗ್ಯವೇ ಅಮೃತತ್ತ್ವವನ್ನು ಗಳಿಸುವ ಸಾಧನ ಮತ್ತು ಆಗಲೇ ಬ್ರಹ್ಮಲೋಕ ಪ್ರಾಪ್ತಿ. ಆದ್ದರಿಂದ ಸಂನ್ಯಾಸವು ಮೋಕ್ಷಸಾಧನೆಗೆ ಇರುವ ಏಕೈಕ ಸಾಧನ, ಇದು ಶ್ರುತಿಸಿದ್ಧವಾದ ಅತ್ಯುನ್ನತ ಆಶಯ. ಇದು ಶಂಕರರ ತೀರ್ಮಾನವಾಗಿತ್ತು. ಆಯಾ ಕಾಲ ಸನ್ನಿವೇಶಗಳ ಒತ್ತಡದಿಂದ ತಳೆಯುವ ನಿಲುವನ್ನು ಮೀರಿ ವೇದನಿಷ್ಠವಾದ ಶಾಶ್ವತ ಆಶಯವನ್ನು ಅದು ಹೇಳುತ್ತಿತ್ತು. ಅಲ್ಲದೆ ಅವರ ಪಾಂಡಿತ್ಯ, ಯುಕ್ತಿ, ಸಮನ್ವಯ ಶಕ್ತಿ ಮತ್ತು ಸ್ವಾನುಭವಧ್ವನಿಗಳು ಅತಿಶಯವಾಗಿದ್ದವು. ಮಂಡನಮಿಶ್ರರು ಸೋಲೊಪ್ಪಿ ಸಂನ್ಯಾಸ ಸ್ವೀಕಾರಕ್ಕೆ ಸಿದ್ಧರಾದರು.

ಮಂಡನರು ಸಂನ್ಯಾಸಕ್ಕೊಪ್ಪಿದ್ದು ವೈರಾಗ್ಯದಿಂದಲ್ಲ, ವಾದದಲ್ಲಿ ಸೋತುದರಿಂದ. ಹಾಗಾಗಿ ಪತ್ನಿಗೆ ಸಾಧ್ಯವಾದರೆ ಆ ಸೋಲಿನಿಂದ ರಕ್ಷಿಸುವ ಕರ್ತವ್ಯವಿದೆ ಎಂಬುದು ಭಾರತೀದೇವಿಯವರು ನಿಲುವು. ಹಾಗಾಗಿ ಯತಿಗಳಲ್ಲಿ ಒಂದು ಪ್ರಶ್ನೆ ಕೇಳಿದಳು. ಒಂದು ಉಪನಿಷತ್ತು ಸುಷುಪ್ತಿಯಲ್ಲೂ ಆತ್ಮನು ಬ್ರಹ್ಮದೊಡನೆ ಐಕ್ಯವಾಗುತ್ತಾನೆಂದು ತಿಳಿಸುತ್ತದೆ. ಆತನ ಸ್ಥಿತಿಯನ್ನು ತನಗೆ ಪ್ರಿಯಳಾದ ಸ್ತ್ರೀಯ ಆಲಿಂಗನದಲ್ಲಿರುವ ಪುರುಷನ ಅನುಭವಕ್ಕೆ ಹೋಲಿಸುತ್ತದೆ. ಆಗ ಅವನು ಯಾವುದೇ ಬಾಹ್ಯವಾದ ಮತ್ತು ಅಂತರವಾದ ಸಂಗತಿಗಳ ಅರಿವೂ ಇರದ ಆನಂದದ ಸ್ಥಿತಿಯಲ್ಲಿರುತ್ತಾನಂತೆ. ಹಾಗಿದ್ದರೆ ಆ ಸ್ಥಿತಿಗೂ ಬ್ರಹ್ಮಜ್ಞಾನದ ಸ್ಥಿತಿಗೂ ಏನು ವ್ಯತ್ಯಾಸ? ಇದು ಭಾರತೀದೇವಿಯವರ ಕೇಳಿದ ಪ್ರಶ್ನೆ.

ಇದುವರೆಗೆ ನಡೆದದ್ದು ಶಾಬ್ದಿಕ ಚರ್ಚೆ, ಈಗ ಕೇಳುತ್ತಿರುವುದು ಅನುಭವಕ್ಕೆ ಸಂಬಂಧಿಸಿದ್ದು. ಸಹಜವಾಗಿಯೇ ಯತಿಯು ಬೆಚ್ಚಿದರು. ಅದಕ್ಕೆ ಉತ್ತರಿಸಲು ಸುಮಾರು ಒಂದು ತಿಂಗಳ ಕಾಲಾವಕಾಶ ಕೇಳಿದರು. ಆದರೆ ಮಂಡನಮಿಶ್ರರು ಮನೆಗೆ ಮರಳಲಿಲ್ಲ, ಯತಿಗಳಿದ್ದ ಶಿವಮಂದಿರಕ್ಕೆ ಹೋಗಿ ಅಲ್ಲಿ ಇರತೊಡಗಿದರು. ಆ ಯತಿಗಳು ಮಾತ್ರ ಅವಸರವಸರವಾಗಿ ಎಲ್ಲಿಗೋ ಹೊರಟುಹೋದರು.

ತಾರಾವತಿಯ ರಾಜ ಅಮರುಕನು ಕಾಡಿಗೆ ಬೇಟೆಗಾಗಿ ಹೋಗಿದ್ದಾಗ ಸತ್ತ. ಒಪ್ಪತ್ತು ಕಳೆದ ಮೇಲೆ ಪ್ರಾಣ ಬಂದಿತ್ತು. ಇದು ಯತಿಯು ಮಾಡಿರುವ ಪರಕಾಯಪ್ರವೇಶವೆ ಎಂಬ ಅನುಮಾನವು ಈ ಸುದ್ದಿಯನ್ನು ಕೇಳಿದ ನಾಗಭಟ್ಟನಿಗೆ ಬಂತು. ಅದನ್ನು ಪರೀಕ್ಷಿಸಲು ತಾರಾವತಿಗೆ ಹೊರಟೇಬಿಟ್ಟ. ಅವನು ತನ್ನ ಆ ಊರುಬಿಟ್ಟು ಹತ್ತುವರ್ಷವಾಗಿತ್ತು.

ಮರುಪ್ರಾಯವನ್ನು ಪಡೆದ ಅಮರುಕನು ಈಗ ಮೂರುಹೊತ್ತೂ ಅಂತಃಪುರದಲ್ಲಿಯೇ ಇರುತ್ತಿದ್ದ. ಹಿರಿಯರಾಣಿ ತೇಜೇಶ್ವರಿಯು ಆಡಳಿತವನ್ನು ತನ್ನ ಮುಷ್ಟಿಗೆ ತೆಗೆದುಕೊಳ್ಳುತ್ತಿದ್ದಳು. ಅವಳು ನಾಗಭಟ್ಟನಿಗೆ ಪೂರ್ವಪರಿಚಿತಳೇ. ಅರಮನೆಗೆ ಹೋಗಿ ಅವಳನ್ನು ಮೆಚ್ಚಿಸುವ ಮಾತಾಡಿದ, ವಿಶ್ವಾಸ ಹುಟ್ಟಿಸಿದ. ಅಮರುಕನಿಗೆ ಈಗಿನವಳು ಐದನೆಯ ಹೆಂಡತಿ.

ಪಟ್ಟದ ರಾಣಿಯನ್ನು ಎಲ್ಲ ಉಪಪತ್ನಿಯರೂ ಉಪೇಕ್ಷಿಸಿದ್ದರು. ರಾಜನು ಅವಳ ಸಂಗ ಮಾಡಿ ಐದು ವರ್ಷವಾಗಿತ್ತು. ಅಮರುಕನು ನಾಗಭಟ್ಟನ ಪತ್ನಿಯನ್ನು ವಶಪಡಿಸಿಕೊಂಡು ಅವನಿಗೂ ಅನ್ಯಾಯಮಾಡಿದ್ದ. ಇವೆಲ್ಲ ಅನುಕೂಲ ಸಂಗತಿಗಳನ್ನವಲಂಬಿಸಿ ಸಹಜವಾಗಿಯೇ ರಾಣಿಯು ನಾಗಭಟ್ಟನಲ್ಲಿ ಅನುರಕ್ತಳಾದಳು. ಒಂದು ಕ್ಷಣ ನಾಗಭಟ್ಟನೂ ವಿಚಲಿತನಾದ. ಬದಲಿಗೆ ಇಂಥ ಸಂದರ್ಭದಲ್ಲಿ ಅವನಿಗೆ ನೆನಪಿಗೆ ಬಂದವಳು ಚಂದ್ರಿಕೆ. ಕೈಹಿಡಿದು ಅಂಗಸುಖಕ್ಕಾಗಿ ಬೇಡುತ್ತಿದ್ದ ಮಹಾರಾಣಿಯನ್ನು ನಾಗಭಟ್ಟನು ಉಪಾಯವಾಗಿ ವರ್ಜಿಸಿದ, ಭೋಗಸುಖಕ್ಕೆ ಸಂಪೂರ್ಣವಾಗಿ ವಿಮುಖಳಾಗಿ ಎಲ್ಲಿಯೋ ದೂರದಲ್ಲಿದ್ದ ಚಂದ್ರಿಕೆಯನ್ನು ಆಶಿಸುತ್ತಿದ್ದ. ರಾಜನು ಆಹ್ವಾನ ಕೊಟ್ಟಾಗ ಶಾಲಿನಿಯು ಉಬ್ಬಿಹೋದಳೆಂಬ ಹಳೆಯ ಸಮಾಚಾರವೊಂದು ಹೊಸದಾಗಿ ನಾಗಭಟ್ಟನಿಗೆ ತಿಳಿಯಿತು.

ಒಂದು ದಿನ ಅರಮನೆಯ ಅತಿಥಿಗೃಹದ ಮುಂದೆ ಹಾದುಹೋಗುತ್ತಿದ್ದ ಶಂಕರಾಚಾರ್ಯರ ಶಿಷ್ಯರಾದ ಪದ್ಮಪಾದರು ನಾಗಭಟ್ಟನನ್ನು ಕಂಡರು. ಅವನನ್ನು ವಿಶ್ವಾಸಕ್ಕೆ ತೆಗೆದುಕೊಂಡರು. ಯತಿ ಶಂಕರರು ಅಮರುಕನ ದೇಹಕ್ಕೆ ಲಿಂಗಶರೀರಿಯಾಗಿ ಪ್ರವೇಶಿಸಿರುವುದನ್ನು ತಿಳಿಸಿದರು. ಒಂದು ತಿಂಗಳು ಕಳೆದುಹೋಗಿತ್ತು. ಅವರು ಇಂದ್ರಿಯಭೋಗದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೋ, ಬಿಡಿಸಿಕೊಂಡುಬರುವ ಶಕ್ತಿ ಇಲ್ಲವೊ, ಹೊರಬರಬೇಕೆಂಬ ಜ್ಞಾನವೇ ಮುಚ್ಚಿಹೋಗಿದೆಯೋ ತಿಳಿಯುತ್ತಿರಲಿಲ್ಲ. ಹಾಗಾಗಿ ಪ್ರತ್ಯಕ್ಷವಾಗಿ ಕಂಡು ಅವರ ಆತ್ಮದ ನಿಜಸ್ಥಿತಿಯನ್ನು ಜ್ಞಾಪಿಸಿ ಬಿಡಿಸಬೇಕಿತ್ತು. ಅಧಿಕಾರಕ್ಕಾಗಿ ಮಹಾರಾಣಿ ತೇಜೇಶ್ವರಿಗೂ ಮಹಾಮಾತ್ಯನಿಗೂ ನಡುವೆ ಸ್ಪರ್ಧೆ ನಡೆದಿತ್ತು. ಅಮರುಕನ ದೇಹಕ್ಕೆ ಪರಕಾಯಪ್ರವೇಶ ಮಾಡಿರುವಾತನ ಮೂಲ ಶರೀರವನ್ನು ಪತ್ತೆ ಮಾಡಿ ನಾಶಮಾಡುವಂತೆ ಮಹಾಮಾತ್ಯನು ಬೇಹುಗಾರರನ್ನು ಕಳಿಸಿದ್ದ. ಅಮರುಕನು ವಿಷಯ ಲೋಲುಪನಾಗಿ ಹೀಗೇ ಇದ್ದರೆ ತಾನು ಸ್ವತಂತ್ರವಾಗಿ ಆಡಳಿತ ನಡೆಸಬಹುದೆಂಬುದು ಅವನ ಎಣಿಕೆಯಾಗಿತ್ತು. ಆ ಅಪಾಯವನ್ನು ತಪ್ಪಿಸಲು ನಾಗಭಟ್ಟನು ನೆರವಾದ. ಮಹಾರಾಜರೊಂದಿಗೆ ಪದ್ಮಪಾದರ ಏಕಾಂತ ಸಂದರ್ಶನವನ್ನೇರ್ಪಡಿಸಿದ. ಯತಿ ಶಂಕರರ ಲಿಂಗಶರೀರವು ಅಂದೇ ರಾತ್ರಿ ತಮ್ಮ ಮೂಲದೇಹವನ್ನು ಸೇರಿತು. ಮೂವರು ಯತಿಗಳೂ ಬೇಗ ಗಡಿದಾಟಿ ಮಾಹಿಷ್ಮತಿಯತ್ತ ನಡೆದರು. ನಾಗಭಟ್ಟನೂ ತಡಮಾಡದೆ ಮಾಹಿಷ್ಮತಿಯನ್ನು ಸೇರಿದ.

ರತಿಸುಖವು ಇನ್ನೊಬ್ಬ ವ್ಯಕ್ತಿಯನ್ನವಲಂಬಿಸಿದೆ. ಅದು ದುಗುಡವಿಲ್ಲದ ಅಜ್ಞಾನದ ಸ್ಥಿತಿ. ಆತ್ಮಾನುಭವವು ಆನಂದಪೂರ್ಣವಾದ ಜ್ಞಾನದ ಸ್ಥಿತಿ. ಬ್ರಹ್ಮವು ಆತ್ಮದ ಸ್ವರೂಪವೇ ಆಗಿರುವುದರಿಂದ ಆತ್ಮವು ಆಗ ತನ್ನಲ್ಲಿಯೇ ಲೀನವಾಗುತ್ತದೆ. ರತಿಸುಖವು ಶಾಶ್ವತವಲ್ಲ, ಮತ್ತೆ ಸಂಸಾರದ ಜಂಜಡಕ್ಕೆ ಸಿಕ್ಕಿಸುತ್ತದೆ. ಬ್ರಹ್ಮೈಕ್ಯಸ್ಥಿತಿಯು ಮತ್ತೆ ಸಂಸಾರ ಬಂಧನಕ್ಕೆ ನೂಕುವುದಿಲ್ಲ. ಯತಿಯ ಈ ಉತ್ತರವು ಭಾರತೀದೇವಿಯವರಿಗೆ ಒಪ್ಪಿತವಾಗಿತ್ತು.

ದೇಹೇಂದ್ರಿಯಗಳು ತೊಡಗದೆಯೂ ಅನುಭವದ ಜ್ಞಾನವನ್ನು ಆತ್ಮವು ಪಡೆಯಬಹುದು. ಲಿಂಗಶರೀರಿಯಾಗಿ ಸಾಕ್ಷಿರೂಪದಲ್ಲಿ ರತಿ ಅನುಭವವನ್ನು ಪಡೆದಿದ್ದು ದೋಷವೆಂದಾಗಿರಲಿಲ್ಲ. ಹಾಗಾಗಿ ಭಾರತೀದೇವಿ ಯತಿಯ ಜಯವನ್ನು ಸಂಪೂರ್ಣವಾಗಿ ಒಪ್ಪಿಕೊಂಡರು. ಆಗಿಂದಾಗಲೇ ಯತಿಯು ಮಂಡನರಿಗೆ ಸಂನ್ಯಾಸದೀಕ್ಷೆ ಕೊಟ್ಟು ತಮ್ಮೊಡನೆ ಕರೆದೊಯ್ದರು. ಅವರ ಕಾರ್ಯಸಾಧನೆಯ ವೇಗವು ಎಲ್ಲ ಚರ್ಯೆಗಳಲ್ಲೂ ಕಾಣುತ್ತಿತ್ತು. ಆ ಅವತಾರದ ಆಂತರ್ಯವು ಅವರಿಗೇ ತಿಳಿದಿರಬೇಕು.

ಗೃಹಿಣಿಯಾದ ಭಾರತಿಯು ತಮ್ಮ ಕರ್ತವ್ಯದಿಂದ ದೂರವಾಗಲಿಲ್ಲ. ತಮ್ಮ ಮಗಳ ಮಗನನ್ನು ದತ್ತು ಪಡೆದು ತಮ್ಮ ಮನೆಯ ಗೃಹ್ಯಾಗ್ನಿ ಆರದಂತೆ ನೋಡಿಕೊಳ್ಳುವ ಜವಾಬ್ದಾರಿ ಅವರ ಮೇಲಿತ್ತು.

ಮಥುರೆಯಿಂದ ನಾಗಭಟ್ಟನು ಮಾಹಿಷ್ಮತಿಗೆ ಬಂದು ಎರಡು ತಿಂಗಳೇ ಕಳೆದುಹೋಗಿತ್ತು. ಜಯಸಿಂಹರ ಪತ್ನಿ ಉಷಾದೇವಿಯು ಮೃತರಾದುದರಿಂದಾಗಿ ಜಯಸಿಂಹನು ಉತ್ತರಕ್ರಿಯಾದಿಗಳನ್ನು ಮುಗಿಸಿಯೇ ಮಾಹಿಷ್ಮತಿಗೆ ಬರಬೇಕಾಗಿದ್ದುದರಿಂದ ತಡವಾಗಿತ್ತು. ಕುಮಾರಿಲಭಟ್ಟರೂ ಮಂಡನಮಿಶ್ರರೂ ಬ್ರಹ್ಮಸ್ಥಾನದಲ್ಲಿ ನಿಂತು ಯಜ್ಞಯಾಗಗಳನ್ನು ನಡೆಸಿಕೊಡಬಲ್ಲ ಪ್ರಬಲ ವಿದ್ವಾಂಸರಾಗಿದ್ದರು. ಅವರಿಬ್ಬರೂ ಈಗ ಲಭ್ಯವಿಲ್ಲದಂತಾಗಿದ್ದರು. ಯಜ್ಞಯಾಗಗಳ ಅವನತಿಯಿಂದಾಗಿ ನಿರ್ವೀರ್ಯವಾಗುತ್ತಿರುವ ಭರತಖಂಡದ ಭವಿಷ್ಯದ ಬಗೆಗೆ ಜಯಸಿಂಹರು ಹತಾಶರಾಗಿದ್ದರು.

ಬೌದ್ಧರ ಅದ್ವಯ ಮತ್ತು ಶಂಕರಯತಿಯ ಅದ್ವೈತಕ್ಕೆ ಸಾಮಾನ್ಯ ಮೂಲವು ಉಪನಿಷತ್ತೇ ಆಗಿರಬಹುದೆಂಬ ಅನುಮಾನವು ನಾಗಭಟ್ಟನಲ್ಲಿ ಮೂಡಿತು.

ಜಯಸಿಂಹರು ನಾಗಭಟ್ಟನನ್ನು ಕರೆದುಕೊಂಡು ಮಥುರೆಗೆ ಮರಳಿ ಹೊರಟರು. ಜಯಸಿಂಹರಿಗೆ ಈಗ ವಯಸ್ಸು ಐವತ್ತು. ಹೆಂಡತಿಯ ಸಾವು ಅವರಿಗೆ ನಿವೃತ್ತಿಯ ಮನೋಭಾವವನ್ನು ಹುಟ್ಟಿಸಿತ್ತೇ ಹೊರತು ಅವರು ಹಲವು ಮದುವೆಗಳ ಹುಚ್ಚಿಗೆ ಹೋದವರಲ್ಲ. ಜಯಸಿಂಹರ ಪತ್ನಿ ಮೃತರಾದಮೇಲೆ ವಜ್ರಪಾದರು ಅವರನ್ನು ಹಲವು ಬಾರಿ ಕಂಡರು. ಜೀವನದ ನಶ್ವರತೆಯ ಬಗೆಗೆ ಬುದ್ಧನು ಹೇಳಿದ ಮಾತುಗಳ ಕಡೆಗೆ ಅವರ ಗಮನ ಸೆಳೆದರು. ಜಯಸಿಂಹರು ಸಂನ್ಯಾಸದ ಪಾರಮ್ಯವನ್ನು ಪ್ರತಿಪಾದಿಸುವ ಜೀವಬ್ರಹ್ಮೈಕ್ಯವಾದ ಮತ್ತು ಅದರ ಸೂಕ್ಷ್ಮಗಳ ಬಗೆಗೆ ನಾಗಭಟ್ಟನಿಂದ ವಿವರವಾಗಿ ತಿಳಿದುಕೊಳ್ಳುತ್ತಾ ದಾರಿ ಸವೆಸಿದರು.

೧೧. ಸ್ವಾತಂತ್ರ್ಯದ ಸಂದೇಶ

ಜಯಸಿಂಹನೂ ನಾಗಭಟ್ಟನೂ ಮಥುರೆಯನ್ನು ತಲುಪುವ ಹೊತ್ತಿಗೆ ಒಂದು ಸಮಸ್ಯೆ ಎದುರಾಗಿತ್ತು. ಪಶ್ಚಿಮ ಮತ್ತು ವಾಯವ್ಯ ದೇಶಗಳಿಗೆ ಹೋಗಿದ್ದ ಸಾರ್ಥಗಳು ಮಥುರೆಗೆ ಹಿಂದಿರುಗಿದ್ದುವು. ಆ ದೇಶಗಳು ಮ್ಲೇಚ್ಛವಶವಾಗಿದ್ದವು. ವಾಣಿಜ್ಯವೂ ಅವರ ವಶವಾಗಿತ್ತು. ಭರತಖಂಡದ ಸಾರ್ಥಗಳು ದೇಶದ ಒಳಗೇ ಮಾಡುವ ವ್ಯವಹಾರದಿಂದ ಹೆಚ್ಚಿನ ಲಾಭ ಬರುವಂತಿರಲಿಲ್ಲ; ಸಿಂಧೂ, ಗಾಂಧಾರ ಮೊದಲಾದ ಕಡೆ ಮ್ಲೇಚ್ಛರ ದಬ್ಬಾಳಿಕೆ ಶೋಷಣೆ ಮತ್ತು ತಡೆ. ಅದರಾಚೆಗೆ ಹೋಗುವಂತೆಯೇ ಇಲ್ಲ. ಈ ಬಾರಿಯಂತೂ ರೋಸಿಹೋಗಿ ಮ್ಲೇಚ್ಛರು ಕೇಳಿದ ಬೆಲೆಗೆ ತಮ್ಮ ಪದಾರ್ಥಗಳನ್ನು ನೀಡಲು ಮನಸ್ಸಾಗದೆ ಹಿಂದಕ್ಕೆ ತಂದಿದ್ದರು. ತಾವು ಹೀಗೆ ಹಿಂದಕ್ಕೆ ತಂದ ಪದಾರ್ಥಗಳನ್ನು ಸಾರ್ಥಗಳು ತಮ್ಮ ತಮ್ಮ ದೇಶಗಳಿಗೆ ಒಯ್ಯುವುದರಿಂದ ಯಾವ ಲಾಭವೂ ಸಿಗುತ್ತಿರಲಿಲ್ಲ. ಆದ್ದರಿಂದ ಸಾರ್ಥಗಳು ಆ ಸರಕುಗಳನ್ನು ರಾಜಪ್ರತಿನಿಧಿಯಾದ ಜಯಸಿಂಹರ ವಶಕ್ಕೆ ಒಪ್ಪಿಸಿಹೋಗಲು ಸಿದ್ಧರಾಗಿದ್ದರು. ಆ ಸರಕನ್ನು ಮಾರಿ ಬಂದ ಹಣದಿಂದ ಸೈನ್ಯವನ್ನು ಕಟ್ಟಿ ಮ್ಲೇಚ್ಛರ ವಶವಾಗಿ ಹೋಗಿದ್ದ ನಾಡುಗಳನ್ನು ಮತ್ತೆ ಜಯಿಸಿಕೊಂಡರೆ ಮಾತ್ರವೇ ಸಾರ್ಥವು ಜೀವಂತವಾಗಿ ಉಳಿಯಬಹುದು ಮತ್ತು ಗುರ್ಜರ ಪ್ರತೀಹಾರರಿಗೆ ಸುಂಕವೂ ದೊರೆಯಬಹುದು ಎಂಬುದು ಅವರ ಆಗ್ರಹವಾಗಿತ್ತು.

ಜಯಸಿಂಹರು ನಾಗಭಟ್ಟನೊಡನೆ ರಾಜಧಾನಿ ಕನ್ಯಾಕುಬ್ಜಕ್ಕೆ ಹೊರಟರು. ರಾಜಾಲೋಚನೆಯು ಅವರ ಉದ್ದೇಶವಾಗಿತ್ತು. ಅದರಂತೆ ಅಶ್ವಮೇಧದ ಆಲೋಚನೆಯನ್ನು ಕೈಬಿಡಲಾಗಿತ್ತು. ವಾಯವ್ಯದಲ್ಲಿರುವ ಮೂಲಸ್ಥಾನವನ್ನು ವಶಪಡಿಸಿಕೊಂಡು ಚಂದ್ರಭಾಗಾನದಿಯನ್ನು ದಾಟಿ ಸಿಂಧೂ ನದಿಯ ಆಚೆಗೂ ಹೋಗಿ ಮ್ಲೇಚ್ಛರು ಆಕ್ರಮಿಸಿಕೊಂಡಿರುವ ಜಾಗಗಳನ್ನೆಲ್ಲ ಬಿಡಿಸಿಕೊಳ್ಳಬೇಕು ಎಂಬ ಯೋಜನೆ ಹಾಕಿದ್ದರು. ಅದಕ್ಕೆ ಪೂರ್ವಭಾವಿಯಾಗಿ ಆ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲೇ ಉಳಿದಿರುವ ವೈದಿಕ ಮೂಲದ ಪ್ರಜೆಗಳನ್ನು ಹುರಿದುಂಬಿಸಬೇಕು, ವೀರ್ಯವಂತರನ್ನಾಗಿ ಮಾಡಬೇಕು, ಜಾಗೃತಗೊಳಿಸಬೇಕು. ಅದನ್ನು ಪರೋಕ್ಷವಾಗಿ ನಾಟಕಗಳ ಮೂಲಕ ಮಾಡಬೇಕು. ಅದರಲ್ಲಿ ಮುಖ್ಯಪಾತ್ರವಹಿಸಬೇಕಾದವರು ಚಂದ್ರಿಕೆ ಮತ್ತು ನಾಗಭಟ್ಟ. ಈ ಕೆಲಸಕ್ಕೆ ಸೂಕ್ತವಾದ ವಸ್ತುವಿರುವ ನಾಟಕವೆಂದರೆ ಕೃಷ್ಣಚರಿತೆ ಎಂದು ನಿರ್ಣಯವಾಯಿತು.

ಚಂದ್ರಿಕೆಯೂ ನಾಗಭಟ್ಟನೂ ದೂರವಾಗಿ ಬಹಳ ದಿನಗಳಾಗಿದ್ದವು. ಅವರಿಗೆ ನಾಟಕದಲ್ಲಿ ಎದುರುಬದುರಾಗುವ ತಮ್ಮ ತಮ್ಮ ಪಾತ್ರಗಳಲ್ಲಿ ತಲ್ಲೀನತೆ ಬರುತ್ತಿರಲಿಲ್ಲ. ಪ್ರೀತಿಯನ್ನು ಸುಮ್ಮನೆ ನಟಿಸುವುದೂ ಅವರಿಂದಾಗುತ್ತಿರಲಿಲ್ಲ. ಆನಂದದತ್ತರಿಗಂತೂ ತಿದ್ದಿ ತಿದ್ದಿ ಸಾಕಾಗಿಹೋಗಿತ್ತು. ನಾಟಕದ ಯೋಜನೆಯನ್ನೇ ನಿಲ್ಲಿಸುವ ತೀರ್ಮಾನಕ್ಕೆ ಅವರು ಬಂದಿದ್ದರು.

ಜಯಸಿಂಹರು ನಾಗಭಟ್ಟನಿಗೂ ಚಂದ್ರಿಕೆಗೂ ಪ್ರತ್ಯೇಕವಾಗಿ ತಿಳಿಯ ಹೇಳಿದರು. ಇದು ದೇಶವನ್ನೂ ಧರ್ಮವನ್ನೂ ಉಳಿಸಿಕೊಳ್ಳುವ ಉದ್ದೇಶದಿಂದ ಆಡುತ್ತಿದ್ದ ನಾಟಕವಾಗಿತ್ತು. ಸೇನಾನಿಗಳ ಪರಸ್ಪರ ಮನಸ್ತಾಪಗಳಿಂದಾಗಿಯೇ ಯುದ್ಧದಲ್ಲಿ ಸೋತ ಅನೇಕ ನಿದರ್ಶನಗಳಿದ್ದವು. ಇಂಥ ಹೊತ್ತು ದೊಡ್ಡ ಉದ್ದೇಶಕ್ಕಾಗಿ ಸ್ವಂತದ ಬೇಕುಬೇಡಗಳನ್ನು ತುಳಿದಿಡಬೇಕಾದುದು ಅಗತ್ಯ. ಅದೇ ಅಧ್ಯಾತ್ಮ. ವಾಸುದೇವಶರ್ಮರಂತೂ ಕೃಷ್ಣನ ಕಥೆಯನ್ನು ಸ್ವಾತಂತ್ರ್ಯ ಪ್ರಚೋದನೆಯ ನಾಟಕವಾಗಿ ಹದವರಿತು ಪರಿವರ್ತಿಸಿದ್ದರು.

ಈವರೆಗೆ ನಾಗಭಟ್ಟನ ಜೀವನವು ಗುರಿಯಿಲ್ಲದೆ ನಡೆದುಕೊಂಡು ಬಂದಿತ್ತು. ಈಗ ಮಾತ್ರ ಸಮಗ್ರ ಭರತಖಂಡದ ಕಾರಣಕ್ಕಾಗಿ ವಹಿಸಬೇಕಾದ ಪಾತ್ರವೊಂದು ದೊರೆತಿತ್ತು. ಅದರಲ್ಲಿ ಅಪಾಯದ ಸಾಧ್ಯತೆ ಇದ್ದುದು ಒಂದು ಆಕರ್ಷಣೆಯೇ ಆಗಿತ್ತು. ಇದನ್ನು ಚಂದ್ರಿಕೆಯೂ ಅರ್ಥಮಾಡಿಕೊಂಡಳು.

ಚಂದ್ರಿಕೆಯು ತಾನಾಗಿಯೇ ನಾಗಭಟ್ಟನನ್ನು ಮನೆಗೆ ಆಹ್ವಾನಿಸಿದಳು. ಅವನ ಸಂಗೀತವನ್ನು ತಿದ್ದುವುದಾಗಿ ಹೇಳಿದಳು. ಹಿಂದಿನ ಪ್ರೀತಿಯ ಆಗ್ರಹ ಮತ್ತು ಸಲಿಗೆಯಿಂದಲೇ ಏಕವಚನದಲ್ಲಿ ಮಾತಾಡುತ್ತಿದ್ದಳು. ಅವಳಲ್ಲಿ ಶೃಂಗಾರರಸ ಇಲ್ಲದಿದ್ದರೂ ಸಮರ್ಪಣಭಾವವಿತ್ತು. ಮಹಾರಾಣಿ ತೇಜೇಶ್ವರಿಯು ತಾನಾಗಿ ನಾಗಭಟ್ಟನ ಸಂಗವನ್ನು ಬಯಸಿ ಮುಂದೆ ಬಂದಿದ್ದರೂ ಕೇವಲ ಚಂದ್ರಿಕೆಯ ನೆನಪಿನ ಬಲದಿಂದ ಅವಳನ್ನು ನಿರಾಕರಿಸಿದ್ದ. ಈಗ ಚಂದ್ರಿಕೆಯೇ ತನ್ನ ವ್ರತವನ್ನು ಮುರಿದು ನಾಗಭಟ್ಟನನ್ನು ಸ್ವೀಕರಿಸಲು ಸಿದ್ಧಳಿದ್ದಳು. ಈ ನಾಟಕದ ಉದ್ದೇಶವನ್ನು ಈಡೇರಿಸುವ ಕಾರಣಕ್ಕಾಗಿ ಚಂದ್ರಿಕೆಯು ತನ್ನ ವ್ರತವನ್ನು ಮುರಿಯುವುದು ನಾಗಭಟ್ಟನಿಗೆ ಇಷ್ಟವಿರಲಿಲ್ಲ, ಸಂಯಮವನ್ನೇ ವಹಿಸಿದ.

ನಾಟಕವು ಮೂಲಸ್ಥಾನದಲ್ಲಿ ಅದ್ಭುತವಾದ ಯಶಸ್ಸನ್ನು ಪಡೆಯಿತು. ಮ್ಲೇಚ್ಛರಲ್ಲಿ ಹೆಂಗಸರು ರಂಗದಮೇಲೆ ಬರುವುದು ನಿಷಿದ್ಧ; ಹಾಗಾಗಿ ಮ್ಲೇಚ್ಛ ಪುರುಷರು ಅಧಿಕಾರಿಗಳು ಸೈನಿಕರು ಮಾರುವೇಷದಲ್ಲಿ ಬಂದು ನೋಡಿಹೋಗುತ್ತಿದ್ದರು. ವೈದಿಕಮೂಲದ ಪ್ರಜೆಗಳಿಗೆ ನಾಟಕದ ಸ್ವಾತಂತ್ರ್ಯಸಂದೇಶವು ಅರ್ಥವಾಗುತ್ತಿತ್ತು.

೧೨. ಮೂಲಸ್ಥಾನದಲ್ಲಿ ಹಿಂಸೆ; ಗರ್ಭಿಣಿಯಾದ ಚಂದ್ರಿಕೆ, ಕವಿದ ಶೂನ್ಯ

ಮೂಲಸ್ಥಾನದಲ್ಲಿ ನಾಟಕವು ಎರಡು ತಿಂಗಳಿಗೂ ಮಿಕ್ಕಿ ನಡೆಯಿತು. ಗುರ್ಜರಪ್ರತೀಹಾರರ ಸೈನ್ಯವು ಬಂದು ಮೂಲಸ್ಥಾನಕ್ಕೆ ಒಂದು ಕ್ರೋಶದಷ್ಟು ದೂರದಲ್ಲಿ ಬೀಡುಬಿಟ್ಟಿತು. ಆದರೆ ಮೂಲಸ್ಥಾನವನ್ನು ಆಕ್ರಮಿಸಿಕೊಂಡಿದ್ದ ಮ್ಲೇಚ್ಛ ಸೈನಿಕರು ಒಂದು ತಂತ್ರ ಮಾಡಿದರು. ಪ್ರತೀಹಾರರು ತಮ್ಮ ಕೋಟೆಯನ್ನು ಮುತ್ತಿದರೆ ಮತ್ತು ಜನರು ಅವರಿಗೆ ನೆರವಾದರೆ ಸೂರ್ಯದೇವಾಲಯವನ್ನು ಧ್ವಂಸಮಾಡುವುದಾಗಿ ಬೆದರಿಕೆ ಹಾಕಿದರು. ಪ್ರತೀಹಾರ ಸೈನ್ಯವು ಹಿಂದಿರುಗುವಂತೆ ಹೇಳಿ ಎಂದು ಜನರಿಗೇ ಒತ್ತಡ ಹಾಕಿದರು. ಆ ಊರಿನ ಹಿರಿಯರಿಗೂ ದೇವಸ್ಥಾನದ ಅರ್ಚಕರಿಗೂ, ದೇವಸ್ಥಾನವನ್ನು ಮ್ಲೇಚ್ಛರು ಒಡೆದರೆ ಆ ಪಾಪವು ತಮಗೇ ತಟ್ಟುತ್ತದೆಂಬ ಭೀತಿಹುಟ್ಟಿತು. ಆದರೆ ನಾಗಭಟ್ಟನ ನೇತೃತ್ವದಲ್ಲಿ ಕೆಲವು ತರುಣರು ಯುದ್ಧದ ಪರವಾಗಿ ಪ್ರಚಾರ ಮಾಡಿದರು. ಜನರು ದಂಗೆ ಏಳಬೇಕು ಮತ್ತು ಕೋಟೆಯ ಕಿರುದ್ವಾರಗಳನ್ನು ಒಡೆದು ಪ್ರತೀಹಾರರ ಸೈನ್ಯವನ್ನು ಒಳಗೆ ಬಿಟ್ಟುಕೊಳ್ಳಬೇಕು ಎಂದು ಕರೆ ನೀಡಿದರು. ಮ್ಲೇಚ್ಛರು ಒಂದು ದೇವಸ್ಥಾನವನ್ನು ನಾಶಮಾಡಿದರೆ ಇನ್ನೊಂದನ್ನು ಕಟ್ಟಬಹುದು ಎಂಬುದು ಅವರ ನಿಲುವಾಗಿತ್ತು.

ಆದರೆ ಆ ರಾತ್ರಿ ಮ್ಲೇಚ್ಛರ ಸೈನಿಕರು ಬಿಡಾರಕ್ಕೆ ನುಗ್ಗಿ ನಾಗಭಟ್ಟ, ಚಂದ್ರಿಕೆ ಮತ್ತು ಚಾರುಮತಿಯನ್ನು ಸೆರೆಹಿಡಿದು ಅಜ್ಞಾತಸ್ಥಳಕ್ಕೆ ಒಯ್ದರು. ನಾಗಭಟ್ಟನನ್ನು ಪ್ರತ್ಯೇಕವಾಗಿ ಸೆರೆಯಲ್ಲಿಟ್ಟರು. ಭರತಖಂಡದ ಧರ್ಮವನ್ನೂ ವಾಣಿಜ್ಯವನ್ನೂ ಉಳಿಸುವ ಆಶೆಯಿಂದ ಅವನು ಇಲ್ಲಿಯವರೆಗೆ ಬಂದು ಈ ಸಾಹಸಕ್ಕೆ ಕೈ ಹಾಕಿದ್ದ. ಆ ಆಶೆಯೇ ಇಲ್ಲದೆ ಸಂನ್ಯಾಸಿಯಾಗಿದ್ದರೆ ಇಂಥ ದುಃಖಕಾರಕ ಪರಿಸ್ಥಿತಿಯೇ ಬರುತ್ತಿರಲಿಲ್ಲವೆಂಬುದನ್ನು ನೆನೆದು ಬೆರಗುಪಟ್ಟ. ಬೌದ್ಧ ಭಿಕ್ಕುಗಳಿಗೂ ತಮ್ಮ ಸಂಘವನ್ನು ಕಾಯುವ ಮತ್ತು ಅದರ ರಕ್ಷಣೆಗಾಗಿ ದುಡಿಯುವ ಸಂಘದ ಮೇಲಿನ ಆಶೆ ಇದೆ ಎಂಬುದು ಅವನಿಗೆ ಸೋಜಿಗವಾಗಿ ಕಂಡಿತು.

ಚಂದ್ರಿಕೆ ಮತ್ತು ಚಾರುಮತಿಯರ ಕ್ಷೇಮದ ಚಿಂತೆಯೂ ಒತ್ತರಿಸಿಬಂತು. ಚಂದ್ರಿಕೆ ಮತ್ತು ನಾಗಭಟ್ಟ ಇಬ್ಬರೂ ಪರಸ್ಪರ ಶರೀರದ ಆಕರ್ಷಣೆಯನ್ನು ಮೀರಿದ ನೆಲೆಯಲ್ಲಿ ಪ್ರೀತಿಸುತ್ತಿದ್ದರು. ಚಾರುಮತಿಯ ಕೈಲಿ ಅನ್ನ ತಿಂದಿರುವ ಕಾರಣದಿಂದ ಅವಳ ಮೇಲೆ ತಾಯಿಯ ಭಾವವೇ ಇತ್ತು.

ಅಧಿಕಾರಿಗಳು ಕೊಟ್ಟ ಮಾಂಸದ ಅಡುಗೆಯನ್ನು ಊಟ ಮಾಡದೆ ಉಪವಾಸವೇ ಇದ್ದ ನಾಗಭಟ್ಟನಿಗೆ ಹೊಟ್ಟೆಯೊಳಗೆ ಶೂನ್ಯ ಕವಿದು ಸಂಕಟವಾಗುತ್ತಿತ್ತು. ಶೂನ್ಯವೆಂದರೆ ಸಂಕಟ, ಸಾವು ಎಂಬ ಹೊಸ ಅರ್ಥ ಕಾಣಿಸಿತ್ತು. ಮಾಂಸ ಭಕ್ಷಣವನ್ನು ತೊರೆಯುವುದು ಅಹಿಂಸಾತ್ಮಕವಾದ ಒಂದು ವ್ರತವಾಗಿತ್ತು ಅವನಿಗೆ. ತುಸು ಹೊತ್ತಿನಲ್ಲಿ ಹೊಟ್ಟೆಯ ಸಂಕಟ ನಿಯಂತ್ರಣಕ್ಕೆ ಬಂದಾಗ ಅದರೊಳಗೆ ಕವಿದಿರುವುದು ಶೂನ್ಯವಲ್ಲ ಎಂಬುದು ಅರಿವಿಗೆ ಬಂತು.

ಸಂಜೆ ಇಬ್ಬರು ಅರಬ್ ಅಧಿಕಾರಿಗಳ ಮುಂದೆ ನಿಲ್ಲಿಸಿ ವಿಚಾರಣೆಗೆ ಒಳಪಡಿಸಿದರು. ಹಿಂಸೆ ಮಾಡುವ ಉಪಕರಣಗಳೂ ಅವರ ಮುಂದಿದ್ದವು. ನಾಗಭಟ್ಟನು ಕುಮಾರಿಲಭಟ್ಟರ ಧೃತಿಯನ್ನು ನೆನೆದು ಗಟ್ಟಿಯಾಗಿ ನಿಂತ. ತಮ್ಮನ್ನು ಯಾರೂ ಕಳಿಸಿಲ್ಲ. ತಾವು ಬಂದದ್ದು ನಾಟಕಗಳ ಮೂಲಕ ದೇವರ ಮಹಿಮೆಯನ್ನು ಪ್ರಚಾರಮಾಡಲು. ಬೇರೆಡೆಗಳಲ್ಲೂ ಹೀಗೇ ಆಡಿದ್ದೇವೆ ಎಂದೇ ಸಾಧಿಸಿದ. ಚಾಟಿಯಲ್ಲಿ ಬಾರಿಸಲಾಯಿತು, ದಬ್ಬಳದಿಂದ ಚುಚ್ಚಲಾಯಿತು, ಬರೆ ಹಾಕಲಾಯಿತು.

ಆದರೆ ಕುಮಾರಿಲರ ಶ್ರದ್ಧೆಯನ್ನೇ ಆದರ್ಶವಾಗಿಟ್ಟುಕೊಂಡ ನಾಗಭಟ್ಟನು ಕ್ಷಾತ್ರಶಕ್ತಿಯಿಲ್ಲದವನು ಅಧ್ಯಾತ್ಮದ ಮಾತನಾಡುವುದು ಸೋಗಲಾಡಿತನವಾಗುತ್ತದೆ ಎಂದುಕೊಂಡ. ಆಳುಗಳು ಸೃಷ್ಟಿಸುತ್ತಿದ್ದ ನೋವನ್ನು ನೆನೆದು ಬುದ್ಧ ಹೇಳಿದ ಮೈತ್ರಿಯಿಂದ ಮಾತ್ರ ಈ ಶಕ್ತಿಯನ್ನು ತ್ಯಾಗಮಾಡಬಹುದು ಎಂದುಕೊಂಡ.

ಆ ರಾತ್ರಿ ಶಿಕ್ಷೆಯಲ್ಲಿ ಸ್ವಲ್ಪ ರಿಯಾಯತಿ ಕಂಡಿತು. ಬೆಳಗ್ಗೆ ಒಬ್ಬನೇ ಅಧಿಕಾರಿಯು ವಿಚಾರಣೆಗೆ ಕೂತಿದ್ದ. ಅವನ ಮುಂದೆಯೂ ಹಿಂಸೆಯ ಉಪಕರಣಗಳಿದ್ದವು. ಆದರೆ ಅವನ್ನು ಬಳಸಲಿಲ್ಲ. ಅವನಲ್ಲಿ ಸ್ವಲ್ಪ ಮೃದುತ್ವ ಕಂಡಿತು. ನಾಗಭಟ್ಟನು ದಂಗೆಗೆ ಜನರನ್ನು ಪ್ರಚೋದಿಸಿದ್ದು ಸತ್ಯವಾಗಿತ್ತು, ಅದಕ್ಕೆ ಮರಣದಂಡನೆಯೂ ಸಿದ್ಧವಾಗಿತ್ತು. ಆದರೆ ಕ್ಷಮಾಪಣೆ ಕೇಳಿ ಮ್ಲೇಚ್ಛಮತಕ್ಕೆ ಪರಿವರ್ತನೆಗೊಂಡರೆ ಮರಣದಂಡನೆಯನ್ನು ತಪ್ಪಿಸುವ ಔದಾರ್ಯವನ್ನು ಆ ಅಧಿಕಾರಿ ತೋರಿಸಿದ. ಆದರೆ ಅದನ್ನು ನಾಗಭಟ್ಟನು ಪೂರ್ಣವಾಗಿ ತಿರಸ್ಕರಿಸಿದ. ಪ್ರಾಣಹೋದರೆ ಹೋಗಲಿ ಎಂಬ ತೀರ್ಮಾನಕ್ಕೆ ಅವನು ಬಂದಿದ್ದ. ಮತ, ಧರ್ಮ, ದೇವರು ಈ ಯಾವ ವಿಷಯದಲ್ಲಾದರೂ ತನಗೆ ಪೂರ್ಣಸ್ವಾತಂತ್ರ್ಯ ಬೇಕು ಎಂಬುದು ಅವನ ಅಚಲ ತತ್ತ್ವವಾಗಿತ್ತು.

ಆದರೆ ಸಮಸ್ಯೆಯು ಅಷ್ಟು ಸರಳವಾಗಿರಲಿಲ್ಲ. ಚಂದ್ರಿಕೆ, ಚಾರುಮತಿ ಮತ್ತು ತನ್ನ ತಂಡದ ಇತರರ ಯೋಗಕ್ಷೇಮವೂ ಅದರಲ್ಲಿ ಅಡಗಿತ್ತು. ಎಂದೂ ದೇವರಲ್ಲಿ ಪ್ರಾರ್ಥಿಸದವನು ಚಂದ್ರಿಕೆಯಮೇಲೆ ಅತ್ಯಾಚಾರವಾಗದಿರಲಿ ಎಂದು ಪ್ರಾರ್ಥಿಸಿದ. ಮನಸ್ಸು ನಮ್ಮ ಸಂಕಟದ ಕರೆಗೆ ಓಗೊಡುವ ಒಂದು ಶಕ್ತಿಯುಂಟೆಂಬ ಶ್ರದ್ಧೆಯನ್ನವಲಂಬಿಸಿದೆ ಎಂಬುದು ಅರ್ಥವಾಯಿತು. ಚಂದ್ರಿಕೆಯ ಜೀವನವನ್ನುಳಿಸಲು ಅಗತ್ಯಬಿದ್ದರೆ ತನ್ನ ಜೀವವನ್ನು ಉಳಿಸಿಕೊಳ್ಳಬೇಕಾದುದು ತನ್ನ ಕರ್ತವ್ಯವೆಂದೂ ಯೋಚಿಸಿದ. ಈ ಅಂಟುಗಳನ್ನೇ ಮಾಯೆ ಎನ್ನುವುದು ಎಂಬುದು ಗೋಚರಿಸಿತು.

ಅದೇನಾಯಿತೋ, ಅವತ್ತಿನಿಂದ ಅವನ ಗಾಯಗಳಿಗೆ ಇಲಾಜು ಮಾಡಿದರು, ಚೊಕ್ಕಟವಾದ ಕೋಣೆಯನ್ನು ಕೊಟ್ಟರು, ಸೌಲಭ್ಯಗಳನ್ನು ಹೆಚ್ಚಿಸಿದರು. ಕೆಲವು ದಿನಗಳಾದಮೇಲೆ ಅವನನ್ನು ಕುದುರೆಯ ಮೇಲೆ ಕೂರಿಸಿ ಮೂಲಸ್ಥಾನದ ಗಡಿಗೆ ಒಯ್ದರು. ಚಂದ್ರಿಕೆಯನ್ನೂ ಅಲ್ಲಿಗೆ ಕರೆತಂದಿದ್ದರು. ಅವರಿಬ್ಬರೂ ಬೇಗ ಗಡಿದಾಟಿಹೋಗಬೇಕೆಂದು ಹೇಳಿ ಸೈನಿಕರು ಹೊರಟುಹೋದರು. ನಾಗಭಟ್ಟನಿಗೆ ದುಃಖ ಉಮ್ಮಳಿಸಿಬಂತು, ಇಬ್ಬರೂ ತಬ್ಬಿಕೊಂಡು ಅತ್ತರು.

ಬೇಗ ಬೇಗ ಮಥುರೆಯನ್ನು ಸೇರಿ ಈ ದುಃಸ್ವಪ್ನವನ್ನು ಮರೆಯುವ ಆತುರ ಅವರಿಗೆ. ಚಾರುಮತಿಯು ಪ್ರಾಯಶಃ ಅತ್ಯಾಚಾರಕ್ಕೆ ಒಳಗಾಗಿಯೇ ಸತ್ತುಹೋಗಿದ್ದ ಸುದ್ದಿ ಸಿಕ್ಕಿತ್ತು. ಚಂದ್ರಿಕೆಯನ್ನೂ ಮೊದಲ ದಿನ ಹೀಗೇ ಪ್ರಶ್ನಿಸಲಾಗಿತ್ತು. ತಮಗೂ ರಾಜಕೀಯಕ್ಕೂ ಯಾವ ಸಂಬಂಧವೂ ಇಲ್ಲ ಎಂದೇ ಅವಳೂ ಉತ್ತರಿಸಿದ್ದಳು. ಅಲ್ಲಿಂದ ಮುಂದೆ ಅವಳನ್ನು ಒಯ್ದು ನವಾಬನ ನಿವಾಸದಲ್ಲಿ ಬಿಟ್ಟಿದ್ದರು. ನವಾಬನು ಅವಳನ್ನು ಮನಬಂದಂತೆ ಬಳಸಿಕೊಂಡ. ಅದಕ್ಕೆ ಒಪ್ಪದಿದ್ದರೆ ನಾಗಭಟ್ಟನ ಶಿರಚ್ಛೇದವಾಗಿಹೋಗುತ್ತಿತ್ತು. ಅವನನ್ನು ಉಳಿಸಲೆಂದು, ಚಂದ್ರಿಕೆಯು ವ್ರತದಂತೆ ಕಾಪಾಡಿಕೊಂಡು ಬಂದಿದ್ದ ತನ್ನ ಸಂಯಮವನ್ನು ತ್ಯಾಗಮಾಡಿದ್ದಳು. ಗುರ್ಜರ ಪ್ರತೀಹಾರರ ಸೈನ್ಯವು ಕೂಡ, ಸೂರ್ಯದೇವಾಲಯವನ್ನು ಮ್ಲೇಚ್ಛರು ಧ್ವಂಸ ಮಾಡುವುದನ್ನು ತಪ್ಪಿಸಲು ಹಿಂದೆ ಸರಿಯುವ ಯೋಚನೆ ಮಾಡಿತ್ತು. ಪ್ರತೀಹಾರರ ಸೈನ್ಯವು ಇತ್ತ ಬಂದಾಗ ರಾಷ್ಟ್ರಕೂಟರ ಸೈನ್ಯವು ಅವರ ರಾಜ್ಯದ ಮೇಲೆ ಎರಗಿತ್ತು. ಗುರ್ಜರ ಪ್ರತೀಹಾರರ ಸೈನ್ಯವು ಹಿಂದೆ ಹೋಗುವುದು ಅನಿವಾರ್ಯವಾಗಿತ್ತು. ನಾಟಕದ ತಂಡದ ಉಳಿದವರು ಕ್ಷೇಮವಾಗಿದ್ದರು.

ತಾನು ಇಂದ್ರಿಯಗಳಿಗಿಂತ ಭಿನ್ನ ಎಂಬ ನೆಲೆಯಲ್ಲಿ ಯೋಚಿಸಿದ್ದರಿಂದ ನಾಗಭಟ್ಟನು ಆ ಹಿಂಸೆಗಳನ್ನೆಲ್ಲ ತಾಳಿಕೊಳ್ಳುವುದು ಸಾಧ್ಯವಾಗಿತ್ತು. ಆ ನೋವಿಗಿಂತ ಸಾವಿರಪಟ್ಟು ಹೆಚ್ಚಾದ ನೋವು ಚಂದ್ರಿಕೆಯದು. ತಿರಸ್ಕಾರ, ನೋವು, ಅಪಮಾನದಿಂದ ಅವಳು ಆಘಾತಗೊಂಡಿದ್ದಳು.

ತನಗಾಗಿ ಚಂದ್ರಿಕೆಯು ಮಾಡಿದ ತ್ಯಾಗಕ್ಕಾಗಿ ನಾಗಭಟ್ಟನು ಕೃತಜ್ಞನಾಗಿದ್ದ. ಮತ್ತೆ ಮತ್ತೆ ಸಾಂತ್ವನ ಮಾಡಿದ. ಧ್ಯಾನ ಮಾಡಲು ಪ್ರೇರಿಸಿದ. ಅದರಂತೆ ಅವಳು ಧ್ಯಾನಮಾಡಿದಾಗ ಕ್ಷೋಭೆ ಹೋಗಿತ್ತು.

ನಾಗಭಟ್ಟನಿಗೆ ಶ್ರಾದ್ಧದಲ್ಲಿ ನಂಬಿಕೆ ಇರಲಿಲ್ಲ. ಗಯೆಗೆ ಹೋಗಿಯೂ ತಾಯಿಯ ಶ್ರಾದ್ಧವನ್ನು ಮಾಡದೆ ಹಿಂದಿರುಗಿದ್ದ. ಆದರೆ ಚಂದ್ರಿಕೆಯ ಮನಸ್ಸಮಾಧಾನಕ್ಕಾಗಿ ಅವಳ ಕೈಲೇ ಚಾರುಮತಿಯ ಶ್ರಾದ್ಧಮಾಡಿಸಿದ. ಗಯೆಯಲ್ಲಿ ಕಾಡಿದ ಆಧ್ಯಾತ್ಮಿಕ ಸಂಶಯಗಳು ಈಗ ಅವನಿಗಿರಲಿಲ್ಲ. ಭಾವಕ್ಕೆ ಶಕ್ತಿ ಬಂದಿತ್ತು. ತನ್ನ ತಾಯಿ ತಂದೆಯವರಿಗೂ ಚಾರುಮತಿಗೂ ತರ್ಪಣ ಕೊಟ್ಟ.

ಧ್ಯಾನವನ್ನು ಮುಂದುವರಿಸಿದ ಚಂದ್ರಿಕೆ ನಿಧಾನವಾಗಿ ಮೊದಲಿನ ಸ್ಥಿತಿಗೆ ಬರುತ್ತಿದ್ದಳು. ಮಥುರೆ ಇನ್ನೂ ಹದಿನೈದು ದಿನಗಳ ದೂರವಿತ್ತು. ಹೀಗೇ ಒಂದು ದಿನ ಧ್ಯಾನ ಮಾಡುತ್ತಿದ್ದಾಗ ಅವಳಿಗೆ ತನ್ನ ಗುರುವಿನ ಪ್ರೇರಣೆ ಲಭಿಸಿತ್ತು. 'ಬರುವ ಹುಣ್ಣಿಮೆಯ ದಿನ ನಾನು ದೇಹತ್ಯಾಗ ಮಾಡುತ್ತೇನೆ. ಅಷ್ಟರೊಳಗೆ ಗುಹಾಮಂಟಪಕ್ಕೆ ಬಾ. ಪರಸ್ಪರ ಸಶರೀರದರ್ಶನ ಮಾಡಬಹುದು' ಎಂಬ ಅಂತರ್ಬೋಧೆ ಅವಳಿಗಾಗಿತ್ತು. ಮಥುರೆಯ ಪಶ್ಚಿಮ ಭಾಗದಲ್ಲಿದ್ದ ಚಂದ್ರಪುರದ ಬಳಿ ಆ ಗುಹಾಮಂಟಪವಿತ್ತು.

ಇಬ್ಬರೂ ಬೇಗಬೇಗ ನಡೆಯತೊಡಗಿದರು. ಆದರೆ ಹೊಟ್ಟೆ ತೊಳಸಿಬಂದು ಬಳಲಿದ್ದ ಅವಳು ಗರ್ಭಿಣಿಯಾಗಿರುವುದು ತಿಳಿದಾಗ 'ಧ್ಯಾನದಿಂದ ಅಶುದ್ಧಿಯ ಭಾವನೆ ದೂರವಾಗಿತ್ತು, ಈಗ ಆಯುಷ್ಯವಿಡೀ ಕಾಡುವ ರೂಪದಲ್ಲಿ ಕಾಣಿಸಿಕೊಂಡಿದೆ; ಸಾಯುವುದೊಂದೇ ಪರಿಹಾರ' ಎಂದು ಬಿಕ್ಕಿ ಬಿಕ್ಕಿ ಅತ್ತಳು. ಗರ್ಭಸ್ರಾವವಾಗಲೆಂದು ಇನ್ನೂ ವೇಗವಾಗಿ ಎಡೆಬಿಡದೆ ನಡೆಯತೊಡಗಿದಳು. ಗರ್ಭವು ಹಾಗೂ ಹೋಗದಿದ್ದರೆ ಔಷಧಿಯಿಂದ ಅದನ್ನು ನಿವಾರಿಸಿಕೊಳ್ಳುವ ಯೋಚನೆ ಮಾಡಿದಳು.

ಆದರೆ ನಾಗಭಟ್ಟನು ಉದ್ದಕ್ಕೂ ಸಮಾಧಾನ ಮಾಡುತ್ತಲೇ ನಡೆದ. ಗರ್ಭಪಾತವಾಗುವುದು ಬೇಡವೆಂದ. 'ಈ ಮಗುವು ನನ್ನಿಂದ ಆದದ್ದು ಅಂತ ಭಾವಿಸು. ನಾನೂ ಹಾಗೆ ಭಾವಿಸುತ್ತೀನಿ' ಎಂದ. ಅವಳಿಗೆ ಮೊದಲು ಆ ಮಾತಿನಿಂದ ಅತಿರೋಷ ಉಕ್ಕಿತು, ಆಮೇಲೆ ಅಳತೊಡಗಿದಳು. ತನ್ನ ಹೊಟ್ಟೆಯಲ್ಲಿನ ಪಾಪದ ಪಿಂಡದ ಬಗೆಗೆ ಕರುಣೆ, ಆದರೆ ಅದನ್ನು ಇಟ್ಟುಕೊಳ್ಳಲು ಅಸಹ್ಯ, ಈ ತೊಳಲಾಟಕ್ಕೆ ಒಳಗಾದಳು. ಕೊನೆಗೂ ಗರ್ಭವನ್ನು ನಿವಾರಿಸಿಕೊಂಡು ಸಂನ್ಯಾಸಿನಿಯೋ ಭಿಕ್ಕುಣಿಯೋ ಆಗುವ ನಿರ್ಧಾರಕ್ಕೇ ಅಂಟಿಕೊಂಡಳು. ಅವಳ ಕಣ್ಣುಗಳು ದಾರಿಯಕಡೆಗಿದ್ದರೂ ದೃಷ್ಟಿಯು ಶೂನ್ಯದಲ್ಲಿತ್ತು.

13. ದಾಂಪತ್ಯವ್ರತ

ಜ್ವರ, ವಾಂತಿ, ಬಳಲಿಕೆ, ವಾಕರಿಕೆಗಳಿಂದಾಗಿ ಹುಣ್ಣಿಮೆಯ ರಾತ್ರಿಯಾದರೂ ಚಂದ್ರಿಕೆ ಮತ್ತು ನಾಗಭಟ್ಟ ಗುಹಾಮಂಟಪವನ್ನು ತಲುಪಲಾರದೆ ಹೋದರು. ಆದರೂ ಗುರುಗಳನ್ನು ಕಾಣುವ ಕಾತರದಿಂದ ರಾತ್ರಿಯೆಲ್ಲಾ ನಡೆದರು. ಗುಹಾಮಂಟಪವಿರುವ ಆಲದಮರಗಳ ತೋಪು ಕಾಣಿಸಿತು. ಗುಹಾಮಂಟಪವನ್ನು ತಲುಪಿದ್ದಾಯಿತು. ಗುರುಗಳು ಚಂದ್ರಿಕೆಯ ಬರವಿಗಾಗಿ ಕಾದು **ದೇಹತ್ಯಾಗವನ್ನು ಮುಂದಕ್ಕೆ ಹಾಕಿದ್ದರು**. ಇಬ್ಬರಿಗೂ ಸಾಕಾಗುವಂತೆ ಮಡಕೆಯ ತುಂಬ ಹುಗ್ಗಿಯನ್ನು ಮಾಡಿಟ್ಟಿದ್ದರು. ಇಬ್ಬರೂ ಹುಗ್ಗಿಯನ್ನು ತಿಂದು ಸ್ನಾನ ಮಾಡಿ ಬಂದು ಗುರುದರ್ಶನ ಮಾಡಿದರು.

ಗುರುಗಳ ಮುಖವು ಸೊಡರಿನ ಬೆಳಕಿಗಿಂತ ಹೆಚ್ಚು ಪ್ರಕಾಶವಾಗಿತ್ತು. ಮಾತಿಲ್ಲ. ಅವರ ಅಂತರ್ಬೋಧೆಯಂತೆ ಚಂದ್ರಿಕೆಯು ಧ್ಯಾನಕ್ಕೆ ಕುಳಿತಳು. ಎರಡು ಸರ್ಪಗಳು ಆ ಪುಟ್ಟ ಗುಹೆಯಲ್ಲೇ ಆಟವಾಡಿಕೊಳ್ಳುತ್ತಿದ್ದವು. ನಾಗಭಟ್ಟನ ಮನಸ್ಸಿನಲ್ಲಿ ಏಳುತ್ತಿದ್ದ ಪ್ರಶ್ನೆಗಳಿಗೆಲ್ಲ ಗುರುಗಳು **ಅಂತರ್ಬೋಧೆಯಿಂದಲೇ ಉತ್ತರಿಸುತ್ತಿದ್ದರು**. ಆ ಗುಹೆಯನ್ನು ಚಂದ್ರಿಕೆ ಗುಡಿಸಿ ತೊಳೆದುದೂ ಗುರುಗಳ ಅಂತರ್ಬೋಧೆಯಿಂದಲೇ.

ಗುರುಗಳು ಸ್ನಾನ ಮಾಡಿಬಂದರು. ಅವರ ಮುಖದಲ್ಲಿ **ಮಂದಹಾಸವು** ತುಳುಕುತ್ತಿತ್ತು. ವಯಸ್ಸು **ತೊಂಬತ್ತು** ಇರಬಹುದು. ಎಲ್ಲರೆಡೆಗೆ ಮಂದಹಾಸದ ಪ್ರಸಾದಬೀರಿ ಅನುಮತಿಯನ್ನು ನಿರೀಕ್ಷಿಸಿದರು. ಪದ್ಮಾಸನ ಹಾಕಿ ಕೂತು ಎರಡೇ ನಿಮಿಷದಲ್ಲಿ ಧ್ಯಾನಸ್ಥರಾದರು. ಬೇಗ **ಸಮಾಧಿಸ್ಥಿತಿಯನ್ನು ಮುಟ್ಟಿದರು**. ಬ್ರಹ್ಮರಂಧ್ರದ ಮೂಲಕ ಪ್ರಾಣವು ಸ್ವತಂತ್ರಗೊಂಡು ದೇಹವನ್ನು ಬಿಟ್ಟಿತ್ತು. ಸಾವೆನ್ನುವುದು ದುಃಖದ ಲೇಪವಿಲ್ಲದ ಹಿಂಸೆಯ ರೂಪವಿಲ್ಲದ **ಆನಂದಾನುಭವ;** ತನಗೆ ಬೇಕಾದಾಗ ದೇಹತ್ಯಾಗ ಮಾಡುವ ಶಕ್ತಿ ಇದ್ದವನನ್ನು ದುಃಖವು ಸ್ಪರ್ಶಿಸಲಾರದು ಎನಿಸಿತು ನಾಗಭಟ್ಟನಿಗೆ. ಮೂರು ದಿನ ಮೊದಲೇ ಗುರುಗಳು ತಮ್ಮ ಚಿತೆಯನ್ನು ಒಟ್ಟಿ ತಾವೇ ಸಿದ್ಧಪಡಿಸಿದ್ದರು ಕೂಡ. ಕಿರಿಯ ಸಾಧುವು ದುಃಖದ ಲೇಪವೇ ಇಲ್ಲವೆಂಬಂತೆ ಚಿತೆಯನ್ನು ಹೊತ್ತಿಸಿದರು. ಗುರುಗಳು ದೇಹತ್ಯಾಗವೇನೋ ಮಾಡಿದ್ದರು, ಅಂತರ್ಬೋಧೆಯಲ್ಲಿ ಸಮಾಧಾನ ಕೊಡುವ **ಜಾಗೃತ ಚೇತನರಾಗಿಯೇ** ಉಳಿದಿದ್ದರು.

ಇನ್ನು ನನ್ನ ಜೀವನ ನನ್ನದು, ಚಂದ್ರಿಕೆಯ ದಾರಿ ಅವಳದು; ಜೀವನವೆಂದರೆ ಹೀಗೇ ಎನಿಸಿತು ನಾಗಭಟ್ಟನಿಗೆ.

ನಾಗಭಟ್ಟನಿಗೆ **ತೀವ್ರವಾದ ಒಂದು ಕುತೂಹಲವಿತ್ತು. 'ಮೂಲಸ್ಥಾನದ ದೇವಮಂದಿರ ಉಳಿಯುತ್ತದೆಯೆ'** ಎಂದು. ಅದನ್ನು ಕಾಣಲು ಕಿರಿಯ ಗುರುಗಳು ಧ್ಯಾನಸ್ಥರಾದರು. ದೀರ್ಘವಾದ ಧ್ಯಾನದಿಂದ ಹೊರಬಂದು ಹೇಳಿದರು, ಭರತಖಂಡದಲ್ಲಿ ವೈದಿಕ, ಬೌದ್ಧ, ಜೈನ ಎಲ್ಲರೂ ಎಲ್ಲೆಲ್ಲೂ ದೇವಾಲಯಗಳನ್ನು ಕಟ್ಟುತ್ತಾರೆ. ಮ್ಲೇಚ್ಛರು ದಾಳಿ ಮಾಡಿ ಎಲ್ಲವನ್ನೂ ಒಡೆದು ಸುಟ್ಟು ನಾಶಪಡಿಸುತ್ತಾರೆ. ಆದರೂ **ಕಟ್ಟುವ ಪ್ರವೃತ್ತಿ ನಾಶವಾಗುವುದಿಲ್ಲ.**

ಅಷ್ಟುಹೊತ್ತಿಗೆ ಚಂದ್ರಿಕೆಯು ಧ್ಯಾನಸ್ಥಳಾಗಿ ಕೂತಿದ್ದಳು. ಗುರುಗಳನ್ನು ಧ್ಯಾನಿಸಿ ಕೆಲವು ವಿಷಯಗಳಲ್ಲಿ ಮಾರ್ಗದರ್ಶನ ಪಡೆಯುವುದು ಅವಳ ಉದ್ದೇಶವಾಗಿತ್ತು. **ನಿನ್ನ ಸಖ ಕೃಷ್ಣನನ್ನು ಮದುವೆಯಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸು.** ಹೊಟ್ಟೆಯಲ್ಲಿರುವ ಮಗುವಿಗೆ ಎಲ್ಲ ಸಂಸ್ಕಾರಗಳನ್ನು ಮಾಡಿ ಅವನು ಅದನ್ನು ತನ್ನದಾಗಿಸಿಕೊಳ್ಳಲಿ. ನೀವಿಬ್ಬರೂ ಕೂಡಿ ಇನ್ನೂ **ನಾಲ್ಕು ವೀರ್ಯವಂತ ಮಕ್ಕಳನ್ನು ಹೆತ್ತು ಬೆಳೆಸಿ.** ಧ್ಯಾನವನ್ನು ಬಿಡಬೇಡಿ. ಧ್ಯಾನದಲ್ಲಿ ನೀನು ಯಾವಾಗ ಕರೆದರೂ ನಾನು ಬರುತ್ತೇನೆ ಎಂದು ಗುರುಗಳು ಆದೇಶಮಾಡಿದ್ದರು. ಅದನ್ನು ಚಂದ್ರಿಕೆಯು ನಾಗಭಟ್ಟನಿಗೆ ಹೇಳಿದಾಗ ತನ್ನ ಅತ್ತೆಯು **ವೈವಾಹಿಕ ಜೀವನವು ಒಂದು ವ್ರತ** ಎಂದು ಹೇಳಿದ್ದ ಮಾತು ನೆನಪಿಗೆ ಬಂದು ಅದರ ಅರ್ಥವು ಸ್ಪಷ್ಟವಾಗತೊಡಗಿತು.

4. ಶೋಧದ ತಾತ್ತ್ವಿಕ ಹಂದರ

ಅ) ಸಾರ್ಥ

ನಾಗಭಟ್ಟನು ತಾರಾವತಿಯಿಂದ ಹೊರಟುದು ಸಾರ್ಥದ ಮರ್ಮವನ್ನು ತಿಳಿಯಲೆಂದು. ಸಾರ್ಥವೆಂದರೆ ಅದೊಂದು ಸಂಚಾರಿ ಮಾರುಕಟ್ಟೆ. ವ್ಯಾಪಾರಿಗಳ ಸಮೂಹವು ದೇಶದಿಂದ ದೇಶಕ್ಕೆ ಸಂಚರಿಸುತ್ತದೆ; ಒಂದು ಕಡೆ ಕೊಂಡ ಸರಕುಗಳನ್ನು ಇನ್ನೊಂದು ಕಡೆ ಮಾರುತ್ತದೆ. ಇದರಲ್ಲಿ ವ್ಯಾಪಾರಿಗಳಿಗೆ ರಕ್ಷಣೆ ಇದೆ, ಸೌಲಭ್ಯವಿದೆ; ದೇಶಗಳಿಗೆ ಸುಂಕದ ರೂಪದ ಲಾಭವಿದೆ. ತಾರಾವತಿಯಿಂದ ಮಥುರೆಗೆ ಹೋಗುವವರೆಗೆ ನಾಗಭಟ್ಟನು ಸಾರ್ಥದ ಮರ್ಮಗಳನ್ನು ಸಾಕುಬೇಕಾದಷ್ಟು ತಿಳಿದುಕೊಂಡ. ಮಥುರೆಯು ಅನೇಕ ಕಡೆಗಳಿಂದ ಬರುವ ಅನೇಕ ಸಾರ್ಥಗಳು ಹಾದುಹೋಗುವ ಆ ಕಾಲದ ಅತಿದೊಡ್ಡ ಕೇಂದ್ರವಾಗಿತ್ತು. ನಾಗಭಟ್ಟನು ಕಾರಣಾಂತರದಿಂದ ಮಥುರೆಯಲ್ಲಿ ದೀರ್ಘಕಾಲ ಉಳಿಯಬೇಕಾಗಿ ಬಂತು; ಹಲವು ಸಾರ್ಥಗಳ ನಾನಾ ರೀತಿಯ ಅನುಭವಗಳನ್ನೂ ತಂತ್ರಗಳನ್ನೂ ರೀತಿನೀತಿಗಳನ್ನೂ ಅಧ್ಯಯನ ಮಾಡಲು ಅದು ಅವನಿಗೆ ಸಹಾಯಕವೇ ಆಯಿತು. ಕೆಲವು ಸಂದರ್ಭಗಳಲ್ಲಿ ಕೆಲವು ವ್ಯಕ್ತಿಗಳು ಕ್ಷೇಮವಾಗಿ ಪ್ರಯಾಣಮಾಡಲು ಸಾರ್ಥದ ಜತೆ ಸೇರುವ ಕೆಲವು ಹಾದುಹೋಗುವ ಉಲ್ಲೇಖಗಳು ಕಾದಂಬರಿಯಲ್ಲಿ ಅಲ್ಲಲ್ಲಿ ಬರುವುದನ್ನು ಬಿಟ್ಟರೆ ಸಾರ್ಥದ ವಿವರವಾದ ನೇರ ವರ್ಣನೆ ಬರುವುದು ಇಷ್ಟು ಮಾತ್ರ.

ಕಾದಂಬರಿಯ ಹೆಗ್ಗಳಿಕೆ ಇರುವುದು 'ಸಾರ್ಥ'ವು ಕ್ರಿ.ಶ. ಎಂಟನೆಯ ಶತಮಾನದ ಭರತಖಂಡದಲ್ಲಿ ಪಡೆದುಕೊಂಡ ಆಯಾಮಗಳನ್ನು ಶೋಧಿಸುವುದರಲ್ಲಿ; ಅದು ನಮ್ಮ ಬಹುಮುಖ ಇತಿಹಾಸದ ಸಂಧಿಕಾಲ ಹೇಗಾಯಿತು ಎಂಬುದನ್ನು ಅನ್ವೇಷಿಸುವುದರಲ್ಲಿ.

ಆ) ಗೊಂದಲದಲ್ಲಿದ್ದ ಭಾರತ

ಭರತಖಂಡದ ಪಶ್ಚಿಮ ಮತ್ತು ವಾಯವ್ಯದ ದೇಶಗಳು ಮ್ಲೇಚ್ಛರ ವಶವಾಗುವುದರೊಂದಿಗೆ ಶುದ್ಧವಾದ ವಾಣಿಜ್ಯೋದ್ದೇಶದ ಸಾರ್ಥವು ಮತಾಂಧತೆಯ ತೆಕ್ಕೆಗೆ ಸೇರಿತು ಮತ್ತು ಅದಕ್ಕೊಂದು ರಾಜಕೀಯ ಬಣ್ಣವೂ ಉಂಟಾಯಿತು. ಅವರೆಗೆ ಭರತಖಂಡದ ಮೂಲೆ ಮೂಲೆಗಳಿಂದ ಆ ಪ್ರಾಂತ ಮತ್ತು ಅದರಾಚೆಗಿನ ದೇಶಗಳಲ್ಲಿ ಮುಕ್ತವಾಗಿ ಸಂಚರಿಸುತ್ತಿದ್ದ ಸಾರ್ಥಗಳಿಗೆ ತಡೆಯಾಯಿತು, ಅಂಕೆ ಉಂಟಾಯಿತು; ಅವು ಮ್ಲೇಚ್ಛರ ಕೈಲಿ ಶೋಷಣೆಗೊಳಗಾದುವು. ಅದರ ಪರಿಣಾಮವಾಗಿ ನಷ್ಟಕ್ಕೊಳಗಾದ ಸಾರ್ಥಗಳು ತಮ್ಮ ವೃತ್ತಿಯನ್ನು ಮುಂದುವರಿಸುವ ಆಸಕ್ತಿಯನ್ನೇ ಕಳೆದುಕೊಂಡವು. ಅರಕ್ಷಿತ ಭಾವದಲ್ಲಿ ನವೆದವು. ಭರತಖಂಡದ ಆರ್ಥಿಕತೆಗೇ ಪೆಟ್ಟು ಬಿತ್ತು, ಜೀವನ ಸೌಕರ್ಯವೂ ಮುಕ್ಕಾಯಿತು. ಮ್ಲೇಚ್ಛರು ಮಾಡುತ್ತಿದ್ದ ಮತಾಂತರಗಳು ಮತ್ತು ಕೊಲೆ ಅತ್ಯಾಚಾರಗಳಿಂದಾಗಿ ಹಿಂಸೆ ತಾಂಡವವಾಡಿತ್ತು. ಆರ್ಥಿಕ ವ್ಯವಸ್ಥೆ ಮತ್ತು ಸಮರಸದ ಮತಧರ್ಮವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಗುರ್ಜರ ಪ್ರತೀಹಾರರು ಯುದ್ಧ ಸಾರಿದರು, ಆದರೆ ಪರಿಸ್ಥಿತಿಯ ಒತ್ತಡದಿಂದಾಗಿ ಯುದ್ಧವನ್ನೇ ಮಾಡಲಾಗದೆ ಬರಿಗೈಲಿ ಹಿಂದಿರುಗಿದರು.

ಈ ಪರಿಸ್ಥಿತಿಯ ಒತ್ತಡವೂ ಬಹುಮುಖವಾದುದು. ಇದರಲ್ಲಿ ಮ್ಲೇಚ್ಛರ ಕ್ರೌರ್ಯ ಮತ್ತು ತಂತ್ರಗಾರಿಕೆ ಸೇರಿದೆ. ಭರತಖಂಡದ ಮುಂದೆ ಇದ್ದ ಸವಾಲು ಅದೊಂದೇ ಅಲ್ಲ. ರಾಷ್ಟ್ರಕೂಟರು ಸಾರ್ಥಗಳನ್ನು ಉತ್ತೇಜಿಸಿ ದೇಶದ ಆರ್ಥಿಕವ್ಯವಸ್ಥೆಯನ್ನು ದೃಢವಾಗಿಸಿದ್ದರು ಎಂಬ ಪ್ರತೀತಿ ಇತ್ತು. ಅಂಥ ರಾಷ್ಟ್ರಕೂಟರು, ಸಾರ್ಥವನ್ನು ರಕ್ಷಿಸುವ ಉದ್ದೇಶದಿಂದ ಗುರ್ಜರ ಪ್ರತೀಹಾರರು ಮ್ಲೇಚ್ಛರ ಮೇಲೆ ಯುದ್ಧ ಹೂಡಿದ್ದ ಸಂದರ್ಭವನ್ನು ಕಾದು ಅವರ ರಾಜ್ಯದಮೇಲೆ ಆಕ್ರಮಣ ಮಾಡಿದರು. ಶಾಂತಿ ಸಮಾಧಾನ ಸುವ್ಯವಸ್ಥೆಗಳಿಗೆ ಒತ್ತುಕೊಡುವ ಒಂದು ಒಟ್ಟು ಸಂಸ್ಕೃತಿಯ ಭಾಗವಾಗಿಯೇ ಇದ್ದ

ರಾಜರಲ್ಲಿ ಒಟ್ಟು ರಾಜಕೀಯ ಕಲ್ಪನೆ ಇರಲಿಲ್ಲ ಎಂಬುದರ ಸಣ್ಣ ನಿದರ್ಶನ ಇದು. ತಾರಾವತಿಯ ರಾಜನಂತೂ ತಾನು ಪುಟ್ಟರಾಜನಾದರೂ ಸಮಯನೋಡಿ ಇವರಿಬ್ಬರನ್ನೂ ಅತಿಕ್ರಮಿಸುವ ಯೋಚನೆಯಲ್ಲಿದ್ದವನು.

ಭರತಖಂಡದ ಜನರು ತಮ್ಮಷ್ಟಕ್ಕೆ ಧರ್ಮಭೀರುಗಳಾಗಿದ್ದು ಸಾತ್ತ್ವಿಕಜೀವನವನ್ನು ನಡೆಸುತ್ತಿದ್ದರಾದರೂ ಆ ಗುಣವೇ ಒಂದು ದೌರ್ಬಲ್ಯವಾಗಿ ಅವರನ್ನೇ ತುಳಿದ ಸಂದರ್ಭವೂ ಅದಾಗಿತ್ತು. ಮ್ಲೇಚ್ಛರೂ ಬೌದ್ಧರೂ ಮತಪ್ರಚಾರವನ್ನು ತಮ್ಮ ಧರ್ಮದ ಅಂಗವಾಗಿಸಿಕೊಂಡಿದ್ದರು. ವೈದಿಕಮೂಲದ ಜನರಲ್ಲಿ ಅತಿಕ್ರಮಣ ಮಾಡುವ ಮನೋಧರ್ಮವಿಲ್ಲದುದರ ಜತೆಗೆ ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳುವ ನಿಷ್ಠುರತೆಯೂ ಇರಲಿಲ್ಲ. ಒಂದು ದೇವಾಲಯದ ಉಳಿವಿಗಾಗಿ ಒಟ್ಟು ವ್ಯವಸ್ಥೆಯನ್ನೂ ಅದರ ಕ್ಷೇಮವನ್ನೂ ಸಮಾಧಾನವನ್ನೂ ಒತ್ತೆ ಇಟ್ಟು ರಾಜಿಮಾಡಿಕೊಳ್ಳುವವರೆಗೆ ಅದು ಬೆಳೆದಿತ್ತು.

ಅಮರುಕನು ಸಾರ್ಥದ ಮರ್ಮವನ್ನು ತಿಳಿದು ತನ್ನದೇ ಆದ ಸಾರ್ಥವನ್ನು ಕಟ್ಟುವ ವಿಷಯದಲ್ಲಿ ಪ್ರಾಮಾಣಿಕನಾಗಿದ್ದರೆ ಅವನೊಬ್ಬ ಪ್ರಗತಿಪರನೇ ಆಗಿಬಿಡುತ್ತಿದ್ದ. ಆದರೆ ಅಂಥ ಪ್ರಗತಿಪರ ಚಿಂತನೆಯನ್ನು ಅವನು ತನ್ನ ಲಂಪಟತೆಗೆ ಒಂದು ಮುಸುಕಾಗಿ ಮಾತ್ರ ಬಳಸಿದ್ದ. ನಮ್ಮ ರಾಜರೂ ಜನರೂ ಸಣ್ಣಸಣ್ಣ ಸ್ವಾರ್ಥಗಳಿಗಾಗಿಯೂ ದೊಡ್ಡದೊಡ್ಡ ಹಿತಗಳನ್ನು ಬಲಿಕೊಡಲು ಹಿಂದುಮುಂದು ನೋಡುತ್ತಿರಲಿಲ್ಲವೆನ್ನುವುದಕ್ಕೂ ಅದೊಂದು ನಿದರ್ಶನ. ಅಮರುಕನು ಕುಖ್ಯಾತನಾಗಿದ್ದುದೇ ಲಂಪಟನೆಂದು.

ಭರತಖಂಡವನ್ನು ಆಕ್ರಮಿಸಿದ ಮ್ಲೇಚ್ಛರ ಜೊತೆಗೆ ಬೌದ್ಧರು ಕೈಜೋಡಿಸಿದರು ಎನ್ನುವುದಂತೂ ಒಂದು ದೊಡ್ಡ ರಾಷ್ಟ್ರೀಯ ದುರಂತ. ವಿಗ್ರಹಾರಾಧನೆಯೂ ಮಂದಿರ ಸಂಸ್ಕೃತಿಯೂ ಪ್ರಾರಂಭವಾದುದೇ ಬೌದ್ಧರಿಂದ. ಮ್ಲೇಚ್ಛರ ದೌಷ್ಟ್ಯಗಳಲ್ಲಿ ಮುಖ್ಯವಾಗಿದ್ದುದೇ ವಿಗ್ರಹಭಂಜನೆ. ಸೂರ್ಯದೇವಾಲಯವನ್ನು ಒಡೆದು ವಿಗ್ರಹಭಂಜನೆ ಮಾಡುವುದಕ್ಕೆ ಬೌದ್ಧರು ಪರೋಕ್ಷವಾಗಿಯೇ ಆದರೂ ಬೆಂಬಲಿಗರಾಗಿದ್ದರೆ ಅದೊಂದು ವಿಪರ್ಯಾಸ; ರಾಷ್ಟ್ರನಾಶದ ಹೆಬ್ಬಾಗಿಲು. ವೈದಿಕಮೂಲದ ಆಶಯಗಳಿಗೆ ಹತ್ತಿರವಾಗಿದ್ದವರು ಮತ್ತು ರೀತಿನೀತಿಗಳಲ್ಲಿ ಭರತಖಂಡದಲ್ಲಿ ಸಹಸ್ರಾರುವರ್ಷಗಳಲ್ಲಿ ಪಾಕಗೊಂಡ ಉದಾತ್ತ ಸಂಸ್ಕೃತಿಗೆ ಹೊಂದಿದಂತಿದ್ದವರು ಬೌದ್ಧರು. ಆ ಕಾರಣದಿಂದಲೇ ಚಂದ್ರಿಕೆಯು ತನ್ನ ಅತ್ಯಂತ ಹತಾಶ ಸ್ಥಿತಿಯಲ್ಲಿ ಸಂನ್ಯಾಸಿನಿ ಅಥವಾ ಭಿಕ್ಕುಣಿಯಾಗುವುದಾಗಿ ನಿರ್ಧರಿಸಿದ್ದಳು. ಜಯಸಿಂಹರು ತಮ್ಮ ಪತ್ನಿಯನ್ನು ಕಳೆದುಕೊಂಡ ದುಃಖತಪ್ತ ಸ್ಥಿತಿಯಲ್ಲಿ ನಿರ್ಣಯಿಸಿದ್ದೂ ಅದನ್ನೇ. ವಿಷ್ಣುಗಯೆಗೆ ಹೋಗಿ ಬಹುಶ್ರದ್ಧೆಯಿಂದ ಶ್ರಾದ್ಧಕರ್ಮಗಳನ್ನು ನೆರವೇರಿಸಿ ಬರುತ್ತಿದ್ದ ಕರ್ಮಠ ವೈದಿಕರು ಬೌದ್ಧರಿಗೆ ಕಡಮೆಯಿಲ್ಲದ ಭಕ್ತಿಯಿಂದ ಬುದ್ಧನ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿದ್ದರು ಮತ್ತು ಬುದ್ಧನನ್ನು ವಿಷ್ಣುವಿನದೇ ಅವತಾರವೆಂದು ಸ್ವಯಿಚ್ಛೆಯಿಂದ ನಂಬಿ ಆರಾಧಿಸುತ್ತಿದ್ದರು. ಆದರೂ ಭರತಖಂಡದಲ್ಲಿ ಮೂರನೆಯ ಶಕ್ತಿಗಳಿಗೆ ಜಾಗಮಾಡಿ ಇಬ್ಬರೂ ತಲೆಕೊಡುವ ಆಟ ಅಂದೂ ಯಥಾಪ್ರಕಾರವಾಗಿ ನಡೆದಿತ್ತು.

ಇ) ಮತಗಳ ಮೇಲಾಟ

ಬಿಟ್ಟುಹೋದ ಒಂದು ಸಾರ್ಥದಿಂದ ಬರಬೇಕಾದ ಇನ್ನೊಂದು ಸಾರ್ಥಕ್ಕೆ ಇದ್ದ ಅಂತರದ ಅವಧಿಯಲ್ಲಿ ನಾಗಭಟ್ಟನು ಮಥುರೆಯಲ್ಲಿದ್ದ. ಸಾರ್ಥಗಳನ್ನು ಅಧ್ಯಯನ ಮಾಡುವುದನ್ನು ಬಿಟ್ಟು ಅವನಿಗೆ ಇನ್ನೇನೂ ಕೆಲಸವಿರಲಿಲ್ಲ. ಸಾರ್ಥದ ಬಗೆಗಿನ ಮಾಹಿತಿಯನ್ನು ಕಟರೆಯಾಗುವಷ್ಟು ಸಂಗ್ರಹಿಸಿಯಾಗಿತ್ತು. ಸವಾಲಿನ ಅಥವ ಮನಸ್ಸನ್ನು ಸಾರ್ಥಕವಾಗಿ ತೊಡಗಿಸಿಕೊಳ್ಳಬಹುದಾದ ಯಾವ ಕೆಲಸವೂ ಅವನ ಮುಂದಿರಲಿಲ್ಲ. ಗೊತ್ತುಗುರಿಗಳು ಇಲ್ಲದ ದಿನಗಳು ಅವು. ಅದು ದೀರ್ಘ ಅವಧಿಯದೂ ಆಗಿತ್ತು. ಅವನನ್ನು ಒಂಟಿತನ, ಬೇಸರ, ಶೂನ್ಯ ಆವರಿಸಿತು. ಚಂದ್ರಿಕೆಯ ಪ್ರಸಂಗ, ತಾರಾವತಿಯಿಂದ ಬಂದ ತನ್ನ ಕುಟುಂಬದ ಸುದ್ದಿ ಮೊದಲಾದವು ಅವನ ಶೂನ್ಯತೆಯನ್ನು ಹೆಚ್ಚಿಸುತ್ತಲೇ ಹೋದವು. ಮತ್ತೆ ಮತ್ತೆ ಇದು ಸಂಭವಿಸಿತು. ಅಂಥ ಸಮಯದಲ್ಲೆಲ್ಲ ಅವನನ್ನು ಪ್ರಚೋದಿಸಿದ ಶಕ್ತಿಗಳಲ್ಲಿ ಬೌದ್ಧಧರ್ಮವೂ ಮುಖ್ಯವಾದ ಒಂದು.

ವತ್ಸದೇಶದಲ್ಲಿ ದರೋಡೆಕೋರರು ಸಾರ್ಥದ ಮೇಲೆ ದಾಳಿ ಮಾಡಿದ್ದರು. ದಾಳಿಕೋರರು ಸಾರ್ಥದ ಮೇಲೆ ಎರಗಿದ್ದು **'ಮಣಿಪದ್ಮೇ ಹುಂ'** ಎಂಬ ಮಂತ್ರ ಹೇಳಿಕೊಂಡು, ಸಾರ್ಥದ ಆರಕ್ಷಕರು ದಾಳಿಕೋರರನ್ನು ಎದುರಿಸಿದ್ದೂ ಆ ಮಂತ್ರ ಹೇಳಿಕೊಂಡೇ. ಸಾರ್ಥವನ್ನು ರಕ್ಷಿಸುವ ದೇವತೆಯ ಪ್ರಾರ್ಥನೆ ಅದು. ಅಂಥ ದೇವತೆಯೊಂದನ್ನು ಬೌದ್ಧರು ಸೃಷ್ಟಿಸಿದ್ದರು. ಜನರನ್ನು ತಮ್ಮ ಮತದೆಡೆಗೆ ಸೆಳೆಯುವ ಅಸ್ತ್ರವಾಗಿ ಅದು ಬಳಕೆಯಾಗಿತ್ತು. ಅದು ನಾಗಭಟ್ಟನಿಗೆ ಆದ ಮೊದಲ ಅನುಭವ.

ಮಥುರೆಯಲ್ಲಿ ವಜ್ರಪಾದಭಿಕ್ಕು ಮತ್ತು ವಿಶ್ವಕರ್ಮಸ್ಥಪತಿಯ ಪರಿಚಯವಾದಾಗ ವೈದಿಕ ಪುರಾಣಗಳ ಅನೇಕ ದೇವತೆಗಳನ್ನು ಬೌದ್ಧರು ಹೇಗೆ ತಮ್ಮದಾಗಿ ತಿರುಚಿಕೊಳ್ಳುತ್ತಿದ್ದಾರೆ ಎಂಬ ಅನುಭವವೂ ನಾಗಭಟ್ಟನಿಗಾಯಿತು. ಸಮಯ ಸಿಕ್ಕಿದಾಗಲೆಲ್ಲಾ ಜನರನ್ನು ತಮ್ಮ ಮತಕ್ಕೆ ಪರಿವರ್ತಿಸುವ ಸತತ ಪ್ರಯತ್ನವನ್ನೂ ಅವರು ಮಾಡುತ್ತಿದ್ದರು. ಮೊದಮೊದಲು ವೈದಿಕ ಧರ್ಮದಲ್ಲಿ ನಿಷ್ಠನಾಗಿದ್ದು ಬೌದ್ಧರ ಅಂಥ ಪ್ರಯತ್ನಗಳನ್ನು ಪ್ರತಿರೋಧಿಸುತ್ತಿದ್ದ ವಿಶ್ವಕರ್ಮಸ್ಥಪತಿಯು ಕ್ರಮೇಣ ಬೌದ್ಧಮತಕ್ಕೆ ಒಲಿದು ನಿಷ್ಠಾವಂತ ಬೌದ್ಧನಾಗಿ ಪರಿವರ್ತಿತನಾಗುವ ಸನ್ನಿವೇಶಗಳು ಸೃಷ್ಟಿಯಾಗಿದ್ದವು. ಉದ್ದಾಮರಾದ ಅನೇಕ ವೈದಿಕ ಪಂಡಿತರು ಬೌದ್ಧ ಧರ್ಮಕ್ಕೆ ಪರಿವರ್ತನೆಗೊಂಡ ನಿದರ್ಶನಗಳ ದೊಡ್ಡ ಪಟ್ಟಿಯೇ ಇತ್ತು. ನಾಗಭಟ್ಟ, ಜಯಸಿಂಹ ಮೊದಲಾದವರನ್ನು ಪರಿವರ್ತನೆಗೆ ಪ್ರಚೋದಿಸಿದ್ದಕ್ಕೂ ನಾಗಭಟ್ಟನೇ ಸಾಕ್ಷಿಯಾಗಿದ್ದ. ಒಂದು ಘಟ್ಟದಲ್ಲಿ ನಾಗಭಟ್ಟನು ಶೂನ್ಯವಾದವನ್ನು ಅಭ್ಯಸಿಸಲೆಂದೇ ನಾಲಂದಕ್ಕೆ ಹೋಗಿ ಎರಡು ವರ್ಷ ಅಲ್ಲಿದ್ದ, ಬೌದ್ಧ ಧರ್ಮಕ್ಕೆ ಒಲಿದ, ಬೋಧಗಯಾಕ್ಕೆ ಹೋಗಿ ಸ್ತೋತ್ರಮಾಡಿ ಮನಶ್ಶಾಂತಿಯನ್ನು ಪಡೆದುಕೊಂಡ; ಆಮೇಲೆ ನಿರಸನವೂಗೊಂಡ.

ನಾಗಭಟ್ಟನು ಮೂಲತಃ ವೈದಿಕ ಪಂಡಿತ, ಆದರೆ ಆ ಧರ್ಮದಲ್ಲಿ ಹೇಳಿಕೊಳ್ಳುವ ಶ್ರದ್ಧೆಯಿಲ್ಲದವನು. ಪ್ರಾಯಶಃ ಅದೂ ಸೇರಿದಂತೆ ಅವನಿಗೆ ಒದಗಿದ ಒತ್ತಡಗಳೂ ಅಗತ್ಯಗಳೂ ಅವಸ್ಥೆಗಳೂ ಸತ್ಯವನ್ನು ಮುಕ್ತಮನಸ್ಸಿನಿಂದ ಹುಡುಕುವಂತೆ ಮಾಡಿದವು. ಅವನಿಗೆ ಮನಶ್ಶಾಂತಿ ಬೇಕಿತ್ತು, ಸತ್ಯದ ಆಸರೆ ಬೇಕಿತ್ತು. ತನ್ನ ಮತವೇ ಶ್ರೇಷ್ಠವೆಂದು ಹೇಳುವುದು ಅಹಂಕಾರ ಮತ್ತು ಅದು ತರ್ಕದಿಂದ ತೀರ್ಮಾನವಾಗಬಹುದಾದ ಸಂಗತಿಯಲ್ಲ ಎಂಬ ಅರಿವು ಅವನಿಗಿತ್ತು. ಆ ಹಿನ್ನೆಲೆಯಲ್ಲಿ ಅವನು ಕಂಡುದಿಷ್ಟು.

ಅ) ವೈದಿಕ ದೇವತೆಗಳನ್ನು ಬೌದ್ಧದೇವತೆಗಳಾಗಿ ಪರಿವರ್ತಿಸಿ ಆ ದೇವತೆಗಳು ವೈದಿಕ ದೇವತೆಗಳನ್ನು ಹೀನವಾಗಿ ಮಾಡುವ ಬೌದ್ಧರ ವರ್ತನೆಯಲ್ಲಿ ಒಳ್ಳೆಯ ಅಭಿರುಚಿಯನ್ನು ಕಾಣುವುದು ಸಾಧ್ಯವಿರಲಿಲ್ಲ.

ಆ) ಬೌದ್ಧಮತಕ್ಕೆ ಪರಿವರ್ತಿತನಾಗದೆ ಬೌದ್ಧವಿಗ್ರಹಗಳನ್ನು ತಾದಾತ್ಮ್ಯದಿಂದ ಕೆತ್ತುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ವಿಶ್ವಕರ್ಮ ಸ್ಥಪತಿಯು ಅಗತ್ಯವಾಗಿ ಬೌದ್ಧಧರ್ಮಕ್ಕೆ ಪರಿವರ್ತಿತನಾಗಬೇಕು ಎಂದು ಒತ್ತಡ ಹಾಕುತ್ತಿದ್ದ ವಜ್ರಪಾದ ಭಿಕ್ಕು ತನ್ನ ಹಿಡಿತದಲ್ಲಿಲ್ಲದಿದ್ದ ನಾಗಭಟ್ಟನು ಬೌದ್ಧನಾಗದೆಯೂ ಬುದ್ಧನ ಪಾತ್ರವನ್ನು ತಾದಾತ್ಮ್ಯದಿಂದ ಅಭಿನಯಿಸಬಹುದೆಂದು ಹೇಳುತ್ತಿದ್ದಾಗ ಠಕ್ಕು ಬಯಲಾಗಿತ್ತು.

ಇ) ವೈದಿಕ ರಾಜರು ಮತ್ತು ವರ್ತಕರ ಉದಾರವಾದ ದೇಣಿಗೆಗಳನ್ನು ಪಡೆದೇ ಬೆಳೆದ ನಾಲಂದ ವಿದ್ಯಾಲಯದಲ್ಲಿ ಪೂರ್ಣವಾಗಿ ಬೌದ್ಧವಾತಾವರಣವಿತ್ತು ಮತ್ತು ಎಲ್ಲ ಅವಕಾಶಗಳನ್ನೂ ಸಂದರ್ಭಗಳನ್ನೂ ವೈದಿಕಮತದ ಅವಹೇಳನಕ್ಕೆ ಬಳಸಿಕೊಳ್ಳಲಾಗುತ್ತಿತ್ತು.

ಈ) ವೈದಿಕರು ಮಾಡುವ ಶ್ರಾದ್ಧವು ನಿಂತುದು ಆತ್ಮವು ಶಾಶ್ವತ ಎಂಬ ಶ್ರದ್ಧೆಯ ಆಧಾರದ ಮೇಲೆ. ರೋಗ ಮುಪ್ಪು ಸಾವುಗಳಿಂದ ಪ್ರಚೋದಿತನಾಗಿ ಅರ್ಥ ಹುಡುಕಲು ಹೊರಟ ಸಿದ್ಧಾರ್ಥನು **'ಸರ್ವಂ ಕ್ಷಣಿಕಂ'** ಎಂದ. ಮುಂದೆ ಬಂದ ಅನುಯಾಯಿಗಳಿಂದ ತರ್ಕದ ಹುತ್ತ ಬೆಳೆಯಿತು. (ಜಾತಕ ಕಥೆಗಳಿಗೂ ಬುದ್ಧನಿಗೂ ಸಂಬಂಧ ಕಲ್ಪಿಸಬಹುದಾದ ಮಹತ್ತ್ವವನ್ನು ಆ ತರ್ಕವು ತಾನೇ ಹಾಳುಮಾಡಿಕೊಂಡಿತು).

ಉ) ತಾಂತ್ರಿಕರ ಯುಗನದ್ಧವನ್ನೇ ಬೌದ್ಧರೂ ಅನುಸರಿಸಿದ್ದರು; ಮುಂದೆ ಬಂದ ಬೌದ್ಧ ಪಂಡಿತರು ಅದನ್ನೇ ಅದ್ವಯದ ಪ್ರತೀಕವೆಂದರು. ಅದೇ ಶೂನ್ಯ, ಅದೇ ಅನಂತಸತ್ಯ ಎಂಬುದು ಅವರ ವಾದವಾಗಿತ್ತು. ಗಂಡುಹೆಣ್ಣುಗಳ ಆಕರ್ಷಣೆಯನ್ನು ದಾಟದಲ್ಲದೆ ಅಧ್ಯಾತ್ಮ ಸಿದ್ಧಿಸುವುದಿಲ್ಲ ಎಂದು ಬುದ್ಧನು ಹೇಳಿದುದನ್ನೇ ಮತ್ತೆ ಮುಂದೆ ಬಂದ ಅನುಯಾಯಿಗಳು ತರ್ಕದ ಕಗ್ಗಂಟಾಗಿ ಬೆಳೆಸಿದ್ದರು. ಯತಿ ಶಂಕರರು ಹೇಳಿದ ಅದ್ವೈತ ಮತ್ತು ಬುದ್ಧನು ಹೇಳಿದ ಅದ್ವಯ ಎರಡಕ್ಕೂ ಉಪನಿಷತ್ತಿನ ಘನ ಆಶಯವೇ ಮೂಲಸ್ರೋತವೆಂಬುದನ್ನು ಅಲ್ಲಗಳೆಯುವಂತಿರಲಿಲ್ಲ. ಆದರೂ ಅದಕ್ಕೆ ಇಂಥ ತಿರುವು ಬಂದಿತ್ತು.

ಊ) ಶೂನ್ಯವೆಂಬುದು ತಾತ್ಕಾಲಿಕವಾಗಿ ಮನಸ್ಸನ್ನು ಮುಸುಕುವ ಸ್ಥಿತಿ ಮಾತ್ರ ಎಂಬುದು ನಾಗಭಟ್ಟನಿಗೆ ಮತ್ತೆ ಮತ್ತೆ ಅನುಭವಕ್ಕೆ ಬಂದಿತ್ತು. ಅಮೂರ್ತವಾದ ಪರಬ್ರಹ್ಮವನ್ನು ಪ್ರತಿಪಾದಿಸಿ ಬ್ರಹ್ಮವೊಂದೇ ಸತ್ಯವೆನ್ನುತ್ತಿದ್ದ ಯತಿ ಶಂಕರರು ವಿಗ್ರಹರೂಪದ ದೇವರ ಪೂಜೆಯನ್ನೂ ದೇವಸ್ಥಾನಗಳನ್ನೂ ಉತ್ತೇಜಿಸಿದ್ದು ಆ ಅವಕಾಶವಿಲ್ಲದಿದ್ದರೆ ಜನಸಾಮಾನ್ಯರಿಗೆ ಶೂನ್ಯಕವಿಯುತ್ತದೆ ಎಂಬ ಕಾರಣಕ್ಕೇ ಆಗಿತ್ತು.

ಋ) ಜೀವನವು ಆನಂದಮಯವಾದುದು, ದುಃಖಮಯವಲ್ಲ. ಸಾವು ಎನ್ನುವುದು ಕೂಡ ದುಃಖದ ಲೇಪವಿಲ್ಲದ ಮತ್ತು ಹಿಂಸೆಯ ರೂಪವಿಲ್ಲದ, ಆನಂದಾನುಭವ ಎನ್ನುವುದನ್ನು ಯೋಗಗುರುಗಳು ಮಂದಸ್ಮಿತರಾಗಿ ದೇಹತ್ಯಾಗ ಮಾಡಿದ ಸಂದರ್ಭದಲ್ಲಿ ಕಂಡಿದ್ದ. ಗುರುಗಳು ಜೀವತ್ಯಾಗ ಮಾಡಿದಮೇಲೂ ಸಚೇತನರಾಗಿ ಮುಂದುವರಿದಿದ್ದರು.

ಬುದ್ಧನ ಎಲ್ಲ ವಾದಗಳೂ ಇಂಥವೇ ಆಗಿರಲಿಲ್ಲ. ಅವನ ಬಳಿ ವರ್ಣವ್ಯವಸ್ಥೆ ಎಂಬುದಿರಲಿಲ್ಲ. ಹಾಗಾಗಿ ಜಾತಿಭೇದವೆಂಬುದು ಸುಳಿಯುವಂತಿರಲಿಲ್ಲ. ಸಾಮೂಹಿಕತೆಗೂ, ಒಗ್ಗಟ್ಟಿನ ನಿರ್ವಹಣೆಗೂ ಅದು ಸಹಾಯಕ ಅಂಶವಾಗಿತ್ತು. ಅರಬರ ಮೂಲಸ್ಥಾನದಲ್ಲಿ ನಾಗಭಟ್ಟನನ್ನು ಬಂಧಿಸಿ ಚಿತ್ರವಿಚಿತ್ರವಾದ ಹಿಂಸೆ ಕೊಟ್ಟು ನೋವನ್ನು ಸೃಷ್ಟಿಸಿದಾಗ ಬುದ್ಧ ಹೇಳಿದ ಮೈತ್ರಿಯಿಂದ ಮಾತ್ರ ಈ ಶಕ್ತಿಯನ್ನು ತ್ಯಾಗಮಾಡಬಹುದು ಎನಿಸಿತು. ಅದಕ್ಕೆ ಅಷ್ಟೇ ಆಯಾಮವಲ್ಲ ಇದ್ದುದು. ಆ ಸಂದರ್ಭದಲ್ಲಿ ಕುಮಾರಿಲಭಟ್ಟರ ಧೃತಿಯನ್ನು ನೆನೆದೇ ಅವನು ಗಟ್ಟಿಯಾಗಿ ನಿಂತಿದ್ದ. ಕ್ಷಾತ್ರಶಕ್ತಿಯಿಲ್ಲದವನು ಅಧ್ಯಾತ್ಮದ ಮಾತನಾಡುವುದು ಸೋಗಲಾಡಿತನವಾಗುತ್ತದೆ ಎಂದೂ ಅವನಿಗೆ ಅನಿಸಿತ್ತು. ಅಹಿಂಸೆಯನ್ನು ಸ್ವಚ್ಛಂದವಾಗಿ ವಿಸ್ತರಿಸಿ ವಿಜೃಂಭಿಸಿದುದರಿಂದಾಗಿ ಭಾರತದಲ್ಲಿ ಕ್ಷಾತ್ರವು ಕ್ಷೀಣಿಸಿ ಪರಾಕ್ರಮಣಗಳಿಗೆ ಒಳಗಾಯಿತು ಎಂಬುದು ಕಣ್ಣಮುಂದಿನ ಸತ್ಯವಾಗಿತ್ತು. ಬೌದ್ಧರು ಮಾಂಸಾಹಾರವನ್ನು ತ್ಯಜಿಸಿರಲಿಲ್ಲ ಎಂಬುದು ಮತ್ತೊಂದು ವಿಪರ್ಯಾಸವಾಗಿತ್ತು. ಅವರಿಗೆ ತಮ್ಮ ಸಂಘ ಮತ್ತು ಅದನ್ನು ಬಲಪಡಿಸುವ ಆಸೆ ಎಂಬುದು ಇದ್ದೇ ಇತ್ತು.

ಇಂಥ ಸ್ಥಿತಿಯಲ್ಲಿ ಭಾರತದ ಸನಾತನಮಾರ್ಗವು ತನ್ನನ್ನು ರಕ್ಷಿಸಿಕೊಳ್ಳಬೇಕಾದ ಕಂಟಕವನ್ನು ಪ್ರಾಯಶಃ ಮೊದಲಬಾರಿಗೆ ಎದುರಿಸಬೇಕಾಯಿತು. ಆ ಅಭಿಯಾನದ ನೇತೃತ್ವವನ್ನು ವಹಿಸಿದವರು ಕುಮಾರಿಲಭಟ್ಟರು ಮತ್ತು ಮಂಡನಮಿಶ್ರರು. ಬೌದ್ಧಮತಾವಲಂಬಿಗಳು ಒಡ್ಡಿದ ಒತ್ತಡಕ್ಕೆ ಪ್ರತಿ ಒತ್ತಡವನ್ನು ಒಡ್ಡದಿದ್ದರೂ ಆತ್ಮರಕ್ಷಣೆಗೆ ಬೇಕಾದ ಪ್ರತಿಶಕ್ತಿಯನ್ನು ಅವರು ಪ್ರಯೋಗಿಸಿದರು. ವಿಗ್ರಹಾರಾಧನೆ ಮತ್ತು ಚೈತ್ಯಾರಾಧನೆಗಳ ಸುತ್ತ ಹಬ್ಬಿಕೊಂಡಿದ್ದ ಬೌದ್ಧರ ಕರ್ಮಕಾಂಡಕ್ಕೆ ಪ್ರತಿಯಾಗಿ ವೈದಿಕರ ಕರ್ಮಸಿದ್ಧಾಂತವನ್ನು ಪ್ರತಿಪಾದಿಸುವುದು ಅವರಿಗೆ ಅನಿವಾರ್ಯವಾಗಿ ಕಂಡಿತ್ತು. ಅದೊಂದು ಆವೇಶವನ್ನು ಆವಾಹಿಸಿಕೊಂಡಿದ್ದ ಅವರು ಸಹಜವಾಗಿಯೇ ಯಜ್ಞಯಾಗಾದಿಗಳನ್ನು ಬಲವಾಗಿ ಸಮರ್ಥಿಸಿ ಅದನ್ನು ಪ್ರೋತ್ಸಾಹಿಸಿದರು. ಪಾಠಶಾಲೆಗಳನ್ನು ಕಟ್ಟಿದರು. ಕರ್ಮಠತೆಯನ್ನು ಬೆಳೆಸಿದರು, ದಿಗ್ವಿಜಯ ಪ್ರವಾಸಗಳನ್ನು ಮಾಡಿದರು, ಗ್ರಂಥಗಳನ್ನು ರಚಿಸಿದರು. ಆದರೆ ಅವೆಲ್ಲವೂ ಬೌದ್ಧಿಕವಾದುದಾಗಿತ್ತು. ಕುಮಾರಿಲಭಟ್ಟರಂಥ ಅತಿಮೇಧಾವಿಯಾದ ಎಂಬತ್ತು ವರ್ಷದ ವೃದ್ಧರು ತಮ್ಮ ಈ ಸಾಧನೆಗಳಿಂದ ತೃಪ್ತರಾಗದೆ ನಾಲಂದಕ್ಕೆ ಹೋದರು, ಅಲ್ಲಿನ ಅತಿಶ್ರೇಷ್ಠ ವಿದ್ವಾಂಸರಾದ ಧರ್ಮಪಾಲರಂಥವರಿಂದಲೇ ಬೌದ್ಧಧರ್ಮದ ಸೂಕ್ಷ್ಮಗಳನ್ನು ಕಲಿತರು. ಮತ್ತಷ್ಟು ಗ್ರಂಥರಚನೆ ಮತ್ತು ದಿಗ್ವಿಜಯಗಳ ಕನಸು ಕಂಡರು. ಇದು ಬೌದ್ಧಮತಾವಲಂಬಿಗಳು ಸೃಷ್ಟಿಸಿದ್ದ ಒತ್ತಡದ ತೀವ್ರತೆ ಎಂಥದು ಎಂಬುದನ್ನೇ ತಿಳಿಸುತ್ತದೆ.

ಕುಮಾರಿಲಭಟ್ಟರಂಥವರ ಬಂಧುವಾಗಿದ್ದು ಮಂಡನಮಿಶ್ರರಂಥವರ ಪಾಠಶಾಲೆಯಲ್ಲಿ ಕಲಿತೂ ಶ್ರದ್ಧೆಯಲ್ಲಿ ಶೈಥಿಲ್ಯವನ್ನು ಬೆಳೆಸಿಕೊಂಡಿದ್ದ ನಾಗಭಟ್ಟನೇ ಅದಕ್ಕೊಂದು ಉದಾಹರಣೆ. ತನ್ನದಲ್ಲದ ಕಸುಬೆಂದು ನಿರಾಕರಿಸದೆ ದೇಶಪರ್ಯಟನೆಯ ಆಸೆಗಾಗಿ ಸಾರ್ಥದೊಡನೆ ಹೋಗಲು ಒಪ್ಪಿದ್ದು, ತಾಂತ್ರಿಕರೊಡನೆ ಓಡಾಡಿ ಅಪಮಾರ್ಗಗಳನ್ನು ಮೈಗೂಡಿಸಿಕೊಂಡಿದ್ದು, ಕುಮಾರಿಲಭಟ್ಟರು ತುಷಾನಲ ಪ್ರವೇಶ ಮಾಡಿದಾಗ ಅದನ್ನು ನೋಡಲು ಹಿಂಜರಿದದ್ದು ಇವೆಲ್ಲವೂ ಆ ಶೈಥಿಲ್ಯದ ಭಾಗಗಳೇ ಆಗಿದ್ದವು. ನಾಟಕ ಪ್ರಪಂಚವಂತೂ ಆ ಶೈಥಿಲ್ಯದ ಇನ್ನೊಂದು ಮುಖವಾಗಿತ್ತು. ಭರತಖಂಡದ ಸಮಾಜವನ್ನು ಇಂಥ ಶೈಥಿಲ್ಯಗಳಿಗೆ ನೂಕುತ್ತಿದ್ದ ಪರಿಸ್ಥಿತಿಯ ವಿರುದ್ಧದ ಆವೇಶವೇ ಕುಮಾರಿಲಭಟ್ಟರ ಕ್ಷಾತ್ರದಲ್ಲಿ ಕಾಣುತ್ತಿದ್ದುದು. ಯೋಗ ಮತ್ತು ಧ್ಯಾನದ ಪರಿಶುದ್ಧ ಮಾರ್ಗವನ್ನು ತುಳಿಯುವ ಅವಕಾಶವಿದ್ದಾಗಲೂ, ನಾಗಭಟ್ಟನು ಅನ್ಯಮನಃಪ್ರವೇಶದಂಥ ಸಿದ್ಧಿಗಳನ್ನು ಕ್ಷುಲ್ಲಕ ಕಾರಣಗಳಿಗಾಗಿ ಬಳಸಬಾರದೆಂಬ ಕಟ್ಟಳೆಗೆ ಬದ್ಧನಾಗದೆ ಹೋದ. ಆ ಸಿದ್ಧಿಗಳನ್ನು ಮುಕ್ತವಾಗಿ ಬಳಸಬಹುದಾದ ತಂತ್ರಮಾರ್ಗಕ್ಕೆ ಶರಣಾದ. ತನ್ನ ಸಂಸ್ಕಾರಕ್ಕೆ ಒಗ್ಗದ ಮಾಂಸ ಮದ್ಯ ಮೈಥುನಗಳನ್ನೆಲ್ಲ ಹಠದಿಂದ ಒಗ್ಗಿಸಿಕೊಂಡ. ಅವನು ಆ ಪತನದಿಂದ ಉದ್ಧಾರವಾದುದು ಯೋಗಗುರುವಿನ ಪ್ರೇರಣೆಯಿಂದಲೇ ಎಂಬುದು ನಿಜ. ಈ ಸ್ಥಿತಿಯು ಸಾಮಾಜಿಕ ವಿಕೃತಿಗಳೂ ಶೈಥಿಲ್ಯಗಳೂ ಹರಿದಾಡುತಿದ್ದ ರೀತಿಗೂ ಅದನ್ನು ತಡೆಯಲು ಹೆಣಗುತ್ತಿದ್ದ ಶಕ್ತಿಗಳ ರೀತಿಗೂ ಒಂದು ನಿದರ್ಶನ.

ಚಂದ್ರಿಕೆಗಾಗಲಿ ನಾಗಭಟ್ಟನಿಗಾಗಲಿ ಯೋಗಿಗಳಾದ ಸಾಧುಗಳು ಅಯಾಚಿತವಾಗಿ ಧ್ಯಾನಮಾರ್ಗವನ್ನು ಉಪದೇಶಿಸಿದ್ದರು. ನಾನಾ ಪಂಥಗಳೂ, ನಾನಾ ಮಾರ್ಗಗಳೂ ತಾವೇ ತಾವಾಗಿ ಪ್ರವರ್ತಿಸುತ್ತಿದ್ದ ಭರತಖಂಡದ

ಮೇಲೆ ಅನ್ಯವಾದ ಮತ್ತೊಂದು ಶಕ್ತಿಯು ಪಶ್ಚಿಮ ಮತ್ತು ವಾಯವ್ಯದಲ್ಲಿ ದಾಳಿ ಇಡುತ್ತಿತ್ತು. ಜಯಸಿಂಹರು ಆಡಿಸುತ್ತಿದ್ದ ಕೃಷ್ಣಚರಿತ ಮೊದಲಾದ ನಾಟಕಗಳೂ ಗುರ್ಜರಪ್ರತೀಹಾರರ ಯಾಗಗಳೂ ಈ ಅಲ್ಲೋಲಕಲ್ಲೋಲಗಳ ನಡುವಿನ ಒಂದು ಅಲೆಯೇ ಆಗಿತ್ತು.

ಈ) ಹೊರದಾಳಿಯ ಹೊಸ ಅಪಾಯ

ಭರತಖಂಡದಲ್ಲಿದ್ದ ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರವು ಅತಿರೇಕಕ್ಕೆ ಹೋಗಿ ಮೇಲಾಟಗಳಲ್ಲಿ ಪರ್ಯವಸಾನವಾದುದು ಒಂದು ಅವಸ್ಥೆ. ಆದರೆ ಅದಕ್ಕೊಂದು ಮೂಲಭೂತ ಸ್ವರೂಪವಿತ್ತು; ಅದು ಉದಾತ್ತವಾದುದಾಗಿತ್ತು. ಭರತಖಂಡದಲ್ಲಿ ಆಗುತ್ತಿದ್ದ ಮತಪರಿವರ್ತನೆಗಳು ಜಿಜ್ಞಾಸೆ ಮತ್ತು ಆತ್ಮಸಮಾಧಾನದ ಮೇಲೆ ಆಗುತ್ತಿದ್ದವು. ಪಂಡಿತರೆದುರಿಗೆ ಕುಳಿತು ಜಿಜ್ಞಾಸುಗಳು ವಾಗ್ವಾದ ಮಾಡುತ್ತಿದ್ದರು. ಮುಕ್ತ ವಾತಾವರಣದಲ್ಲಿ ಅದು ದಿನಗಟ್ಟಲೆ ನಡೆಯುತ್ತಿತ್ತು. ಸಮ್ಮತವಾದರೆ ಮತ ಪರಿವರ್ತನೆ ನಡೆಯುತ್ತಿತ್ತು. ಆದರೆ ಹೊರಗಿನಿಂದ ದಾಳಿಮಾಡಿ ಬರುತ್ತಿದ್ದ ಮ್ಲೇಚ್ಛ ಮತವು ಕತ್ತಿಯ ಮೊನೆಯಲ್ಲಿ ಮತಾಂತರಗಳನ್ನು ನಡೆಸುತ್ತಿತ್ತು. ಭರತಖಂಡದಲ್ಲಿ ಇದ್ದ ಮತಗಳು, ಉಪಮತಗಳು, ಅವುಗಳ ಶಾಖೆಗಳ ಈ ವೈವಿಧ್ಯವು ಬಹು ದೊಡ್ಡ ಸಂಖ್ಯೆಯಲ್ಲಿತ್ತು. ಎಲ್ಲ ರಾಜರೂ ಎಲ್ಲ ಮತಗಳಿಗೂ ಮುಕ್ತವಾಗಿ ಅವಕಾಶ ಕೊಡುತ್ತಿದ್ದರು. ಮತವು ಅವರವರ ಇಚ್ಛೆಗೆ ಸಂಬಂಧಪಟ್ಟ ವಿಷಯವಾಗಿತ್ತು. ಪ್ರಪಂಚದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಬುದ್ಧಿ, ಅಷ್ಟು ಗ್ರಹಿಕೆ ಮತ್ತು ಅದನ್ನನುಸರಿಸಿ ಅಷ್ಟು ಮತಗಳಿವೆ ಎಂಬ ನಿಲುವು ಅವರದಾಗಿತ್ತು. ದೇವರನ್ನೇ ಒಪ್ಪದ ಮತಗಳೂ ಇದ್ದವು. ಧರ್ಮವೇ ಬೇರೆ ದೇವರೇ ಬೇರೆ ಎಂಬ ಬಹುವಿಶಿಷ್ಟ ಪಾತಳಿಯ ಸಂಸ್ಕೃತಿ ಅದು. ದೇವರಿಗಿಂತ ಅದನ್ನು ಒಪ್ಪುವ ಅಥವ ಬಿಡುವ ಸ್ವಾತಂತ್ರ್ಯವೇ ಮುಖ್ಯ ಎಂಬವರೆಗೆ ಅದು ಮುಟ್ಟಿತ್ತು. ತಾನೇ ದೇವರು ಅಂದರೆ ಪರಾತ್ಪರ ವಸ್ತು ಎಂಬ ಇನ್ನೊಂದು ಸಿದ್ಧಾಂತವೂ ಇತ್ತು. ಆದರೆ ಇಂಥ ವಾದ ಮಾಡಿದರೆ ಒಂದೊಂದು ಮಾತಿಗೆ ಒಂದೊಂದು ಶಿರಚ್ಛೇದನ ವಿಧಿಸುವ ಬರ್ಬರ ನಿಲುವಿನ ಜನರು ಭಾರತವನ್ನು ಕಬಳಿಸುತ್ತ ಬರುತ್ತಿದ್ದರು.

ಉ) ಸಮನ್ವಯದ ಹರಿಕಾರ

ಕ್ರಿ.ಶ. ಎಂಟನೆಯ ಶತಮಾನದ ಇಂಥ ಸಂದಿಗ್ಧ ಕಾಲದಲ್ಲಿ ಬಂದವರು ಶಂಕರಯತಿಗಳು. ಭರತಖಂಡದ ಸ್ವಾತಂತ್ರ್ಯ ಮತ್ತು ಸಂಯಮದ ವಿಶಿಷ್ಟ ವ್ಯವಸ್ಥೆಯನ್ನು ಅದಕ್ಕೆ ವಿರುದ್ಧವಾದ ನಿಲುವುಗಳ ದಾಳಿಯಿಂದ ಪಾರು ಮಾಡಲು ಬೇಕಾದ ಬೌದ್ಧಿಕ ಕ್ರಾಂತಿಯನ್ನೇ ಅವರು ಮಾಡಿದರು. ಅದಕ್ಕಾಗಿ ಅವರು ಅನುಸರಿಸಿದ್ದು ಸಮನ್ವಯದ ಮಾರ್ಗ. ಪ್ರಕ್ಷುಬ್ಧ ಸಮುದ್ರದಲ್ಲಿ ಚುಕ್ಕಾಣಿ ಹಿಡಿದು ದಡ ಮುಟ್ಟಿಸಿದ ನಿಪುಣನಾದ ನಾವಿಕನಂತಿದ್ದರು ಅವರು.

ಸನಾತನಧರ್ಮದ ಪ್ರತಿನಿಧಿಗಳೇ ಆದ ಕುಮಾರಿಲಭಟ್ಟರೂ ಮಂಡನಮಿಶ್ರರೂ ಬಲವಾಗಿ ಪ್ರತಿಪಾದಿಸುತ್ತಿದ್ದುದು ಕರ್ಮಮಾರ್ಗದ ಪಾರಮ್ಯವನ್ನು. ಆದರೆ ಶಂಕರರು ಅದನ್ನು ಗೌಣವಾಗಿ ಕಂಡರು. ಅವರು ಪ್ರತಿಪಾದಿಸಿದ ಜ್ಞಾನಮಾರ್ಗವು ಕರ್ಮಮಾರ್ಗವನ್ನು ಮಾತ್ರವಲ್ಲದೆ ಅದಕ್ಕೆ ಪರ್ಯಾಯವಾಗಿ ಬೆಳೆದಿದ್ದ ಸಿದ್ಧಾಂತಗಳನ್ನೂ ಪದ್ಧತಿಗಳನ್ನೂ ಪಂಥಗಳನ್ನೂ ಅರಿವಿನ ವೇದಿಕೆಗೆ ತರಲು ಸಮರ್ಥವಾಗಿತ್ತು. ಒಂದು ಕಡೆ ಮಂಡನಮಿಶ್ರರ ಜತೆಯ ವಾದದಲ್ಲಿ ಸತ್‌ಚಿತ್ ರೂಪವಾದ ಬ್ರಹ್ಮವೊಂದೇ ಸತ್ಯ ಎಂದು ವಾದಿಸಿದರೆ ಇನ್ನೊಂದು ಕಡೆ ತಮ್ಮ ಪ್ರವಚನದಲ್ಲಿ ಜನಸಾಧಾರಣರಿಗಾಗಿ ವಿಗ್ರಹಾರಾಧನೆಯನ್ನೂ ದೇವಸ್ಥಾನವನ್ನೂ ಪ್ರತಿಪಾದಿಸುತ್ತಿದ್ದರು. ಎಷ್ಟು ದೇವರನ್ನು ಯಾವ ರೂಪದಲ್ಲಿ ಪೂಜಿಸಿದರೂ ಸರಿಯೇ ಎಂದು ಪ್ರೋತ್ಸಾಹಿಸುತ್ತಿದ್ದರು. ಎಲ್ಲ ಪೂಜೆಯೂ ಒಬ್ಬ ದೇವನಿಗೇ ಸೇರುತ್ತದೆಂಬ ಅರಿವನ್ನು ಮೂಡಿಸುತ್ತಿದ್ದರು. ಮೋಕ್ಷಸಾಧನೆಗೆ ಸಂನ್ಯಾಸವು ಅತ್ಯಗತ್ಯ ಸಾಧನ ಎಂದು ಮಂಡನರೊಡನೆ ವಾದಿಸಿದರು, ಬೌದ್ಧರಂತೆ ಅದನ್ನು ಅತಿರೇಕಕ್ಕೆ ಒಯ್ಯಲಿಲ್ಲ. ಬೌದ್ಧರ ಮುಖ್ಯ ಆಕ್ಷೇಪಣೆಯಾದ ಯಜ್ಞಯಾಗಾದಿಗಳನ್ನು ಗೌಣವಾಗಿ ಕಂಡು ಬೌದ್ಧರಿಗೆ ಹತ್ತಿರದಲ್ಲಿದ್ದರು.

ಕುಮಾರಿಲಭಟ್ಟರೊಡನೆ ಭೇಟಿ ಮತ್ತು ಮಂಡನರೊಡನೆ ವಾಗ್ವಾದ ಎಂಬ ಕಿರುದೃಶ್ಯದಲ್ಲಿ ಕಾಣಿಸಿಕೊಂಡಿರುವ ಶಂಕರರು ಭರತಖಂಡದಲ್ಲಿ ಪ್ರಧಾನವಾಗಿ ಕಾಣಿಸಿಕೊಂಡಿದ್ದ ವೈದಿಕ–ಬೌದ್ಧರ ನಡುವಿನ ಸಂಘರ್ಷವನ್ನು ಸಮರಸವಾಗಿ ಪರಿವರ್ತಿಸಿದರು. ಇತರ ಅನೇಕ ಪಂಥಗಳ ಸಮನ್ವಯ ಮಾಡಿದರು. ಷಣ್ಮತಗಳನ್ನು ಕ್ರೋಡೀಕರಿಸಿದರು. ಶಂಕರರು ಮಿಂಚಿನಂತೆ ಬಂದು ಮಿಂಚಿ ಮಾಯವಾದರು. ಆ ಬೆಳಕು ಕತ್ತಲನ್ನೋಡಿಸುವ ಕೆಲಸ ಮಾಡಿತ್ತು. ಅದೊಂದು ಪ್ರಖರ ಬೆಳಕು. ಅದರ ಪ್ರಖರತೆಗೆ ಕತ್ತಲ ವೈವಿಧ್ಯಗಳೆಲ್ಲ ಕರಗಿ ಒಂದೇ ಬೆಳಕು ಉಂಟಾಯಿತು. ಅವರು ವೇದಿಕೆಗೆ ಬಂದು

ಕಾರ್ಯಸಾಧಿಸಿ ಅಲ್ಲಿಂದ ತೆರಳಿದ ವೇಗವು ವಿಶಾಲವಾದ ಭರತಖಂಡದಲ್ಲಿ ಆವರಿಸಿದ್ದ ಭೀಕರ ಪ್ರಕ್ಷುಬ್ಧತೆಯನ್ನು ತಮ್ಮ ಕಿರುವಯಸ್ಸಿನಲ್ಲಿ ಹೋಗಲಾಡಿಸಿದುದರ ಪ್ರತೀಕವಾಗಿತ್ತು.

ಶಂಕರಯತಿಯ ಚಿತ್ರಣವನ್ನು ಬಹುಕಿರಿದಾಗಿ ಮಾಡಿ ಅವರ ಸಾಧನೆಯು ಕಾದಂಬರಿಯ ವಿಸ್ತಾರವಾದ ಕ್ರಿಯಾವೇದಿಕೆಯಲ್ಲಿ ಮಕುಟಪ್ರಾಯವಾಗಿ ಮೆರೆಯುವಂತೆ ಮಾಡಿರುವುದು ಲೇಖಕರ ಪರಿಣತ ಸೃಷ್ಟಿಯಾಗಿದೆ; ಇದರ ಜತೆಜತೆಗೇ ಆ ಸನ್ನಿವೇಶವೇ ಕಾದಂಬರಿಯ ಆತ್ಮವೂ ಆಗಿ ಸಾರ್ಥಕವಾಗಿರುವುದು ಲೇಖಕರ ದರ್ಶನಶಕ್ತಿಗೂ ನಿದರ್ಶನವಾಗಿದೆ.

5. ದಾಂಪತ್ಯಗೀತೆ

ಎರಡನೆಯ ಹಂದರ

'ಸಾರ್ಥ' ಕಾದಂಬರಿಯ ಇನ್ನೊಂದು ಹಂದರವು ದಾಂಪತ್ಯದ ಹದದ್ದು. ಈ ದಾಂಪತ್ಯಹದದ ಶೋಧದ ಹಂದರವು ತಾತ್ತ್ವಿಕ ಶೋಧದ ಹಂದರಕ್ಕೆ ಪರ್ಯಾಯವಾದುದಲ್ಲ, ಪೂರಕವಾದುದು; ಅನ್ಯವಾದುದಲ್ಲ, ಅದರ ಭಾಗವಾಗಿರುವುದು. ಆದರೆ ನೈಪುಣ್ಯದ ದೃಷ್ಟಿಯಿಂದ ಸೃಜನಶೀಲತೆಯ ಎರಡನೆಯ ಪ್ರಧಾನ ಶಿಖರ. ತಾತ್ತ್ವಿಕಶೋಧದಲ್ಲಿ ರಂಜನೆಯ ಮೆರುಗಿದೆ, ದಾಂಪತ್ಯದ ಅನ್ವೇಷಣೆಯಲ್ಲಿ ತಾತ್ತ್ವಿಕತೆ ಇದೆ. ಈ ಎರಡೂ ಶಿಖರಗಳನ್ನು ತಳುಕು ಹಾಕಿರುವ ರೀತಿಯು ತಂತ್ರದ ದೃಷ್ಟಿಯಿಂದಲೂ ರಸಸೃಷ್ಟಿಯ ದೃಷ್ಟಿಯಿಂದಲೂ ಲೇಖನಪರಿಣತಿಯ ದೃಷ್ಟಿಯಿಂದಲೂ ಅದ್ಭುತವಾದುದು.

ನಾಗಭಟ್ಟನ ಪೂರ್ವವೃತ್ತಾಂತ, ಚಂದ್ರಿಕೆಯ ಪೂರ್ವವೃತ್ತಾಂತ ಮತ್ತು ಅವರಿಬ್ಬರ ಪ್ರವರ್ತನೆಗಳು ಹೀಗೆ ಮೂರು ಮಜಲುಗಳ ಚಿತ್ರಣ ಈ ಭಾಗದಲ್ಲಿದೆ. ಈ ಮೂರು ಮಜಲುಗಳೂ ಒಂದೊಂದು ಪ್ರಸ್ಥಾನಗಳಂತೆ ಬೆಳೆದಿವೆ.

ಸಾರ್ಥದ ತಳುಕು

ಈ ಚಿತ್ರಣವು ಸಾರ್ಥದ ಜೊತೆಗೇ ಹೊಂದಿಕೊಂಡಂಥದು. ನಾಗಭಟ್ಟನು ಸಾರ್ಥವೊಂದರ ಜತೆಯಲ್ಲಿ ತಾರಾವತಿಯನ್ನು ಬಿಟ್ಟಾಗ, ಆಗುವ ರಾಜನಾದ ಅಮರುಕ ಮತ್ತು ನಾಗಭಟ್ಟನ ಪತ್ನಿ ಶಾಲಿನಿಯ ನಡುವಣ ಅನುರಕ್ತಿಯ ಚಿತ್ರಣದೊಂದಿಗೇ ಕಾದಂಬರಿಯು ಪ್ರಾರಂಭವಾಗುತ್ತದೆ. ಭರತಖಂಡದ ಸಾರ್ಥವನ್ನು ರಕ್ಷಿಸುವ ಯೋಜನೆಯ ಅಂಗವಾಗಿಯೇ ನಾಗಭಟ್ಟನೂ ಚಂದ್ರಿಕೆಯೂ ಮೂಲಸ್ಥಾನಕ್ಕೆ ಹೋದುದು. ಅಲ್ಲಿ ಸಂಕಷ್ಟಗಳ ಬೆಂಕಿಯಲ್ಲಿ ಬೆಂದು ಅದರ ಪರಿಣಾಮವಾಗಿಯೇ ವಿಚಿತ್ರ ರೀತಿಯಲ್ಲಿ ಅವರಿಬ್ಬರೂ ದಂಪತಿಯಾಗುವುದರೊಂದಿಗೆ ಕಾದಂಬರಿಯು ಮುಗಿಯುತ್ತದೆ.

ವಿಕಾರದ ತುದಿಗಳು

ನಾಗಭಟ್ಟನು ಅಗ್ನಿಸಾಕ್ಷಿಯಾಗಿ ಕೈಹಿಡಿದ ಶಾಲಿನಿಯು ಅನುಕೂಲ ಸಂದರ್ಭವೊದಗಿದಾಗ ಮನಃಪೂರ್ವಕವಾಗಿ ರಾಜನ ತೆಕ್ಕೆಗೆ ಸೇರಿ ಸಂಭ್ರಮಿಸುತ್ತಾಳೆ. ಆನಂತರ ಒಮ್ಮೆಯೂ ಪತಿ ನಾಗಭಟ್ಟನನ್ನು ನೆನೆಯುವುದಿಲ್ಲ. ಅಮರುಕನ ಅರಸಿಯರಲ್ಲಿ ಒಬ್ಬಳಾಗಿಬಿಡುತ್ತಾಳೆ. ಈ ಹೇಯವರ್ತನೆಯನ್ನು ಕ್ಷಮಿಸುವುದು ನಾಗಭಟ್ಟನಿಂದ ಸಾಧ್ಯವಾಗುವುದಿಲ್ಲ. ಜತೆಗೆ ಆಳುವ ಅರಸನ ಭೀತಿಯೂ ಇರುತ್ತದೆ. ಹಾಗಾಗಿ ದೂರದ ಮಥುರೆಯಲ್ಲೇ ಉಳಿಯುತ್ತಾನೆ. ಆದರೆ ಅವಳ ನೆನಪನ್ನೂ ದ್ರೋಹದ ಬೇಗೆಯನ್ನೂ ಸುಲಭವಾಗಿ ಮರೆಯುವುದು ಅವನಿಂದಾಗದು. ಅದು ಉಂಟುಮಾಡುವ ಪರಿತಾಪಗಳ ಸರಣಿಯೂ ದೊಡ್ಡದು. ಇದಕ್ಕೆ ಪ್ರತಿಯಾಗಿ ನಾಗಭಟ್ಟನು ಮತ್ತೆ ದಾಂಪತ್ಯಕ್ಕೆ ಕಾಲಿಡುವುದು ಒಬ್ಬ ವಿಧವೆಯೊಂದಿಗೆ. ಅವಳಾದರೂ ತಾನೇ ಪ್ರೀತಿಸಿ ಕೈಹಿಡಿದ ಗುರುವಿಗೆ ದ್ರೋಹಮಾಡಿದವಳು, ತನ್ನ ಶಿಷ್ಯನ ಸಂಗದಲ್ಲೇ ಮೈಮರೆತವಳು, ಆ ಮೂಲಕ ಪತಿಯ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾರಣಳಾದವಳು, ಕಾರಾಗೃಹಶಿಕ್ಷೆಯನ್ನು ಅನುಭವಿಸಿದವಳು. ಅವಳು ಕೇವಲ ಗಾಯಕಿಯಲ್ಲ, ನಾಗಭಟ್ಟನು ಒಮ್ಮೆ ಅವಳನ್ನು ಗಣಿಕೆ ಎಂದೂ ಊಹಿಸಿದ್ದ. ಈಗಲಾದರೋ ಮೂಲಸ್ಥಾನದಲ್ಲಿ ನವಾಬನಿಂದ ಅತ್ಯಾಚಾರಕ್ಕೊಳಗಾಗಿ ಗರ್ಭಧರಿಸಿದ್ದಳು. ನಾಗಭಟ್ಟನಾದರೋ ಆ ಮಗುವನ್ನು ತನ್ನದೇ ಸಂತಾನವೆಂದು ಭಾವಿಸಿ ಪ್ರೀತಿಸುವ ಸಂಕಲ್ಪದೊಂದಿಗೆ ಅವಳ ಕೈ ಹಿಡಿಯಲು ಅಣಿಯಾಗಿದ್ದ.

ಕಾಮದ ದಾಳಗಳು

ಪಾತಿವ್ರತ್ಯದಿಂದ ದೂರ ಸರಿದ ಶಾಲಿನಿಯೇನೂ ಸಂತೋಷವಾಗಿರಲಿಲ್ಲ. ಒಂದು ಮಗು ಹುಟ್ಟಿ ದೇಹದ ಸೌಷ್ಠವವು ಶಿಥಿಲವಾಗುತ್ತಲೇ ರಾಜನು ಅವಳಿಂದ ದೂರವಾಗಿ ಇರತೊಡಗಿದ; ಹೊಸ ಯುವತಿಗಾಗಿ ಹುಡುಕಿದ. ರಾಜನ ತೆಕ್ಕೆಗೆ ಬಿದ್ದ ಹೊಸತರಲ್ಲಿ ಶಾಲಿನಿಯು ಪಟ್ಟದರಸಿಯನ್ನೇ ಧಿಕ್ಕರಿಸಿ ನಡೆದಿದ್ದಳು. ರೂಪು ಮತ್ತು ಲಂಪಟತೆಯನ್ನೇ ಆಧರಿಸಿದ ಪ್ರೇಮವು ನಿಜವಾದ ಪ್ರೇಮವಲ್ಲ ಮತ್ತು ಕ್ಷಣಿಕವಾದುದು ಎಂಬುದಕ್ಕೆ ನಾಲ್ಕು ರಾಣಿಯರು ಸಾಕ್ಷಿಯಾಗಿ ಹೋಗಿದ್ದರು. ನಾಗಭಟ್ಟನು ಹತ್ತುವರ್ಷದ ಮೇಲೆ ಕಾರ್ಯನಿಮಿತ್ತವಾಗಿ ತಾರಾವತಿಗೆ ಮತ್ತೆ ಹೋಗುವ ಹೊತ್ತಿಗೆ ಅಮರುಕನಿಗೆ ಇದ್ದುದು ಐದನೆಯ ರಾಣಿ.

ಪಾಪಪ್ರಜ್ಞೆಯ ಸಂಕೀರ್ಣತೆ

ಚಂದ್ರಿಕೆಯೂ ಶಾಲಿನಿಯಂತೆಯೇ ಸುಂದರಿ. ಅವಳ ನಡೆಯು ಶಾಲಿನಿಯ ನಡೆಗಿಂತ ಬಹು ಸಂಕೀರ್ಣವಾದುದು. ಪತಿಯು ದೂರವಾದುದರಿಂದ ಉಂಟಾದ ವಿರಹದಿಂದಲೋ, ರಾಜನ ಅಧಿಕಾರಮದದಿಂದಲೋ ರಾಜನ ವಶವಾದವಳಲ್ಲ ಶಾಲಿನಿ; ತಾನಾಗಿಯೇ ಒಲಿದು ಹೋದವಳು. ಅವಳು ತನ್ನ ಹೀನನಡೆಯಿಂದ, ತನ್ನ ಅತ್ತೆಯು ರೋಸಿ ಕೊರಗಿ ಸಾಯುವಂತೆ ಮಾಡಿದವಳೇ. ಆದರೆ ಅವಿವಾಹಿತೆಯಾಗಿದ್ದ ಚಂದ್ರಿಕೆಯು ತಂದೆ ತಾಯಿಗಳನ್ನು ಧಿಕ್ಕರಿಸಿ ಹೊರನಡೆದವಳು. ಸಂಗೀತ ಶಿಕ್ಷಕನ ಗಾಯನಕ್ಕೆ ಮನಸೋತು ಜೀವನವಿಡೀ ಅವನೊಡನೆ ಹಾಡುತ್ತ ಆನಂದದಿಂದ ಕಾಲ ಕಳೆಯುವ ಕನಸು ಕಂಡವಳು. ಒಬ್ಬ ಹುಟ್ಟುಕುರುಡನಿಗೆ ಜೀವನದ ಆಸರೆಯಾಗುವ ಆದರ್ಶದ ಕನಸು ಹೆಣೆದವಳು. ಹದಿನೇಳರ ಭಾವುಕ ಮನಸ್ಸು; ತನ್ನಂಥ ಅಂಧನನ್ನು ಕೈಹಿಡಿಯುವ ಹೆಣ್ಣೂ ಉಂಟೆ ಎಂದು ಆತನು ಮರುಗಿದಾಗ ಆಳವಾಗಿ ಮಿಡಿದವಳು. ಆತನ ಅಂಧತ್ವದಲ್ಲೇ ಸೊಗಸು ಕಂಡವಳು. ಅವರ ವಿವಾಹಕ್ಕೆ ಧರ್ಮದ ಚೌಕಟ್ಟು ಒದಗಲಿಲ್ಲ; ಅವಳ ಪತಿಯು ಅಂಧನೆಂಬ ವಾಸ್ತವತೆಯ ದುರುಪಯೋಗ ಪಡೆಯಲೆಳಸಿದ ರಸಿಕರ ಕಾಟದಿಂದ ಕ್ಷೇಮವಾಗಿ ಉಳಿಯಲು ಹೆಣಗಬೇಕಾಯಿತು. ಆದರೂ ಶ್ರೀಮುಖನ ವಯಸ್ಸು, ನಿಕಟತೆ, ನೇತ್ರಾಭಿವ್ಯಕ್ತಿ ಮತ್ತು ಸ್ತುತಿಯನ್ನು ಅನುಭವಿಸಿದ ಮೇಲೆ ಯದುಭದ್ರನ ಯಾವ ಅಂಧತ್ವವೇ ಆಕರ್ಷಕವಾಗಿ ಕಂಡಿತ್ತೋ ಅದೇ ಬಾಳಿನ ಮಹಾಕೊರತೆಯಾಗಿ ಕಾಣತೊಡಗಿತು. ಯದುಭದ್ರನು ಆತ್ಮಹತ್ಯೆಮಾಡಿಕೊಂಡ, ಶ್ರೀಮುಖನು ಪಲಾಯನ ಮಾಡಿದ; ಆದರೂ ಚಂದ್ರಿಕೆ ತವರೂರು ಬ್ರಹ್ಮಪುರಕ್ಕೆ ಹೋಗುವ ಧೈರ್ಯಮಾಡಲಿಲ್ಲ; ಅನನುಭವದ ವಯಸ್ಸಿನಲ್ಲಿ ಭಾವಾವೇಶದಲ್ಲಿ ಮಾಡಿದ ದುಡುಕು ಅವಳ ನೈತಿಕಶಕ್ತಿಯನ್ನು ಉಡುಗಿಸಿತ್ತು. ಮಥುರೆಗೆ ಹೋದಳು; ಜಯಸಿಂಹನ ಇಂಗಿತಗಳನ್ನು ಅರ್ಥಮಾಡಿಕೊಂಡಳು. 'ನನ್ನ ಜೀವನದಲ್ಲಿ ಆ ಅಂಶವು ಸತ್ತುಹೋಗಿದೆ' ಎಂದು ಹೇಳಿ ತಪ್ಪಿಸಿಕೊಂಡಳು. ಅವಳಿಗೆ ಪ್ರೀತಿಗೆ ಒಂದು ಆಧಾರಬೇಕಿತ್ತು. ನಾಟಕಗಳಲ್ಲಿ ತಾನು ರುಕ್ಮಿಣಿಯಾಗಿ ಮತ್ತು ನಾಗಭಟ್ಟನು ಕೃಷ್ಣನಾಗಿ ಪಾತ್ರವಹಿಸುತ್ತಿದ್ದ ಕಾರಣದಿಂದಾಗಿ ಅವನನ್ನು ಕೃಷ್ಣನೆಂದೇ ಭಾವಿಸಿ ಪ್ರೀತಿಸಿದಳು; ದೇಹ ಸಂಪರ್ಕದಿಂದ ಮಾತ್ರ ಕಟುನಿರ್ಧಾರದಿಂದಲೇ ದೂರ ಇದ್ದಳು. ಶರೀರದ ಕಾಮನೆಯು ಏರು ಅವಸ್ಥೆಯಲ್ಲಿದ್ದ ವಯಸ್ಸಿನವಳಾಗಿದ್ದಳು ಚಂದ್ರಿಕೆ. ಜೈಲುಶಿಕ್ಷೆಯಾದ ಕಾರಣದಿಂದ ಯದುಭದ್ರನ ಋಣವು ಹರಿದಂತಾಯಿತು ಎಂದೇ ರೋಷದಿಂದ ಅಂದುಕೊಂಡಿದ್ದಳು. ಆದರೆ ಆ ಪಾಪಪ್ರಜ್ಞೆಯು ಹರಿದಿರಲಿಲ್ಲ; ಅವಳ ದೇಹಕಾಮನೆಯನ್ನು ಇಂಗಿಸಿದ ಅಂಶ ಇದು. ಅವಳ ಈ ಸಂಕಟದಿಂದ ದೂರಸರಿಸಿದ್ದು ಯೋಗಗುರುವಿನ ಮಾರ್ಗದರ್ಶನ ಮತ್ತು ಅವರು ಹೇಳಿಕೊಟ್ಟ ಧ್ಯಾನಮಾರ್ಗ. ಅದಕ್ಕಾಗಿ ಕಠಿಣ ಬ್ರಹ್ಮಚರ್ಯವನ್ನೇ ಅವಳು ಪಾಲಿಸುತ್ತಿದ್ದಳು. ನವಾಬನ ವಂಶವು ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿದ್ದುದು ಅರಿವಿಗೆ ಬಂದಾಗ ಬಹು ಜುಗುಪ್ಸೆಯಿಂದ ಅವಳು ತೀರ್ಮಾನಿಸಿದ್ದು ಆ ಪಿಂಡವನ್ನು ನಿವೃತ್ತಿಗೊಳಿಸಿ ಸಂನ್ಯಾಸಿನಿಯೋ ಭಿಕ್ಕುಣಿಯೋ ಆಗುವುದೆಂದು. ಏರುಜವ್ವನದ ಹೆಣ್ಣಿನ ಅಸಹಜ ನಿರ್ಣಯ ಅದಾಗಿತ್ತು; ಪಾಪಪ್ರಜ್ಞೆಗಳ ಮೊತ್ತ ಅವಳನ್ನು ಕಾಡಿತ್ತು.

ಪುರುಷಪ್ರಾಧಾನ್ಯ

ನಾಗಭಟ್ಟನಾದರೋ ತಾರಾವತಿಯಿಂದ ಮಥುರೆಗೆ ಬಂದು ಬಹುದಿನಗಳ ವಿರಹತಾಪವನ್ನು ಪರಿಹರಿಸಿಕೊಳ್ಳಲು ಚಂದ್ರಿಕೆಯ ಸಂಗವನ್ನು ಬಯಸಿದ್ದವನು. ಶಾಲಿನಿಯು ರಾಜನಲ್ಲಿ ಅನುರಕ್ತಳಾದ ವಿಷಯವು ತಿಳಿಯುವ ಮೊದಲೇ ಅವನ ಮನಸ್ಸು ಹೀಗೆ ಕೆಲಸಮಾಡಿತ್ತು. ಅದು ಶಾಲಿನಿಯು ಮಾಡಿದ ತಪ್ಪಿಗಿಂತ ಭಿನ್ನವಾದುದಾಗಿರಲಿಲ್ಲ. ತನ್ನೊಡನೆ

ದೇಹಸಂಗಕ್ಕೆ ಒಪ್ಪದ ಚಂದ್ರಿಕೆಯನ್ನು ನಾಟಕಮಂಡಲಿಯಿಂದಲೇ ಹೊರಗೆ ಕಳಿಸುವ ಕ್ರೂರ ಯೋಚನೆಯೂ ಅವನಿಗೆ ಬಂತು. ಅವಳ ಜಾಗಕ್ಕೆ ನಟಿಯಾಗಿ ಬಂದ ಸುಗಂಧಿಯ ಜತೆಯಲ್ಲಿ ಮುಕ್ತವಾಗಿ ವಿಹರಿಸಿ ಕಾಮತೃಪ್ತಿ ಪಡೆದ.

ಸಂಬಂಧದ ಘರ್ಷಣೆ

ಇನ್ನೂ ಹೆಚ್ಚಿನ ಸಂಕೀರ್ಣತೆಯನ್ನು ಪಡೆಯುವುದು ಮತ್ತು ಆ ಮೂಲಕ ಕಾದಂಬರಿಯನ್ನು ಪುಟಿಯುವ ಜೀವಂತಿಕೆಯಿಂದಿಡುವುದು ನಾಗಭಟ್ಟ ಮತ್ತು ಚಂದ್ರಿಕೆಯ ಸಂಬಂಧದ ವಿಚಿತ್ರ ರೀತಿ. ಚಂದ್ರಿಕೆಯು ಕಠಿಣವಾದ ಬ್ರಹ್ಮಚರ್ಯವನ್ನು ಪಾಲಿಸುತ್ತಿದ್ದಳು. ಹೆಚ್ಚಿನ ಸಮಯವನ್ನು ಧ್ಯಾನದಲ್ಲಿ ಕಳೆಯುತ್ತಿದ್ದಳು, ಮರದ ಹಲಗೆಯ ಮೇಲೇ ಮಲಗುತ್ತಿದ್ದಳು. ಅನ್ಯರೊಡನೆ ನಿರ್ಲಿಪ್ತವಾಗಿಯೇ ವರ್ತಿಸುತ್ತಿದ್ದರೂ ನಾಗಭಟ್ಟ ತನ್ನ ಮನೆಗೆ ಬಂದಾಗ ತುಲಸಿಹಾರ ಹಾಕಿ ಸ್ವಾಗತಿಸುತ್ತಿದ್ದಳು. ಅವನನ್ನು ಏಕವಚನದಲ್ಲಿ ಸಂಬೋಧಿಸುತ್ತಿದ್ದಳು, ಸರಸದ ಮಾತುಗಳನ್ನಾಡಿ ರಮಿಸುತ್ತಿದ್ದಳು. ಕೆಲವೊಮ್ಮೆ ಪಕ್ಕದಲ್ಲೇ ಮಲಗಿ ಮೈನೇವರಿಸುತ್ತಿದ್ದಳು; ದೇಹಸಂಪರ್ಕದಿಂದ ಮಾತ್ರ ದೂರವಿರುತ್ತಿದ್ದಳು. ತಾನು ರುಕ್ಮಿಣಿ ಅವನು ಕೃಷ್ಣ ಎಂದೇ ಭಾವಿಸಿ ಹಾಗೆ ಮಾಡುತ್ತಿದ್ದರೆ ದೇಹಸಂಪರ್ಕದಿಂದ ದೂರವಿರಬೇಕಾಗಿರಲಿಲ್ಲ. ಅವಳ ಈ ನಡೆಯು ನಾಗಭಟ್ಟನನ್ನು ಪ್ರಚೋದಿಸಿ ನಡುವೆ ಕೈಬಿಡುತ್ತಿತ್ತು. ಇದರಿಂದ ಬೇಸತ್ತು ನಾಗಭಟ್ಟನು ಅವಳಿಂದ ಅನೇಕಬಾರಿ ದೂರಸರಿದ, ಮತ್ತೆ ಬಂದ. ಬೇರೆಯವರಿಂದಲಾದರೂ ಅವನು ದೇಹಸುಖವನ್ನು ಪಡೆಯಲಿ, ತಾನು ಹತ್ತಿರವಿದ್ದರೆ ಅವನು ಹಾಗೆ ಮಾಡಲಾರ ಎಂದು ಭಾವಿಸಿ ಚಂದ್ರಿಕೆಯೇ ದೂರ ಇದ್ದ ಪ್ರಸಂಗವೂ ಇತ್ತು.

ಕಾಮವನ್ನು ಮೀರಿದ ನೆಲೆಯಲ್ಲೂ ಅತೃಪ್ತಿಯ ಉರಿ

ಈ ವಿಚಿತ್ರವೂ ಇಷ್ಟು ಸರಳವಾಗಿರಲಿಲ್ಲ. ಸುಗಂಧಿಯಿಂದ ದೇಹಸುಖವನ್ನು ತೃಪ್ತಿಯಾಗಿ ಅನುಭವಿಸುವಾಗಲೂ ನಾಗಭಟ್ಟನಿಗೆ ಕೊರತೆಯೊಂದು ಕಾಣುತ್ತಿತ್ತು. ಆ ದೇಹಸುಖವನ್ನು ಮೀರಿದ ಚಂದ್ರಿಕೆಯ ಸ್ನೇಹಕ್ಕಾಗಿ ಮನಸ್ಸು ಹಾತೊರೆಯುತ್ತಿತ್ತು. ಇನ್ನೊಂದು ಕಡೆ ಶಾಲಿನಿಯನ್ನು ನೆನೆದು ತಾನು ಸಂಸಾರದ ಜವಾಬ್ದಾರಿಗಳನ್ನು ನಿರ್ವಹಿಸದೆ ದೂರ ಇರುವ ಪಾಪಪ್ರಜ್ಞೆ ಕಾಡುತ್ತಿತ್ತು. ಚಂದ್ರಿಕೆಗೆ ಮುನಿದು ದೂರವಿರುವಾಗ ಆವರಿಸಿದ್ದ ಶೂನ್ಯವು ಅವನನ್ನು ತೀವ್ರವಾಗಿಯೇ ಕಾಡಿತ್ತು. ಅಂಥ ಹೊತ್ತಿನಲ್ಲಿ ಅನ್ಯಮನಃಪ್ರವೇಶದ ಸಿದ್ಧಿಯನ್ನು ಬಳಸಿ ಚಂದ್ರಿಕೆಯ ಅಂತರಂಗವನ್ನು ಹುಡುಕಿದ್ದ. ಅವಳು ತನ್ನ ಅಂತರಂಗದ ಒಳಪದರದಲ್ಲಿ ಅವನ ನೆನಪನ್ನು ಜೋಪಾನಮಾಡಿಕೊಂಡಿದ್ದಳು. ಅದು ತಿಳಿದ ಮೇಲೆ ತನ್ನ ಜೀವನಕ್ಕೂ ಒಂದು ಅರ್ಥವಿದೆ ಎನಿಸಿತ್ತು ಅವನಿಗೆ. ಶಾಲಿನಿಯೇ ತನ್ನನ್ನು ಆಕ್ರಮಿಸಿಕೊಂಡಳೆಂದು ಹೇಳಿ ನಾಗಭಟ್ಟನನ್ನು ಒಲಿಸಿಕೊಳ್ಳುವ ಸಂಚನ್ನು ಅಮರುಕನು ಮಾಡಿದ್ದ; ಅದು ತಿಳಿದುದೂ ಅನ್ಯಮನಃಪ್ರವೇಶದಿಂದಲೇ. ಚಂದ್ರಿಕೆಗೆ ಮತ್ತೆ ಮುನಿದು ತಾಂತ್ರಿಕನೊಂದಿಗೆ ಬಹುಕಾಲ ಅಲೆದ ಮೇಲೂ ಯೋನಿಪೂಜೆಗೆ ಎಲ್ಲರನ್ನೂ ಬಿಟ್ಟು ಚಂದ್ರಿಕೆಯನ್ನೇ ಆರಿಸಿಕೊಂಡ. ಅವಳಾದರೂ ಗುರುವಿನ ಆದೇಶದಂತೆ ಆ ಅಧಃಪತನದ ಮಾರ್ಗದಿಂದ ಅವನನ್ನು ಮೇಲೆತ್ತಿದ್ದಳು. ತಾರಾವತಿಯ ಪಟ್ಟದರಸಿ ತೇಜೇಶ್ವರಿಯು ತೆರೆದ ಬಾಹುಗಳಿಂದ ಆಲಿಂಗಿಸಲು ನಿಂತಿದ್ದಾಗ ನಾಗಭಟ್ಟನಿಗೆ ಬಂದುದು ಚಂದ್ರಿಕೆಯ ನೆನಪು. ಪಟ್ಟದರಸಿಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆಯನ್ನು ಕೊಟ್ಟಿದ್ದು ಚಂದ್ರಿಕೆಯ ಅಪೂರ್ವ ಸ್ನೇಹ. ಮೂಲಸ್ಥಾನದಲ್ಲಿಯಂತೂ ನಾಗಭಟ್ಟನು ಚಂದ್ರಿಕೆಯ ಕ್ಷೇಮಕ್ಕಾಗಿ ಮತಾಂತರಕ್ಕೂ ಅಣಿಯಾಗುತ್ತಿದ್ದ, ಅತ್ತ ನಾಗಭಟ್ಟನ ಶಿರಚ್ಛೇದನವನ್ನು ತಪ್ಪಿಸಲು ಚಂದ್ರಿಕೆಯು ತನಗೆ ಪ್ರಿಯವಾದ ಬ್ರಹ್ಮಚರ್ಯವನ್ನು ತ್ಯಾಗಮಾಡಿ ನವಾಬನ ಬಾಹುಗಳಿಗೆ ಒಪ್ಪಿಸಿಕೊಂಡಿದ್ದಳು. ಅವಳ ಹೊಟ್ಟೆಯಲ್ಲಿ ಸೇರಿದ್ದ ನವಾಬನ ಪಿಂಡವನ್ನು ತನ್ನದೆಂದೇ ಭಾವಿಸಿ ಬೆಳೆಸುವ ಔದಾರ್ಯವು ನಾಗಭಟ್ಟನಲ್ಲೂ ಮೂಡಿತ್ತು; ಹಾಗೆ ಮಾಡಿಯೂ ಚಂದ್ರಿಕೆಯ ಜತೆಯ ದಾಂಪತ್ಯವು ಬ್ರಹ್ಮಚರ್ಯದ ಗೆರೆಯನ್ನು ಮೀರುವುದಿಲ್ಲವೆಂಬುದನ್ನು ಒಪ್ಪಿಕೊಂಡಿದ್ದ.

ಸಂಯಮದ ಅಂಕೆ

ವಿಶೇಷವಾಗಿ ಅಮರುಕ, ಶಾಲಿನಿ, ನಾಗಭಟ್ಟ, ಚಂದ್ರಿಕೆ, ಯದುಭದ್ರ, ಶ್ರೀಮುಖ ಇವರುಗಳ ಸುತ್ತ ಹರಿದ ಶೃಂಗಾರಪ್ರವಾಹವು ಓದುಗನನ್ನು ತನ್ನಲ್ಲಿ ಮುಳುಗಿಸಿಕೊಳ್ಳುವಷ್ಟು ಆಳವಾದುದು, ಕೊಚ್ಚಿಕೊಂಡು ಹೋಗುವಷ್ಟು ರಭಸದ್ದು. ಆದರೆ ಅಂಥ ರಭಸದ ತುಂಬು ಪ್ರವಾಹವು ಸಂಯಮದ ಅಣೆಕಟ್ಟುಗಳಿಂದ ನಿಯಂತ್ರಿತವಾಗಿರುವುದು ವಿಶೇಷ. ಆ ಸಂಯಮ ಕೂಡ ಓದುಗನ ಕುತೂಹಲಕ್ಕೂ ನಿರೀಕ್ಷೆಗೂ ಕಾವುಕೊಟ್ಟು ಎಚ್ಚರವಾಗಿಸುವಂಥದು. ಕಾದಂಬರಿಯ ಹಸಿರುದಿಬ್ಬ ಇದು.

ಆದರೆ ಈ ಪಾತ್ರಗಳ ಸುತ್ತ ಕಟ್ಟಿರುವುದು ದಾಂಪತ್ಯದ ವಿಕಾರಗಳ ರುದ್ರದರ್ಶನ; ಕ್ರಿ.ಶ. ಎಂಟನೆಯ ಶತಮಾನದಲ್ಲಿದ್ದ ಪ್ರಕ್ಷುಬ್ಧತೆಯು ಕೌಟುಂಬಿಕ ಜೀವನವನ್ನು ದಿಕ್ಕುಗೆಡಿಸಿದ್ದಕ್ಕೆ ಸಾಕ್ಷಿ.

ಆದರ್ಶಗಳೂ ಪಕ್ಕದಲ್ಲಿಯೇ ಇದ್ದವು. ಅಂಥ ತಾರ್ಕಿಕ ಮುಕ್ತಾಯವೇ ಈ ಕೃತಿಯ ಫಲ.

ರಾಜಪ್ರತಿನಿಧಿಯೇ ಆದ ಜಯಸಿಂಹನಿಗೆ ಶೃಂಗಾರ ಸಾಧ್ಯತೆಗಳು ದೊಡ್ಡದಾಗಿಯೇ ಇದ್ದರೂ ಆ ಅವಕಾಶಗಳನ್ನು ಬಹುಮಿತವಾಗಿ ಬಳಸಿಕೊಳ್ಳುವ ಸಂಯಮವನ್ನು ಮೆರೆದಿದ್ದ. ಚಂದ್ರಿಕೆಯಂಥ ಏಕಾಕಿನಿಯಾದ ಸುಂದರಿಗೆ ಆಶ್ರಯವನ್ನೊದಗಿಸಿದ್ದರೂ ದುರುಪಯೋಗಪಡಿಸಿಕೊಳ್ಳುವ ಯತ್ನ ಮಾಡದಷ್ಟು ಸಭ್ಯ. ಪತ್ನಿ ಸತ್ತಾಗ ಸಂನ್ಯಾಸಿಯೋ ಭಿಕ್ಕುವೋ ಆಗುವ ಕಡೆಗೆ ಅವನ ಮನಸ್ಸು ಒಲಿದಿತ್ತು; ಮರುವಿವಾಹಕ್ಕಾಗಲಿ ಸ್ವಚ್ಛಂದ ಕಾಮಕ್ಕಾಗಲಿ ಅಲ್ಲ.

ದಾಂಪತ್ಯವ್ರತ

ಕುಮಾರಿಲಭಟ್ಟರು ವಿವಾಹವಾದದ್ದು ಇಪ್ಪತ್ನಾಲ್ಕರ ವಯಸ್ಸಿನಲ್ಲಿ. ಮೊದಲ ಹೆರಿಗೆಯಲ್ಲೇ ಅವರ ಹೆಂಡತಿಯೂ ಮಗುವೂ ಸತ್ತುಹೋಗಿದ್ದರು. ಕುಮಾರಿಲರು ಗೃಹಕೃತ್ಯವನ್ನು ಸಂಪೂರ್ಣವಾಗಿ ತೊರೆದು ಬಹುದೊಡ್ಡ ಧಾರ್ಮಿಕ ಅಭಿಯಾನದಲ್ಲಿ ತೊಡಗಿಸಿಕೊಂಡುಬಿಟ್ಟಿದ್ದರು; ಅದಕ್ಕೊಂದು ರಾಷ್ಟ್ರೀಯ ಪ್ರಾಮುಖ್ಯವನ್ನು ತಂದುಕೊಟ್ಟಿದ್ದರು.

ಕುಮಾರಿಲಭಟ್ಟರು ತಮ್ಮ ಶಿಷ್ಯನಾದ ಮಂಡನಮಿಶ್ರರು ಭಾರತೀದೇವಿಯನ್ನು ವರಿಸುವಂತೆ ಕೇಳಿದರು. ಅದೇ ಅವರು ಕೇಳಿದ ಗುರುದಕ್ಷಿಣೆ. ವಿವಾಹವಾದ ಮೇಲೆ ದೀರ್ಘಕಾಲದ ದಾಂಪತ್ಯದಲ್ಲಿ ಮಂಡನರು ಮಕ್ಕಳನ್ನೂ ಮೊಮ್ಮಕ್ಕಳನ್ನೂ ಪಡೆದರು. ಪಾಠಶಾಲೆಯನ್ನು ಕಟ್ಟಿ ವಿದ್ಯಾವಂತರನ್ನೂ ಕರ್ಮಠರನ್ನೂ ತಯಾರುಮಾಡಿದರು. ಸನಾತನ ಧರ್ಮವನ್ನು ರಕ್ಷಿಸಿ ಮುಂದುವರಿಸುವ ಶ್ರದ್ಧೆಯನ್ನು ಬೆಳೆಸಿದರು. ಕರ್ಮಮಾರ್ಗದ ಶ್ರೇಷ್ಠತೆಯನ್ನು ಎತ್ತಿ ಹಿಡಿದರು. ಶಂಕರ ಯತಿಯೊಂದಿಗೆ ನಡೆಯುತ್ತಿದ್ದ ವಾಗ್ವಾದದ ದಿನಗಳಲ್ಲಿ ಅವರಿಬ್ಬರೂ ನಡೆದುಕೊಂಡ ರೀತಿಯು ನೈತಿಕ ಗಾಂಭೀರ್ಯವನ್ನು ಉತ್ತುಂಗಕ್ಕೊಯ್ಯುವಂಥದು. ಈ ಸಂಬಂಧದಲ್ಲಿ ನಾಗಭಟ್ಟನು ಭಾರತೀದೇವಿಯವರಿಗೆ ಕೇಳಿದ ಒಂದು ಪ್ರಶ್ನೆಯು ಗಮನಾರ್ಹವಾದುದು. ಮಂಡನಮಿಶ್ರರೂ ಭಾರತೀದೇವಿಯವರೂ ಪ್ರಖರ ಬುದ್ಧಿಶಕ್ತಿಯ ಪ್ರಕಾಂಡ ಪಂಡಿತರಾಗಿದ್ದರು. ಆದರೆ ಅವರಿಬ್ಬರೂ ವಿವಾಹವಾದದ್ದು ಕುಮಾರಿಲರ ಅಭಿಲಾಷೆಯನ್ನು ಆದೇಶವೆಂದೇ ಪರಿಗಣಿಸಿ. ಅವರ ಅಭಿಪ್ರಾಯವನ್ನು ಕುಮಾರಿಲರು ಕೇಳಿಯೇ ಇರಲಿಲ್ಲ. ಅದಕ್ಕೆ ಭಾರತೀದೇವಿಯವರು ಕೊಟ್ಟ ಉತ್ತರ ಇದು, "ಕರ್ಮಮಾರ್ಗದ ಅಂತರಂಗವನ್ನು ನೀನು ಅರ್ಥಮಾಡಿಕೊಂಡಿಲ್ಲ ಅಂದಹಾಗಾಯಿತು. ನಾವಿಬ್ಬರೂ ಒಂದೇ ಗುರುವಿನ ಕೈಕೆಳಗೆ ಒಂದೇ ವಿದ್ಯೆ ಕಲಿತವರು. ಕರ್ಮದ ಶ್ರೇಷ್ಠತೆಯಲ್ಲಿ ಶ್ರದ್ಧೆಯುಳ್ಳವರು. ಅಗ್ನಿಸಾಕ್ಷಿಯಾಗಿ ಗೃಹಸ್ಥಾಶ್ರಮದ ಪರಸ್ಪರ ಕರ್ತವ್ಯಗಳನ್ನು ಪ್ರಮಾಣ ಮಾಡುವವರು. ಇಬ್ಬರೂ ಪ್ರಬುದ್ಧ ವಿದ್ವಾಂಸರು ಎಂದು ನೀನೇ ಹೇಳಿದೆ. ಇಷ್ಟೆಲ್ಲ ಇರುವಾಗ ಕೇಳುವುದೇನಿದೆ... ಗೃಹಸ್ಥಾಶ್ರಮ, ವೈವಾಹಿಕ ಜೀವನವು ಒಂದು ವ್ರತ. ಭಾವನೆಯನ್ನು ವ್ರತದ ನಿಯಮಕ್ಕೆ ತಕ್ಕಂತೆ ಶ್ರುತಿಮಾಡಿಕೊಳ್ಳದವನು ಉತ್ತಮವ್ರತಿಯಾಗಲಾರ. ಕರ್ಮಮಾರ್ಗದ ಮೂಲತತ್ತ್ವ ಅದು."

ಈಗ ಈ ಇಪ್ಪತ್ತೊಂದನೆಯ ಶತಮಾನದ ಕೌಟುಂಬಿಕ ವಿಕೃತಿಗಳು ಮತ್ತು ಪರಿಣಾಮಗಳನ್ನೂ ಸಾಕ್ಷಿಯಾಗಿಟ್ಟುಕೊಂಡೂ ವಿವೇಚಿಸಬಹುದಾದ ವಿಷಯ ಇದು. ನಾಗಭಟ್ಟನೂ ಚಂದ್ರಿಕೆಯೂ ತಮ್ಮ ಜೀವನವನ್ನು ವಿವಿಧ ಪ್ರಯೋಗಗಳಿಗೆ ಒಡ್ಡಿಕೊಂಡು ಹಣ್ಣಾಗಿ ನಿರ್ವಾಹವಿಲ್ಲದ ಸ್ಥಿತಿಯಲ್ಲಿ ಗುರುಗಳ ಆದೇಶವನ್ನು ಭದ್ರವಾಗಿ ಹಿಡಿದು ತಮ್ಮ ಕ್ಷುಬ್ಧಪರಿಭ್ರಮಣವನ್ನು ಸಮಾಧಾನಸ್ಥಿತಿಗೆ ತಂದುಕೊಂಡರು. ಧರ್ಮದ ಚೌಕಟ್ಟಿಗೆ ಒಳಪಡದ ಕಾಮದ ಪರಿಶೀಲನೆ ಇಲ್ಲಿ ಅದ್ಭುತವಾಗಿ ನಡೆದಿದೆ.

6. ಸೃಜನ ಕೌಶಲ

ಬಹುಮುಖದ ಸಮನ್ವಯ

ಇದೊಂದು ತಾತ್ತ್ವಿಕ ಕಾದಂಬರಿ. ಶೋಧನೆಯ ಎರಡು ಪ್ರಧಾನ ಹಂದರಗಳು ಕಾದಂಬರಿಯ ಉದ್ದಕ್ಕೂ ಹರಡಿವೆ. ರಾಷ್ಟ್ರೀಯತೆ, ಧರ್ಮಸಮನ್ವಯ ಮತ್ತು ದಾಂಪತ್ಯಧರ್ಮದ ಮೂರು ಮುಖ್ಯ ಪಾತಳಿಗಳಲ್ಲಿ ಅವು ಹರಡಿವೆ. ಜತೆಗೆ ಇದು ಐತಿಹಾಸಿಕ ಸಾಮಾಜಿಕ ಕಾದಂಬರಿ. ಇಷ್ಟನ್ನೂ ಸಮನ್ವಯಮಾಡಿ ವಿಸ್ತಾರವಾದ ಕಲೆಯ ಬಲೆಯಾಗಿ ನೇಯುವುದು ಅಪಾರವಾದ ಅವಧಾನವನ್ನು, ಕಲ್ಪನೆಯನ್ನೂ, ದರ್ಶನಶಕ್ತಿಯನ್ನೂ ಬೇಡುವ ಕೆಲಸ. 'ಸಾರ್ಥ'ವನ್ನು

ರಚಿಸುವ ಹೊತ್ತಿಗೆ ಲೇಖಕರಿಗೆ ಹದಿನೆಂಟು ಕಾದಂಬರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ವೈವಿಧ್ಯಪೂರ್ಣ ಅನುಭವವಿದೆ. ಆ ಬಲದಿಂದಲೇ 'ಸಾರ್ಥ'ವು ಉನ್ನತವಾದ ಮತ್ತೊಂದು ಮಜಲನ್ನು ಮುಟ್ಟಿದೆ.

ರಸಕೇಂದ್ರಗಳು

ತಾರಾವತಿಯಿಂದ ಮಥುರೆಗೆ ಹೋದ ಸಾರ್ಥದ ಅಧ್ಯಯನದ ಅನುಭವಗಳು, ವಜ್ರಪಾದ ಭಿಕ್ಕುವಿನ ಜತೆಗಿನ ಬೌದ್ಧಾನುಭವಗಳು, ವಿಶ್ವಕರ್ಮಸ್ಥಪತಿಯ ಧರ್ಮಾಂತರದ ಜತೆಗಿನ ಸಾಂಸ್ಕೃತಿಕ ಸ್ಥಿತ್ಯಂತರ, ಜಯಸಿಂಹನಂಥ ರಾಜಪ್ರತಿನಿಧಿಯ ಕಾರ್ಯಭಾರದ ವ್ಯಾಪಕತೆ, ಚಂದ್ರಿಕೆಯ ಜೀವನದ ಕಾಮನಬಿಲ್ಲು, ನಾಗಭಟ್ಟನ ತಲ್ಲಣದ ಅಲೆಗಳು, ಯೋಗ ಮತ್ತು ಧ್ಯಾನದ ಉನ್ನತಿಕೆ, ತಾಂತ್ರಿಕ ಪ್ರಪಂಚದ ವಾಮಲಕ್ಷಣದ ಕತ್ತಲ ವೈಭವ, ಯೋನಿಪೂಜೆಯ ಆವರಣ, ನಾಲಂದದ ಹೆಮ್ಮೆ, ಪ್ರಜ್ಞಾಘನರಾದ ಕುಮಾರಿಲಭಟ್ಟರ ಬೌದ್ಧಿಕ ಛಲದೊಂದಿಗಿನ ಸಾಂಸ್ಕೃತಿಕ ಸೂಕ್ಷ್ಮಗಳು, ಮಂಡನಮಿಶ್ರರು ಶಂಕರಯತಿಯೊಂದಿಗೆ ಮಾಡಿದ ವಾಗ್ವಾದದ ಬೆಳಕಿನ ಆಟ, ಪರಕಾಯಪ್ರವೇಶವು ಉಂಟುಮಾಡಿದ ಕಂಪನ, ಮೂಲಸ್ಥಾನದ ಬರ್ಬರತೆ, ಮೂಲಸ್ಥಾನದಿಂದ ಗುಹಾಮಂಟಪದವರೆಗೆ ಚಂದ್ರಿಕೆಯೂ ನಾಗಭಟ್ಟನೂ ಓಡಿದ ಓಟದ ಗಾಯದ ವಾಸನೆ, ಗುಹಾಮಂಟಪದಲ್ಲಿ ಕಂಡ ಭಾರತೀಯ ಚೈತನ್ಯದ ಅದ್ಭುತ – ಇವು 'ಸಾರ್ಥ'ದ ಪ್ರಧಾನ ರಸಕೇಂದ್ರಗಳು. ಅವುಗಳ ಭೌತಿಕ ಆವರಣದಲ್ಲೇ ಒಂದಕ್ಕಿಂತ ಒಂದು ಭಿನ್ನ; ಒಳ ವಿವರಗಳು ಹೊಸ ಹೊಸ ಪ್ರಪಂಚದ ಅನಾವರಣಗಳು; ಒಳ ವಿವರಗಳಲ್ಲಿಯೇ ಇರುವ ತಿರುವುಗಳು ಕುತೂಹಲಿಗೆ ಹಿಡಿದ ಅಯಸ್ಕಾಂತಗಳು; ಅವು ತೆರೆದಿಡುವ ಮನುಷ್ಯಸ್ವಭಾವದ ಒಳ ನೋಟಗಳು ಉದ್ಬೋಧಕವಾದವು.

ಸಾಂದ್ರತೆ

ಸಾರ್ಥದ ವಾಣಿಜ್ಯಾನುಭವವೆಲ್ಲಿ, ನಾಲಂದದ ಸಾರಸ್ವತ ಪರಿವೇಶವೆಲ್ಲಿ? ವಜ್ರಪಾದರ ಚೈತ್ಯವೆಲ್ಲಿ, ಮಥುರೆಯ ಕೃಷ್ಣಪ್ರಪಂಚವೆಲ್ಲಿ? ಮೂಲಸ್ಥಾನದ ಮತಾಂಧತೆಯೆಲ್ಲಿ, ಮಾಹಿಷ್ಮತಿಯ ವಾಕ್ಯಾರ್ಥವೆಲ್ಲಿ? ತಾಂತ್ರಿಕನ ಯುಗನದ್ಧವೆಲ್ಲಿ, ಯತಿಯ ಪರಕಾಯಪ್ರವೇಶವೆಲ್ಲಿ? ಎಷ್ಟೊಂದು ವಿಭಿನ್ನ ನೆಲೆಗಳು ! ಎಷ್ಟೊಂದು ರಾಜ್ಯಗಳು, ಧರ್ಮಗಳು, ಪಂಥಗಳು ! ಅದನ್ನೇ ಹುಡುಕಲು ಹೊರಟರೆ ದೋಚಿದಷ್ಟೂ ಸಿಗುವ ವಸ್ತುವಿಸ್ತಾರವೆಷ್ಟು ! ಇವೆಲ್ಲ ಬಂದಿರುವುದು ಒಂದೇ ಕಾದಂಬರಿಯಲ್ಲಿ ! ಲೇಖಕರು ಹೂಡಿರುವ ಪ್ರವಾಸ, ಮಾಡಿರುವ ಅಧ್ಯಯನ, ಪಟ್ಟಿರುವ ಶ್ರಮ, ತೊಡಗಿಕೊಂಡ ಚಿಂತನೆ, ಕಟ್ಟಿಕೊಂಡ ಕಲ್ಪನೆ, ಇವುಗಳ ಪ್ರಮಾಣಕ್ಕೆ ಇದು ಸೂಚಿ; ಇಷ್ಟೊಂದು ಪರಿಕರಗಳನ್ನಿಟ್ಟುಕೊಳ್ಳುವ ಶ್ರದ್ಧೆಗೂ ಸೂಚಿ. ಕಾದಂಬರಿಯು ಬೃಹತ್ತಾದುದು; ಅದು ಸಹಜ. ಆದರೆ ಕೇವಲ ಕಥೆಯೇ ಬೇಕೆಂದರೆ ಇಷ್ಟು ಪುಟಗಳ ಕಾದಂಬರಿಯನ್ನು ಚಂದ್ರಿಕೆಯ ಪೂರ್ವಕಥೆಯೊಂದನ್ನೇ ಆಧರಿಸಿ ಬರೆಯಲು ಸಾಧ್ಯ. ಒಂದು ಅನುಪಮ ಅನುಭವವನ್ನೂ, ಅರ್ಥವನ್ನೂ ಹೊರಡಿಸುವುದಕ್ಕಾಗಿ ಇಷ್ಟೊಂದು ಪರಿಕರಗಳನ್ನು ದುಡಿಸಿಕೊಂಡು ಕಾದಂಬರಿಯನ್ನು ಎಷ್ಟು ಸಾಂದ್ರಗೊಳಿಸಿದ್ದಾರೆ ಲೇಖಕರು ಎಂಬುದು ಒಂದು ಬೌದ್ಧಿಕ ವಿಸ್ಮಯ.

ಪಾತ್ರಚಿತ್ರಣ

ಕಾದಂಬರಿಯ ಅತಿಸಣ್ಣ ಪಾತ್ರವೇ ಆಗಲಿ ಘಟನೆಯೇ ಆಗಲಿ ಕಣ್ಣಿಗೆ ಕಟ್ಟಿ ಅನುಭವದ ಆಳಕ್ಕೆ ಇಳಿದು ಅನೇಕಕಾಲದ ಸ್ಮರಣೆಯಾಗುವಂತೆ ಮಾಡುವ ಶಕ್ತಿ ಲೇಖಕರದು. ಶ್ರೀಮುಖ, ಯದುಭದ್ರ, ಚಾರುಮತಿ, ತೇಜೇಶ್ವರಿ, ಅರಬರು ನಾಗಭಟ್ಟನಿಗೆ ಮಾಡಿದ ವಿಚಾರಣೆ, ಚಂದ್ರಿಕೆಯು ವಾಂತಿಮಾಡಿಕೊಂಡಾಗ ಮನೆಯೊಡತಿ ಮಾಡಿದ ಉಪಚಾರ, ನಾಗಭಟ್ಟನೊಂದಿಗೆ ತಾರಾವತಿಯ ಹೊಳೆಯ ದಡದಲ್ಲಿ ಮಾತಾಡಿದ ಯುವಕರು, ಇಂಥವು ಅಥವಾ ಇದಕ್ಕಿಂತ ಸಣ್ಣದಾದವೂ ಮನಸ್ಸಿನಲ್ಲಿ ಭದ್ರವಾಗಿಯೇ ನಿಲ್ಲುತ್ತವೆ. ಅವುಗಳ ನಡುವೆ, ತನ್ನ ಸೌಂದರ್ಯ, ಕಲೆ, ಯೌವನ, ಭಾವಪ್ರಕಾಶ, ದುಡುಕು, ಅಧ್ಯಾತ್ಮದ ಒಲವು, ಪ್ರೀತಿ, ಬ್ರಹ್ಮಚರ್ಯ, ಪ್ರತಿಭೆ ಇಂಥ ಹಲವು ಲಕ್ಷಣಗಳ ಚಂದ್ರಿಕೆಯು ತನ್ನ ಜೀವನವನ್ನು ಸಾಹಸಗಳಿಗೆ ಒಡ್ಡಿಕೊಂಡು ಸಾಗುವ ಯಾನ; ತನ್ನ ಮುಗ್ಧತೆ, ವಿದ್ಯೆ, ದೇಹಲಕ್ಷಣ, ತೆರೆದಮನ, ಪ್ರಯೋಗಬುದ್ಧಿ, ನಚ್ಚು, ದೇಹಾತೀತ ಚೆಲುವಿನ ಕಡೆಗಿನ ಒಲವು, ಸೂಕ್ಷ್ಮತೆ, ಪ್ರತಿಭೆ ಇವುಗಳುಳ್ಳ ನಾಗಭಟ್ಟನು ಮಾಡುವ ಶೋಧಯಾನದ ಸಾಹಸ – ಇವುಗಳ ಚಿತ್ರಣವು ವಿಶಾಲನಭದಲ್ಲಿ ಮಿಂಚಿನ ಬಳ್ಳಿಗಳು ಜೊತೆಯಾಡುವ ಅನುಭವವನ್ನೇ ಕೊಡುತ್ತದೆ. ಅವೆರಡು ಬಳ್ಳಿಗಳೂ ಒಟ್ಟಾಗಿ ಹೊರ ಜಗತ್ತಿಗೆ ಸ್ಪಂದಿಸುವ ರೀತಿಯೂ ಅಂಥದೆ.

ಸೂಕ್ಷ್ಮಕುಸುರಿ

ಎಂಬತ್ತು ವರ್ಷದ ಕುಮಾರಿಲಭಟ್ಟರ ಅಧ್ಯಯನದ ವ್ಯಾಪಕತೆ ಮತ್ತು ತೀಕ್ಷ್ಣತೆಯಿಂದ ಪ್ರಾರಂಭಿಸಿ ಅವರ ಗ್ರಂಥರಚನೆ ಮತ್ತು ದಿಗ್ವಿಜಯಯಾತ್ರೆಯಲ್ಲಿ ಹಾದು, ತುಷಾನಲಪ್ರವೇಶಮಾಡುವಾಗಿನ ಸೂಕ್ಷ್ಮವೂ ಸತ್ತ್ವನಿಷ್ಠವೂ ದೃಢವೂ ಆದ ಮನಸ್ಸಿನ ಚಿತ್ರವನ್ನು ಕಟ್ಟಿಕೊಟ್ಟಾಗ ಅದೊಂದು ಹಿಮಾಲಯದ ಶಿಖರ. ಅಂಥವರ ಶಿಷ್ಯನಾಗಿ ನುರಿತ ವಿಶ್ವರೂಪನು ತನ್ನ ವಿದ್ವತ್ತು, ಪ್ರಖರಬುದ್ಧಿಶಕ್ತಿ, ತರ್ಕಶಕ್ತಿಗಾಗಿ ಗುರುವಿನಿಂದಲೇ ಮಂಡನಮಿಶ್ರನೆಂದು ಸಮ್ಮಾನಗೊಳ್ಳುವುದು; ಆ ಕಾಲಕ್ಕೆ ಹಿರಿದಾದ ಪಾಠಶಾಲೆಯೊಂದನ್ನು ನಡೆಸಿ ಕರ್ಮಠತೆಯನ್ನು ಬೆಳೆಸಿ ಗ್ರಂಥ ರಚನೆ ದಿಗ್ವಿಜಯಗಳನ್ನೂ ಮಾಡಿ ಗುರುವಿಗೆ ಕೀರ್ತಿತರುವ ಎತ್ತರಕ್ಕೆ ಏರಿ ಆಗುವುದು ಇನ್ನೊಂದು ಶಿಖರ. ಇಡೀ ಭರತಖಂಡದಲ್ಲಿ ಮಿಂಚಿನಂತೆ ಸಂಚರಿಸಿ ಪ್ರಖರ ಬುದ್ಧಿಶಕ್ತಿಯನ್ನು ಮೆರೆದು ಉದಾರಿಯೂ ಅಪ್ರತಿಮವಾದಿಯೂ ಆಗಿ ದಿಗ್ವಿಜಯಗಳನ್ನು ಮಾಡಿ, ಗುರಿಸಾಧನೆಗಾಗಿ ಪರಕಾಯಪ್ರವೇಶದಂಥ ಸಾಹಸಗಳನ್ನು ಮಾಡಿ, ಸಮನ್ವಯಾಚಾರ್ಯನಾಗಿ ಕೀರ್ತಿತನಾಗಿ ಭಾರತದ ಆ ಕಾಲದ ಪ್ರಕ್ಷುಬ್ಧತೆಯನ್ನು ಶಮನಗೊಳಿಸಿ ಭಾರತೀಯತೆಗೊಂದು ಭದ್ರತೆಯನ್ನೊದಗಿಸಿದ ಶಂಕರಯತಿ ಮತ್ತೊಂದು ದೊಡ್ಡ ಶಿಖರ. ಇಂಥ ಅಪ್ರತಿಮವೂ ಅಪೂರ್ವವೂ ಆದ ಭವ್ಯ ಚೇತನಗಳನ್ನು ಅಕ್ಕಪಕ್ಕದಲ್ಲಿಟ್ಟು ಚಿತ್ರಿಸುವಾಗ ರೇಷ್ಮೆಯ ರೇಖೆಯಷ್ಟೂ ಪ್ರಮಾಣಗೌರವಕ್ಕೆ ಚ್ಯುತಿಬರದಂತೆ ಚಿತ್ರಿಸುವುದಕ್ಕೆ ಎದೆಗಾರಿಕೆ ಬೇಕು. ಅದು ಬರುವುದು ಅಧ್ಯಯನ, ಚಿಂತನ, ಅಭ್ಯಾಸ, ಪ್ರತಿಭೆಗಳ ತಪಸ್ಸಿನಿಂದ. ಮಂಡನಮಿಶ್ರರು ಶಂಕರಯತಿಯೊಡನೆ ನಡೆಸಿದ ವಾಕ್ಯಾರ್ಥ ಮತ್ತು ಅದಕ್ಕೆ ಭಾರತೀದೇವಿಯು ಮಧ್ಯಸ್ಥಳಾಗಿ ನಿರ್ವಹಿಸಿದ ರೀತಿಗಳನ್ನು ಅಕಳಂಕವಾಗಿ ಚಿತ್ರಿಸುವುದಕ್ಕೆ ಇನ್ನಷ್ಟು ತಪಸ್ಸು ಬೇಕು. ಅಂಥ ತಪಸ್ಸಿನ ಫಲ ಇಲ್ಲಿ ಕಾಣುತ್ತದೆ.

ತಂತ್ರ

ಇಷ್ಟರ ಜತೆಗೆ ಅನ್ಯಮನಃಪ್ರವೇಶವನ್ನು ಒಂದು ತಂತ್ರವಾಗಿ ಯಶಸ್ವಿಯಾಗಿ ದುಡಿಸಿಕೊಂಡಿರುವ ಮತ್ತೊಂದು ಸಾಧನೆಯೂ ಇಲ್ಲಿದೆ. ತಾರಾವತಿಯಿಂದ ಸುಮಾರು ಹತ್ತುವಾರಗಳಷ್ಟು ಪ್ರಯಾಣದೂರದಲ್ಲಿದ್ದ ನಾಗಭಟ್ಟನಿಗೆ ತನ್ನ ಊರು ಮತ್ತು ಮನೆಯ ವಿಷಯವು (ನಾರಾಯಣ ದೀಕ್ಷಿತರಿಂದ) ಮೊದಲಬಾರಿಗೆ ತಿಳಿಯುವುದು ಸುಮಾರು ನಾಲ್ಕು ವರ್ಷಗಳ ಮೇಲೆ. ಆಗಲೂ ಇನ್ನಷ್ಟು ಮಾಹಿತಿಯನ್ನು ತಿಳಿಯುವ ಕುತೂಹಲವನ್ನು ತಣಿಸಲು ಅವಕಾಶವಾಗಲಿಲ್ಲ. ಅದೆಷ್ಟು ಮಾನಸಿಕ ಹಿಂಸೆ ಮತ್ತು ನಿರಾಸೆಯ ಸ್ಥಿತಿ ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ಆ ಸುದ್ದಿಯು ಪತ್ನಿಯ ವ್ಯಭಿಚಾರ, ಮಿತ್ರನಾದ ರಾಜನ ದ್ರೋಹ ಮತ್ತು ತನ್ನ ತಾಯಿಯ ಸಾವಿನದೇ ಆದಾಗ ನಾಗಭಟ್ಟನು ಅನುಭವಿಸಿದ ಮಾನಸಿಕ ಒತ್ತಡವು ಇನ್ನೂ ಅತಿಶಯವಾದುದು. ಅಷ್ಟರ ಜತೆಗೆ, ತಾನು ಪ್ರೀತಿಸಬಹುದಾದ ಏಕಮಾತ್ರ ವ್ಯಕ್ತಿ ಚಂದ್ರಿಕೆಯು ದೇಹಸಂಪರ್ಕಕ್ಕೆ ಒಪ್ಪದ ಇಕ್ಕಟ್ಟು. ಇಷ್ಟೂ ಸೇರಿಯೇ ಅವನು ಶೂನ್ಯಕ್ಕೊಳಗಾಗುವುದು. ಶೂನ್ಯವಾದವನ್ನು ಅರ್ಥಮಾಡಿಕೊಳ್ಳಲು ಮತ್ತು ತಾರಾವತಿಯ ವರ್ತಮಾನಗಳನ್ನು ತಿಳಿಯಲು ಅವನು ತೊಡಗಿಕೊಳ್ಳುವ ಸಾಹಸಸರಣಿಗೆ ಅದೊಂದು ಮಹಾತಿರುವು. ಆ ಒತ್ತಡವನ್ನು ನಿವಾರಿಸಿಕೊಳ್ಳಲು ದೊರೆತ ಸಾಧನವೇ ಅನ್ಯಮನಃಪ್ರವೇಶ. ಅದಕ್ಕೆ ನೆರವಾದ ಗುರುವೇ ಅನ್ಯಮನಃಪ್ರವೇಶಮಾಡಬಾರದೆಂದು ಎಳೆದ ಗೆರೆಯನ್ನು ನಾಗಭಟ್ಟನು ಉಪೇಕ್ಷಿಸಿ ದಾಟಬಲ್ಲ, ತನಗೆ ಹೇಗೂ ಒಗ್ಗದ ಮದ್ಯಮಾಂಸ ಮೈಥುನಾದಿ ಮಾರ್ಗವು ಎಷ್ಟೇ ಅಸಹ್ಯದ್ದಾದರೂ ಒಗ್ಗಿಸಿಕೊಂಡು ತಾಂತ್ರಿಕನೊಂದಿಗೆ ಅಲೆಯಬಲ್ಲ. ಆ ಕಾಲದ ಈ ಮಾನಸಿಕ ಸಂಪರ್ಕತಂತ್ರದಿಂದಾಗಿಯೇ ಕಥೆಯು ಬೆಳೆಯುತ್ತದೆ, ಅಂತರಂಗದ ವ್ಯಾಪಾರವೆಲ್ಲ ಬಯಲಾಗುತ್ತದೆ, ಕುತೂಹಲ ತಣಿಯುತ್ತದೆ, ಜೀವನಕ್ಕೆ ಅರ್ಥ ಒದಗುತ್ತದೆ, ಹತಾಶೆ ಬೆಳೆಯುತ್ತದೆ, ರೊಚ್ಚು ತಿರಸ್ಕಾರ ತಾಮಸಿಕ ಸಮಾಧಾನ ಎಲ್ಲ ಆಗುತ್ತದೆ.

ಕಥೆಗೆ ಇನ್ನಷ್ಟು ಮೆರುಗು ಬಂದು ಅನುಭವದ ವ್ಯಾಪ್ತಿಯನ್ನು ವಿಸ್ತರಿಸಬಹುದಾದ ಒಳತಂತ್ರವೂ ಇದರಲ್ಲಿದೆ. ಯೋನಿಪೂಜೆಗೆ ಚಂದ್ರಿಕೆಯನ್ನೊಲಿಸಿಕೊಳ್ಳುವ ಅಗತ್ಯಬಂದಾಗ ದೂರದಲ್ಲೆಲ್ಲೋ ಇರುವ ಚಂದ್ರಿಕೆಯ ಮನಸ್ಸನ್ನು ಪ್ರವೇಶಿಸುವುದು ಸಾಧ್ಯವೇ ಆಗದೆ ಹೋಗುತ್ತದೆ. ಆಗ ಚಂದ್ರಿಕೆಗೆ ಹತ್ತಿರದ ಅನ್ಯರ ಮನಸ್ಸನ್ನು ಪ್ರವೇಶಿಸಿ ಅವರ ಮೂಲಕ ಚಂದ್ರಿಕೆಗೆ ಸಂಬಂಧಿಸಿದ ಭೌತಿಕ ಮತ್ತು ಮಾನಸಿಕ ವ್ಯಾಪಾರಗಳನ್ನೆಲ್ಲ ತಿಳಿಯುತ್ತಾನೆ ನಾಗಭಟ್ಟ. ಅಮರುಕನ ದೇಹವನ್ನು ಪ್ರವೇಶಿಸಿದ್ದ ಲಿಂಗಶರೀರಿಯಾದ ಯತಿಶಂಕರರನ್ನು ಮನಃಪ್ರವೇಶದ ಮೂಲಕ ಸಂಪರ್ಕಿಸುವುದು ಪದ್ಮಪಾದರಿಗೇ ಸಾಧ್ಯವಾಗಲಿಲ್ಲ. ಕಥೆಯ ಸನ್ನಿವೇಶವನ್ನು ಇನ್ನಷ್ಟು ವಿವರಗಳೊಡನೆ ನಿಖರಗೊಳಿಸಲು ಅದು ದಾರಿಯಾಯಿತು.

ಚಂದ್ರಿಕೆ, ಯೋಗಗುರು, ಸಾಧು, ತಾಂತ್ರಿಕ ಹೀಗೆ ಹಲವರಿಗೆ ಅನ್ಯಮನಃಪ್ರವೇಶದ ಶಕ್ತಿ ಇದ್ದುದರಿಂದಲೇ ಕಥೆಯಲ್ಲಿ ಚಲನವೂ ಸಂಚಲನವೂ ಉಂಟಾಗುವುದನ್ನು ಉದ್ದಕ್ಕೂ ಕಾಣಬಹುದು. ವಾಸ್ತವವಾಗಿ ಅನ್ಯಮನಃಪ್ರವೇಶವನ್ನು ಕಾದಂಬರಿಯ ಮೂರನೆಯ ಪ್ರಮುಖ ಹಂದರ ಎಂದು ಗುರುತಿಸಿಯೇ ಲೇಖಕರ ನಿರ್ವಹಣಾ ಸಾಮರ್ಥ್ಯದ ಅತಿಶಯತೆಯನ್ನು ತಿಳಿಯಬೇಕು.

ಹೀಗೆ ಧರ್ಮಶೋಧ, ದಾಂಪತ್ಯಧರ್ಮ ಮತ್ತು ಅನ್ಯಮನಃಪ್ರವೇಶವೆಂಬ ಮೂರು ಮಹಾಹಂದರಗಳನ್ನು ಕುಂದಿಲ್ಲದೆ ನೇಯುವುದೆಂದರೆ ಸತತವಾಗಿ ಅಭ್ಯಾಸ ಮಾಡಿರುವ ನಿಪುಣನಾದ ಕ್ರೀಡಾಪಟುವು ಅನೇಕ ಚೆಂಡುಗಳನ್ನು ಮೇಲೆಸೆದು ಹಿಡಿಯುತ್ತ ಹೋಗುವ ಕರಾರುವಾಕ್ಕಾದ ಆಟದಂತೆ.

ಈ ಪ್ರಕ್ರಿಯೆಯು ಎಷ್ಟು ಸಹಜವಾಗಿ ಪ್ರಮಾಣಬದ್ಧವಾಗಿ ಮತ್ತು ಪರಿಣಾಮಕಾರಿಯಾಗಿ ನಡೆದಿದೆ ಎನ್ನುವುದು ಗಮನಾರ್ಹವಾದುದು. ತಂತ್ರದ ದೃಷ್ಟಿಯಿಂದ ಬಹು ಗೌಣವಾದುದು ನಾರಾಯಣದೀಕ್ಷಿತರ ಪ್ರವೇಶದೊಂದಿಗೆ ಕಾದಂಬರಿಯು ಪ್ರಾರಂಭವಾಗುವುದು. ಹೀಗೆ ಗೌಣವೆನಿಸುವಂತೆ ಇರುವ ಅಥವಾ ಆ ತಂತ್ರವು ಗೋಚರಕ್ಕೆ ಬರದಂತೆ ಇರುವ ಇತರ ಎಡೆಗಳೂ ಇವೆ. ಚಂದ್ರಿಕೆಯು ತನ್ನ ಪೂರ್ವಕಥೆಯನ್ನು ಹೇಳುವ ಎಡೆ, ನಾಗಭಟ್ಟನು ಅನ್ಯಮನಃಪ್ರವೇಶದ ಮೂಲಕ ತಾರಾವತಿಯ ವಿದ್ಯಮಾನಗಳನ್ನು ಕಂತುಗಳಲ್ಲಿ ತಿಳಿದು ಕಾದಂಬರಿಯ ಓಟಕ್ಕೆ ಚಲನೆಯನ್ನೂ ತಿರುವನ್ನೂ ಹೊಸ ಅರ್ಥವನ್ನೂ ಕೊಡುವುದು ಇವೆಲ್ಲ ಅಂಥವು.

ತಾರ್ಕಿಕ ಚೌಕಟ್ಟು

ನಾರಾಯಣದೀಕ್ಷಿತರು ಪ್ರವೇಶಿಸುವ ಹೊತ್ತಿಗೆ ನಾಗಭಟ್ಟನು ಮಥುರೆಯಲ್ಲಿ ನಾಲ್ಕುವರ್ಷಗಳನ್ನು ಕಳೆದಾಗಿರುತ್ತದೆ. ಆದರೆ ಅವರು ಕೊಡುವ ಸುದ್ದಿಯ ಮಹತ್ತ್ವ ಮತ್ತು ಅದು ಉಂಟುಮಾಡುವ ಕಂಪನದ ದೃಷ್ಟಿಯಿಂದ ಅವರು ಕಾದಂಬರಿಯ ಪ್ರಾರಂಭದಲ್ಲೇ ಪ್ರವೇಶಿಸುವುದು ಔಚಿತ್ಯಪೂರ್ಣವಾಗಿದೆ. ಅಲ್ಲದೆ ನಾಗಭಟ್ಟನು ಮೆಲುಕು ಹಾಕುವ ಆ ನಾಲ್ಕುವರ್ಷಗಳ ಕಥೆಯು ನೀರಸವಾಹಿತಿಯಾಗಬಹುದಾದ ಸಾರ್ಥದ ವರ್ಣನೆಯನ್ನು ರಂಜಕವಾಗಿಸಿದೆ, ಕುತೂಹಲಕಾರಿಯಾಗಿಸಿದೆ. ರಾವಣ, ಕಾರ್ತವೀರ್ಯಾರ್ಜುನ ಮೊದಲಾದ ಭೀಕರ ಪಾತ್ರಗಳು ಯಕ್ಷಗಾನದ ರಂಗಪ್ರವೇಶವನ್ನು ಮಾಡುವಾಗಲೇ ಸಭಿಕರನ್ನು ಎಚ್ಚರಿಸಿ, ಎಬ್ಬಿಸಿ, ಎತ್ತರದ ಭಾವಪ್ರಪಂಚದಲ್ಲಿ ಕೂರಿಸುವಂಥ ಕಂಪನವು ಸಾತ್ತ್ವಿಕರಾದ ನಾರಾಯಣ ದೀಕ್ಷಿತರ ಪ್ರವೇಶದಿಂದಲೂ ಆಗುತ್ತದೆ. ಸಾಮಾನ್ಯವಾಗಿ ಕಾದಂಬರಿಗಳು ಅನೇಕ ಪರಿಚ್ಛೇದಗಳನ್ನು ದಾಟಿದ ಮೇಲೆ ಉಂಟುಮಾಡಬಹುದಾದ ಸನ್ನಿವೇಶ ಸೃಷ್ಟಿ, ಕಾವು, ಕುತೂಹಲದ ತೀವ್ರತೆ, ಕಂಪನಗಳನ್ನು 'ಸಾರ್ಥ'ದ ಮೊದಲ ಸಾಲುಗಳು ಮಾಡಿಬಿಡುತ್ತವೆ.

ಆ ಪ್ರವೇಶವಾದರೂ ಕಾದಂಬರಿಯ ಒಟ್ಟು ಬಂಧದ ದೃಷ್ಟಿಯಿಂದ ಇನ್ನೂ ಮಹತ್ವದ್ದಾಗಿದೆ. ಇಷ್ಟು ಸಂಕೀರ್ಣ ವಸ್ತುಘಟಕಗಳಿಂದಲೂ ಕ್ರಿಯಾಸರಣಿಗಳಿಂದಲೂ ಬೌದ್ಧಿಕ ತಾಡನಗಳಿಂದಲೂ ಕೂಡಿರುವ ಕಾದಂಬರಿಯನ್ನು ಒಂದು ಪ್ರಬಂಧದ ಅಚ್ಚುಕಟ್ಟಿಗೆ ಒಳಪಡಿಸಿರುವ ರೀತಿ ಬೆರಗುಹುಟ್ಟಿಸುವಂಥದು. ನಾರಾಯಣ ದೀಕ್ಷಿತರೂ ವಿದ್ಯೆ ಮನೋಧರ್ಮ ಸದಾಚಾರ ಉದಾತ್ತ ನಡೆವಳಿಕೆಗಳ ಕಾರಣದಿಂದ ಗುರುಸಮಾನರು. ನಾಗಭಟ್ಟನ ಅವಿವೇಕವನ್ನು ನೇರವಾಗಿಯೇ ಹೇಳಿದರೂ ಅವರ ಜೀವನತತ್ತ್ವವು ಅಳಿಸಲಾಗದಂಥದು. 'ವಿದ್ಯಾಭ್ಯಾಸ, ವಿಶೇಷ ಅಧ್ಯಯನ, ದೇಶಾಟನೆಗಳೇನಿದ್ದರೂ ಗೃಹಸ್ಥನಾಗುವ ಮೊದಲು. ಅನಂತರ ಸ್ವಾಧ್ಯಾಯದಲ್ಲಿ, ಸ್ವಸ್ಥಳದಲ್ಲಿ ಲಭ್ಯವಿರುವ ಹಿರಿಯ ವಿದ್ವಾಂಸರ ಮಾರ್ಗದರ್ಶನದಲ್ಲಿ ತೃಪ್ತಿಪಟ್ಟುಕೊಂಡಿರಬೇಕು. ಈ ನಿಯಮವನ್ನು ಪಾಲಿಸದೆ ನೀನು ಅವಿವೇಕಮಾಡಿಕೊಂಡೆ.' ಕಾದಂಬರಿಯು ಎಲ್ಲವನ್ನೂ ಮಥಿಸಿದ ಮೇಲೆ ಕೂಡ ಹೇಳುವುದು ಅದನ್ನೆ. ಯೋಗಗುರುವು, ಈವರೆಗೆ ಅವಿವೇಕದಿಂದ ನಡೆದ ಚಂದ್ರಿಕೆಗೂ ನಾಗಭಟ್ಟನಿಗೂ ಹೇಳುವುದು ಕೇವಲ ಮದುವೆಯಾಗುವುದಕ್ಕಲ್ಲ, ಗೃಹಸ್ಥಾಶ್ರಮವನ್ನು ಸ್ವೀಕರಿಸುವುದಕ್ಕೆ, ಮಕ್ಕಳನ್ನು ಸಂಸ್ಕಾರವಂತರಾಗಿ ಮಾಡಿಕೊಳ್ಳುವುದಕ್ಕೆ ಮತ್ತು ಹಾಗೆ ಸಂಸ್ಕಾರವಂತರನ್ನಾಗಿ ಬೆಳೆಸಿ 'ತನ್ನವರಾಗಿ' ಮಾಡಿಕೊಳ್ಳುವುದಕ್ಕೆ. ಈ 'ತನ್ನವರನ್ನಾಗಿ' ಮಾಡಿಕೊಳ್ಳುವುದು ಸ್ವಾರ್ಥದ ಮಾತಲ್ಲ, ರಾಕ್ಷಸ ಬೀಜವನ್ನು ಸಂಸ್ಕರಿಸಿ ಮಾನವರನ್ನಾಗಿ ಪರಿವರ್ತಿಸಿ ಜಗತ್ತಿನ ಹಿತಕ್ಕಾಗಿ ಕಾಪಿಡುವ ಮಾತು, 'ವಿವೇಕ'ದ ಮಾತು.

ಸಹಜ ಬೆಳವಣಿಗೆ

ಅ) ನಾರಾಯಣಭಟ್ಟರು ಹೊರಟಿದ್ದು ಕಾಶಿಗೆ; ಅವರ ಸಾರ್ಥವೂ ಮಥುರೆಯ ಮಾರ್ಗವಾಗಿಯೇ ಹೋಗುತ್ತಿತ್ತು. ಅವರಿಗೆ ನಾಗಭಟ್ಟನು ಸಿಕ್ಕಿದ್ದು ಸಹಜಸಾಧ್ಯವಾದುದು.

ಆ) ಶೂನ್ಯವಾದವನ್ನು ಅಭ್ಯಸಿಸಲೆಂದೇ ನಾಗಭಟ್ಟನು ವಜ್ರಪಾದರಿಂದ ಪ್ರೇರಿತನಾಗಿ ನಾಲಂದಕ್ಕೆ ಹೋಗಿದ್ದ, ಅನೇಕ ರೀತಿಯ ಬೆಳವಣಿಗೆಗಳಿಂದಾಗಿ ಅವನು ಶೂನ್ಯಮನಸ್ಕನಾಗಿದ್ದ ಹೊತ್ತು ಅದು, ಪ್ರಜ್ಞಾಘನರು ನಾಲಂದದಲ್ಲಿದ್ದರು, ಪೂರ್ವದಲ್ಲಿ ನಾಗಭಟ್ಟನು ಕಲಿತದ್ದು ಮಂಡನಮಿಶ್ರರ ಗುರುಕುಲದಲ್ಲಿ, ಅವರು ಅವನ ಬಂಧು ಕೂಡ. ಈ ಸರಣಿಗೆ ಎಷ್ಟೊಂದು ಹೊಂದಾಣಿಕೆ !

ಇ) ಕುಮಾರಿಲಭಟ್ಟರ ಮರಣವಾರ್ತೆಯನ್ನು ತಿಳಿಸಲು ಮಾಹಿಷ್ಮತಿಗೆ ಹೋದ ನಾಗಭಟ್ಟನು ವಿದ್ಯಾರ್ಥಿನಿಲಯದಲ್ಲಿ ತಂಗುವ ಬದಲು ಮಂಡನಮಿಶ್ರರ ಮನೆಯಲ್ಲೇ ತಂಗಿದ. ಅದಕ್ಕೆ ಕಾರಣವು ಅವರು ಬಂಧುವಾಗಿದ್ದರು, ಅತ್ತೆ ಭಾರತೀದೇವಿಯವರು ಹಿಂದಿನಿಂದಲೂ ಅವನಲ್ಲಿ ಮಮತೆಯಿಂದಿದ್ದರು ಎಂಬುದಷ್ಟೇ ಅಲ್ಲ, ಅವನು ಕೊಡುತ್ತಿದ್ದ ಸುದ್ದಿಯು ತನ್ನನ್ನೂ ಸೇರಿಸಿದಂತೆ ಎಲ್ಲರಿಗೂ ದುಃಖದ್ದೂ ಸೂತಕದ್ದೂ ಆಗಿತ್ತು. ಆ ಮನೆಯಲ್ಲೇ ಇದ್ದುದರಿಂದ ಅತ್ತೆ–ಮಾವಂದಿರ ಸಂಬಂಧದ ಸ್ವರೂಪವನ್ನೂ ಶಂಕರಯತಿಗಳೊಡನೆ ನಡೆದ ವಾಕ್ಯಾರ್ಥದ ಸಂದರ್ಭದಲ್ಲಿ ಅವರು ಮನೆಯಲ್ಲೂ ನಡೆದುಕೊಂಡ ರೀತಿಯನ್ನೂ ಇವೆಲ್ಲದರ ಮಧ್ಯೆ ಅವರ ಮನೆವಾರ್ತೆ ಹೇಗಿತ್ತೆಂಬುದನ್ನೂ ತಿಳಿಯಲು ಅವನಿಗೆ ಸಾಧ್ಯವಾಯಿತು.

ಈ) ಅತ್ತೆಗೆ ಸಹಾಯವಾಗಲೆಂದು ಪರಕಾಯಪ್ರವೇಶದ ರಹಸ್ಯವನ್ನು ತಿಳಿಯಲೆಂದು ತಾರಾವತಿಗೆ ಹೋಗಿದ್ದವನು ಅವನು, ಆದರೆ ಅವನು ಅಲ್ಲಿದ್ದುದು ಪದ್ಮಪಾದರಿಗೂ ಆ ಮೂಲಕ ಶಂಕರಯತಿಗೂ ಪ್ರಯೋಜಕವಾಯಿತು. ಹೀಗೆ ಎಲ್ಲವೂ ಸಹಜ ಬೆಳವಣಿಗೆ, ಎಲ್ಲಕ್ಕೂ ಸಾವಯವ ಸಂಬಂಧ ! ಅತಿ ಸಣ್ಣ ಬೆಳವಣಿಗೆ, ದೊಡ್ಡ ತಿರುವು ಯಾವುದಿದ್ದರೂ ಅತಿ ಸಹಜವೆಂಬಂತೆ ಕಥಾ ಹಂದರವನ್ನು ಹೆಣೆಯುವಷ್ಟರಿಂದಲೇ ಯಶಸ್ಸಿನ ದೊಡ್ಡ ಮಜಲನ್ನು ಮುಟ್ಟಿದಂತಾಗಿದೆ.

ಪ್ರಖರ ಚಿಂತನ

ತರ್ಕ ಮತ್ತು ಚಿಂತನೆಗಳಿಂದ ತುಂಬಿದ ಕಾದಂಬರಿಯೂ ರಸಘಟ್ಟಿಯಾಗುವುದು ಭೈರಪ್ಪನವರ ವೈಶಿಷ್ಟ್ಯ.

ಅ) ಬೌದ್ಧರ ಶೂನ್ಯವಾದ, ಕ್ಷಣಿಕವಾದ, ಸಂಸಾರವು ದುಃಖಮಯವೆಂಬ ಮಾತು; ಕುಮಾರಿಲರ ಕರ್ಮಪಾರಮ್ಯದ ಸಿದ್ಧಾಂತ; ಶಂಕರಯತಿಯ ಜ್ಞಾನಮಾರ್ಗ, ಜೀವಬ್ರಹ್ಮೈಕ್ಯ ಇಂಥವೆಲ್ಲ ಗಂಭೀರವಾಗಿಯೇ ಮಥನಗೊಳ್ಳುವ ಈ ಕಾದಂಬರಿಯೂ ಅಷ್ಟೇ ಆಕರ್ಷಕವಾಗಿದೆ, ರಸಪೂರ್ಣವಾಗಿದೆ. ಮಂಡನಮಿಶ್ರರು ಮತ್ತು ಶಂಕರಯತಿಯ ನಡುವಿನ ವಾಕ್ಯಾರ್ಥವನ್ನು ಕೂಡ ಕಾದಂಬರಿಯ ಒಟ್ಟು ಹದಕ್ಕೂ ಓಘಕ್ಕೂ ಹೊಂದುವಂತೆ ವಿವರಿಸುವುದು ಸಾಧಾರಣವಾದ ಕೆಲಸವಲ್ಲ.

ಆ) ಅದಕ್ಕೆ ಪ್ರತಿಯಾಗಿ ಚಂದ್ರಿಕೆ ಯದುಭದ್ರ ಮತ್ತು ಶ್ರೀಮುಖನ ಪ್ರಸಂಗವು ಶೃಂಗಾರಕ್ಕೆ ಹೊಂದಿಕೊಂಡ ವಿವಿಧ ಮುಖಗಳನ್ನು ವಿವರಿಸುವ ಭಾಗ. ಅಂಥ ಭಾಗದಲ್ಲಿ ಕೂಡ ಯದುಭದ್ರನ ಮಾತುಗಳು ಅವನ ಕುರುಡನ್ನು ಚಂದ್ರಿಕೆಯ ಅನುಭವಕ್ಕೆ ಹೇರಿದ್ದು, ಶ್ರೀಮುಖನ ನೇತ್ರಾಭಿವ್ಯಕ್ತಿ, ನೋಡುವ ಕಣ್ಣುಗಳ ಮಹತ್ತ್ವ ಇಂಥವು ಮನಶ್ಶಾಸ್ತ್ರೀಯ ಎತ್ತರಕ್ಕೆ ಏರಿವೆ; ಮನೋವ್ಯಾಪಾರದ ಕುಸುರಿಗೆಲಸಗಳಾಗಿವೆ.

ಇ) ಹೊಳೆಯಲ್ಲಿ ಈಜುಬಿದ್ದ ಚಂದ್ರಿಕೆ ಮತ್ತು ನಾಗಭಟ್ಟನ ನಡುವಿನ ಸಂಭಾಷಣೆಯು ಒಂದು ಅತಿ ಸಾಧಾರಣ ಸಂದರ್ಭ; ಅಂಥ ಸಂದರ್ಭಗಳಲ್ಲೂ ಓದುಗನಲ್ಲಿ ಬೆರಗಿನ ಸ್ಪಂದನವನ್ನುಂಟುಮಾಡುವ ಶಕ್ತಿ ಇದೆ.

ಈ) ಮೂಲಸ್ಥಾನದಲ್ಲಿ ವಿಚಾರಣಾಧಿಕಾರಿಯು ನಾಗಭಟ್ಟನನ್ನು ವಿಚಾರಣೆಗೊಳಪಡಿಸಿದಾಗ ಮ್ಲೇಚ್ಛಧರ್ಮ ಮತ್ತು ಭಾರತೀಯ ಧರ್ಮದ ನಡುವಿನ ವ್ಯತ್ಯಾಸವು ಕೆನೆಗಟ್ಟಿದೆ.

ಉ) ಗುಹಾಮಂಟಪದಲ್ಲಿ ಗುರುಶಿಷ್ಯರ ನಡುವೆ ಅಂತರ್ಬೋಧೆಯ ಮೂಲಕವೇ ನಡೆಯುವ ಮೌನ ಸಂಭಾಷಣೆಯ ಸಂದರ್ಭವನ್ನು ಬಿಟ್ಟರೆ ತರ್ಕ, ವಿಚಾರಮಥನ, ಬುದ್ಧಿಪ್ರಖರತೆ, ಹೊಳಹು ಕಾಣಿಸಿಕೊಳ್ಳದ ಜಾಗವಿಲ್ಲ. ಆ

ಮೌನಸಂಭಾಷಣೆಯ ಸಂದರ್ಭದ ರೂಪಕವು ಕೂಡ ಶೂನ್ಯ, ಕ್ಷಣಿಕತೆ, ಸಂಸಾರದ ದುಃಖಮಯತೆ, ಸಾವಿನ ಹತಾಶೆ ಇಂಥ ಎಲ್ಲ ವಾದಗಳಿಗೆ ಇರುವ ಉತ್ತರದ ತಾರ್ಕಿಕ ಕೊನೆ ಎಂಬುದನ್ನು ಮತ್ತೆ ಹೇಳಬೇಕಿಲ್ಲ. ಚಿಂತಕರ ಚಿಂತಕರಾಗಿದ್ದಾರೆ ಭೈರಪ್ಪನವರು.

ಭೈರಪ್ಪನವರ ವೈಚಾರಿಕತೆಯು ಸ್ವಚ್ಛಂದವಿಹಾರವಲ್ಲ. ತತ್ತ್ವಶಾಸ್ತ್ರ, ತರ್ಕಶಾಸ್ತ್ರ, ಸೌಂದರ್ಯಮೀಮಾಂಸೆ ಮತ್ತು ಮನಃಶಾಸ್ತ್ರದ ಭದ್ರಬುನಾದಿ ಅದಕ್ಕಿದೆ. ತೃಣಮೂಲ ಲೋಕಾನುಭವ ಮತ್ತು ಸಮಕಾಲೀನ ವಿದ್ಯಮಾನಗಳ ಅರಿವಿನ ಬಲ ಅದಕ್ಕಿದೆ. ಹಾಗಾಗಿ ಅವರ ಮುಕ್ತಶೋಧವು ರಾಗದ್ವೇಷಗಳಿಲ್ಲದೆ ನಿಷ್ಠುರ ಸತ್ಯವನ್ನು ಹಿಡಿಯುತ್ತದೆ. ಸಣ್ಣ ವಿವರಗಳಲ್ಲಿಯೂ ಅದು ಕಾಣುತ್ತದೆ.

ಭಾವಗೌರವ

ಗಯಾ ಶ್ರಾದ್ಧಮಾಡಲು ಹೋಗಿ ಫಲ್ಗುನದಿಯ ದಡದಲ್ಲಿ ಶ್ರಾದ್ಧಪರಿಕರಗಳೊಡನೆ ಕೂತು ತಾಯಿಯ ಶ್ರಾದ್ಧವನ್ನು ಮಾಡಲು ಹವಣಿಸಿದ ನಾಗಭಟ್ಟನ ಸಂಕೀರ್ಣ ಚಿಂತನೆಗಳ ಹೊಯ್ದಾಟವು ಉಲ್ಲೇಖನೀಯವಾದುದು. ಕೊನೆಗೂ ಆ ಪರಿಕರಗಳನ್ನು ಚೆಲ್ಲಿ ಶ್ರಾದ್ಧಮಾಡದೆ ಹೊರಡುತ್ತಾನೆ ನಾಗಭಟ್ಟ. ತರ್ಕ ಮತ್ತು ಚಿಂತನೆಯು ಭೈರಪ್ಪನವರಿಗೆ ರಕ್ತಗತವಾಗಿರುವ ಗುಣ. ಆದರೆ ಅದನ್ನು ರಸಕ್ಕೆ ಅಧೀನಪಡಿಸಿ ನಿರ್ವಹಿಸುವುದು ಅವರ ಹೆಚ್ಚುಗಾರಿಕೆ. ಕಾದಂಬರಿಯ ಓಟದ ಹೊತ್ತಿನಲ್ಲಿ ಸತ್ಯದರ್ಶನಕ್ಕಾಗಿ ಅದು ಹಿಂದೆ ಸರಿಯುವುದು ಭೈರಪ್ಪನವರ ಸೃಜನಶೀಲ ಪ್ರತಿಭೆಯ ವಿಶೇಷಗಳಲ್ಲೊಂದು. ತಾಯಿಯ ಶ್ರಾದ್ಧವನ್ನು ಮಾಡುವ ಶ್ರದ್ಧೆ ಹುಟ್ಟದ **ನಾಗಭಟ್ಟನು ಚಾರುಮತಿಯ ಶ್ರಾದ್ಧ ಮಾಡಿಸುತ್ತಾನೆ.** ತಾಯಿಯು ತಾಯಿಯೇ ಆಗಿದ್ದವಳು, ಆದರೆ ಚಾರುಮತಿಯು ನಾಲ್ಕುದಿನ ಅನ್ನಹಾಕಿ ತಾಯಿಯಂತೆ ನೋಡಿಕೊಂಡಿದ್ದವಳು. ಚಂದ್ರಿಕೆಯ ಭಾವನೆಗೆ ನಾಗಭಟ್ಟನು ತನ್ನ ಭಾವವನ್ನು ಸರಿದೂಗಿಸಿಕೊಂಡ ಹೊತ್ತು ಅದು. ಆ ಹೊತ್ತು ಅವನು ತನ್ನ ತಂದೆ ತಾಯಿಗಳಿಗೂ ತರ್ಪಣ ಕೊಡುತ್ತಾನೆ. ಪೂಜ್ಯರಾದ ಪುತಿನ ಹೇಳುತ್ತಾರೆ, ಆಗಾಗ ಬುದ್ಧಿಗೆ ರಜಾ ಕೊಟ್ಟು ಭಾವದ ಮಾತು ಕೇಳಬೇಕೆಂದು. ನಾಗಭಟ್ಟನೂ ಈಗ ಅದನ್ನು ಮಾಡಿದ್ದ, ಚಂದ್ರಿಕೆಯ ಭಾವನೆಯನ್ನು ಗೌರವಿಸುವುದಕ್ಕೆ. ಬುದ್ಧಿಹರಿತದ ವಾದಕ್ಕಿಂತ ಭಾವಗ್ರಹಣಕ್ಕೆ ಹೆಚ್ಚಿನ ಸ್ಥಾನಕೊಟ್ಟ ಇತರ ಸನ್ನಿವೇಶಗಳನ್ನೂ ಅಗತ್ಯವಾಗಿ ಗಮನಿಸಬೇಕು.

ಬಿಗಿಬಂಧ

ಇಡೀ ಕಾದಂಬರಿಯಲ್ಲಿ ತೆಗೆದುಹಾಕಬಹುದಾದ ಭಾಗಗಳಿರಲಿ, ಅಂಥ ಯಾವ ಒಂದು ಮಾತೂ ಇಲ್ಲ. ಕಾದಂಬರಿಯ ಬಂಧವು ಅಷ್ಟು ಬಿಗಿಯಾಗಿದೆ. ಲೇಖಕರ ವ್ಯಾಪಕ ಅಧ್ಯಯನ, ವಸ್ತುವಿನ ಆಳವಾದ ಪರಿಭಾವನೆ, ಕಟ್ಟುವಾಗಿನ ಏಕಾಗ್ರತೆ, ಸೃಜನ ವಿಮರ್ಶನದ ನಿಷ್ಠುರತೆ ಅಮೋಘವಾಗಿದ್ದು, ಅವರ ಮನೋಬಲವು ಬೆರಗುಹುಟ್ಟಿಸುತ್ತದೆ. ಯಾವ ವಿವರವೂ ಕೇವಲ ತನ್ನ ಅಸ್ತಿತ್ವದ ಹೆಗ್ಗಳಿಕೆಗಾಗಿ ಬಂದಿಲ್ಲ.

ಹೊಳಹುಗಳ ಊಟೆಗಳು

ಇಡೀ ಕಾದಂಬರಿಯಲ್ಲಿ ಬರುವ ಎಲ್ಲ ಮಾತುಗಳೂ ಪ್ರಸಂಗಗಳೂ ಎಲ್ಲಿಂದೆಲ್ಲಿಗೋ ಕೂಡಿ ಹೊರಡಿಸುವ ಹೊಸ ಹೊಸ ಅರ್ಥ, ಹೊಳಹು, ದರ್ಶನಸಾಧ್ಯತೆಗಳು ಅನುಪಮ. ಇದು ಸಂಕೀರ್ಣವಾದ ಅಂತಃಸಂಬಂಧ. ಹಾಗಾಗಿ ಒಂದಕ್ಕೊಂದು ಹಲವು ರೀತಿಗಳಲ್ಲಿ ಸಂಬಂಧಸಾಧಿಸಿ ಹೊರಡಿಸುವ ಅರ್ಥಗಳು ಅಗಣಿತವಾದವು. ಓದುಗನ ಸಹೃದಯತೆಯನ್ನೂ ಸಾಮರ್ಥ್ಯವನ್ನೂ ಅನುಸರಿಸಿ ಬಿಟ್ಟುಕೊಳ್ಳುವ ನಿರಂತರ ಹೊಳಹುಗಳು ಕಾದಂಬರಿಯನ್ನು ಎಂದೆಂದಿಗೂ ಜೀವಂತವಾಗಿಡುತ್ತವೆ.

ಅತಿ ವಿಶಿಷ್ಟತೆ

ಪ್ರಾರಂಭದಿಂದ ಕೊನೆಯವರೆಗೆ ಇರುವ ನಿರೂಪಣೆಯೂ ಕೇವಲ ಕಥೆಯೊಂದರ ಪ್ರಕಟಣೆಯಲ್ಲ. ಅದು ಕೇವಲ ಕಥೆಯಾಗಿದ್ದರೆ ಅಲ್ಲಿ ಯಾವ ತಂತ್ರವೇ ಇರಲಿ, ಸ್ವಾರಸ್ಯವಿರಲಿ, ಕುತೂಹಲದ ಉದ್ಘಾಟನೆಯಿರಲಿ ಒಮ್ಮೆ ಓದಿದಮೇಲೆ ಮುಗಿದುಹೋಗುತ್ತದೆ. ಬಹುಪಾಲು ಕಾದಂಬರಿಗಳ ಓದಿನ ಸಮಾಪ್ತಿ ಅದು. ಕಥೆಯ ಹೆಣಿಗೆಯೊಂದಿಗೆ ಇರುವ ಬೌದ್ಧಿಕ ಕಾವು, ವೈಚಾರಿಕತೆಯ ಹರಿತ, ದರ್ಶನದ ಮೇಲ್ಮೆ, ತೀವ್ರತೆ, ಉದ್ವೇಗ ಇಂಥ ಎಲ್ಲವೂ ಅದೇ

ಮಾದರಿಯವು. ಆದರೆ ಮತ್ತೆ ಮತ್ತೆ ಓದಿಗೆ ತೆರೆದುಕೊಳ್ಳುವ ಮತ್ತು ಪರಿಭಾವಿಸಿದಷ್ಟೂ ಅರ್ಥಗಳಿಗೆ ತೆರೆದುಕೊಳ್ಳುವ, ಆಕರ್ಷಣೆಯು ನವನವೀನವಾಗಿರುವ ಅಪೂರ್ವ ಗುಣವು ಈ ಕಾದಂಬರಿಗೆ ದಕ್ಕಿದೆ. ಶ್ರೇಷ್ಠ ಕಾದಂಬರಿಕಾರರ ಎಲ್ಲ ಪಟ್ಟುಗಳೂ ಇಲ್ಲಿವೆ; ಆದರೆ ಅವೆಲ್ಲವೂ ಬೆರೆತಿರುವ ಹದದಲ್ಲಿಯೇ ಈ ಯಶಸ್ಸಿನ ರಹಸ್ಯವಿದೆ. ಈ ಅನುಪಮ ನೆಲೆಯೇ ಭೈರಪ್ಪನವರನ್ನು ಜಗತ್ತಿನ ಅತಿ ವಿಶಿಷ್ಟ ಕಾದಂಬರಿಕಾರರನ್ನಾಗಿಸಿದೆ.

ಪ್ರಬಂಧಧ್ವನಿ

ಮೂಲಸ್ಥಾನದ ಮೇಲೆ ಯುದ್ಧದ ಯೋಜನೆ ಹಾಕಿದಾಗ ಅದರ ಅಂಗವಾಗಿ ಅಲ್ಲಿ ನಾಟಕಗಳನ್ನಾಡಿಸುವ ಸಿದ್ಧತೆಯೂ ನಡೆದಿತ್ತು. ಮೂಲದಲ್ಲಿ ಬ್ರಹ್ಮಚರ್ಯದ ಮಾತಿನ ಕಾರಣಕ್ಕೇ ಚಂದ್ರಿಕೆ ಮತ್ತು ನಾಗಭಟ್ಟ ಬಹುಕಾಲ ದೂರವಾಗಿದ್ದರು. ರುಕ್ಮಿಣಿ ಕೃಷ್ಣರ ಪಾತ್ರಗಳನ್ನು ವಹಿಸುವ ಹೊಣೆ ಈಗ ಅವರ ಮೇಲೆ ಬಂದಿತ್ತು. ಆದರೆ ಅವರಿಬ್ಬರ ಮನಸ್ಸು ಕೂರುತ್ತಿರಲಿಲ್ಲ, ಭಾವ ಸಂಪರ್ಕ ಏರ್ಪಡುತ್ತಿರಲಿಲ್ಲ. ಇಬ್ಬರೂ ಕಠಿಣವಾಗಿಯೇ ಇದ್ದರು. ಅವರನ್ನು ಸರಿಹೊಂದಿಸಲು ಪಟ್ಟ ಪ್ರಯತ್ನಗಳೆಲ್ಲ ವ್ಯರ್ಥವಾದ ಮೇಲೆ ಆನಂದದತ್ತರು ನಾಟಕವನ್ನೇ ನಿಲ್ಲಿಸುವ ನಿರ್ಧಾರಕ್ಕೆ ಬಂದಿದ್ದರು. ಆಗ ಜಯಸಿಂಹರು ಚಂದ್ರಿಕೆಗೂ ನಾಗಭಟ್ಟನಿಗೂ ಹೇಳಿದ ಮಾತು ಇದು, "ಸೇನಾಧಿಕಾರಿಗಳ ಪರಸ್ಪರ ಮನಸ್ತಾಪದಿಂದಾಗಿಯೇ ಯುದ್ಧದಲ್ಲಿ ಸೋತ ಅನೇಕ ನಿದರ್ಶನಗಳಿವೆ. ಇಂಥ ಹೊತ್ತು ದೊಡ್ಡ ಉದ್ದೇಶಕ್ಕಾಗಿ ಸ್ವಂತದ ಬೇಕುಬೇಡಗಳನ್ನು ತುಳಿದಿಡಬೇಕಾದುದು ಅಗತ್ಯ. ಇದು ರಾಷ್ಟ್ರೀಯತೆ, ಅದೇ ಅಧ್ಯಾತ್ಮ". ಅಧ್ಯಾತ್ಮದ ಪರಿಭಾಷೆಯಲ್ಲಿಯೇ ಮಾತನಾಡಿದ ಶಂಕರಯತಿಯು ಭರತಖಂಡದ ಧರ್ಮಗಳು ಪರಸ್ಪರ ಕಾದು ಭಯಂಕರವಾದ ಪರಧರ್ಮಗಳ ದಾಳಿಗೆ ಆಹುತಿಯಾಗುತ್ತಿದ್ದ ಹೊತ್ತಿನಲ್ಲಿ ಸಾರಿದ್ದೂ ಸಮನ್ವಯವನ್ನೇ. ಚಂದ್ರಿಕೆಯು ನವಾಬನ ಅತ್ಯಾಚಾರಕ್ಕೊಳಗಾಗಿ ಹೊಟ್ಟೆಯಲ್ಲಿ ಅವನ ಪಿಂಡವನ್ನು ಹೊತ್ತ ಗಳಿಗೆಯಲ್ಲಿ ಜುಗುಪ್ಸೆ ತಾಳಿದ್ದಳು, ಶೂನ್ಯಕ್ಕೆ ಸಂದಿದ್ದಳು, ಸಂನ್ಯಾಸಿನಿಯೋ ಭಿಕ್ಕುಣಿಯೋ ಆಗುವ ಮಾತಾಡಿದ್ದಳು. ಆಗ ಗುಹಾಮಂಟಪದಲ್ಲಿ ಸಮಾಧಿಗೆ ಸಂದ ಯೋಗಗುರು ದಿಗ್ದರ್ಶಿಸಿದ್ದೂ ಅದನ್ನೇ, "ನೀನು ಕೃಷ್ಣಾನಂದನನ್ನು ವಿವಾಹವಾಗು. ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿಗೆ ಸಂಸ್ಕಾರಮಾಡಿ ನಿಮ್ಮದಾಗಿಸಿಕೊಳ್ಳಿ. ವೀರ್ಯವಂತರಾದ ಇನ್ನೂ ನಾಲ್ಕು ಮಕ್ಕಳನ್ನು ಪಡೆಯಿರಿ". ರಾಷ್ಟ್ರೀಯ, ಧಾರ್ಮಿಕ ಮತ್ತು ದಾಂಪತ್ಯದ ಮೂರು ಪಾತಳಿಗಳಲ್ಲಿ ಕಾದಂಬರಿಯನ್ನು ನೈಪುಣ್ಯದಿಂದ ಬೆಳೆಸಿದ ಲೇಖಕರು ಮೂರು ಪಾತಳಿಗಳಿಂದಲೂ ತಲುಪಿದ ಸಿದ್ಧಾಂತ ಒಂದೇ. ದೊಡ್ಡದಕ್ಕಾಗಿ ಸಣ್ಣದನ್ನು ತ್ಯಾಗಮಾಡಬೇಕೆಂದು. ಇದು ಕ್ರಿ.ಶ. ಎಂಟನೆಯ ಶತಮಾನದ ಭಾರತದ ಇತಿಹಾಸದ ಸಂದಿಗ್ಧ ಕಾಲದಲ್ಲಿ ಮಥನಗೊಂಡ ಸತ್ಯ; ಇಂದಿಗೂ ಪ್ರಸ್ತುತ. ಅದು ಭೈರಪ್ಪ.

7. ಅನುವಾದ

ಪೂರ್ವಸಿದ್ಧತೆ

ಒಳ್ಳೆಯದೊಂದು ಕೃತಿಯನ್ನು ಸಂಕೇತಿಭಾಷೆಗೆ ಅನುವಾದಿಸಬೇಕೆಂಬ ಸಂಕಲ್ಪ ಬಹಳ ದಿನಗಳಿಂದ ಇತ್ತು. ಅದು ಮಹಾಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪನವರ ಕಾದಂಬರಿಯೇ ಆಗಿರಲಿ ಎಂಬ ಆಸೆಯೂ ಇತ್ತು. ಆದರೆ 'ಸಾರ್ಥ'ವನ್ನೇ ಆರಿಸಿಕೊಳ್ಳಲು ಆಗ ನಿರ್ದಿಷ್ಟಕಾರಣಗಳೇನೂ ಇರಲಿಲ್ಲ.

ತಮ್ಮ ಕಾದಂಬರಿಯನ್ನು ಸಂಕೇತಿ ಭಾಷೆಗೆ ಅನುವಾದಿಸಬಹುದೆ ಎಂದು ಭೈರಪ್ಪನವರನ್ನು ಕೇಳುವ ಮೊದಲು ಬೇಕಾದಷ್ಟು ಸಿದ್ಧತೆ ಮಾಡಿಕೊಂಡಿದ್ದೆ. ಸಂಕೇತಿಭಾಷೆಯು ಆಡುಭಾಷೆಯೇ ಹೊರತು ಅದಕ್ಕೆ ಲಿಪಿಯೂ ಇಲ್ಲ, ಈವರೆಗೆ ಅದರಲ್ಲಿ ಹೇಳಿಕೊಳ್ಳುವಂಥ ಸಾಹಿತ್ಯವೂ ಬಂದಿಲ್ಲ.

ಇಲ್ಲಿಗೆ ಸುಮಾರು ಇಪ್ಪತ್ತು ವರ್ಷಗಳಿಗೂ ಹಿಂದೆ ಸಂಕೇತಿ ಸಂಘವೊಂದು ಹೊರತಂದ ವಿಶೇಷ ಸಂಚಿಕೆಯೊಂದರಲ್ಲಿ ಈ ಪ್ರಯತ್ನ ಮಾಡಿದ್ದೆ. ಅದಕ್ಕಾಗಿ ಕೆಲವು ನಾಲ್ಕುಸಾಲಿನ ಪದ್ಯಗಳನ್ನು ಕನ್ನಡಲಿಪಿಯಲ್ಲಿ ಸಂಕೇತಿ ಭಾಷೆಯಲ್ಲಿ ಬರೆದೆ. ಅವು ದಿನಕರದೇಸಾಯಿಯವರ ಚೌಪದಿಗಳ ಮಾದರಿಯಲ್ಲಿದ್ದವು. ಅವರ ಪದ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡುದು ಸರಳವಾಗಿ ಆಕರ್ಷಕವಾಗಿ ಸಮಕಾಲೀನವಾದ ಪ್ರಸ್ತುತತೆಯನ್ನು ಹೊಂದಿರಲಿ ಎಂಬುದಕ್ಕೆ. ಎಲ್ಲ ಅಂಶಗಳಲ್ಲೂ ಅವು ಹಾಗೆಯೇ ಇದ್ದುವು, ಆದರೆ ಓದಲು ಬಹಳ ಕಷ್ಟವಾಗಿತ್ತು. ಹೋದಲ್ಲೆಲ್ಲಾ ಜನರು 'ಅದನ್ನು ಓದುವುದು ಹೇಗೆ?'

ಎಂದು ನಗುತ್ತಾ ಹಾಸ್ಯ ಮಾಡುತ್ತಿದ್ದರು. ಆ ನಂತರವೂ ಸುಧಾರಣೆಗಳೊಂದಿಗೆ ಅಂಥ ಪದ್ಯಗಳನ್ನು ಬರೆಯುವುದನ್ನು ಮುಂದುವರೆಸಿದೆ.

ಆ ಮೇಲೆ ಗದ್ಯದಲ್ಲಿ ಆ ಪ್ರಯೋಗವನ್ನು ಮಾಡಿದೆ. ಸಂಕೇತಿ ಸಮುದಾಯವೇ ಹೊರಡಿಸುತ್ತಿದ್ದ ಮಾಸಪತ್ರಿಕೆಯೊಂದರಲ್ಲಿ ಸಣ್ಣ ಸಣ್ಣ ಲೇಖನಗಳನ್ನು ಬರೆದೆ. ಅದು ಪ್ರಾರಂಭವಾದದ್ದೂ ಸುಮಾರು ಹದಿನಾರು ವರ್ಷಗಳ ಹಿಂದೆ. ಆಗಲೂ ಓದುಗರು ಅದರಲ್ಲಿ ತೊಡಗಿಕೊಳ್ಳುವಂತಾಗಲಿಲ್ಲ.

ಸುಮಾರು ನಾಲ್ಕು ವರ್ಷಗಳ ಹಿಂದೆ ಇ–ಮ್ಯಾಗಸಿನ್ ಒಂದನ್ನು ಸಂಕೇತಿಭಾಷೆಯಲ್ಲಿ ಪ್ರಾರಂಭಿಸಿದೆ. ಪಾಕ್ಷಿಕವಾಗಿ ಬರುತ್ತಿದ್ದ ಅದರ ಮೂವತ್ತಾರು ಸಂಚಿಕೆಗಳು ಪ್ರಕಟವಾದುವು. ಸರಾಸರಿ ಇಪ್ಪತ್ತು ಪುಟಗಳಿರುತ್ತಿದ್ದ ಪತ್ರಿಕೆ ಅದು. ಅದು ಮೊದಲು ಇಂಗ್ಲಿಷ್ ಲಿಪಿಯಲ್ಲಿತ್ತು. ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಹೊರದೇಶಗಳಲ್ಲಿರುವ ಸಂಕೇತಿಗಳೆಲ್ಲಾ ಓದುವಂತಾಗಲಿ ಎಂಬುದು ಅದರ ಉದ್ದೇಶವಾಗಿತ್ತು. ವಿಶೇಷ ಆಸಕ್ತಿ ತೋರಿದ ಬಲು ಅಪರೂಪದ ಓದುಗರು ದೊರೆತರು. ಇಂಗ್ಲಿಷ್ ಲಿಪಿಯ ಜತೆಜತೆಗೇ ಕನ್ನಡ ಲಿಪಿಯಲ್ಲೂ ಪತ್ರಿಕೆ ಬರುವಂತೆ ಮಾಡಿದೆ. ಸ್ಥಿರ ಚಿತ್ರಗಳೂ ವೀಡಿಯೋಗಳೂ ಅದರ ಭಾಗವಾದವು. ಬರೆದಿರುವ ಲೇಖನವನ್ನು ಓದಿ ಲೇಖನಗಳ ಜತೆಜತೆಗೇ ಧ್ವನಿಮುದ್ರಿಕೆಗಳೂ ಇರುವಂತೆ ಮಾಡಿದೆ. ನೋಡುಗರ ಸಂಖ್ಯೆ ಹೆಚ್ಚಿತು.

ನಾನು ಬರೆಯುತ್ತಿದ್ದುದು ಕೌಶಿಕ ಸಂಕೇತಿ ಭಾಷೆಯಲ್ಲಿ. ಬೆಟ್ಟದಪುರ, ಲಿಂಗದಹಳ್ಳಿ, ಮತ್ತೂರಿನ ಸಂಕೇತಿ ಭಾಷಾರೂಪಗಳಲ್ಲೂ ಬರೆಯುವ ಲೇಖಕರು ದೊರೆತರು. ಅವರವರ ಲೇಖನಗಳನ್ನು ಅವರವರೇ ಓದುತ್ತಿದ್ದರು; ಅವನ್ನು ಫೋನಿನ ಮೇಲೆ ಧ್ವನಿಮುದ್ರಿಸಿಕೊಂಡು ಪತ್ರಿಕೆಗೆ ಅಳವಡಿಸುತ್ತಿದ್ದೆ. ನಾವು ಊಹಿಸದೇ ಇದ್ದ ಫಲಿತಾಂಶ ಬಂತು. ಜಗತ್ತಿನ ಎಲ್ಲ ಮೂಲೆಗಳಿಂದ ಸಂಕೇತಿಗಳು ಅದನ್ನು ನೋಡುತ್ತಿದ್ದರು. ಭಾರತ, ಅಮೆರಿಕ, ಯೂರೋಪುಗಳಲ್ಲಿ ಅಧಿಕ; ಉಳಿದಂತೆ ಅಂಟಾರ್ಟಿಕಾ, ಆಸ್ಟ್ರೇಲಿಯಾ, ಆಫ್ರಿಕಾ, ದಕ್ಷಿಣ ಅಮೆರಿಕಾ, ಏಷ್ಯಾದ ಮೂಲೆಮೂಲೆಗಳಿಂದ ! ಹಾಗೆ ನೋಡುತ್ತಿದ್ದವರ ಸಂಖ್ಯೆ 925. ಒಂದೊಂದು ಕಂಪ್ಯೂಟರಿನಿಂದಲೂ ಮನೆಯವರೆಲ್ಲಾ ನೋಡುತ್ತಿದ್ದಿರಬಹುದು, ಕಡಮೆ ಎಂದರೆ ಎರಡು ಸಾವಿರ ಜನಕ್ಕಿಂತ ಹೆಚ್ಚು ಓದುಗರು ! ಉತ್ಸಾಹವನ್ನು ಚಿಮ್ಮಿಸುವ ಪ್ರೋತ್ಸಾಹ. ಪ್ರತಿಕ್ರಿಯೆಗಳೂ ಬರುತ್ತಿದ್ದವು. ಪ್ರಪಂಚದ ಎಂಥೆಂಥ ಮೂಲೆಮೂಲೆಯ ಊರುಗಳಲ್ಲಿ ಸಂಕೇತಿಗಳಿದ್ದಾರೆಂಬುದನ್ನು ಕಂಡು ಸೋಜಿಗವಾಗುತ್ತಿತ್ತು. ಅದಕ್ಕಾಗಿ ಸಂಘವೊಂದು ಪ್ರಾರಂಭವಾದಾಗ ಆ ಕೆಲಸವನ್ನು ಅದಕ್ಕೆ ಬಿಟ್ಟುಕೊಟ್ಟೆ.

ಓದುವವರು ಯಾರು!

ಡಾ. ಎಸ್.ಎಲ್. ಭೈರಪ್ಪನವರನ್ನು ಕೊನೆಗೂ ಕೇಳಿಬಿಟ್ಟೆ. ಭೈರಪ್ಪನವರು ಅಧ್ಯಯನವನ್ನೂ ಬರವಣಿಗೆಯನ್ನೂ ಮಾಡುವುದು ಕಡು ಏಕಾಂತದಲ್ಲಿ; ಬರವಣಿಗೆಯಲ್ಲಿ ನಿರತರಾದಾಗಲಂತೂ ಯಾರನ್ನೂ ಮಾತನಾಡಿಸುವುದಿಲ್ಲ. ಇದು ಜನಜನಿತವಾಗಿರುವ ದಂತಕಥೆ. ಹಾಗಾಗಿ ಮನೆಗೆ ಹೋಗಿ ತೊಂದರೆ ಕೊಡುವ ಧೈರ್ಯವಾಗುತ್ತಿರಲಿಲ್ಲ. ಯಾವುದಾದರೂ ಸಮಾರಂಭಕ್ಕೆ ಬಂದಾಗ ಕೇಳೋಣವೆಂದು ನಿರ್ಧರಿಸಿಕೊಂಡು ಅಲ್ಲಿಗೆ ಹೋಗುತ್ತಿದ್ದೆ. ಹಾಗೆ ಹೋದ ಘಳಿಗೆಯಲ್ಲಿ ಮಾತ್ರ ಅಂಥ ದೊಡ್ಡ ಲೇಖಕರನ್ನು ಹಾದಿಬೀದಿಯಲ್ಲಿ ಕೇಳುವುದೆ ಎಂಬ ಅಳುಕು ಕಾಡಿ ಸುಮ್ಮನಾಗುತ್ತಿದ್ದೆ. ಹೀಗೇ ತಿಂಗಳುಗಳು ಕಳೆದವು. ಇನ್ನು ಕೆಲಸವನ್ನು ಪ್ರಾರಂಭಿಸದೇ ಇರುವುದು ಸಾಧ್ಯವೇ ಇಲ್ಲ ಎಂಬ ಒತ್ತಡ ಹೆಚ್ಚಿದಾಗ ಕೇಳಿಯೇ ಬಿಟ್ಟೆ – ಒಂದು ಸಮಾರಂಭಕ್ಕೆ ಅವರು ಬಂದಿದ್ದಾಗ ! ಭೈರಪ್ಪನವರು ಥಟ್ಟನೆ ಸಹಜವಾಗಿ ಕೇಳಿದರು, 'ಅದನ್ನ್ ಯಾರ್ ಪ್ರಕಟಿಸ್ತಾರೆ, ಯಾರ್ ಓದ್ತಾರೆ?' ನನ್ನ ಮೂವತ್ತೊಂದು ವರ್ಷಗಳ ಪಡಿಪಾಟಲನ್ನು ಭಟ್ಟಿ ಇಳಿಸಿದ ಪ್ರಶ್ನೆ. ಭೈರಪ್ಪನವರ ತೀಕ್ಷ್ಣಮತಿ ಸರಿಯಾದ ಜಾಗವನ್ನು ಹಿಡಿದಿತ್ತು, ನೇರವಾಗಿ ಅಲ್ಲಿಗೇ.

'ದಾಖಲೆಗಾಗಿ ಮಾಡ್ತಿದೀನಿ ಸರ್ !'

ಮೌನ

'ಮಾಡಲೆ ಸರ್?'

'ಆಗಲಿ'

ಮುಗಿಯಿತು.

ಅದು ಅದಾಗಲೇ ನಾನು ತೀರ್ಮಾನಿಸಿಕೊಂಡಿದ್ದ ವಿಷಯ. ಆದರೆ ಭೈರಪ್ಪನವರ ಪ್ರಶ್ನೆ ನನ್ನನ್ನು ಅನೇಕ ದಿಕ್ಕುಗಳಿಂದ ತಟ್ಟಿ ಎಬ್ಬಿಸುತ್ತಿತ್ತು.

ಸಂಕೇತಿಗಳ ಸಂಖ್ಯೆ ಹೆಚ್ಚೇನಿಲ್ಲ. ಸಂಕೇತಿಗಳು ತಮಿಳುನಾಡು ಮತ್ತು ಕೇರಳದಲ್ಲೂ ಇದ್ದಾರೆ. ಅವರೆಲ್ಲರೂ ಮನೆಯಲ್ಲಿ ಮಾತಾಡುವುದು ತಮಿಳನ್ನು; ಮಲೆಯಾಳಂನಲ್ಲೂ ವ್ಯವಹರಿಸುತ್ತಾರೆ. ಆದರೆ 'ಸಂಕೇತಿ ಭಾಷೆ' ಎಂದು ನಾವು ಏನನ್ನು ಕರೆಯುತ್ತಿದ್ದೇವೋ ಅದು ಕರ್ನಾಟಕದ್ದು. ಕರ್ನಾಟಕದ ಸಂಕೇತಿಗಳ ಸಂಖ್ಯೆ ಸುಮಾರು ಇಪ್ಪತ್ತೈದು ಸಾವಿರ.

ಒಂಬೈನೂರು ವರ್ಷಗಳ ಹಿಂದಿನ (ಈಗಿನ) ತಮಿಳುನಾಡು ಮತ್ತು ಕೇರಳದ ಗಡಿಭಾಗಗಳಿಂದ ಕರ್ನಾಟಕಕ್ಕೆ ಒಂದು ದೊಡ್ಡ ಗುಂಪಿನಲ್ಲಿ ವಲಸೆ ಬಂದ ಸಂಕೇತಿಗಳು ಮತ್ತೆ ಆಕಡೆ ನೋಡಲಿಲ್ಲ, ಸಂಬಂಧ ಇಟ್ಟುಕೊಳ್ಳಲಿಲ್ಲ, ವ್ಯವಹಾರ ಮಾಡಲಿಲ್ಲ. ತಮಿಳಿನಿಂದ ಅವರಿಗೆ ಆಗಬೇಕಾದುದು ಏನೂ ಇರಲಿಲ್ಲ. ವೇದವಿತ್ತು, ಶಾಸ್ತ್ರವಿತ್ತು, ಪುರಾಣವಿತ್ತು, ಸಂಸ್ಕೃತ ಭಾಷೆ ಮತ್ತು ಸಾಹಿತ್ಯವಿತ್ತು, ಅನುಷ್ಠಾನವಿತ್ತು; ಮುಗಿಯಿತು. ಕರ್ನಾಟಕದ ವಿವಿಧೆಡೆ ನೆಲೆಸಿದರು. ಸಹಜವಾಗಿಯೇ ಸ್ಥಳೀಯ ಬ್ರಾಹ್ಮಣರೊಂದಿಗೆ ಹೆಚ್ಚು ಬೆರೆತರು, ಅವರ ಕನ್ನಡವನ್ನು ಕಲಿತರು. ತೋಟ ಬೆಳೆಸಿದರು; ಆದರೆ ತಾವೇ ತೋಟದಲ್ಲಿ ದುಡಿಯುವವರಾದುದರಿಂದ ಆ ಕಾರಣದಿಂದಲೇ ಕನ್ನಡಿಗರ ಒಡನಾಟ ಹೆಚ್ಚಲಿಲ್ಲ. ತಮ್ಮ ಫಸಲನ್ನು ಮಾರಲು ಸಂತೆಗಳಿಗೆ ಹೋದರು, ಆಗ ಹೆಚ್ಚಿತು. ಹೊಲಗದ್ದೆ ಮಾಡಿದ ಮೇಲೆ ಎಲ್ಲ ಕನ್ನಡಿಗರೊಂದಿಗೂ ಹೆಚ್ಚು ವ್ಯವಹಾರ ಪ್ರಾರಂಭವಾಯಿತು. ಶಾಲೆಗಳು, ಕಚೇರಿಗಳು, ನೌಕರಿ, ನಗರೀಕರಣ ಆದಂತೆ ಕ್ರಮಕ್ರಮವಾಗಿ ಹೆಚ್ಚುತ್ತ ಹೋಯಿತು. ಇಪ್ಪತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಇದೆಲ್ಲ ಒಂದು ಚಳವಳಿಯ ರೂಪು ಪಡೆಯಿತು. ಅದಾದ ಒಂದೆರಡು ದಶಕಗಳಲ್ಲಿ ಹೆಣ್ಣುಮಕ್ಕಳೂ ಈ ಕ್ಷೇತ್ರಗಳನ್ನು ಪೂರ್ಣವಾಗಿ ಪ್ರವೇಶಿಸಿದರು. ಹೀಗೆ ಈ ಒಂಬೈನೂರು ವರ್ಷಗಳಲ್ಲಿ ಕನ್ನಡದ ಪದಗಳು ಸಂಕೇತಿ ಭಾಷೆಯನ್ನು ಪ್ರವೇಶಿಸತೊಡಗಿದವು. ತಮಿಳು ಪದಗಳನ್ನು ಓಡಿಸುವುದೋ ಕೈಕಾಲು ಮುರಿಯುವುದೋ ಪರ್ಯಾಯವಾಗಿ ಅವುಗಳ ಜತೆಗಿರುವುದೋ ಮಾಡಿದವು. ಕರ್ನಾಟಕದ ಸಂಕೇತಿಗಳು ಆಡುವ ಭಾಷೆಯು ತಮಿಳಿನಿಂದ ದೂರವಾಗುತ್ತಾ ಕನ್ನಡದ ಬಟ್ಟೆ ಬರೆ, ಚರ್ಮ, ವಾಸನೆ ಪಡೆಯುತ್ತಾ ಬಂತು. ಅದನ್ನು ಕೆಲವು ಭಾಷಾಶಾಸ್ತ್ರಜ್ಞರು 'ಸಂಕೇತಿ ಕನ್ನಡ' ಎಂದು ಗುರುತಿಸಿದರು; ಹಾಮಾನಾ ಅವರಂಥ ಭಾಷಾಶಾಸ್ತ್ರಜ್ಞರು ಅದನ್ನು ಅನುಮೋದಿಸಿದರು. ಸಂಕೇತಿ ಭಾಷೆಯು ಕನ್ನಡದ ಮಗ್ಗುಲಲ್ಲಿ ಕೂತಿತು. ಮತ್ತೆ ಕೆಲವು ಭಾಷಾಶಾಸ್ತ್ರಜ್ಞರು ಅದರ ವ್ಯಾಕರಣವು ತಮಿಳಿಗೆ ಹೊಂದುವಂಥದು, ಆದ್ದರಿಂದ ಅದು ತಮಿಳಿನ ಪಕ್ಕದಲ್ಲಿ ಕೂರಬೇಕು ಎಂದರು. ಉಚ್ಚಾರದಲ್ಲಿ, ಬಹುಪಾಲು ಪದಗಳಲ್ಲಿ ಸಂಕೇತಿ ಭಾಷೆಯು ಕನ್ನಡದ ಉಸಿರಾಡುತ್ತಿದೆ ಎಂಬ ಪ್ರತಿವಾದ ಬಂತು. ಜತೆಗೆ ಸಂಸ್ಕೃತ ಭೂಯಿಷ್ಠವೂ ಆಗಿರುವುದರಿಂದ ಸಂಕೇತಿ ಭಾಷೆಯು ಕನ್ನಡ ಲಿಪಿಗೆ ಹೊಂದುತ್ತದೆ, ತಮಿಳಿಗಲ್ಲ. ಅದನ್ನೇ ನಾವೀಗ ಸಂಕೇತಿಭಾಷೆ ಎಂದು ಗುರುತಿಸುತ್ತಿರುವುದು.

ಪೂರ್ಣವಾಗಿ ಕೃಷಿಕರೇ ಆಗಿದ್ದ ಸಂಕೇತಿಗಳು ಸ್ವಾತಂತ್ರ್ಯಾನಂತರ ಆಧುನಿಕ ಶಿಕ್ಷಣವನ್ನು ಪಡೆದು ಉದ್ಯೋಗಗಳಿಗೆ ಸೇರಿ, ನಗರಗಳನ್ನು ಸೇರತೊಡಗಿದರು. ಈಗ ಸಂಕೇತಿ ಸಮುದಾಯದ ಶೇಕಡ ತೊಂಬತ್ತು ಜನ ನಗರಗಳನ್ನು ಸೇರಿದ್ದಾರೆ. ನಗರಗಳನ್ನು ಸೇರಿದ ಎರಡನೆಯ ತಲೆಮಾರಿನವರು ಸಂಕೇತಿ ಭಾಷೆಯಿಂದ ದೂರವಾಗಿ ಮೂರನೆಯ ತಲೆಮಾರಿನವರು ಸಂಕೇತಿ ಭಾಷೆಯನ್ನು ತೊರೆದಿದ್ದಾರೆ. ಸದ್ಯ ಸಂಕೇತಿ ಭಾಷೆಯನ್ನು ಆಡುವುದು ಶೇಕಡ ಎಪ್ಪತ್ತಕ್ಕಿಂತ ಹೆಚ್ಚು ಭಾಗ ನಿಂತುಹೋಗಿದೆ.

ಇಪ್ಪತ್ತೈದು ಸಾವಿರ ಜನರ ಸಮೂಹದಲ್ಲಿ ಸಂಕೇತಿಭಾಷೆಯು ಬರದಿರುವವರ ಸಂಖ್ಯೆಯೇ ದೊಡ್ಡದು. ಆದರಾಗಲಿ, ಅಳಿದುಳಿದವರನ್ನೇ ಬಳಿದುಕೊಳ್ಳೋಣವೆಂದರೆ ಲಿಪಿಯ ಸಮಸ್ಯೆ ಇನ್ನೊಂದು. ಇಂಗ್ಲಿಷ್ ಲಿಪಿಯ ಮೂಲಕ ಸಂಕೇತಿಯನ್ನೋದಿಕೊಳ್ಳುವುದು ಕಷ್ಟದ ಕೆಲಸ. ಸಂಕೇತಿಭಾಷೆ ಬರುತ್ತಿರುವವರೆಲ್ಲರೂ ಕನ್ನಡ ಲಿಪಿಯನ್ನು ಬಲ್ಲವರು. ಸಂಕೇತಿ ಭಾಷೆಯನ್ನು ಕಳೆದುಕೊಳ್ಳುತ್ತಿರುವ ಅಂಚಿನವರಿಗೆ ಇಂಗ್ಲಿಷ್ ಮಾಧ್ಯಮದ ಮೂಲಕ ಇಂಗ್ಲಿಷ್ ಅಕ್ಷರಗಳು ಕಣ್ಣಿಗೆ ಒಗ್ಗಿವೆ; ಕನ್ನಡ ಹಿಂದಾಗಿದೆ. ಎಲ್ಲ ಕನ್ನಡಿಗರಂತೆಯೇ ಅವರೂ ಕನ್ನಡದಲ್ಲಿ ಓದಲು ಬರುವುದಿಲ್ಲ ಅಥವ ಸಲೀಸಾಗಿ ಓದಲು ಬರುವುದಿಲ್ಲ ಎಂಬುದನ್ನು ಸ್ವಲ್ಪ ಹೆಚ್ಚಾಗಿಯೇ ಹೆಮ್ಮೆಯಿಂದ ಹೇಳಿಕೊಳ್ಳುವಂಥವರು. ಇಂಗ್ಲಿಷ್ ಲಿಪಿಯಲ್ಲಿದ್ದರೂ ಓದದವರಿಗೆ 'ಕನ್ನಡ ಲಿಪಿ ಅಲ್ಲದಿದ್ದರೆ ನೋಡಬಹುದಿತ್ತು' ಎಂಬ ಠಕ್ಕು. ಕನ್ನಡ ಲಿಪಿಯನ್ನು

ಚೆನ್ನಾಗಿಯೇ ಓದಬಲ್ಲ ಸಂಕೇತಿಭಾಷಾವಿದರಿಗೆ "ನಾವು 'ಸಾರ್ಥ'ವನ್ನು ಕನ್ನಡದಲ್ಲಿಯೇ ಓದಿಕೊಳ್ಳುತ್ತೇವೆ, ನಿಮ್ಮ ಸಂಕೇತಿ ಪುಸ್ತಕದ ಹಂಗೇನು" ಎಂದು ಕೇಳುವ ನಿಲುವು.

ಹೋಗಲಿ, ಪುಷ್ಪವೊಂದು ಬಳಲಲ್ ಭೃಂಗಕ್ಕೆ ಪೂವಿಲ್ಲವೇ ಎಂದು ಕೇಳೋಣವೆಂದರೆ ನಾನು ಬರೆಯುತ್ತಿರುವುದು ಕೌಶಿಕ ಸಂಕೇತಿ ಭಾಷೆಯಲ್ಲಿ. ಮತ್ತೂರು, ಲಿಂಗದಹಳ್ಳಿ, ಬೆಟ್ಟದಪುರದ ಸಂಕೇತಿಭಾಷಾಭೇದಗಳನ್ನು ಮಾತಾಡುವವರಿಗೆ ಇದನ್ನೋದುವ ಆತ್ಮೀಯತೆ ಹೆಚ್ಚಾಗಿ ಹುಟ್ಟುವುದಿಲ್ಲ. ಆ ಭೇದಗಳಿಗೆ ಭಾಷಾವೈಶಿಷ್ಟ್ಯದ ದೃಷ್ಟಿಯಿಂದ ಬೇರೆ ಬೇರೆ ಖದರಿದೆ ಎಂಬುದೂ ನಿಜ.

ಅದರಲ್ಲದನ್ ಕಳೆದು ಇದರಲ್ಲ್ ಇದನ್ ಕಳೆದರೆ ಉಳಿದೋರ್ ಯಾರು? ಮೂರು ಮತ್ತೊಂದು ಜನ. ಅವರ ಸವಾಲುಗಳಿಗೆ ಉತ್ತರಿಸುವುದು ಇನ್ನೂ ಕಷ್ಟ.

1) ಆತ್ಮೀಯವಾಗಿಸಲು: ಸಂಕೇತಿಭಾಷೆಯು ಒಂಬೈನೂರು ವರ್ಷಗಳಿಂದ ಮಾತಿನರೂಪದಲ್ಲಿ ಮಾತ್ರ ಇದೆ, ಬರಹರೂಪದಲ್ಲಿಲ್ಲ. ಈ ಮಾತನಾಡುವವರೆಲ್ಲ ಒಂದೇ ಕಡೆಯಲ್ಲಿ ನೆಲೆಸಿರಲಿಲ್ಲ. ನದಿಗಳಿಂದಲೂ, ಕಾಡುಗಳಿಂದಲೂ ಬೇರ್ಪಟ್ಟು ಸಂಪರ್ಕವನ್ನೇ ಕಳೆದುಕೊಂಡಿದ್ದ ಸ್ಥಿತಿಯಲ್ಲಿ ಮತ್ತೂರು, ಲಿಂಗದಹಳ್ಳಿ, ಬೆಟ್ಟದಪುರದ ಆಡುಮಾತುಗಳು ತಮ್ಮ ಸ್ವರೂಪವನ್ನು ಬದಲಿಸಿಕೊಳ್ಳುತ್ತ ಹೋದವು. ಅವರು ಸಂಪರ್ಕದಲ್ಲಿದ್ದ ಬೇರೆ ಬೇರೆ ಪ್ರಾಂತಗಳ ಕನ್ನಡಿಗರೂ ಅವರ ಭಾಷೆಗಳನ್ನು ಪ್ರಭಾವಿಸಿದರು. ಹಾಸನಜಿಲ್ಲೆಯ ಕೌಶಿಕ ಸಂಕೇತಿಗಳಲ್ಲಿಯೇ ಹೇಮಾವತಿ ನದಿಯ ದಕ್ಷಿಣಕ್ಕಿದ್ದವರ ಮಾತಿನ ಸ್ವರೂಪಕ್ಕಿಂತ ಉತ್ತರಕ್ಕಿದ್ದವರ ಮಾತಿನ ಸ್ವರೂಪವು ಭಿನ್ನವಾಯಿತು. ಒಂದೊಂದು ಪ್ರದೇಶದ ಭಿನ್ನತೆಗೂ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಭಾಷಾಧ್ಯಯನದ ದೃಷ್ಟಿಯಿಂದ ಈ ಭಿನ್ನತೆಗಳ ಸ್ವರೂಪವನ್ನು ಇತರ ದ್ರಾವಿಡ ಭಾಷೆಗಳೊಂದಿಗೆ, ಅದರಲ್ಲೂ ತಮಿಳು ಮಲೆಯಾಳಂಗಳೊಂದಿಗೆ ಹೋಲಿಸಿನೋಡಲು ಸೊಗಸಾದ ಅವಕಾಶವಿದೆ. (ಸಂಪರ್ಕ ಮಾಧ್ಯಮಗಳು ಹೆಚ್ಚಿದಂತೆ ಕನ್ನಡದ ಪ್ರಾದೇಶಿಕ ಭೇದಗಳ ವೈಶಿಷ್ಟ್ಯವು ಇತ್ತೀಚೆಗೆ ಕಡಮೆಯಾಗುತ್ತಿರುವಂತೆ ಸಂಕೇತಿಯಲ್ಲೂ ನಡೆದಿದೆ, ಆದರೆ ಭಾಷೆಯೇ ಸಾಯುತ್ತಿದೆ.)

ಈ ವ್ಯತ್ಯಾಸಗಳು ಎಷ್ಟಿವೆಯೆಂದರೆ ಹೇಮಾವತಿಯ ದಕ್ಷಿಣಕ್ಕಿರುವ ಹತ್ತಾರು ಊರುಗಳಲ್ಲಿರುವ ಸಂಕೇತಿಗಳಲ್ಲೇ ಉಚ್ಚಾರ, ಪದಸ್ವರೂಪ ಮತ್ತು ಮಾತಾಡುವ ವೈಖರಿಯಲ್ಲಿ ಎದ್ದುಕಾಣುವ ಭೇದಗಳಿವೆ. ಪರ್ಯಾಯ ಪದಗಳಿವೆ. ಅವೆಲ್ಲವೂ ಭಾಷಾವಿಜ್ಞಾನಿಗಳಿಗೆ ಮಾತ್ರ ಗೋಚರವಾಗುವಂಥವುಗಳೇನಲ್ಲ.

ಎಲ್ಲರಿಗೂ ಆತ್ಮೀಯವಾಗುವಂತೆ ಬರೆಯಲು ಇರುವ ತೊಡಕು ಎಷ್ಟು ದೊಡ್ಡ ಪ್ರಮಾಣದ್ದು ಎಂಬುದನ್ನೇ ಇದು ತೋರಿಸುತ್ತದೆ. ಉದಾಹರಣೆಗೆ ಒಂದು: ಹಾಸನಜಿಲ್ಲೆಯಲ್ಲಿ ಹೇಮಾವತಿಯ ದಕ್ಷಿಣಕ್ಕಿರುವ ಕೌಶಿಕ ಸಂಕೇತಿಗಳು ವ್ಯಂಜನಾಂತವಾಗಿಯೇ ಪದಗಳನ್ನು ಬಳಸುವುದು ರೂಢಿ. ಅಪರೂಪವಾಗಿ ಉಕಾರಾಂತವಾಗಿ ಬಳಸುವವರುಂಟು. ಉಳಿದ ಎಲ್ಲ ಸಂಕೇತಿಗಳೂ ಬಹುಪಾಲ ಇಕಾರಾಂತವಾಗಿಯೇ ಬಳಸುತ್ತಾರೆ.

ಬರುತ್ತಾನೆ	– ವರಂದ್	– ವರಂದು	– ವರಂದಿ
ಹೋಗುತ್ತಾನೆ	– ಪೊಹಂದ್	– ಪೊಹಂದು	– ಪೊಹಂದಿ
ನೋಡುತ್ತಾನೆ	– ಪಾರಂದ್	– ಪಾರಂದು	– ಪಾರಂದಿ
	ಪಾಕಂದ್	– ಪಾಕಂದು	– ಪಾಕಂದಿ

ಇ–ಮ್ಯಾಗಸಿನ್ ಎಲ್ಲರಿಗೂ ತಲುಪುತ್ತಿದ್ದುದರಿಂದ ಇಕಾರಾಂತವಾಗಿಯೇ ಪದಗಳನ್ನು ಬಳಸುತ್ತಿದ್ದೆ. ಆದರೆ ವ್ಯಂಜನಾಂತ ಪದಗಳನ್ನು ಬಳಸುತ್ತಿದ್ದವರಿಂದ 'ಅದು ನಮ್ಮ ಭಾಷೆಯೇ ಅಲ್ಲ, ಆತ್ಮೀಯತೆಯೇ ಉಕ್ಕುತ್ತಿಲ್ಲ' ಎಂಬ ಆಕ್ಷೇಪ ಬಂತು. (ಅಲ್ಲಿಯೂ ಅಪರೂಪಕ್ಕೆ ಆಚೆ, ಶೇರಿಚ್ಚೆ ಎಂಬಂತೆ ಇಕಾರಾಂತ ಬಳಕೆ ಇಲ್ಲದಿಲ್ಲ.)

2) **ಪದಗಳ ನಮ್ಯತೆ:** ಕೇವಲ ಆಡು ಮಾತಾದುದರಿಂದಾಗಿ ಸ್ಪಷ್ಟವಾಗಿ ಉಚ್ಚರಿಸದವರಿಂದ, ಕೇಳಿಸಿಕೊಳ್ಳದವರಿಂದ, ಗಮನಿಸದವರಿಂದ ಅಥವ ಅಂಥ ಮತ್ತಾವುದೋ ಕಾರಣಕ್ಕೆ ಅನೇಕ ಪದಗಳಿಗೆ ಸ್ವರೂಪದಲ್ಲಿ ನಮ್ಯತೆ ಬಂತು.

ಉದಾ: ಒಂಡೂ ಕಾಣೆ, ಒಂಡ್ಯೂ ಕಾಣೆ, ಒಂಡಿಯೂ ಕಾಣೆ (ಒಂದೂ ಕಾಣೆ)

ವರಾಂಡಿಕ್ಕಚ್ಚೆ, ವರಾಂಡಿಕ್ಕರಪೊ, ವರಾಂಡಿಕ್ಕರಹೊ (ಬರುತ್ತಿರುವಾಗ)

3) ತೊಂತಿದ ಪದಗಳು (ಸಂಧಿ+): ಪದಗಳು ಮಾತಿನ ಭರದಲ್ಲಿ ತೊಂತಿಕೊಂಡೇ ಸಾಗುತ್ತವೆ.

ಉದಾ:	ಪರಪಡಾಂಡಿರ್	ವಂಕಿಂಡ್ವಂದುಟೇಯೊ?
	– ಹೊರಡುತ್ತಿರು	– ತೊಗೊಂಡು ಬಂದುಬಿಟ್ಟೆಯೊ?
	ಇದನ್ನು ಆಡುವಾಗ	– ವಂಕಿಂಡ್ ವಂದ್ ಉಟೇಯೊ?
	ಪರಪ್‌ಡಾಂಡಿರ್	
	ಪರ್‌ಪ್‌ಡಾಂಡಿರ್	ಪರಂದ್ವಂದ್ಹುಡಿಯಾಚ್
	ಪರ್ಪ್‌ಡಾಂಡಿರ್	– ಹುಟ್ಟಿಬಂದ ಹಾಗಾಯಿತು
	ಪರಪ್ಪ್‌ಡಾಂಡಿರ್	– ಪರಂದ್ ವಂದಹುಡಿ ಆಚ್
		ಪೊಹನ್ನಾಂಟ್
		– ಪೊಹನ್ನ ಅಂಟ್

ಇತ್ಯಾದಿ ಆಗುತ್ತದೆ.

ಇದನ್ನು ಬರವಣಿಗೆಗೆ ತಂದಾಗ ಈ ಯಾವ ರೂಪವನ್ನು ಬಳಸಿದರೂ ಆತ್ಮೀಯವೇ. ಆದರೆ ವ್ಯಂಜನಗಳೂ ಒತ್ತಕ್ಷರವೂ ವಿಜೃಂಭಿಸುತ್ತವೆ. ಓದಲು ತೊಡರು. ಅದನ್ನು ಸ್ವಲ್ಪ ಸಮಮಾಡಿಕೊಂಡು ಪರಪಡಾಂಡಿರ್ ಎಂದು ಬರೆಯಬಹುದು. ಆಗಲೂ ಮಾತಾಡುವಂತೆ ಅದನ್ನು ಪರಪ್‌ಡಾಂಡಿರ್ ಇತ್ಯಾದಿಯಾಗಿ ಓದಿಕೊಳ್ಳಬಹುದು. ಅದಕ್ಕೆ ರೂಢಿಯಾಗಬೇಕು. ರೂಢಿ ಮಾಡಿಕೊಳ್ಳದಿದ್ದರೆ ಆತ್ಮೀಯವಾಗುವಂತಿಲ್ಲ, ರೂಢಿಮಾಡಿಕೊಳ್ಳಲು ತಾಳ್ಮೆ ಬೇಕು, ಶ್ರಮ ಬೇಕು, ಪ್ರೀತಿ ಬೇಕು, ಗೌರವ ಬೇಕು. ಪರಪಡಾಂಡ್ ಇರ್ ಎಂದೇ ಬರೆದರೆ ಕೂಡ ಸಾಧ್ಯ; ರೂಢಿ ಬೇಕು; ಆಗಲೂ ವ್ಯಂಜನಾಂತಗಳು ಹೆಚ್ಚಾಗುವ ಭೀತಿ.

4) ಒತ್ತಕ್ಷರಗಳು: ಒತ್ತಕ್ಷರಗಳನ್ನು ಸಾಧ್ಯವಾದಷ್ಟೂ ಪರಿಹರಿಸಿಕೊಳ್ಳಬೇಕು. ಸಂಕೇತಿಗಳು ಒತ್ತಿ ಮಾತಾಡುವುದು, ಅನುನಾಸಿಕಗಳನ್ನೂ ಮಹಾಪ್ರಾಣಗಳನ್ನೂ ಬಳಸುವುದು ಹೆಚ್ಚು. ವ್ಯಂಜನಾಂತಗಳೂ ಕಡಮೆಯಾಗಬೇಕು. ಬರೆಯಲೂ ಓದಲೂ ಅದರಿಂದ ಅನುಕೂಲ.

ವಂಕಿಂಡುಡು – ವಂಕ್ಯಿಂಡುಡು (ತೆಗೆದುಕೊಂಡುಬಿಡು)

ಪರಪಟ್ಟುಟೇಯೊ? – ಪರಪಟ್ಟುಟ್ಟೇಯೊ? (ಹೊರಟುಬಿಟ್ಟೆಯೊ?)

ಸಂಕೇತಿಗಳು ಎಷ್ಟು ಒತ್ತಿ ಮಾತನಾಡುತ್ತಾರೆಂದರೆ ಇತರರು ಈ ರೂಪಗಳನ್ನು ಹಿಡಿದು ಹಾಸ್ಯ ಮಾಡುವುದುಂಟು.

ಉದಾ: ವಂಕ್ಕ್ಯಿಂಡುಡು, ಪರಪಟ್ಟುಟ್ಟೇಯೋ, ಓಢೋ ಅದ್? ಹೀಗೆ. (ಇದು ವೇದಾಧ್ಯಯನದ ಪ್ರಭಾವವೆಂದೂ ಹೇಳುತ್ತಾರೆ, ತೋಟದಲ್ಲಿ ಮಮಟಿ ಹಿಡಿದು ಕೆಲಸ ಮಾಡುವ ಒರಟರಾದ್ದರಿಂದ ಹೀಗೆ ಎಂಬ ವಿವರಣೆಯೂ ಇದಕ್ಕಿದೆ.) ಸಾಧ್ಯವಾದಷ್ಟೂ ಇಂಥ ಎರಡು ರೀತಿಯ ಪ್ರಯೋಗಗಳಿರುವಾಗ ಒತ್ತಕ್ಷರಗಳಿಲ್ಲದ ಅಥವಾ ಕಡಮೆ ಇರುವ ರೂಪಗಳನ್ನು ಇಟ್ಟುಕೊಂಡಿದೆ. ಆದರೆ ಭಾಷಾಧ್ಯಯನವನ್ನು ದೃಷ್ಟಿಯಲ್ಲಿಟ್ಟುಕೊಂಡಿರುವುದರಿಂದ ಒಂದೊಂದು ರೂಪವನ್ನು ಒಮ್ಮೊಮ್ಮೆ ಬಳಸಿದೆ ಅಥವಾ ಅಡಿಟಿಪ್ಪಣಿಯಲ್ಲಿ ಕೊಟ್ಟಿದೆ. ತೊಂತಿಕೊಂಡಿರುವ ಪದಗಳನ್ನೂ ಅಡಿಟಿಪ್ಪಣಿಯಲ್ಲಿ ಬಿಡಿಸಿಕೊಟ್ಟು ಪದದ ರೂಪದ ಪರಿಚಯಮಾಡಿಕೊಡಲಾಗಿದೆ.

ಉದಾ: ವಹಿಚ್ಚಕಂಡಾನಮೇಲೆ – ವಹಿಚ್ಚಕಂಡ್ ಆನಮೇಲೆ

ಪರಪಟ್ಟಪೋಚು – ಪರಪಟ್ಟ್ ಪೋಚು

5) ಅನುನಾಸಿಕ: ಸಂಕೇತಿ ಭಾಷೆಯಲ್ಲಿ ಅನುನಾಸಿಕಗಳ ಭರಾಟೆ ಹೆಚ್ಚು.

ವರ್ರು, ಅವ್ನು ವರ್ರು (ಆತನು ಬರೋನು)

ಅವೆ ಪೋಹ್ನು (ಆಕೆ ಹೋಗೋರು)

ವಚ್ಞ (ಇಟ್ಟರು), ಉಟ್ಞ (ಬಿಟ್ಟನು, ಬಿಟ್ಟರು), ಇಟ್ಞ (ಬಡಿಸಿದರು) ಇತ್ಯಾದಿ. ಇವನ್ನೆಲ್ಲ ವರುಂ, ಅವ್ರುಂ ವರುಂ, ಅವೆ ಪೋಹುಂ, ವಚ್ಚಾಂ, ಉಟ್ಟಾಂ, ಇಟ್ಟಾಂ ಹೀಗೆ ಬಿಂದುಯುಕ್ತವಾಗಿ ಬಳಸಲಾಗಿದೆ. ಬರವಣಿಗೆಯ ಅನುಕೂಲವೇ ಉದ್ದೇಶ. [ಗಮನಿಸಿ: ಕನ್ನಡದಲ್ಲೂ ಅವಾಂ ಬಂದಿದ್ದ, ಭಾವೀಂ (ಮೀ) ತಾವುಂ]

ಅನುನಾಸಿಕಗಳ ಉಚ್ಚಾರವು ಕೆಲವೆಡೆ ಕನ್ನಡದಂತೆಯೇ. ಆದರೆ ಮಲೆಯಾಳಂನ ಕಟು ಅನುನಾಸಿಕೋಚ್ಚಾರವನ್ನು ಇನ್ನೂ ಉಳಿಸಿಕೊಂಡಿರುವ ಲಕ್ಷಣಗಳು ಕೆಲವೆಡೆ ಕಾಣುತ್ತವೆ. ಅಂಥ ಕಡೆ ಮಾತ್ರ ಅನುನಾಸಿಕಕ್ಕೆ ಒಂದು ಬಿಂದುವನ್ನು ಸೇರಿಸಲಾಗಿದೆ.

ಉದಾ: ವನ್ನುಂ (ಬಂದೆವು) ವನ್ನಾಂ (ಬಂದರು)

ಪಣ್ಣನ್ನಾಂ (ಮಾಡುತ್ತವೆ) ಸೋಲಿಚ್ಚಾನಾಂ (ಸೋಲಿಸಿದನಂತೆ)

6) ಮಹಾಪ್ರಾಣ: ಮಹಾಪ್ರಾಣಪ್ರಿಯತೆಯು ಸಂಕೇತಿಭಾಷೆಯ ಇನ್ನೊಂದು ವಿಶೇಷ ಲಕ್ಷಣ.

ಘಂಟ (ಗಂಟೆ), ಭಳಪ್ಪ್ (ಬಿಳುಪು), ಸಧ್ಯ (ಸದ್ಯ), ಲೆಕ್ಖ (ಲೆಕ್ಕ), ಅಗ್ಘ (ಅಗ್ಗ), ಧಾಪ್ (ದಾಪು), ಧೂರು (ದೂರ), ಧಪ್ಪ (ದಪ್ಪ), ಧಾಳಿ (ದಾಳಿ), ಧೂರ್ತು (ದೂರ್ತ), ಖಾಯಲ (ಕಾಯಲೆ), ಘಟ್ಟಿ (ಗಟ್ಟಿ), ಧಾಟರದ್ (ದಾಟುವುದು), ಧೂತು (ದೂತ), ಘಾಬರಿ (ಗಾಬರಿ), ಸ್ಥಿಮಿತು (ಸ್ತಿಮಿತ)

7) ವ್ಯಂಜನಾಂತ :

(ಅ) ವಾಕ್ಯಾಂತವು ವ್ಯಂಜನಾಂತವಾಗಿರುವುದು ಮಧ್ಯದೇಶದ ಭಾಷಾರೂಪದ ಸಾಮಾನ್ಯ ರೀತಿ. ಮಧ್ಯದೇಶ ಎಂದರೆ ಹಾಸನಜಿಲ್ಲೆಯ ಹೇಮಾವತೀ ನದಿಯ ದಕ್ಷಿಣಭಾಗ.

ಉದಾ: ಅದತ್ತಕ್ಕಯ್ಯಾ ಇಂಗೆ ವಂದ್?
(ಅವನೇಕಯ್ಯ ಇಲ್ಲಿಗೆ ಬಂದ?)
ನಿಂಗಾ ಇತ್ತಕ್ಕಾಯಿಟ್ ವರಣಮಾಚ್
(ನೀವು ಇದಕ್ಕಾಗಿ ಬರಬೇಕಾಯಿತು)

ಉಳಿದೆಡೆಯ ಸಂಕೇತಿಗಳು ಅಂದರೆ ಬೆಟ್ಟದಪುರ, ಲಿಂಗದಹಳ್ಳಿ, ಮತ್ತೂರಿನ ಮಾದರಿಗಳನ್ನು ಆಡುವವರು ವಾಕ್ಯಗಳನ್ನು ಇಕಾರಾಂತವಾಗಿ ಬಳಸುವುದು ರೂಢಿ. ಹೇಮಾವತಿ ನದಿಯ ಉತ್ತರಕ್ಕಿರುವ (ಹಾಸನಜಿಲ್ಲೆಯ) ಕೌಶಿಕ ಸಂಕೇತಿಗಳೂ ಇಕಾರಾಂತವಾಗಿ ಮಾತಾಡುವುದೇ ರೂಢಿ; ಆದರೆ ಮಧ್ಯದೇಶದ ಪ್ರಭಾವದಿಂದಾಗಿ ಅವರೂ ಇತ್ತೀಚೆಗೆ ವ್ಯಂಜನಾಂತವಾಗಿಯೇ ಮಾತಾಡುವುದು ಕಾಣುತ್ತದೆ.

(ಆ) ನಾವಿಲ್ಲಿ ಬಳಸುತ್ತಿರುವ ಸಂಕೇತಿ ಭಾಷೆಗೆ ಲಿಪಿಯೂ ಇಲ್ಲ, ಅದು ಈವರೆಗೆ ಲೇಖನಕ್ಕೂ ಇಳಿದಿಲ್ಲ. ಹಾಗಾಗಿ ಈ ಭಾಷೆಯನ್ನು ಇದೀಗ ಲೇಖನಕ್ಕಿಳಿಸುವಾಗ ಆಡುಮಾತನ್ನೇ ಲೇಖನಕ್ಕಿಳಿಸಲಾಗಿದೆ. ಓದಿಕೊಳ್ಳುವಾಗಲೂ ಮಾತಾಡುತ್ತಿರುವ ಹಾಗೆ ಓದಿಕೊಂಡರೆ ಹೆಚ್ಚು ಆತ್ಮೀಯವಾಗಿರುತ್ತದೆ ಎನ್ನುವವರು ಹಾಗೆ ಓದಿಕೊಳ್ಳಬಹುದು. ತಮಿಳಿನ ಉಚ್ಚಾರದ ಸಂಗೀತವು ಮನಸ್ಸಿನಲ್ಲಿರುವವರು ಅದನ್ನನುಸರಿಸಿ ಇನ್ನೊಂದು ರೀತಿಯಲ್ಲಿ ಓದಿಕೊಳ್ಳಬಹುದು. ಆಡುಮಾತಿನಂತೆ ಓದಿಕೊಳ್ಳುವಾಗ, ಈ ಆಲೇಖದಲ್ಲಿ ವ್ಯಂಜನಾಕ್ಷರವಾಗಿ ಬರೆಯದೇ ಇರುವ ಕಡೆಗೂ ತನಗೆ ತಾನೇ ವ್ಯಂಜನಾಂತವಾಗಿ ಉಚ್ಚಾರಗೊಳ್ಳುತ್ತದೆ.

ಉದಾ: ಸ್ವಾರ್ಥತ್ತೇ ಮರ್ಮತಾ ಎನ್ನುವುದನ್ನು ಅಂಥವರು ಮರ್ಮ್‌ತಾ ಎಂದೇ ಓದಿಕೊಳ್ಳುತ್ತಾರೆ.

(ಇ) ಅತಿಯಾಗಿ ಬರುವ ವ್ಯಂಜನಾಂತಗಳನ್ನು ನಿವಾರಿಸಲು ವಿದ್ವಾಂಸರಾದ ಡಾ. ಕೆ. ಅನಂತರಾಮು ಅವರು ಒಂದು ಮಾರ್ಗವನ್ನು ತೋರಿಸಿದ್ದಾರೆ. ಹಿಂದಿಯಲ್ಲಿ ಪದಗಳನ್ನು ಸ್ವರಾಂತವಾಗಿ ಬರೆದು ವ್ಯಂಜನಾಂತವಾಗಿ ಓದುವ ಪರಿಪಾಠವಿದೆ. ಅದನ್ನು ಸಂಕೇತಿ ಭಾಷೆಯಲ್ಲಿ ಅನುಸರಿಸುವುದರಿಂದ ಬರೆಯುವಾಗ ಮತ್ತು ಓದುವಾಗ ಬರುವ ವಿಪರೀತ ವ್ಯಂಜನಾಂತಗಳ ತೊಡಕುಗಳನ್ನು ನಿವಾರಿಸಿಕೊಳ್ಳಬಹುದೆಂಬುದು ಅವರ ಸಲಹೆ. ಅದು ಯುಕ್ತವಾಗಿದೆ. ಕೆಲವು ಸಂದಿಗ್ಧ ಸಂದರ್ಭಗಳನ್ನು ಹೊರತುಪಡಿಸಿ ಆ ಮಾರ್ಗವನ್ನು ಅನುಸರಿಸಬಹುದು.

ಉದಾ: ಅವೆ ಅತ್ತ ಎಂದೆಕೈಯಣ್ಣು ವಂಕಿಂಡುಟ.
ಅವುಂ ಅಂಗೂ ಪೋನ.
ಇದೆಲ್ಲಾ ಎನಕ್ ವಾಣ.

ವಾಕ್ಯಾಂತ ಪದಗಳು ಇಲ್ಲೆಲ್ಲಾ ಸಹಜ ಸ್ವರಾಂತಗಳು. ಅವನ್ನು ವ್ಯಂಜನಾಂತವಾಗಿ ಓದುವುದರಿಂದ ಅರ್ಥ ಕೆಡುತ್ತದೆ ಅಥವಾ ಅರ್ಥವೇ ಆಗುವುದಿಲ್ಲ. ಅ್ಣಣ್ಣ ಅಂದರೆ ಎಣ್ಣೆ, ಹೇಳಿದ ಎಂದರ್ಥ. ಅದನ್ನು ಅ್ಣಣ್ಣ್ ಎಂದು ಓದಿಕೊಂಡರೆ ಅನ್ನು, ಹೇಳು ಎಂದಾಗುತ್ತದೆ. ವಾಕ್ಯಾಂತದಲ್ಲಿ ವ್ಯಂಜನವು ಬರುವ ಪ್ರಸಂಗ ಕಡಮೆ. ಹಾಗಾಗಿ ವಾಕ್ಯಾಂತ ಪದಾಂತಗಳನ್ನು, ವ್ಯಂಜನವಿದ್ದರೆ ವ್ಯಂಜನಾಂತವಾಗಿಯೇ ಬಳಸಲಾಗಿದೆ. ವಾಕ್ಯಮಧ್ಯದಲ್ಲೂ ಮೊದಲ ವಾಕ್ಯದಲ್ಲಿರುವ 'ಅತ್ತ' ಎನ್ನುವುದು ಸಹಜ ಸ್ವರಾಂತ. ಈ ಕಾರಣದಿಂದ ಉಚಿತವರಿತು ಸ್ವರಾಂತ ವ್ಯಂಜನಾಂತಗಳನ್ನು ಬಳಸುವ ಕ್ರಮವನ್ನೇ ಇಲ್ಲಿ ಅನುಸರಿಸಲಾಗಿದೆ.

ಅವುಂ ಪರಪಟ್ಟ ಪೋನ

ಎನ್ನುವಾಗ 'ಪರಪಟ್ಟ' 'ಪರ್‌ಪ್‌ಟ್ಟ್' ಎಂದೂ ಓದಿಕೊಳ್ಳಬಹುದು. ಹಾಗಿಲ್ಲದಾಗಲೂ ತಪ್ಪಾಗುವುದಿಲ್ಲ. ಪದಮಧ್ಯದ ಅಕ್ಷರದ ಉಚ್ಚಾರದಲ್ಲೂ ಒಮ್ಮೊಮ್ಮೆ ತೊಡಕು ಕಾಣುವುದುಂಟು. ವೆನ್ನೀರ್ **ಉಳಂದಾಕ** ಜಿಡ್ಡ್ ಪೊಹರದಪ್ಪಡಿ? (ಬಿಸಿನೀರು ಬೀಳದಿದ್ದರೆ ಜಿಡ್ಡು ಹೋಗುವುದು ಹೇಗೆ?) ಇದನ್ನು **ಉಳ್‌ಂದಾಕ** ಎಂದು ಓದಿಕೊಂಡರೆ ಬಿಸಿನೀರು ಬಿದ್ದರೆ ಜಿಡ್ಡು ಹೋಗುವುದು ಹೇಗೆ? ಎಂದು ಅರ್ಥ ಹೊರಡುತ್ತದೆ.

ಒಟ್ಟಿನಲ್ಲಿ ಈ ವಿವರಗಳ ಬಗೆಗೆ ಯಾರೂ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಅವರವರ ಮನೋಧರ್ಮಕ್ಕೆ ತಕ್ಕಂತೆ ಸಂಕೇತಿ ತಿಳಿದವರೂ ತಿಳಿಯದವರೂ ಓದಿ ಆನಂದಪಡುವುದಕ್ಕೆ ಅನುಕೂಲವಾಗುವಂತೆ ಈ ನಿರೂಪಣೆ ಇದೆ.

8) ಉಚ್ಚಾರ ಚಿಹ್ನೆ : ಸಂಕೇತಿ ಭಾಷೆಯನ್ನು ಹೇಗೆ ಓದಿಕೊಳ್ಳಬೇಕು ಎಂಬುದನ್ನೂ ಸೂಚಿಸಬೇಕಾದ ಅಗತ್ಯವಿದೆ. ಸ್ವರಾಂತವಾದ ವಾಕ್ಯವನ್ನೋದುವಾಗ ಕನ್ನಡ ವಾಕ್ಯಾಂತದ ಹಾಗೇ ಉಚ್ಚಾರ.

ಉದಾ: ನೀನು ಏಕೆ ಬಂದೆ?
ನೀ ಓಕ್ ವಂದ?
ಅವನು ಏಕೆ ಹೋದ?
ಅದತ್ತಕ್ಕ್ ಪೋಚು?

ವಾಕ್ಯಮಧ್ಯದ ಕೆಲವು ವ್ಯಂಜನಾಂತ ಪದಗಳೂ ಹಾಗೇ
ಅವನು ಓಡಕ್ಕ್ ಹೊರಟ
ಅದ್ ಓಡಕ್ಕ್ ಪರಪಟ್ಟದ್

ವ್ಯಂಜನಾಂತ ವಾಕ್ಯದಲ್ಲಿ
ಅದ್ ಓಡೀ ಆಚ್ (ಅವನು ಓಡಿ ಆಯಿತು)
ಇಂಗೆ ಇದತ್ತಕ್ಕ್? (ಇಲ್ಲಿ ಇವನೇಕೆ?)

ಇಲ್ಲಿ ವಾಕ್ಯಾಂತದ ವ್ಯಂಜನಾಕ್ಷರದ ಉಚ್ಚಾರವು – What is it ಎಂಬಲ್ಲಿ ಟ್ ಕಾರವನ್ನು ಉಚ್ಚರಿಸಿದ ಹಾಗೆ ಕಚಕ್ಕನೆ ನಿಲುವುದಿಲ್ಲ. ಎಳೆದು ನಿಲ್ಲುತ್ತದೆ. ಉದಾ: ಎನ್ನ್ ಆಚ್? ಎನ್ನಾಚ್? ಏನಾಯಿತು? ಇದರ ಹಾಗೆ.

(ಅ) ಕೆಲವೊಮ್ಮೆ ವಾಕ್ಯಮಧ್ಯದ ಯಾವುದಾದರೊಂದು ವ್ಯಂಜನಾಂತ ಪದವನ್ನೂ ಹೀಗೇ ಉಚ್ಚರಿಸುವ ನಿದರ್ಶನಗಳು ಕಾಣಬಹುದು. ಆದರೆ ಅದು ಅಪರೂಪ ಮತ್ತು ಐಚ್ಛಿಕ. ಅದು ಓದುವವರ ವೈಯಕ್ತಿಕ ಲಹರಿ. ಅಲ್ಲದೆ ವಾಕ್ಯಾಂತದ ವ್ಯಂಜನವನ್ನು ಉಚ್ಚರಿಸುವಾಗಿನಷ್ಟು ದೀರ್ಘವು ಇಲ್ಲಿರುವುದಿಲ್ಲ; ಇದ್ದಾಗಲೂ ನಿಲುಗಡೆ ಇರುವುದಿಲ್ಲ.

ಉದಾ: ಸಾರ್ಥತ್ತೇ ಮರ್ಮತಾ ತೆರಿಂಝುಕ್ಕ್ ಹಾಂ–ವಾಶ್ಲಾ ಉಟ್ಟ್‌ಪೋನ ನಾಗಭಟ್ಟು ತಂದೆ ದಿಕ್ಕ್–ದೀವಳಿಗ್ಯ ಇಲ್ಲಾದ ಸಂಚಾರಪರಿಕ್ರಮತುಳ್ಳೆ ಜನಪದತ್ತೆ ಜೀವನಾಡೀಪೋಲಿಂದ ಪತ್ತಾರ್ ಧಾರ್ಮಿಕಮಾನ, ಸಾಮಾಜಿಕಮಾನ ಪಿನ್ನ ಸಾಂಸ್ಕೃತಿಕಮಾನ ಪ್ರವೃತ್ತಿಹೀಡೆ ಪ್ರಭಾವತಕ್ಕುಳ್ಳಾಯಿಟ್ ಆಶ್ಚರ್ಯಕರಮಾನ ಜೀವನಾದರ್ಶತಕ್ಕ್ ಸಾಕ್ಷಿಯಹಣ.

ಇಲ್ಲಿ ತೆರಿಂರ್ಯುಕ್ಕ್ ನಾಗಭಟ್ಟು ಸಂಚಾರಪರಿಕ್ರಮತುಳ್ಳೆ

ಪ್ರಭಾವತಕ್ಕುಳ್ಳಾಯಿಟ್ ಜೀವನಾದರ್ಶತಕ್ಕ್

ಈ ಪದಗಳ ಅಂತ್ಯವನ್ನು ಹಾಗೆ ಉಚ್ಚರಿಸಬಹುದು. ಈ ಎಲ್ಲ ಪದಗಳೂ ವ್ಯಂಜನಾಂತವಲ್ಲ ಎಂಬುದನ್ನು ಗಮನಿಸಬಹುದು. ಕನ್ನಡದಲ್ಲೂ ಇಂಗ್ಲಿಷ್‌ನಲ್ಲೂ ಅಥವಾ ಯಾವ ಭಾಷೆಯಲ್ಲೂ ಅಂಥ ಲಹರಿ ಕಂಡೀತು.

ಸಾರ್ಥದ ಮರ್ಮವನ್ನು ತಿಳಿಯಲು (ತಿಳಿಯಲೂಉ) ಮನೆ ಮಾರು ಬಿಟ್ಟುಹೋದ ನಾಗಭಟ್ಟನು (ನಾಗಭಟ್ಟನೂಉ)... ಹೀಗೂ ಓದಬಹುದು.

ಆದರೆ ತೆರಿಂರ್ಯುಕ್ಕ್, ಪತ್ತಾರ್, ಪ್ರಭಾವತಕ್ಕುಳ್ಳಾಯಿಟ್ ಎಂಬ (ರೀತಿಯ) ತಮಿಳು ವ್ಯಂಜನಾಂತ ಪದಗಳ ಮೇಲೆ ಬೀಳುವ ಒತ್ತಿನ ಅಲ್ಪ ಎಳೆತವು ಸುಂದರವಾಗಿರುತ್ತದೆ. ಆದರೂ ಓದುವವರ ಮನೋಧರ್ಮದಂತೆ ಮಾಡಬಹುದಾದ ಓದುಗಳಲ್ಲಿ ಅದೂ ಒಂದು.

(1) ಸಂಕೇತಿ ಭಾಷೆಯಲ್ಲಿ 'ಅ'ಕಾರವು ಎರಡು ರೀತಿಯಲ್ಲಿ ಬಳಕೆಗೊಳ್ಳುತ್ತದೆ. ಅದ್ – ಅದು (ಅವರು, ಅಲ್ಲಿಗೆ, ಅದಕ್ಕಾಗಿ ಹೀಗೆ ಉಚ್ಚರಿಸುವ ರೀತಿ) ಅ್ಅದ್ – ಯಾವುದು (us ಎನ್ನುವಾಗ ಉಚ್ಚರಿಸುವ ಅಕಾರದ ರೀತಿಯಲ್ಲಿ)

ಮೊದಲಿನ ರೀತಿಯಲ್ಲಿ ಅಕಾರವು ಉಚ್ಚಾರವಾಗುವ ಸಂದರ್ಭಗಳಲ್ಲಿ 'ಅ' ಎಂಬ ಅಕ್ಷರವನ್ನು ಹಾಗೇ ಇಟ್ಟುಕೊಂಡಿದೆ. ಅದು ಸಹಜ ಅಕಾರ. ಎರಡನೆ ರೀತಿಯ ಉಚ್ಚಾರ ಬರುವ ಕಡೆಗಳಲ್ಲಿ ಅದನ್ನು ಸೂಚಿಸಲು ಅಕಾರಕ್ಕೆ ಒಂದು ಅಕಾರವನ್ನು ಒತ್ತುಕೊಟ್ಟು 'ಅ್ಅ' ಎಂದು ಬಳಸಲಾಗಿದೆ. ಅದಕ್ಕೆ ಬೇರೆ ಯಾವುದಾದರೂ ಸಂಕೇತವನ್ನು ಬಳಸಬಹುದು. ಆದರೆ ಓದುಗರಿಗೆ ನಿರಂತರವಾಗಿ ಶ್ರಮವಿಲ್ಲದೆ ನೆನಪಿನಲ್ಲುಳಿದು ಸಹಜವಾಗಿಯೇ ಓದಿಕೊಳ್ಳಲು ಅನುಕೂಲವಾಗುವಂತೆ ಈ ಕ್ರಮವನ್ನು ಅನುಸರಿಸಿದೆ..

ಉದಾ:	ಅಪ್ಪಡಿ – ಹಾಗೆ	ಅಂಗೆ – ಅಲ್ಲಿ	ಅತ್ಥನ – ಅಷ್ಟು
	ಅ್ಅಪ್ಪಡಿ? – ಹೇಗೆ?	ಅ್ಅಂಗೆ? – ಎಲ್ಲಿ?	ಅ್ಅತ್ಥನ? – ಎಷ್ಟು?

ಸಂಕೇತಿ ಭಾಷೆಯ ಪರಿಚಯವಿರುವವರಿಗೂ ಇದು ಉಪಯುಕ್ತವಾಗಿದೆ. ಇಂಥ ವ್ಯವಸ್ಥೆಯಿಲ್ಲದಿದ್ದರೆ ತಪ್ಪಾಗಿ ಓದಿದ ಸಾಲನ್ನು ಸರಿಪಡಿಸಿಕೊಂಡು ಮತ್ತೆ ಓದಬೇಕಾಗುವ ಸಂದರ್ಭಗಳುಂಟು. ಅರ್ಥವು ಬೇಗ ಸ್ಫುರಿಸದೆ ಸಂದಿಗ್ಧವಾಗಿ ಕಾಣುವ ಎಡೆಗಳೂ ಉಂಟು.

(ಅ) ಉದಾ: ನಾಗಭಟ್ಟನಾ! ಅಪ್ಪಡಿಯೂ ಅತ್ಥನ ಧೂರು ಪೊಹಣಿ

ಇಲ್ಲಿ ಅಪ್ಪಡಿಯೂ ಅತ್ಥನ ಧೂರು – ಇದಕ್ಕೆ ಹಾಗೂ ಎಷ್ಟುದೂರ ಹೋಗುತೀನಿ ಎಂಬ ಅರ್ಥವೂ ಆಗುತ್ತದೆ, ಹೇಗೂ ಎಷ್ಟುದೂರ ಹೋಗುತೀನಿ ಎಂಬ ಅರ್ಥವೂ ಬರುತ್ತದೆ. ಸರಿಯಾಗಿ ಓದಿಕೊಂಡಾಗ ಹೇಗೂ ಅಷ್ಟುದೂರ ಹೋಗುತೀನಿ ಎಂಬ ಅರ್ಥವು ಹೊರಡುತ್ತದೆ. ಸಂಕೇತಿ ಭಾಷೆಯಿಂದ ದೂರವಾಗುತ್ತಿರುವ ಸಂಕೇತಿಗಳಿಗಂತೂ ಇದು ತೊಡಕಿನದೇ. ಅದ್ ಅಪ್ಪಡಿ ಪಣ್ಣಿಚ್ಚಿಂದಾಕ ನಾ ಅಪ್ಪಡಿ ಪಣ್ಣಾಂಡಿಂದೆ. ಇದೂ ಅಂಥದೇ ನಿದರ್ಶನ. ಆದ್ದರಿಂದಲೇ

ಅಪ್ಪಡಿಯೂ – ಹಾಗೂ	ಅ್ಅಪ್ಪಡಿಯೂ – ಹೇಗೂ
ಅತ್ಥನ – ಅಷ್ಟು	ಅ್ಅತ್ಥನ – ಎಷ್ಟು

ಹೀಗೆ ನಿರ್ದಿಷ್ಟಪಡಿಸಲಾಗಿದೆ. ಕರ್ನಾಟಕದಲ್ಲಿ ತಮಿಳು ಭಾಷೆಯ ಅನೇಕ ಮಾದರಿಗಳನ್ನಾಡುವವರು ದೊಡ್ಡ ಸಂಖ್ಯೆಯಲ್ಲೇ ಇದ್ದಾರೆ. ಅವರಿಗೆ ಇದು ಸುಲಭವಾಗಿ ದಕ್ಕುತ್ತದೆ. ತಮಿಳಿನ ಗಂಧಗಾಳಿ ತಿಳಿಯದವರೂ ಸ್ವಲ್ಪವೇ ಗಮನಕೊಟ್ಟರೆ ಸಾಕು, ಸುಲಭವಾಗಿ ಅನುಸರಿಸಬಹುದಾದಂತೆ ಈ ವ್ಯವಸ್ಥೆ ಇದೆ.

(ಆ) ಕನ್ನಡ ಪದಗಳೂ ಸಂಸ್ಕೃತ ಪದಗಳೂ ಬಂದಾಗ ಅವು ಎಲ್ಲರಿಗೂ ಸುಪರಿಚಿತವಾಗಿರುವುದರಿಂದ ಈ ಒತ್ತನ್ನು ಹಾಕಿಲ್ಲ.

ಸಂಸ್ಕೃತ ಪದಗಳಲ್ಲಿ

ಅವಕಾಶ – ಇದು, ಅದು, ಅಲ್ಲಿ, ಅವನು ಎಂಬಂತೆಯೇ ಉಚ್ಚಾರಗೊಳ್ಳುತ್ತದೆ.

ಅವಿವೇಕಿ – ಇದು, ಅ಼ಂಗೆ, ಅ಼ಪ್ಪಡಿ, ಅ಼ದ್ ಎಂಬಂತೆ ಬಳಕೆಯಾಗುತ್ತದೆ.

ಸಂಕೇತಿ ಪದಗಳಾದ ಅ಼ಂಗೆ ಅ಼ಪ್ಪಡಿ ಇತ್ಯಾದಿಗಳ ಅಕಾರವನ್ನು ಉಚ್ಚರಿಸುವಾಗಲೂ ಅವಿವೇಕ ಎಂಬಲ್ಲಿನ ಅಕಾರದಂತೆ ಉಚ್ಚರಿಸಿದರೆ ಸಾಕು. ಒತ್ತಿ ಉಚ್ಚರಿಸಬೇಕಿಲ್ಲ. ಈ ಹದವನ್ನು ಮೊದಲೇ ತಿಳಿದುಕೊಂಡುಬಿಟ್ಟರೆ ಸರಾಗವಾಗಿ ಓದಿ ಆನಂದಿಸಬಹುದು.

ಹೀಗೆ ಉಚ್ಚಾರ ವ್ಯತ್ಯಾಸವಿರುವ ಇತರ ಪದಗಳೂ ಇವೆ. ಪಣು (ಹಣ), ಪಣ್ಣ್ (ಮಾಡು). ಇಲ್ಲಿ ಪ್ವಣ್ಣ್ ಎಂಬಂತೆ ಉಚ್ಚಾರವಿದೆ. ಆದರೆ ಮೇಲಿನ ನಿದರ್ಶನಗಳಂತೆ ಅರ್ಥವ್ಯತ್ಯಾಸವಾಗುವ ಸಂಭವವಿಲ್ಲ. ಹಾಗಾಗಿ ಅವಕ್ಕೆ ಸಂಕೇತಗಳನ್ನು ಕೊಟ್ಟಿಲ್ಲ. ಅಂಥ ಇತರ ನಿದರ್ಶನಗಳು ಕಣು–ಕ್ವಣ್ಣ್, ವಂದ್–ವ್ವಂದ್, ಕಂಡ್–ಕ್ವಂಡ್. ಕನ್ನಡದಲ್ಲಿಯೂ ಇಂಥ ಉಚ್ಚಾರಭೇದದ ಪ್ರಸಂಗವಿಲ್ಲದಿಲ್ಲ.

ಉದಾ: ಅಗೆದನು – ಅಗಿದನು

ದಂಡ – ದಂಡು, ಬಂಧ – ಬಂದ, ತಂದೆ – ತಂದೆ, ಅಂದ – ಅಂದ

ಉಚ್ಚಾರಭೇದಗಳಿಗೆಲ್ಲ ಚಿಹ್ನೆಯನ್ನು ತೋರಿಸುತ್ತ ಹೋದರೆ ಅದಕ್ಕೆ ಕೊನೆಮೊದಲಿರುವುದಿಲ್ಲ. ಅದು ಸಾಧ್ಯವೂ ಇಲ್ಲ. ಅದೆಲ್ಲವೂ ಅಭ್ಯಾಸವಾಗಬೇಕಾದ ವಿಷಯ. ಹಿಂದಿಯಲ್ಲಿ ಸ್ವರಾಂತವಾದ ಪದಗಳನ್ನು ವ್ಯಂಜನಾಂತವಾಗಿ ಓದುತ್ತಾರೆ. ಇಂಗ್ಲಿಷ್‌ನಲ್ಲಿ that – ದಟ್, thus – ದಸ್ (ದುಸ್ ಅಲ್ಲ), put – ಪುಟ್ (ಪಟ್ ಅಲ್ಲ), mat – ಮ್ಯಾಟ್ (ಮಟ್ ಅಲ್ಲ).

ಸಂಕೇತಿ ಭಾಷೆಯು ತಿಳಿದವರಿಗೆ ಈ ಚಿಹ್ನೆಗಳ ಅಗತ್ಯವಿಲ್ಲ, ತಿಳಿಯದವರಿಗೆ ಪ್ರಯೋಜನವಿಲ್ಲ ಎಂಬ ವಾದವಿದೆ.

ಶಾಲೆ ಕಾಲೇಜುಗಳಲ್ಲಿ ಹಿಂದಿ ಇಂಗ್ಲಿಷ್ ಕನ್ನಡವನ್ನೂ ಅದರ ಜಾಯಮಾನವನ್ನೂ ಕ್ರಮಬದ್ಧವಾಗಿ ವರ್ಷಗಟ್ಟಲೆ ಅಭ್ಯಾಸಮಾಡಿಸುತ್ತಾರೆ. ಆದರೆ ಸಂಕೇತಿ ಭಾಷೆಯು ಮೊದಲಬಾರಿಗೆ ಬರಹಕ್ಕೆ ಒಳಪಡುತ್ತಿರುವುದರಿಂದ 'ಅ಼'ಕಾರ ಉಚ್ಚಾರಕ್ಕೆ ಚಿಹ್ನೆಯನ್ನು ಬಳಸಿರುವುದು ಒಂದು ಪ್ರಯೋಗ ಮಾತ್ರ. ಆ ಚಿಹ್ನೆಯೇ ಇಲ್ಲದೆ ಓದುವುದು ಸಾಧ್ಯವಾದರೆ, ಸುಲಭವೆನಿಸಿದರೆ, ರೂಢಿಯಾದರೆ, ಆಗ ಆ ಚಿಹ್ನೆಯ ಅಗತ್ಯ ಬರುವುದಿಲ್ಲ. ಅದು ಅಗತ್ಯವಲ್ಲವೆನಿಸುವ ಸ್ಥಿತಿಯು ಸ್ವಾಗತಾರ್ಹ.

9) **ಸುಖಾನುಭವ:** ಸಂಕೇತಿ ಆಡುವವರಿಗೂ ಈಗ Priapism, rarefication, rapprochement, resuscitation, nincompoop, mandamus, thrombocytopenia, sphygmomanometric ಇವೆಲ್ಲ ಸಲೀಸು.

ಜಳಧಿದ್ವೀಪಾಂತರಾಳಂಗಳನಿರದೆ ಪುಗಿಂ ಪೋಗಿಮುಗ್ರಾರಿಗಳ್ ಮಾ
ರ್ಕೊಳಲಾರ್ಜಿ ಚಕ್ರನಾಥಪ್ರಬಳಬಳಮನೆಂಬಂತೆವೊಲ್ ಸಾನುಕೂಲಾ ।
ನಿಳನಿಂದಂ ಕೇತುಹಸ್ತಾವಳಿ ಮಿಳಿರ್ವಿನೆಗಂ ಬಂದುವುತ್ತುಂಗಭೂಭೃ
ತ್ಕುಳ ಸಂಕಾಶಂಗಳಾಕಾಶದ ನೆಲದೆಡೆಯಂ ಪರ್ವೆ ಗಂಧದ್ವಿಪಂಗಳ್ ॥

ಎನ್ನಿ. ಅರಳು ಹುರಿದಂತೆ. ಆದರೆ ಅವರೇ ಆಡುವ ಭಾಷೆಯನ್ನು ಅ಼ತ್ತಕ್ಕಪ್ಪಡಿ ಆಡಡ? ಅ಼ಂಗೆ ಪುದಿಂಝಿಂಡಾಲೂ ಉಡಲ್ಲೆ, ಮೋರ್ ಸಾಂಮೂ ವಾಣಾಂ ಚಾರ್ ಸಾಂಮೂ ವಾಣಾಂ ಎಂದು ಬರೆದು ತೋರಿಸಿದರೆ ಇದು ಯಾವ ಭಾಷೆ ಎಂದು ಕೇಳುತ್ತಾರೆ. ಹನ್ನೆರಡು ವರ್ಷ ವೇದಾಭ್ಯಾಸ ಮಾಡಿ ಬಾಯಿನುರಿಸಿಕೊಳ್ಳಬಲ್ಲರು, ಸಂಕೇತಿ ಭಾಷೆಯ ಒಂದೆರಡು ಲೇಖನ ಓದಿ ಒಗ್ಗಿಸಿಕೊಳ್ಳುವ ಅಗತ್ಯ ಅವರಿಗಿಲ್ಲ.

ಆದ್ದರಿಂದಲೇ ಡಾ. ಎಸ್.ಎಲ್. ಭೈರಪ್ಪನವರು 'ಅದನ್ನ್ ಯಾರ್ ಓದ್ತಾರೆ!' ಎಂದಾಗ ದಿಗಿಲಾದದ್ದು. ಅವರು ವಸ್ತುಸ್ಥಿತಿಯನ್ನು ಎಷ್ಟು ಚೆನ್ನಾಗಿ ಗ್ರಹಿಸಿದ್ದಾರೆ ಎಂದು ಆಶ್ಚರ್ಯವಾದದ್ದು. 'ಯಾರ್ ಪ್ರಕಟಿಸ್ತಾರೆ?' ಎಂಬ ಪ್ರಶ್ನೆಗೆ

ಉತ್ತರ 'ಯಾರೂ ಇಲ್ಲದಿದ್ದರೆ ನಾನು' ಎಂಬುದು. ನನ್ನ ಪೂಜ್ಯ ಗುರುಗಳಾದ ಡಾ. ಪ್ರಧಾನ್ ಗುರುದತ್ತ ಅವರ ಬಳಿಯೂ ಹೇಳಿದೆ, 'ಭೈರಪ್ಪನವರನ್ನು ಕೇಳಿದೆ ಸರ್!.... ದಾಖಲೆಗಾಗಿ ಮಾಡ್ತಿದೀನಿ ಸಾರ್ ಎಂದೆ !' 'ಹೌದು, ಹಾಗಿಲ್ಲದಿದ್ದರೆ ನೀವು ಆ ಸಂಕೇತಿ ಸಂಪುಟಗಳನ್ನು ತರಕ್ಕಾಗ್ತಿರಲಿಲ್ಲ!' ಎಂದರು.

ಈ ದಾಖಲೆ ಭಾಷಾಶಾಸ್ತ್ರಜ್ಞರಿಗಾಗಿ; ಸಂಕೇತಿ ಸಂಘವೊಂದು ನಿಘಂಟನ್ನೊಂದನ್ನು ಸಿದ್ಧಪಡಿಸುತ್ತಿದೆ; ಅವರ ಪ್ರಯೋಜನಕ್ಕಾಗಿ. ಸಾಹಿತ್ಯವು ಬರದೆ ನಿಘಂಟಿನ ಕೆಲಸ ನಿಖರವಾಗದು, ಪರಿಪೂರ್ಣವಾಗದು. ಈ ಅನುವಾದ ಮಾಡುವಾಗ ಸಂಕೇತಿಭಾಷೆಗೂ ಇರುವ ಸಾಧ್ಯತೆಗಳು ಬೆರಗುಹುಟ್ಟಿಸಿವೆ, ಅದರ ಸ್ವರೂಪದ ಅಂತರಂಗವು ಗೋಚರಿಸಿದೆ, ಕೆಲವೊಮ್ಮೆ ಅದು ಒಡ್ಡಿದ ಸವಾಲು ಪುಳಕ ಕೊಟ್ಟಿದೆ.

ಈ ಪುಸ್ತಕವನ್ನು ಓದುವವರೇ ಇಲ್ಲವೆಂಬ ನಿರಾಶೆಗೂ ಕಾರಣವಿಲ್ಲ. ಸಂಕೇತಿ ಪತ್ರಿಕೆಯಲ್ಲಿ ಬಂದ ನನ್ನ ಸಂಕೇತಿ ಲೇಖನಗಳನ್ನು ಸಂಕೇತಿಯೇತರ ಮಿತ್ರರು ಸಲೀಸಾಗಿ ಓದಿದ್ದಾರೆ, ಅರ್ಥಮಾಡಿಕೊಂಡಿದ್ದಾರೆ, ಪ್ರತಿಕ್ರಿಯಿಸಿದ್ದಾರೆ. ಅವರಲ್ಲಿ ತಮಿಳಿನ ವಿವಿಧ ಮಾದರಿಗಳನ್ನು ಮಾತಾಡುವ ಕನ್ನಡಿಗರೂ ಸೇರಿದ್ದಾರೆ. ಕನ್ನಡ ಲಿಪಿಯನ್ನು ಬಲ್ಲ ಇತರ ಭಾಷೆಗಳವರೂ ಇದ್ದಾರೆ. ತಮಿಳು, ತೆಲುಗು ಮಲೆಯಾಳಂ ಭಾಷೆಗಳ ಪುಸ್ತಕಗಳು ಕನ್ನಡ ಲಿಪಿಯಲ್ಲಿ ಬಂದರೆ ಅವುಗಳ ಓದು ಭಾಷಾಧ್ಯಯನದ ದೃಷ್ಟಿಯಿಂದ ಮಾತ್ರವಲ್ಲ ವಿವಿಧ ಭಾಷಾಜಾಯಮಾನಗಳು ಕೊಡುವ ವಿಶಿಷ್ಟ ಸುಖಾನುಭವದ ದೃಷ್ಟಿಯಿಂದಲೂ ರೋಮಾಂಚಕವಾದುದು. ಅಂಥ ಕಲ್ಪನೆಯೇ ನನ್ನಲ್ಲಿ ಪುಳಕವನ್ನುಂಟುಮಾಡುತ್ತಿದೆ. ಸಾರ್ವತ್ರಿಕವಾಗಿ ಕನ್ನಡಿಗರಿಗೂ ಅಂಥದೇ ಅನುಭವವಾಗುವುದರಲ್ಲಿ ಸಂಶಯವಿಲ್ಲ. ಈ ಕೃತಿಯನ್ನು ಸಿದ್ಧಪಡಿಸುವಾಗ ಆ ಓದುಗರನ್ನೂ ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಸಂಕೇತಿ ಬಲ್ಲವರಿಗೆ ಅಂಥ ಪುಳಕ, ಅಭಿಮಾನ, ಸಾಂಸ್ಕೃತಿಕ ಭಾವಪರಿವೇಷ, ಮನೆಯ ಆವರಣದ ಗಾಢ ಸೌಖ್ಯ ಈ ಕೃತಿಯಿಂದಲೂ ಆಗವುದರಲ್ಲಿ ಸಂಶಯವಿಲ್ಲ. ಸಂಕೇತಿ ಬಂಧುಗಳು ಇದರ ಪ್ರಯೋಜನ ಪಡೆಯುತ್ತಾರೆಂದು ಆಶಿಸುತ್ತೇನೆ.

10) ಅಳಿಯುತ್ತಿರುವ ಭಾಷೆ: ಕನ್ನಡ ಭಾಷೆಯೇ ಅಪಾಯದಲ್ಲಿದೆ. ಇನ್ನು ಸಂಕೇತಿ ಕನ್ನಡದ ಪಾಡೇನು? ಅದಕ್ಕೇನೂ ಪರಿಣತರ ಮಾತುಬೇಡ, ಕಣ್ಣ ಮುಂದೇ ಕಾಣುತ್ತಿದೆ. ಆದರೂ, ಅಳಿವಿನಂಚಿನಲ್ಲಿರುವ ಕರ್ನಾಟಕದ 31 ಭಾಷೆಗಳ ಪಟ್ಟಿಯನ್ನು ಪರಿಣತರು ಗುರುತಿಸಿದ್ದಾರೆ.

ಚೆಂಚು	ಗೊಂಡ	ಹಸಲರು	ಹಕ್ಕಿಪಿಕ್ಕಿ
ಜೇನುಕುರುಬ	ಕಾನಿಯಾ (ಕನಿಯನ್)	ಕೋಲಿ	ಕಾಡುಕುರುಬ
ಕಟ್ಟುನಾಯಕ	ಕೊಂಡ	ಕೊರಗ	ಕೋಟಾ
ಕೊಯಾ	ಕುರುಂಬ	ಪಾನಿಯಾ	ಸೋಲಿಗ
ತೋಡ	ಯರವ	ಬಡಗ	ಕೊರಕ
ಲಂಬಾಣಿ	**ಸಂಕೇತಿ**	ಬ್ಯಾರಿ	ಗೌಳಿ
ಸಿದ್ದಿ	ತುಳು	ಕೊಡವ	ಇರುಳರ್
ಇರುಳಿಗ	ಮಲ್ಲೈಕುಡಿಯ	ಮಲಕುಡ್ಯೆ	

ಇವೆಲ್ಲಾ ಬರೀ ಒಂದು ರಾಜ್ಯದಲ್ಲಿ ಸಾಯುವ ಭಾಷೆಗಳು. ಇದರಲ್ಲಿ ಸಂಕೇತಿಯೂ ಸೇರಿದೆ. ತುಳು ಭಾಷೆ ಸಾಯುತ್ತದಂತೆ; ಕೊಡವಭಾಷೆ ಕೂಡ. ಇವಕ್ಕೆಲ್ಲ ಅಕಾಡೆಮಿಗಳಿವೆ. ಮುಖ್ಯವಾಗಿ ಅವರಿಗೆ ಅಭಿಮಾನವಿದೆ, ಸಂಖ್ಯೆಯ ಬಲವಿದೆ. ಆದರೆ ಅಂಥ ಏನೂ ಇರದ ಭಾಷೆ ಸಂಕೇತಿ. ಅದು ಇನ್ನೂ ಇಪ್ಪತ್ತು ಮೂವತ್ತು ವರ್ಷ ಇರುತ್ತದೆ; ಈಗಿನ ಹಿರಿಯ ತಲೆಮಾರಿನೊಂದಿಗೆ ಅದೂ ಹೋಗುತ್ತದೆ. ಈ 31 ಭಾಷೆಗಳೂ ತಮ್ಮ ಭಾಷೆಗಳ ಸಮಾಧಿಯ ಮೇಲೆ ಕನ್ನಡವನ್ನು ಕಟ್ಟಿಕೊಳ್ಳುತ್ತವೆ ಎಂದು ಯಾರು ಭ್ರಮಿಸಬಾರದು. ಹೆಚ್ಚೆಂದರೆ ಇಂಗ್ಲಿಷ್ ಮನೆಗೆ ಹೋಗುವ ದಾರಿಯಲ್ಲಿ ಕನ್ನಡದ ಮನೆಯಲ್ಲಿ ಒಂದೋ ಎರಡೋ ದಿನ ತಂಗುತ್ತವೆ, ಅಷ್ಟೆ. ಅಥವಾ ನೇರವಾಗಿ ಇಂಗ್ಲಿಷ್ ಮನೆಗೆ ದಾಪುಗಾಲು ಹಾಕುತ್ತವೆ. ಕನ್ನಡದವರೇ ಮನೆ ತೊರೆಯುತ್ತಿರುವಾಗ ಅದೇ ಅವರಿಗೆ ಮಾದರಿ. ಭಾಷೆಗಳ ಅಧ್ಯಯನದ ತುರ್ತು ಹೆಚ್ಚಿದೆ.

11) ಸಂಕೇತಿ ಭಾಷೆಯ ಜಾಯಮಾನ : ಕೆಲವು ನಿದರ್ಶನಗಳು ಸಂಕೇತಿ ಭಾಷೆಯ ಜಾಯಮಾನವನ್ನು ತಿಳಿಸಬಲ್ಲವು.

1. ದುಷ್ಟ ಕಂಸನ ಆಡಳಿತ: **ದುಷ್ಟ** ಕಂಸಂದೆ ಆಡಳಿತು (ದುಷ್ಟನಾನ)

   'ದುಷ್ಟ' ಹೊಂದುವುದಿಲ್ಲ.

   'ದುಷ್ಟನಾನ' ಎಂದು ಬಳಸುವುದೇ ಸಂಕೇತಿ ಬಳಕೆಗೆ ಒಗ್ಗುವ ರೂಪ. ದುಷ್ಟೂ ಆನ ಎಂದೂ ಬಳಸಬಹುದು.
2. ಚಾಣೂರ ಮತ್ತು ಮುಷ್ಟಿಕರೆಂಬ – ಚಾಣೂರ, ಮುಷ್ಟಿಕ ಅ್ಣ್ಣರ – ಚಾಣೂರ ಪಿನ್ನ ಮುಷ್ಟಿಕ ಅ್ಣ್ಣರ ಎರಡೂ ರೀತಿಗಳನ್ನು ಬಳಸಲಾಗಿದೆ (ಪಿನ್ನ = ಮತ್ತು, ಹಾಗಾದರೆ, ಆಮೇಲೆ, ಮತ್ತೇ, ಆಮೇಲಿಂದ)
3. ಬೆಳೆದವನು – ವಳಂಜವ್ಲುಂ
   (ಒಳಂಜದ್ = ಮಿಕ್ಕಿದ್ದು, ಒಳಿಂರ್ಝುರದ್ = ಉಳಿದುಕೊಳ್ಳುವುದು, ಒಳಿಂಜಾಮೇ = ಬದುಕಿದೆವಲ್ಲಾ)
4. ಕೇಳಿಬಲ್ಲೆ = ಕೋಟ್ ತೆರಿಂಜರಾಣಿ (ಬಲ್ಲೆ ಅನ್ನುವುದಕ್ಕೆ ಸಂಕ್ಷಿಪ್ತವಾದ ಒಂದೇ ಪದವಿಲ್ಲ)
5. ಪ್ರಮುಖ ಪಾತ್ರವೊಂದನ್ನು – ಪ್ರಮುಖಮಾನ **ಪಾತ್ರೂ** ಒಂಡಾ (ಪಾತ್ರತಾ ಎಂದೂ ಬಳಸಬಹುದು)
6. ಮುಜುಗರವನ್ನು ಹುಟ್ಟಿಸುತ್ತಿತ್ತು – **ಮುಜುಗರೂ** ಉಂಡ್‌ಪಣ್ಣಾಂಡಿಂದ್ (ಮುಜುಗರತಾ)
   ಪರಿಪಿಯಾಂಡಿಂದ್ ಎಂಬ ಬಳಕೆ ಈ ಸಂದರ್ಭದಲ್ಲಿ ಇಲ್ಲ.
7. ಒದ್ದೆಯಾದ – ತೋಮು (ನೆಲಕ್ಕೆ, ಗೋಡೆಗೆ)
   – ಈರು (ಬಟ್ಟೆಗೆ)
   – ನೆಂಜಮೊಖು (ದೇಹಕ್ಕೆ)
8. ವ್ಯವಸ್ಥೆ ಮಾಡೋಣ – ವ್ಯವಸ್ಥೆ ಪಣ್ಣಮ್ಮೊ ಎನ್ನುವ ಬದಲು
   ವ್ಯವಸ್ಥೇ ಪಣ್ಣಮ್ಮೊ

ಹೀಗೆ ದೀರ್ಘದ ಮೂಲಕ ದ್ವಿತೀಯಾ ವಿಭಕ್ತಿಯ ಕೆಲಸ ಮಾಡುವುದು ರೂಢಿ. ಅತ್ತಾ ಪಣ್ಣಮ್ಮೋ ಅಂಟೇ ಪೋನೇ – ಹೀಗೆ ದೀರ್ಘವನ್ನು ಬಳಸುವ ರೂಢಿ ಹೆಚ್ಚು.

9. ನಗರ ಕೇಂದ್ರವಲಯದಿಂದಾಚೆಗೆ – ನಗರತ್ತೇ ಕೇಂದ್ರವಲಯತಣ್ಣೂ ಅಕ್ಕಡೇಕ್ (ನಗರಕೇಂದ್ರವಲಯತಕ್ಕಡೇಕ್ ರೂಢಿಯಲ್ಲ)
10. ಭರೀ – ಕಿರು, ಸಣ್ಣ, ಕಿರಿಯ
11. ಕುಟ್ಟೆ, ಬಡೆ, ಬಡೇಲೆ, ಜೊತೇಲೆ – ಜೊತೆಯಲ್ಲಿ
12. ಸ್ನೇಹಿತನಾಗಿರಬಲ್ಲೆ – ಸ್ನೇಹಿತನಾ ಇರರೆ, ಇರರೇಂ (ಇಕ್ಕರೆ, ಇಕ್ಕರೇಂ ರೂಪಗಳು ಬಳಕೆಯಲ್ಲಿಲ್ಲ)
13. ನಾನಿನ್ನೂ ನನ್ನ ತೀರ್ಮಾನವನ್ನು ಶರ್ಮ ಮತ್ತು ದತ್ತರಿಗೆ ಹೇಳಿರಲಿಲ್ಲ – ಶರ್ಮಾಳಕ್ಕೂ ದತ್ತಾಳಕ್ಕೂ (ಬಳಕೆಯಲ್ಲಿದೆ)

    ಶರ್ಮಾ ಅಪ್ಪಡಿಯೇ ದತ್ತಾಳಕ್ಕ್, ಶರ್ಮಾ ಪಿನ್ನಾ ದತ್ತಾಳಕ್ಕ್ (ತಪ್ಪಿಲ್ಲ ಆದರೆ ರೂಢಿ ಇಲ್ಲ.)
14. ಮನೆಗೆ ಹಿಂತಿರುಗಿದವಳು – ಹಾತಕ್ಕ್ ವಂದವೆ (ಸಂದರ್ಭ ಅನುಸರಿಸಿ ಹೀಗೆ ಬಳಸುವುದು ರೂಢಿ)

    ತಿರಂಬೀ ವಂದೆ ಎಂಬುದು ಮತ್ತೆ ಬಂದೆ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ; ಸಂದರ್ಭವನ್ನನುಸರಿಸಿ ಹಿಂತಿರುಗಿ ಬಂದೆ ಎಂಬ ಅರ್ಥದಲ್ಲೂ ಬಳಸುವುದುಂಟು.
15. ನೋಡಿ ಮಾರ್ಮಿಕವಾಗಿ ಮುಗುಳ್ನಕ್ಕು ಹತ್ತಿರ ಬಂದು
    ಪಾರ್ತ್ ಮಾರ್ಮಿಕಮಾನ ಮಂದಸ್ಮಿತತಣ್ಣು ಬಡೇಕ್‌ವಂದ್ (ನಗು ಎಂಬ ಪದ ಇದ್ದಿದ್ದರೆ ಮಾರ್ಮಿಕಮಾ ಚಿರಚ್ ಎಂದು ನೇರವಾಗಿ ಬಳಸಬಹುದಿತ್ತು.)

16. ತಣಿಸಿದ ಮೇಲೆ ಸಾಯುತ್ತದೆ – ತೃಪ್ತೀಪಡವಿಚ್ಚಮೇಲೆ ಚಾವಂದ್.

17. ಶಾಲಿನಿಯ **ನೆನಪು** ಬಾಧಿಸತೊಡಗಿತು (ಸ್ಮರಣ)
ಕರ್ತವ್ಯ ಭ್ರಷ್ಟತೆಯನ್ನು **ನೆನಪಿಸುವ** ಬಿಂಬವಾಗಿ (ಜ್ಞಾಪಿಯರ)

18. ಸದ್ಯದಲ್ಲಿ ಈ ಪಾತ್ರದಲ್ಲಿದ್ದೇನೆ
ಸದ್ಯತಕ್ಕ (ಬಳಕೆಯಲ್ಲಿದೆ), ಸದ್ಯತುಳ್ಳೆ (ತಪ್ಪಿಲ್ಲ, ರೂಢಿಯಲ್ಲಿಲ್ಲ)

19. ಕರ್ಮಣಿ ಸುತರಾಂ ಇಲ್ಲ
ಒತ್ತರಿಸಲ್ಪಟ್ಟಿಲ್ಲವೆ?
– ಅತ್ತಾ ಒತ್ತರಿಶೀಕಲ್ಲಹೀನಯ?

20. ಗೋಡೆ ಎಬ್ಬಿಸೋದು – ಚೂರಾ ಅಳತರದ್
ಮರ ಬೆಳೆಸೋದು – ಮರತಾ ಅಳತರದ್ (ಹೆಚ್ಚು ಬಳಕೆ), 'ಮರತಾ ವಳತರದ್' ಸಂಪ್ರದಾಯದಲ್ಲಿ ರೂಢಿಯಿಲ್ಲ

21. ನಡೆಯಲೇಬೇಕು ಎಂದರೆ
– ನಡಂದೇ ನಡವಣು ಅಂಡಾಕ
– ನಡಂದೇ ತೀರಣು ಅಂಡಾಕ

22. ಪರಿಣಾಮಕಾರಿಯಾಗಿ **ಮೂಡಿಸಬಲ್ಲೆನೆ**? – ಕೊಂಡ್ರಕ್ಕಹಂದಾ?

23. ಭಕ್ತಿಯ ಮಾರ್ಗ **ಹಲವು** – ಅ್ಥತ್ಥನಿಯೊ ರಾನ್ನ ಅಥವಾ ಹೆಂಬಾ ರಾನ್ನ

24. ಕೇವಲ – ಕೇವಲು, ಒರೂ

25. ತೊಡಗಿದರು – ಪರಪಟ್ಟ

26. ಮತ್ತು – ಪಿನ್ನ, ಅಪ್ಪಡಿಯೇ

27. ಹರ್ಷವುಕ್ಕಿಸುವ ಸ್ಥಿತಿ
ಹರ್ಷತಾ ಉಕ್ಕಿಯಿರ ಸ್ಥಿತಿ (ಕೂಡಿ ಹೇಳಲು ರೂಪವಿಲ್ಲ)

28. ಇತರರಿಗೆ – ಓರೇತೇವಾಳಕ್ಕ
('ಇತರಾಳಕ್ಕ' ಎನ್ನುವುದಕ್ಕೆ ಸಂಕೇತಿಗಳಲ್ಲದವರು ಎನ್ನುವ ಅರ್ಥವಿದೆ. ಇತರೇತೇವಾ ಅಂದರೆ ಸಂಕೇತಿಯಲ್ಲದ ಬ್ರಾಹ್ಮಣರು. ಇತರಾ ಎಂದರೆ ಬ್ರಾಹ್ಮಣೇತರರು)

29. ಹಸಿವೂ ಕಾಣಿಸಿಕೊಂಡಿತು – ಪಶಿಯಕ್ಕೂ ಶುರುವಾಚ್
ಪಶಿಯಾಂಡೂ ಇಂದ್

30. ವಚನ ವ್ಯವಸ್ಥೆ ಸ್ವಲ್ಪ ವಿಶೇಷವಾದುದು.
ಕಳ್ಳರು ಬಂದರು – ಕಳ್ಳಂಗ ವಂದಹೀನ
ಕಳ್ಳರು ಬರುತ್ತಿದ್ದಾರೆ – ಕಳ್ಳಂಗ ವರಾಂಡರಾನ್ನ (ಗೌರವಹೀನ ಬಹುವಚನ)
ಗುಮಾಸ್ತರಾದ ರಾಮಣ್ಣನವರು ಬಂದರು – ಗುಮಾಸ್ತು ರಾಮಣ್ಣು ವನ್ನಾಂ (ಗೌರವಾರ್ಹ ಬಹುವಚನ)
ದೀಕ್ಷಿತರು ಬಂದರು – ದೀಕ್ಷಿತಾ ವಂದ (ಆರಾಧ್ಯ ಬಹುವಚನ)

ಅದ್ – ಅದು, ಅವನು ಅವಳು	ಅವೆ – ಆಕೆ, ಅವ್ರುಂ – ಆತ,	ಆವಾ – ಅವರು ಅಫಾಳ್ಳ – ಅವರು ಆಫಾಳ್ಳಹಾ – ಅವರುಗಳು

ಅಫಿಯ – ಅವು
ಅವರು (ಅಗೌರವ ಬಹುವಚನ)

ಕಾದಂಬರಿಯ ಅನುವಾದದಲ್ಲಿ ಉಚಿತವರಿತು ಈ ವಚನ ವ್ಯವಸ್ಥೆಯನ್ನು ಹೊಂದಿಸಿಕೊಳ್ಳಲಾಗಿದೆ.

31. ದಿಟ್ಟಿಸಿ – ದೃಷ್ಟಿಚ್ಚ್
ತದ್ಭವಕ್ಕಿಂತ ಮೂಲಸಂಸ್ಕೃತಪದದ ಬಳಕೆಗೆ ಆದ್ಯತೆ ಇದೆ.

32. ಇರಣು (ಇರಬೇಕು)
ಹೆಚ್ಚು ಒತ್ತು ಕೊಡಲು 'ಇಕ್ಕಣು' ಬಳಸಬಹುದೇನೊ?

33. ಇರಬಹುದು – ಇಕ್ಕುಂ ಇಕ್ಕಲಾಂ

34. ಗಕಾರದ ಜಾಗದಲ್ಲಿ ಹಕಾರ ಬರುವ ಎಡೆಗಳುಂಟು

ತಳಗಿ – ತಳಹಿ
ಒರಗಿಕೊ – ಒರಹಿಕ್ಯೊ, ಒರಕ್ಯೊ

35. ಅಪರೂಪಕ್ಕೆ ಕೆಲವರು ಸ್ವಾಮಿನಃ ಎಂದು ಸಂಬೋಧಿಸುತ್ತಿದ್ದರು. ಸಂಕೇತಿಗಳಲ್ಲಿ 'ಸ್ವಾಮಿ' ಎಂಬ ಸಂಬೋಧನೆ ಇಲ್ಲ.

12) ಸಾರ್ಥದ ಅನುವಾದ

ಅತೃಪ್ತಿಯ ಆರಂಭ

ಭೈರಪ್ಪನವರು ಅನುಮತಿ ಕೊಟ್ಟ ಸಂಜೆಯೇ ಅನುವಾದವನ್ನು ಪ್ರಾರಂಭಿಸಿದೆ. ಒಂದು ಪುಟ ಮುಗಿಯಿತು. ಓದಿ ನೋಡಿದೆ. ಎದೆಗುಂದಿತು. ಓದಲು ಸರಾಗವಾಗಿದೆಯೆ ಎಂಬುದು ನನ್ನ ಮುಖ್ಯ ಗಮನವಾಗಿತ್ತು. ಏಕೆಂದರೆ ಆವರೆಗೆ ಓದುಗರಿಂದ ಬಂದಿದ್ದ ಮುಖ್ಯ ಆಕ್ಷೇಪಣೆ ಅದೇ ಆಗಿತ್ತು. ವ್ಯಂಜನಾಂತ ಪದಗಳು, ಅನುನಾಸಿಕ ಮತ್ತು ಒತ್ತಕ್ಷರಗಳನ್ನು ಓದಲೇ ಸಾಧ್ಯವಿಲ್ಲವೆನ್ನುತ್ತಿದ್ದರು. ಆಡುಭಾಷೆಯಾದ್ದರಿಂದ ಪದವನ್ನು ಒಡೆದು ಸರಳಮಾಡಿದರೆ ಸಲಿಲತೆ ಹೋಗಿ ಇನ್ನೊಂದಿಷ್ಟು ವ್ಯಂಜನಾಂತ ಪದವೇ ತುಂಬುತ್ತಿತ್ತು. ಈಗಾಗಲೇ ಸವೆದ ದಾರಿಯಲ್ಲವಾದ್ದರಿಂದ ಯಾವ ಪದ ಯುಕ್ತ, ಇದಕ್ಕೆ ಬಳಕೆಯ ಸಂಕೇತಿ ಪದವೇ ಇಲ್ಲವೆ? ಮರೆವಿಗೆ ಸಂದ ಪದ ಜ್ಞಾಪಕಕ್ಕೇ ಬರುತ್ತಿಲ್ಲವಲ್ಲ, ಇತ್ಯಾದಿ ಪ್ರಶ್ನೆಗಳೂ ಏಳುತ್ತಿದ್ದವು. ಕೆಲವು ಕಡೆ ಸಂಕೇತಿ ಉಚ್ಚಾರವು ಸ್ಪಷ್ಟವಾಗಲು ಸಂಕೇತಗಳನ್ನು ಬಳಸುವುದೆ ಬೇಡವೆ? ಬಳಸುವುದಾದರೆ ಎಲ್ಲೆಲ್ಲಿ ಸಂಕೇತಗಳನ್ನು ಬಳಸಬಹುದು, ಆ ಸಂಕೇತ ಯಾವುದು? ಪುಸ್ತಕವನ್ನೆಲ್ಲ ಅನುವಾದಿಸಿ ಮುಗಿದ ಮೇಲೆ ಆಕ್ಷೇಪಗಳು ಬಂದರೆ ನನ್ನ ಶ್ರಮದ ಗತಿಯೇನು? ಇದು ಅನುವಾದವನ್ನು ಮುಂದುವರಿಸಲೆ ಬೇಡವೆ ಎಂಬವರೆಗೆ ಹೋಯಿತು. ಅನುವಾದಿಸಿದ ಹಾಳೆಯನ್ನು ಪಕ್ಕಕ್ಕಿಟ್ಟು ಪುಸ್ತಕವನ್ನು ಮಡಚಿಟ್ಟು ಸುಮ್ಮನಾದೆ. ಅಧೈರ್ಯ, ಅತೃಪ್ತಿ. ಹೀಗೇ ಒಂದು ತಿಂಗಳು ಕಳೆಯಿತು.

ಬೇರೆ ಏನೇ ಕೆಲಸಗಳನ್ನು ಮಾಡುತ್ತಿದ್ದರೂ ಮನಸ್ಸಿನ ಒಂದು ಮೂಲೆಯಲ್ಲಿ ಸುಧಾರಣೆಗಳ ಚಕ್ಕೆ ಏಳುತ್ತಲೇ ಇತ್ತು. ಒಂದು ದಿನ ಇದ್ದಕ್ಕಿದ್ದಹಾಗೆ ಅದಮ್ಯವಾದ ಆತ್ಮವಿಶ್ವಾಸ ತುಂಬಿಬಂದಹಾಗಾಯಿತು. ಒಂದು ಪುಟವನ್ನು ಅನುವಾದಿಸಿದೆ, ಅದನ್ನು ಮತ್ತೆ ಮತ್ತೆ ಓದಿದೆ; ಮುಂದುವರಿಸಬಹುದೆನಿಸಿತು. ಪ್ರತಿ ಪುಟವನ್ನು ಅನುವಾದಿಸಿದಮೇಲೂ ಮೊದಲಿನಿಂದ ಮತ್ತೆ ಓದುತ್ತಿದ್ದೆ. ಹತ್ತು ಹದಿನೈದು ಪುಟಗಳನ್ನು ಅನುವಾದಿಸುವುದರಲ್ಲಿ ತೃಪ್ತಿ ಮೂಡಿ ಸ್ಥಿರವಾಯಿತು. ಅನುವಾದವನ್ನು ಪ್ರಾರಂಭಿಸಿದ್ದು ೧೫–೧–೨೦೧೪ರಂದು, ಮುಗಿಸಿದ್ದು ೧೮–೨–೨೦೧೪ರಂದು. ಸರಿಯಾಗಿ ಮೂವತ್ನಾಲ್ಕು ದಿವಸ.

ಸೌಲಭ್ಯಗಳು

ಸುಮಾರು ಮುನ್ನೂರು ಪುಟಗಳನ್ನು ಮೂವತ್ನಾಲ್ಕು ದಿನಗಳಲ್ಲಿ ಅನುವಾದಿಸಿದ್ದು (ಕೆಲಸ ಮಾಡದ ಕೆಲವು ದಿನಗಳೂ ಅದರಲ್ಲಿ ಸೇರಿದ್ದವು) ನನ್ನ ದುಡಿಮೆಯ ರೀತಿಯ ಪರವಾದ ಮಾತೇನೂ ಆಗಿರಲಿಲ್ಲ. ಅದು ಸಾರ್ಥದ ಅನುವಾದದಲ್ಲಿ ನನಗಿದ್ದ ಕೆಲವು ಸೌಲಭ್ಯಗಳ ವಿಷಯವಾಗಿತ್ತು.

ಮೊದಲಿಗೆ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಪ್ರತಿ ವಾಕ್ಯವನ್ನೂ ಕನ್ನಡದ ಜಾಯಮಾನಕ್ಕೆ ಅನುಗುಣವಾಗಿ ಪುನಃ ರಚಿಸುವಂತೆ ಇಲ್ಲಿ ಮಾಡಬೇಕಾಗಿರಲಿಲ್ಲ. ಕಾದಂಬರಿಯ ಪ್ರಪಂಚ, ಸನ್ನಿವೇಶ ಮತ್ತು ವಾಕ್ಯದ ಧರ್ಮಕ್ಕೆ ಅನುಗುಣವಾಗಿ ಸೂಕ್ತವೆನಿಸುವಂತೆ ಪದಕ್ಕೆ ಪದವಿಟ್ಟುಕೊಂಡು ಹೋದರೆ ಸಾಕಾಗಿತ್ತು. ಕನ್ನಡ ಮತ್ತು ಸಂಕೇತಿ ಕನ್ನಡ ಅಷ್ಟು ಹತ್ತಿರದವು. ಎರಡನೆಯದು ಸಂಸ್ಕೃತ ಪದಗಳ ಬಳಕೆ. ಕನ್ನಡದಲ್ಲಿ ಸಂಸ್ಕೃತ ಭಾಷೆಯ ಪದಗಳು ಬಹಳವಾಗಿಯೇ ಇವೆ. ಸಾರ್ಥದಲ್ಲಿ ಬರುವ ತತ್ತ್ವಶಾಸ್ತ್ರ, ವೇದಾಂತ, ಧರ್ಮ, ಆಚಾರಕ್ಕೆ ಸಂಬಂಧಪಟ್ಟ ಪದಗಳು ಸಹಜವಾಗಿಯೇ ಸಂಸ್ಕೃತ ಪದಗಳಾಗಿವೆ. ಲೌಕಿಕದ ಕೆಲವು ಸಂದರ್ಭಗಳಲ್ಲೂ ಅವು ಹೆಚ್ಚಾಗಿಯೇ ಬಂದಿವೆ. ಅವನ್ನೆಲ್ಲ ಯಥಾವತ್ತಾಗಿ ಬಳಸಿಕೊಂಡರೆ ಸಾಕಾಗಿತ್ತು. ಮೂರನೆಯದು ಸಂಕೇತಿಗಳಲ್ಲಿ ರಕ್ತಗತವೂ ಸಂಸ್ಕೃತಿಗತವೂ ಆಗಿಹೋಗಿರುವ ಕನ್ನಡ ಪದಗಳು. ಅವೆಲ್ಲವೂ ಸಂಕೇತಿಗಳು ತಾವು ನಿಕಟವಾಗಿ ಒಡನಾಡಿದ ಹೊಯ್ಸಳಕರ್ನಾಟಕರಿಂದ ಇಲ್ಲವೆ ಬಬ್ಬೂರು ಕಮ್ಮೆಗಳಿಂದ ಸ್ವೀಕರಿಸಿದಂಥವು. ನಮ್ಮ ತಂದೆಯವರ ಊರಾದ ಬಸವಾಪಟ್ಟಣದಲ್ಲೂ ಹಾಗೆ ನಡೆದಿತ್ತು, ಭೈರಪ್ಪನವರು ಬಳಸಿರುವ ಅನೇಕ ಪದಗಳು ಹಾಸನ ತಾಲ್ಲೂಕಿನವರಾದ ನಮ್ಮ ತಾಯಿಯವರಿಗೆ ಪರಿಸರದ ಕಾರಣದಿಂದ ಬಂದಿದ್ದವು. ನಮ್ಮ ತಾಯಿಯವರು ನಮ್ಮ ತಂದೆಯವರಿಗಿಂತ ಹೆಚ್ಚಾಗಿ ಅಂಥ ಪದಗಳನ್ನು ಬಳಸುತ್ತಿದ್ದರು. ಆ ಪದಗಳು ಪಕ್ಕಾ ಸಂಕೇತಿ ಪದಗಳೆಂದೇ ಎಲ್ಲ ಸಂಕೇತಿಗಳೂ ತಿಳಿದಿದ್ದಾರೆ; 'ಸಾರ್ಥ'ವನ್ನು ಅನುವಾದಿಸುವ ಹೊತ್ತಿನವರೆಗೆ ನಾನೂ ಹಾಗೇ ತಿಳಿದಿದ್ದೆ. ಈ ವಿಷಯವನ್ನು ಕೆಲವು ಸಂಕೇತಿಗಳ ಗಮನಕ್ಕೆ ತಂದೆ. ಅವರೆಲ್ಲರೂ, 'ಏಹೆ! ಅವೆಲ್ಲವೂ ನಮ್ಮ ಸಂಕೇತಿ ಪದಗಳು. ಅವನ್ನೆಲ್ಲ ನಮ್ಮ ಪ್ರಭಾವದಿಂದ ಇಲ್ಲಿನ ಕನ್ನಡಿಗರು ಸ್ವೀಕರಿಸಿದ್ದಾರೆ. ಆದರೆ ಹಾಗೆ ಸ್ವೀಕರಿಸಿದ್ದಾರೆಂಬುದೇ ಅವರಿಗೆ ತಿಳಿದಿಲ್ಲ' ಎಂದು ಗಂಭೀರವಾಗಿಯೇ ಹೇಳಿದರು. ಒಟ್ಟಿನಲ್ಲಿ ನನ್ನ ಅನುವಾದ ಕಾರ್ಯ ಎಷ್ಟು ಸರಾಗವಾಯಿತು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಅವಿವೇಕಿ, ಹಿತೋಪದೇಶ, ಅಸಂಭವ, ಆಜ್ಯ, ಸುಸ್ಥಿತಿ, ಅಭ್ಯುದಯ, ಪ್ರಾಜ್ಞ, ಆಪದ್ಧರ್ಮ, ಆಚಮನ, ಪದ್ಮಾಸನ, ಅಪಮಾರ್ಗ, ಪ್ರೇರಣೆ, ಪ್ರೋಕ್ಷಿಸುವುದು, ಅನ್ನ, ಶಾಕ, ದಧಿ, ತರ್ಜನಿ, ಪವಿತ್ರ, ಯಜಮಾನಿಕೆ, ಕರ್ತವ್ಯಭ್ರಷ್ಟ, ಆಲೋಚನೆ ಇಂಥ ಸಂಸ್ಕೃತ ಪದಗಳ ಬಳಕೆ ಸಂಕೇತಿಗಳಲ್ಲಿ ಸಹಜವಾಗಿ ಮತ್ತು ಯಥೇಚ್ಛವಾಗಿ ಆಗುತ್ತದೆ. ಗಂಡಸರೂ ಹೆಂಗಸರೂ ಮಕ್ಕಳೂ ಅವಿದ್ಯಾವಂತರೂ ಇಂಥ ಪದಗಳನ್ನು ಬಹು ಅರ್ಥಪೂರ್ಣವಾಗಿ ಬಳಸುತ್ತಾರೆ. ಹೀಗೆ ಬಳಸುವ ನೂರಾರು ಸಂಸ್ಕೃತ ಪದಗಳಿಗೆ ಇರಬಹುದಾದ ತಮಿಳುಪದಗಳನ್ನು ಅವರು ಎಂದೂ ಸ್ವೀಕರಿಸಲಿಲ್ಲವೆನಿಸುತ್ತದೆ. (ಕನ್ನಡದಿಂದಾದರೂ ಕೆಲವು ಪದಗಳು ಪರ್ಯಾಯ ಬಳಕೆಗೆ ಬಂದಿವೆ) ಸಂಸ್ಕೃತ ಗಾದೆಗಳನ್ನೂ ಸುಭಾಷಿತಗಳನ್ನೂ ವೇದಮಂತ್ರಗಳ ಸಾಲುಗಳನ್ನೂ ವೇದೋಪನಿಷತ್ತು ಪುರಾಣಗಳ ಕಥೆಗಳನ್ನೂ ಚೆನ್ನಾಗಿಯೇ ಆಡುಮಾತಿನ ನಡುವೆ ಬಳಸುತ್ತಾರೆ. ಸಂಕೇತಿ ಸಮುದಾಯದ ಬಗೆಗಿನ ಸಂಶೋಧನೆಯ ಸಂದರ್ಭದಲ್ಲಿ ಅವರು ವಿಷಯಾಂತರ ಮಾಡಿ ಹೇಳುತ್ತಿದ್ದ ಇಂಥ ಕಥೆಗಳಿರಲಿ, ಪಾಣಿನಿಯ ವ್ಯಾಕರಣದ ವಿಷಯವನ್ನೂ ನಾನು ತಾಳ್ಮೆಯಿಂದ ಕೇಳಿಸಿಕೊಳ್ಳಬೇಕಾಗಿರುತ್ತಿತ್ತು. ನನ್ನ ಅನುವಾದವು ಇಂಥ ಪದಗಳಿಂದ ಅನಾಯಾಸವಾಗಿ ಸಂಕೇತಿತನದ ಅನುಭವವನ್ನೇ ಕೊಡುವಂತಾಯಿತು.

ಅಗಚಾಟಲ್, ನೆತ್ತಿ, ಹಾತೊರಿ, ಸೊಸಿ, ನಾಟ್, ಒತ್ತಲ್ಸ್, ಒತ್ತರಿಚ್ಚಕಂಡ್, ತಾಡಹರದ್, ಅವತ್‌ಕರದ್, ಅವಚೀವಯ್ಯರದ್, ಚೂಡೀತಾಳಿ, ಹಾಹಾಕಾರು, ತೋಚರದ್, ನೆಂಚ್‌ಕರದ್, ಕಲಕರದ್, ಅಂಗಣು, ಶೀಯರದ್, ಮಾಳು, ಅರಿಯರದ್, ಹೆಣಗರದ್, ಕಟ್ಟಳ, ಶಾರ, ಮರಳರದ್, ತೋಡರದ್, ನವಣಸರದ್, ತಪಗುಟ್ಟರದ್, ಸೊಡ್ಳು, ಮಂದಲಿಂಗ್ಯ, ಧೂಳೀಪಟು, ಹದಿಯರದ್, ಉರುಟರದ್, ಮುರಟೀಪೊಹರದ್, ಗೋಚರಿಯರದ್, ಹೋರರದ್ – ಇವೆಲ್ಲವನ್ನೂ ಕಲಕರದ್=ಕಲಕುವುದು ಹೀಗೆ ಬದಲಿಸಿಕೊಂಡು ನೋಡಿದರೆ ಅವುಗಳ ಮೂಲರೂಪ ತಿಳಿಯುತ್ತದೆ. ಆದರೆ ಸಂಕೇತಿತನವನ್ನು ದಟ್ಟವಾಗಿ ಮತ್ತು ಆಪ್ಯಾಯಮಾನವಾಗಿ ಅನುಭವಕ್ಕೆ ತರುವ ಪದಪುಂಜ ಇದು. ಆ ಪದಗಳನ್ನು ಹಾಗೆ ಬಳಸಿ ತಮ್ಮದಾಗಿ ಮಾಡಿಕೊಂಡಿದ್ದಾರೆ ಸಂಕೇತಿಗಳು.

ಈ ಅನುವಾದದ ಹೊತ್ತಿನಲ್ಲಿ ಸಂಕೇತಿ ಭಾಷೆಯದು ಎಂದುಕೊಳ್ಳಬಹುದಾದ ಪದವು ದೊರೆಯದಿದ್ದರೆ ಶುದ್ಧ ಕನ್ನಡಪದವನ್ನು ಬಳಸುವ ಸ್ವಾತಂತ್ರ್ಯ ಇದ್ದೇ ಇತ್ತು. ಸಂಕೇತಿಗಳಿಗೆ ಕನ್ನಡವು ತಿಳಿಯುತ್ತದೆಂಬ ಕಾರಣದಿಂದಲ್ಲ, ಆ ಪದಗಳನ್ನು ಎಷ್ಟೋ ದಶಕಗಳಿಂದಲೋ ಶತಮಾನಗಳಿಂದಲೋ ತಮ್ಮ ಭಾಷೆಯ ಅಂಗವಾಗಿ ಆಪ್ತತೆಯಿಂದ ಬಳಸುತ್ತಿರುವುದರಿಂದ ಅವೂ ಸಂಕೇತಿ ಪರಿವೇಷವನ್ನೇ ಉಂಟುಮಾಡುವಂಥವು.

ಈ ಅನುವಾದದ ಸಂದರ್ಭದಲ್ಲಿ ನಿಘಂಟನ್ನು ಹಿಡಿಯಲೇಬೇಕಾಗಲಿಲ್ಲವೆಂದಲ್ಲ. ಭೈರಪ್ಪನವರ ಪದಸಂಪತ್ತು ಅಗಾಧವಾದುದು ಮಾತ್ರವಲ್ಲ, ತೃಣಮೂಲವಾದುದು. ಸೂಕ್ಷ್ಮಾತಿಸೂಕ್ಷ್ಮ ಭಾವಗಳನ್ನೂ ಚಿತ್ರಗಳನ್ನೂ ಕಲ್ಪಿಸಿಕೊಡಲು ಅವರಿಗೆ ಪದಗಳ ಬರವಿಲ್ಲ. ಅತ್ಯಂತ ಸೂಕ್ತ ಪದಗಳನ್ನೇ ಬಳಸುತ್ತಾರೆ. ಸರಗುವುದು, ಪೌಳಿ, ತಾಡಾಗುವುದು, ಚೂಡಿ, ಶೀಯಿ, ಶಾರೆ, ಬೋಗುಣಿ, ನವಣಿಸು, ತಪಗುಟ್ಟು, ಧೂಳೀಪಟ, ಉರಟಿಕೊ, ಲಟಕಾಯಿಸು ಇಂಥ ಪದಗಳು ಈಗಾಗಲೇ ಬಳಕೆಯಿಂದ ಮರೆಯಾಗಿವೆ.

ಕಾದಂಬರಿಯ ಸಮ್ಮೋಹಕತೆ

ಇವೆಲ್ಲಕ್ಕೆ ಸರಿಮಿಗಿಲಾಗಿ ಪ್ರೋತ್ಸಾಹಕವಾಗಿದ್ದುದು 'ಸಾರ್ಥ' ಕಾದಂಬರಿಯೇ. ಅದೇ ನನ್ನನ್ನು ಎಳೆದುಕೊಂಡು ಹೋಯಿತು.

1. ಕಣ್ಣಿಗೆ ಕಟ್ಟುವಂತೆ ಬರುವ ವಿವರಗಳು, ಅವು ಉಂಟುಮಾಡುವ ಗಾಢ ಪರಿವೇಷ; ಅದರಿಂದ ಹೊರಗೆ ಬರುವ ಮೊದಲೇ ಕಥೆಗೆ ಬರುವ ಚಾಲನೆ, ತಿರುವು ಅಥವಾ ಹೊಸಹೊಳಹು; ಅದು ಉಂಟುಮಾಡುವ ಕುತೂಹಲ.
2. ತರ್ಕದ ಪ್ರಕಾಶ. 'ಇದು ಸರಿಯಾದ ಉತ್ತರವಾಯಿತು. ಇನ್ನು ಇದೇ ಕೊನೆಯ ಸಾಧ್ಯ ಚಿಂತನೆ' ಎಂದುಕೊಳ್ಳುವ ಹೊತ್ತಿಗೆ ಬರುವ ಸೂಕ್ತವೂ ನ್ಯಾಯವೂ ಆದ ಉತ್ತರ. ಹೀಗೇ ಅನೇಕ ಹಂತಗಳವರೆಗೆ ಮುಂದುವರಿಯುವ ಈ ಬೌದ್ಧಿಕ ಕ್ರೀಡೆ. ಭೈರಪ್ಪನವರ ಚಿಂತನೆಯು ಕೋರೈಸುವ ಬೆಳಕಿನ ಬೆಟ್ಟವಾಗಿರುವುದು.
3. ತರ್ಕಚಮತ್ಕಾರವಾಗಲಿ ಧರ್ಮಜಿಜ್ಞಾಸೆ ತಾತ್ತ್ವಿಕ ಮಥನವಾಗಲಿ ರಸದ ಚೌಕಟ್ಟಿಗೆ ಅಧೀನವಾಗಿ ಬರುವುದು – ಬುದ್ಧಿಭಾವಗಳ ವಿದ್ಯುದಾಲಿಂಗನ ಎನ್ನುವ ಮಾತಿಗೆ ಒಂದು ಕಡೆ ವರಕವಿ ಬೇಂದ್ರೆ, ಇನ್ನೊಂದು ಕಡೆ ಮಹಾಕಾದಂಬರಿಕಾರ ಭೈರಪ್ಪ ಎಂಬಂತೆ.
4. ಇಲ್ಲಿರುವ ಅನೇಕ ರಸದ ಮಡುಗಳು, ಕುಸುರಿಕೆಲಸದ ಶಬ್ದಚಿತ್ರಗಳು
5. ಮುಕ್ತವಾದ ಶೋಧಯಾನ
6. ಸಹಜ ಓಟ ಮತ್ತು ಸಾವಯವ ಸಂಬಂಧ
7. ವಸ್ತು ಸಾಂದ್ರತೆ
8. ಪ್ರಬಂಧಧ್ವನಿಯ ಸೃಜನಕೌಶಲ

ಹೀಗೆ ಅಪೂರ್ವವಾದ ಹಲವು ಪರಿಕರಗಳನ್ನು ಬಳಸಿ ಅದ್ಭುತವಾದ ಸೃಜನಶೀಲಕೃತಿಯನ್ನು ರಚಿಸಿ ಜಗತ್ತಿನ ಅತಿಶ್ರೇಷ್ಠ ಕಾದಂಬರಿಕಾರರ ಸಾಲಿಗೆ ಸೇರಿರುವ ಭೈರಪ್ಪನವರ ಕಾದಂಬರಿಯು ನನ್ನ ಅನುವಾದ ಕಾರ್ಯವನ್ನು ಕೈಹಿಡಿದು ಸರಾಗವಾಗಿ ನಡೆಸಿದ್ದು ಆಶ್ಚರ್ಯವಲ್ಲ.

ಇವತ್ತು ಒಂದೇ ಪುಟವನ್ನು ಅನುವಾದಿಸುವುದು ಮಾತ್ರ ಸಾಧ್ಯ ಎಂಬಂಥ ದಿನಗಳಲ್ಲೂ ಅನೇಕ ಪುಟಗಳ ಅನುವಾದವು ನನ್ನ ಅರಿವಿಗೆ ಬರದಂತೆ ಮುಗಿದುಹೋಗಿರುತ್ತಿದ್ದುದರ ಹಿಂದಿನ ರಹಸ್ಯ ಕಾದಂಬರಿಯ ಈ ಶಕ್ತಿ. ಅನುವಾದ ಮಾಡುವಾಗಲೇ ಮೂಲವನ್ನೂ ಅನುವಾದವನ್ನೂ ಅನೇಕಸಲ ಓದುತ್ತಿದ್ದೆ; ಅನುವಾದವು ಪೂರ್ತಿ ಮುಗಿದಾಗ ಓದಿದೆ. ಕರಡುತಿದ್ದುವಾಗ ಅನೇಕಬಾರಿ ಓದಿದೆ. ಪೀಠಿಕೆಯನ್ನು ಬರೆಯುವುದಕ್ಕಾಗಿಯೂ ಓದಿದೆ. ಹೀಗೆ ಹತ್ತಾರು ಬಾರಿ ಓದಿದ್ದು ಕೇವಲ ಮೂರುತಿಂಗಳ ಅವಧಿಯಲ್ಲಿ. ಆದರೆ ಎಂದೂ ಬೇಸರವಾಗಲಿಲ್ಲ. ಎಲ್ಲಿಗೆ ನಿಲ್ಲಿಸಿ ಮತ್ತೆ ಎಲ್ಲಿಂದ ಪ್ರಾರಂಭಿಸಿದರೂ ಕ್ಷಣದಲ್ಲಿ ಕೃತಿಯು ತನ್ನಲ್ಲಿ ಮೈಮರೆಯುವಂತೆ ಮುಳುಗಿಸಿಕೊಂಡುಬಿಡುತ್ತಿತ್ತು. ಅನುವಾದ ಮಾಡುವಾಗ

ಪ್ರತಿ ಪದ ವಾಕ್ಯ ಸಂದರ್ಭದ ಮೇಲೂ ಮನಸ್ಸು ಪರೀಕ್ಷಕವಾಗಿ ಸ್ವಲ್ಪಹೊತ್ತು ಕೂರುವುದು ಅನಿವಾರ್ಯ. ನೀರಸವೂ ಅಪ್ರಬುದ್ಧವೂ ಆದ ಕೃತಿಗಳನ್ನು ಅನುವಾದಿಸುವುದು ಮಾತ್ರವಲ್ಲ ತಕ್ಕಮಟ್ಟಿಗೆ ಆಕರ್ಷಕವಾದ ಕೃತಿಗಳನ್ನು ಅನುವಾದಿಸುವುದೂ ಪೂರ್ಣವಾಗಿ ಸಂತೋಷದ ಕಾರಣವಾಗುವುದು ಅಪರೂಪವೆಂಬುದು ಅನುವಾದಕರೆಲ್ಲರಿಗೂ ತಿಳಿದ ವಿಷಯ.

ರೈಲು ಬಸ್ಸುಗಳ ಪ್ರಯಾಣದ ವೇಳೆಯಲ್ಲೋ ಭೋಜನ ಸಮಾರಂಭಗಳ ವೇಳೆಯೋ ಭೈರಪ್ಪನವರ ಕಾದಂಬರಿಗಳ ಬಗೆಗೆ ವಿವರವಿವರವಾಗಿ ಚರ್ಚಿಸಿ ತಾಸುಗಟ್ಟಲೆ ತಮ್ಮ ಸಂತೋಷವನ್ನು ಹಂಚಿಕೊಳ್ಳುವವರನ್ನು ಕಾಣುವುದು ಅಪರೂಪವಲ್ಲ. ಒಂದೇ ಕೃತಿಯನ್ನು ಹಲವು ಬಾರಿ ಓದಿರುವವರ ಸಂಖ್ಯೆ ಹೇರಳ; ಅನೇಕರು ಇಪ್ಪತ್ತಕ್ಕೂ ಹೆಚ್ಚು ಬಾರಿ ಓದಿ ಪ್ರತಿಬಾರಿಯೂ ಹೊಸ ಹೊಳಹು ಕಂಡುಕೊಂಡಿರುವುದಾಗಿ ಹೇಳುತ್ತಾರೆ. ಅನೇಕರ ಮನೆಗಳ ಹೆಮ್ಮೆಯ ಅಲಂಕರಣಸಾಮಗ್ರಿಯೆಂದರೆ ಭೈರಪ್ಪನವರ ಕಾದಂಬರಿಗಳ ಕ್ಯಾಲಿಕೊ ಪ್ರತಿಗಳು. ಇವು ಸರಕಾರಗಳ ಅಂಗಸಂಸ್ಥೆಗಳು ರಿಯಾಯಿತಿ ದರದಲ್ಲಿ ಮಾರಿ ಉತ್ತೇಜಿಸಿದ ಸಾಮಗ್ರಿಯಲ್ಲ. ಉದ್ದಾಮ ಪಂಡಿತರಿಂದ ಸತತ ಶ್ಲಾಘನೆಗೆ ಒಳಗಾದ ಸರಕು. ಇದೆಲ್ಲದರ ಹಿಂದಿನ ಪ್ರಾಮಾಣಿಕ ತುಡಿತವು ಅನುವಾದದ ಸಂದರ್ಭದಲ್ಲಿ ನನ್ನ ಅನುಭವಕ್ಕೂ ಬಂದುದರಲ್ಲಿ ನನ್ನದೇ ಆದ ವಿಶೇಷವೇನಿಲ್ಲ.

ಪ್ರಸ್ತುತತೆ

ಈ ಅನುವಾದದ ಪ್ರಸ್ತುತತೆಯ ಕಡೆಗೂ ಗಮನ ಸೆಳೆಯಬೇಕಾದುದು ಅಗತ್ಯ. ತಮಿಳಿನಿಂದ ಮಲೆಯಾಳಂ ಹುಟ್ಟಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಸಂಕೇತಿಗಳು ಶೆಂಕೊಟ್ಟೈಪ್ರಾಂತವನ್ನು ಬಿಟ್ಟು ದೂರದ ಕರ್ನಾಟಕಕ್ಕೆ ಬಂದರು. ತಮಿಳಿನಲ್ಲೇ ಆಡುಮಾತಿನಿಂದ ಮರೆಯಾಗಿರುವ ಅನೇಕ ಹಳೆಯ ಶಬ್ದಗಳು ಕರ್ನಾಟಕದ ಸಂಕೇತಿಗಳ ಭಾಷೆಯಲ್ಲಿ ಇನ್ನೂ ಬಳಕೆಯಾಗುತ್ತಿವೆ. ಒಂಬೈನೂರು ವರ್ಷಗಳ ದೀರ್ಘಕಾಲ ಸಂಕೇತಿಗಳು ತಮಿಳುನಾಡು ಮತ್ತು ಕೇರಳದಲ್ಲಿನ ತಮ್ಮ ಬಂಧುಗಳ ಸಂಪರ್ಕವನ್ನು ಸಂಪೂರ್ಣವಾಗಿ ಕಡಿದುಕೊಂಡಿದ್ದಾರೆ. ಆ ನಾಡಿನ ಸಂಪರ್ಕವೂ ಅವರಿಗಿರಲಿಲ್ಲ. ಅದನ್ನು ಶಾಪಭೀತಿಯ ಹಿನ್ನೆಲೆಯಲ್ಲಿ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾರೆ. ಅದಕ್ಕೆ ಬದಲು ಕನ್ನಡಿಗರ ನಡುವೆ ಒಂದಾಗಿ ಹೋಗಿದ್ದಾರೆ. ಆ ಪ್ರಭಾವದಿಂದಾಗಿ ಅವರ ಶಬ್ದಗಳೂ ಶಬ್ದಸ್ವರೂಪಗಳೂ ಬದಲಾಗಿವೆ. ಪ್ರತ್ಯಯಗಳು ಉಳಿದುಕೊಂಡಿವೆ. ವ್ಯವಹಾರದ ಶಬ್ದಗಳು, ಸಂಸ್ಕೃತಿಯ ಶಬ್ದಗಳು, ಅಂಕಿಗಳು, ಮನೆಬಳಕೆಯ ವಸ್ತುಗಳು, ವಾವೆಗಳು ಇವು ವಿವಿಧ ಪ್ರಮಾಣದಲ್ಲಿ ಬದಲಾಗಿವೆ. ಭಾಷಾಸ್ಥಿತ್ಯಂತರದ ಲಕ್ಷಣಗಳನ್ನು ಈ ಎಲ್ಲ ದೃಷ್ಟಿಯಿಂದ ಅಧ್ಯಯನಮಾಡಲು ಈ ಕೃತಿಯು ನೆರವಾಗುತ್ತದೆ.

ಖ್ಯಾತ ಭಾಷಾತಜ್ಞರಾದ ಡಾ. ಎಚ್.ಎಸ್. ಅನಂತನಾರಾಯಣ ಅವರು ಸಂಕೇತಿ ಅಧ್ಯಯನ ಮಾಲೆಗಾಗಿ ಸಂಪಾದಿಸಿಕೊಟ್ಟಿರುವ 'ಸಂಕೇತಿ ಭಾಷಾಧ್ಯಯನ' ಎಂಬ ಕೃತಿಯು ಒಂದು ಮಹತ್ತ್ವದ ಕೃತಿ. ಅನೇಕ ಖ್ಯಾತ ಭಾಷಾಶಾಸ್ತ್ರಜ್ಞರ ಸಂಶೋಧನ ಲೇಖನಗಳು ಅದರಲ್ಲಿ ಸೇರಿವೆ. ಅನಂತನಾರಾಯಣ ಅವರು ಅವೆಲ್ಲವನ್ನೂ ಪರಿಣತಿಯಿಂದ ನಿರ್ವಹಿಸಿ ತಾರ್ಕಿಕವಾಗಿ ಕೊನೆಮುಟ್ಟಿಸಿದ್ದಾರೆ. ಪ್ರಸ್ತುತ ಅನುವಾದ ಕೃತಿಯು ಸಹಜವಾಗಿಯೇ ಸಂಕೇತಿ ಭಾಷೆಯ ಹಲವು ಸಾಧ್ಯತೆಗಳನ್ನು ಅನಾವರಣಗೊಳಿಸಿದೆ. ವಕ್ತೃಗಳಿಂದ ಸಂಗ್ರಹಿಸಿದ ದತ್ತಾಂಶಗಳಿಗಿಂತ ಹೆಚ್ಚಿನ ದತ್ತಾಂಶಗಳು ಇಂಥ ಸೃಜನಶೀಲ ಕೃತಿಯಲ್ಲಿ ದೊರೆಯುವ ಸಾಧ್ಯತೆಯಿದೆ. ಮುಖ್ಯವಾಗಿ ಭಾಷಾ ಪ್ರಯೋಗದ ವಿಸ್ತಾರವಾದ ವೇದಿಕೆ ಇದಾಗಿದೆ. ಇದನ್ನಾಧರಿಸಿ ಹೆಚ್ಚಿನ ಭಾಷಾ ಅಧ್ಯಯನಗಳು ಬರುವಂತಾಗಲಿ ಎಂದು ಹಾರೈಸುತ್ತೇನೆ.

13. ಆವಾಹನೆ

ಈ ಅನುವಾದವು ನನಗೆ ತೃಪ್ತಿಕೊಟ್ಟಿದೆ. ಮೂಲ ಲೇಖಕರನ್ನೂ ಕಥಾವಸ್ತುವನ್ನೂ ಆವಾಹಿಸಿಕೊಂಡು ಮೂಲ ಆವೇಶವೆಂಬಂತೆ ಇದನ್ನು ನಿರ್ವಹಿಸಿದ್ದೇನೆ. ಅನುವಾದವು ಮುಗಿದ ಮೇಲೆ, ಮೂಲಕೃತಿಯನ್ನೇ ಸೃಜಿಸಿದಾಗ ಉಂಟಾಗುವ ಆನಂದವನ್ನು ಅನುಭವಿಸಿದ್ದೇನೆ. ಅನೇಕ ವರ್ಷಗಳ ಕಲ್ಪನೆ ಚಿಂತನೆ ಸಿದ್ಧತೆಗಳ ಬಲದಿಂದ ತಮ್ಮ ಪ್ರತಿಭಾವಿಲಾಸದ ಮಡಿಲಿನಿಂದ ಇಂಥದೊಂದು ಉತ್ಕೃಷ್ಟಕೃತಿಯನ್ನು ರಚಿಸಿದ ಮೂಲಲೇಖಕರ ಆನಂದವು ಇನ್ನೆಷ್ಟು ಭವ್ಯವಾದುದು ಎಂದು ಊಹಿಸಿ ಬೆರಗಾಗಿದ್ದೇನೆ. ಕೆಲ ದಿನಗಳವರೆಗೆ ನನ್ನನ್ನಾವರಿಸಿದ್ದ ಗಾಢವಾದ ಆತ್ಮತೃಪ್ತಿ ಮತ್ತು ಕೃತಿಯ ಉನ್ನತಿಕೆಯ ಜತೆಗಿನ ಭಾವಸಂಚಾರವು ನನಗೆ ದೊರೆತ ಅಸಾಧಾರಣ ಪ್ರತಿಫಲವೆಂದು ಬೀಗಿದ್ದೇನೆ. ನಾನೇ ಮಹಾಮಹಿಮರಾದ ಭೈರಪ್ಪನವರು ಎಂದು ಭ್ರಮಿಸಿದ ಅವಸ್ಥೆಯಲ್ಲಿದ್ದ ಆ ಕ್ಷಣ ಅನುಭವಿಸಿದವರಿಗೆ ಮಾತ್ರ ಅರ್ಥವಾಗುವಂಥದು.

ಅನುವಾದ ಮಾಡುವಾಗ ನಾನು ಕಿವಿಯಾದದ್ದು ನನ್ನ ತಂದೆ ತಾಯಿಗಳೂ ಹಳ್ಳಿಯ ಸಮಸ್ತರೂ ಆಡುತ್ತಿದ್ದ ಕೆಲ ದಶಕಗಳ ಹಿಂದಿನ ಭಾಷೆಗೆ; ಕ್ಷೇತ್ರಕಾರ್ಯಕ್ಕಾಗಿ ವ್ಯಾಪಕವಾಗಿ ಸಂಚಾರ ಮಾಡಿದಾಗ ಕಂಡ ಸಹಸ್ರ ಸಹಸ್ರ ಸಂಖ್ಯೆಯ ಸಂಕೇತಿ ಭಾಷಿಕರ ಹಾವಭಾವ, ವರ್ತನೆ, ಪ್ರತಿಕ್ರಿಯೆ ಮತ್ತು ಸಂಸ್ಕೃತಿಗೆ. ಸಂಕೇತಿ ಭಾಷೆಯ ಮೂಲಕವಾಗಿ 'ಸಾರ್ಥ'ವು ಒಂದು ಹೊಸ ಸಾಂಸ್ಕೃತಿಕ ಅನುಭವದ ಆವರಣವನ್ನೂ ಪಡೆದಂತಾಗಿದೆ.

ಈ ಅನುವಾದಕ್ಕೆ ಬರಬೇಕಾದುದು ಆಕ್ಷೇಪವಲ್ಲ, ಪ್ರತಿಕೃತಿ. ಜನಪದ ಸಾಹಿತ್ಯವನ್ನು ಸಂಗ್ರಹಿಸುವವನ ಸಂಭ್ರಮ ಮತ್ತು ಬಹುರೂಪಗಳ ಅನಂತ ಅವಕಾಶ ಸಂಕೇತಿಭಾಷೆಗೆ ಸಂಬಂಧಿಸಿದಂತೆಯೂ ಇದೆ. ಒಂದಲ್ಲ ಎರಡಲ್ಲ, ಒಂಬತ್ತು ನೂರು ವರ್ಷಗಳಲ್ಲಿ ನಿರಂತರವಾಗಿ ರೂಪಾಂತರ ಹೊಂದುತ್ತ ಬಂದ ಭಾಷೆ ಇದು. ಸಂಪರ್ಕದೂರವಾದ ಹಲವು ನೆಲೆಗಳ ಜನರು ತಮ್ಮ ತಮ್ಮ ಪ್ರಭಾವ ವಲಯದಲ್ಲಿ ತಮತಮಗೆ ದಕ್ಕಿದಂತೆ ರೂಪಿಸಿಕೊಂಡ ಟಿಸಿಲುಗಳು ಈ ಭಾಷೆಗಿವೆ. ಮತ್ತೂರಿನಲ್ಲಿಯೇ ಕಡೂರು ಕೇಂದ್ರದಿಂದ ಸುಮಾರು ಎಂಟು ಶತಮಾನಗಳ ಹಿಂದೆ ಹೋಗಿ ಮೊದಲು ನೆಲೆಸಿದವರ ಭಾಷೆಯು ಆ ನಂತರದ ಶತಮಾನಗಳಲ್ಲಿ ಆ ಊರಿಗೆ ಹೋಗಿ ನೆಲೆಸಿದವರು ರೂಢಿಸಿಕೊಂಡ ಭಾಷೆಗಿಂತ ಭಿನ್ನವಾಗಿದೆ. ಆ ಊರಿನ ಒಟ್ಟು ಜನಸಂಖ್ಯೆ ಸಾವಿರಕ್ಕಿಂತ ತುಸು ಹೆಚ್ಚು. ಲಿಂಗದಹಳ್ಳಿಯಲ್ಲಿ ಹೆಂಗಸರು ತಮ್ಮ ತಮ್ಮಲ್ಲಿ ಆಡಿಕೊಳ್ಳುವ ಸಂಕೇತಿ ಭಾಷೆಗೂ ಗಂಡಸರೊಡನೆ ಆಡುವ ಭಾಷೆಗೂ ಗಂಡಸರು ತಮ್ಮ ತಮ್ಮಲ್ಲಿ ಆಡುವ ಭಾಷೆಗೂ ನಡುವೆ ಗಮನಾರ್ಹ ವ್ಯತ್ಯಾಸಗಳಿವೆಯೆಂದು ಅಲ್ಲಿನವರು ಗುರುತಿಸಿರುವುದನ್ನು ಕೇಳಿದ್ದೇನೆ. ಆ ಹಳ್ಳಿಯವರ ಸಂಖ್ಯೆ ಸಾವಿರಕ್ಕಿಂತ ಬಹಳ ಕಡಮೆ. ಒಂಬತ್ತು ಶತಮಾನಗಳಿಂದ ಕೇವಲ ಆಡುಭಾಷೆಯಾಗಿ ಬಂದಿರುವ ಸಂಕೇತಿ ಭಾಷೆಯನ್ನು ಏಕಾಏಕಿಯಾಗಿ ಈಗ ಬರಹಕ್ಕಿಳಿಸಲಾಗುತ್ತಿದೆ. ಒಂದೇ ಕೃತಿಯನ್ನೇ ಈ ಕ್ಷಣದಲ್ಲಿ ಬೇರೆ ಬೇರೆಯವರು ಅನುವಾದ ಮಾಡಿದರೆ ಅಷ್ಟೂ ಪಾಠ್ಯಗಳೂ ಭಿನ್ನಭಿನ್ನ ಭಾಷಾಛಾಯೆಗಳಾಗಿ ಕಾಣುವುದು ಸಹಜ. ಅದು ಶೈಲಿಯ ವ್ಯತ್ಯಾಸ ಮಾತ್ರವಲ್ಲ, ಭಾಷಾರೂಪದಲ್ಲೇ ಇರುವ ವ್ಯತ್ಯಾಸ. ಲೇಖನಗಳನ್ನು ಬರೆಯುವುದು ಮತ್ತು ಓದುವುದು ರೂಢಿಯಾದಂತೆ ಸಂಕೇತಿಗಳ ಲಿಖಿತಭಾಷೆಗೆ ವ್ಯವಹಾರಸುಲಭವಾದ ಹದವೊಂದು ಸಿದ್ಧಿಸುತ್ತದೆ. ಅದು ಬೇಗ ಸಾಧ್ಯವಾಗಲೆಂದು ಆಶಿಸೋಣ.

ಈ ಕೃತಿಯನ್ನು ಅನುವಾದಿಸಲು ಕೃಪೆಯಿಟ್ಟು ಅನುಮತಿಸಿದ ಡಾ. ಎಸ್.ಎಲ್. ಭೈರಪ್ಪನವರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು.

ಈ ಕೃತಿಗೆ ತಮ್ಮ ಅಮೂಲ್ಯ ಮುನ್ನುಡಿಯನ್ನು ಬರೆದುಕೊಟ್ಟು ಹರಸಿರುವ ನನ್ನ ಪೂಜ್ಯ ಗುರುಗಳಾದ ಡಾ. ಪ್ರಧಾನ್ ಗುರುದತ್ತ ಅವರಿಗೆ ಕೃತಜ್ಞನಾಗಿದ್ದೇನೆ. ಆತ್ಮೀಯರಾದ ಶ್ರೀ ಎನ್.ಎಸ್. ಶಾರದಾ ಪ್ರಸಾದ್, ಅಗ್ರಹಾರ ಕೆ. ಅನಂತರಾಮು ಹಾಗೂ ನನ್ನ ಪತ್ನಿ ಡಾ. ಎಂ.ಎಸ್. ವಿಜಯಾ ಹರನ್ ಅವರ ಸಹಕಾರಕ್ಕಾಗಿ ವಂದಿಸುತ್ತೇನೆ.

ಸದ್ಯಕ್ಕೆ ಸಂಕೇತಿ ಭಾಷೆಯನ್ನು ಬೆರಳಚ್ಚು ಮಾಡುವುದು ಮತ್ತು ಅದರ ಕರಡು ತಿದ್ದುವುದು ಕಲ್ಪಿಸಿಕೊಂಡರೇ ಭಯ ಹುಟ್ಟಿಸುವ ಕೆಲಸ. ಅದನ್ನು ಸುಲಭವಾಗಿ ನಿಭಾಯಿಸಿಕೊಟ್ಟವರು ಮಿತ್ರ ಶ್ರೀ ಗಿರೀಶ್ ಅವರು. ಕೃತಿಯನ್ನು ಬೆರಳಚ್ಚು ಮಾಡಿ ಮುದ್ರಣಕ್ಕೆ ಅಣಿಗೊಳಿಸಿದ ಶ್ರೀ ಗಿರೀಶ್ ಮತ್ತು ಶ್ರೀಮತಿ ಹೇಮಲತಾ ಅವರಿಗೆ ಆಭಾರಿ.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ .... ಅವರಿಗೂ, ಪ್ರಕಾಶಕ ಮಿತ್ರರಾದ .... ರವರಿಗೂ, "ನಮನ" ಲೇಖನವನ್ನು ಬರೆದುಕೊಟ್ಟ ಶ್ರೀ ಜಿ.ಟಿ. ಬೋರೇಗೌಡ ಅವರಿಗೂ ಧನ್ಯವಾದಗಳು.

ವಿಜಯದಶಮಿ
4–10–2014

ಬಿ.ಎಸ್. ಪ್ರಣತಾರ್ತಿಹರನ್
ಮೈಸೂರು

ಸಾರ್ಥ

ಸಾರ್ಥದ ಮರ್ಮವನ್ನು ತಿಳಿಯಲು ಮನೆಮಾರು ಬಿಟ್ಟುಹೋದ ನಾಗಭಟ್ಟನು ತನ್ನ ಗುರಿಯಿಲ್ಲದ ಸಂಚಾರಪರಿಕ್ರಮದಲ್ಲಿ ಜನಪದದ ಜೀವನಾಡಿಯಂತಿದ್ದ ಹತ್ತಾರು ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರವೃತ್ತಿಗಳ ಪ್ರಭಾವಕ್ಕೊಳಗಾಗಿ ಅಚ್ಚರಿಯ ಜೀವನದರ್ಶನಕ್ಕೆ ಸಾಕ್ಷಿಯಾಗುತ್ತಾನೆ.

'ಸಾರ್ಥ' ಕ್ರಿ.ಶ. ಎಂಟನೆಯ ಶತಮಾನದ ಭರತಖಂಡದಲ್ಲಿ ನಡೆಯಿತೆಂದು ಕಲ್ಪಿಸಿಕೊಳ್ಳಬೇಕಾದ ಸಂಗತಿಗಳನ್ನಾಧರಿಸಿದ ಕಾದಂಬರಿ. ಆನೆ ಕುದುರೆ ಹೇಸರಗತ್ತೆ ನೂರಾರು ಗಾಡಿಗಳ ಮೇಲೆ ವಾಣಿಜ್ಯ ಪದಾರ್ಥಗಳನ್ನು ಹೇರಿಕೊಂಡು ವ್ಯಾಪಾರ ಮಾಡುತ್ತ ದೂರ ದೂರ ದೇಶಗಳಲ್ಲಿ ಸಂಚರಿಸುವುದನ್ನು ಆ ಕಾಲದಲ್ಲಿ 'ಸಾರ್ಥ' ಎನ್ನುತ್ತಿದ್ದರು. ಭಾರತದ ಇತಿಹಾಸದ ಒಂದು ಸ್ಥಿತ್ಯಂತರ ಅವಧಿಯ ಈ ಕಾದಂಬರಿಯಲ್ಲಿ ಅಪೂರ್ವ ಅನುಭವ ಮತ್ತು ಪಾತ್ರಗಳು ಒಡಮೂಡಿವೆ. ಆಳವೂ ವಿಸ್ತಾರವೂ ಆದ ಐತಿಹಾಸಿಕ ಅಧ್ಯಯನದ ಅಡಿಪಾಯದ ಮೇಲೆ ಶಕ್ತ ಸೃಜನಶೀಲತೆಯು ಕೆಲಸಮಾಡಿ ಈ ವಿಶಿಷ್ಟ ಕಾದಂಬರಿಯನ್ನು ನಿರ್ಮಿಸಿದೆ.

ಭಾರತವು ಸತತವಾಗಿ ಎದುರಿಸುತ್ತಿರುವ ಧಾರ್ಮಿಕ ಸಂಘರ್ಷಗಳ ತಾತ್ತ್ವಿಕಬೇರುಗಳನ್ನು 'ಸಾರ್ಥ' ಸೃಜನಶೀಲವಾಗಿ ಅನ್ವೇಷಿಸುತ್ತದೆ.

ಸಾರ್ಥು

ಸಾರ್ಥತ್ತೇ ಮರ್ಮತಾ ತೆರಿಯಕ್ಕ್ ಹಾಂವಾಶ್ಲಾ ಉಟ್ಟ್ಪೋನ ನಾಗಭಟ್ಟು ತಂದೆ ಗುರಿಯಿಲ್ಲಾದ ಸಂಚಾರಪರಿಕ್ರಮತುಳ್ಳೆ ಜನಪದತ್ತೇ ಜೀವನಾಡೀಪೋಲಿಂದ ಪತ್ತಾರ್ ಧಾರ್ಮಿಕಮಾನ, ಸಾಮಾಜಿಕಮಾನ ಪಿನ್ನ ಸಾಂಸ್ಕೃತಿಕಮಾನ ಪ್ರವೃತ್ತಿಹೀಡೆ ಪ್ರಭಾವತಕ್ಕುಳ್ಳಾಯಿಟ್ ಆಶ್ಚರ್ಯಕರಮಾನ ಜೀವನದರ್ಶನತಕ್ಕ್ ಸಾಕ್ಷಿಯಹಣ.

'ಸಾರ್ಥು' ಕ್ರಿ.ಶ. ಅಟ್ಟಾ ಶತಮಾನತ್ತೇ ಭರತಖಂಡತುಳ್ಳೆ ನಡಂದದ್ ಅ್ರಂಟ್ ಕಲ್ಪಿಚ್ಚಕಣಮಾನ ವಿಚಾರಂಗಳಾ ಆಧರಿಚ್ಚ ಕಾದಂಬರಿ. ಆನ ಕುದುರ ಹೇಸರಗತ್ತ ನೂರಾರ್ ವಂಡಿಹೀಡೆ ಮೇಲೆ ವಾಣಿಜ್ಯಪದಾರ್ಥಂಗಳಾ ಚುಮತಿಕಿಂಡ್ ವ್ಯಾಪಾರೂ ಪಣ್ಣಿಕಿಂಡ್ ಧೂರಧೂರತ್ತೇ ದೇಶಂಗಳುಳ್ಳೆ ಸಂಚರಿಯರತಾ ಅಂದೆ ಕಾಲತುಳ್ಳೆ 'ಸಾರ್ಥು' ಅ್ರಣ್ಣಾಂಡಿಂದ. ಭಾರತತ್ತೇ ಇತಿಹಾಸತ್ತೇ ಒರು ಸ್ಥಿತ್ಯಂತರತ್ತೇ ಅವಧೀತೇ ಇಂದೆ ಕಾದಂಬರೀಲೆ ಅಪೂರ್ವಮಾನ ಅನುಭವು ಪಿನ್ನ ಪಾತ್ರಂಗ ಒಡಮೂಡೀರಾನ್ನ. ಆಳಮೂ ವಿಸ್ತಾರಮೂ ಆನ ಐತಿಹಾಸಿಕಮಾನ ಅಧ್ಯಯನತ್ತೇ ತಳಪದೀಮೇಲೆ ಶಕ್ತಮಾನ ಸೃಜನಶೀಲತಾ ಕಾಯ್ರೂಪಣ್ಣೀ ಇಂದೆ ವಿಶಿಷ್ಟಮಾನ ಕಾದಂಬರೀಯಾ ನಿರ್ಮಿಚ್ಚರಾಂದ್.

ಭಾರತು ಸತತಮಾ ಎದರಿಯಾಂಡಿಕ್ಕರ ಧಾರ್ಮಿಕಮಾನ ಸಂಘರ್ಷಂಗಡೆ ತಾತ್ತ್ವಿಕಮಾನ ವೇರಹೀಳ 'ಸಾರ್ಥು' ಸೃಜನಶೀಲಮಾಯಿಟ್ ಅನ್ವೇಷಿಯಂದ್.

ಪರಿವಿಡಿ

ಕೃತಜ್ಞತ

೯–೧೧–೯೪ ಪಿನ್ನ ೨೮–೨–೯೫ತ್ತೇ ಮಧ್ಯೆ ಅಳದೀನ ಇಂದೆ ಕಾದಂಬರೀತೇ ಹಸ್ತಪ್ರತೀಯ ವಿಮರ್ಶಿಚ್ಚ ಪ್ರೊ॥ ಎನ್. ಬಾಲಸುಬ್ರಹ್ಮಣ್ಯ, ಎಂ.ಎಸ್.ಕೆ. ಪ್ರಭು ಪಿನ್ನ ಡಾ॥ ಪ್ರಧಾನ್ ಗುರುದತ್ತ ಇಘಾಳ್ಳಕ್ಕ್ ಕೃತಜ್ಞನಾರಾಣಿ

ಎಸ್.ಎಲ್. ಭೈರಪ್ಪ.

ಭೈರಪ್ಪ ಅಘಾಡೆ ವಿಷಯಮಾನ ಅಧಿಕಮಾನ ಮಾಹಿತೀಕಾಯಿಟ್ ಪಾರಂಗೊ
www.slbhyrappa.com

ಓದುಗರು ಗಮನಿಸಬೇಕಾದ ಅಂಶಗಳು

1) ಅ಼ ಎಂಬುದಕ್ಕೆ ಅಚ್ಚಿನಮನೆ, ಅವಿತುಕೊ ಎಂಬ ಪದಗಳಲ್ಲಿರುವ ಅಕಾರದಂತೆ ಉಚ್ಚಾರ.

2) ವಾಕ್ಯಾಂತದ ವ್ಯಂಜನಾಂತಕ್ಕೆ ಎನ್ನಾಚ್? ಏನಾಯಿತು? ಎಂಬಂತೆ ಉಚ್ಚಾರ.

3) ಅವುಂ ಎಂಬಂತೆ ಬಿಂದುಯುಕ್ತವಾದ ಪದಗಳಿಗೆ ಅವ್ವು ಎಂಬಂತೆ ಉಚ್ಚಾರ.

4) ನಾ ಎನ್ನುವುದಕ್ಕೆ ನಾನು, ದಿನ ಎಂಬ ಎರಡು ಅರ್ಥಗಳಿವೆ.

5) ಹೊಸದಾಗಿ ಇಂಗ್ಲಿಷ್‌ಭಾಷೆಯನ್ನು ರೂಢಿಸಿಕೊಳ್ಳುತ್ತಿರುವ ಕನ್ನಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಇಂಗ್ಲಿಷ್ ನಾಟಕ ಅಥವಾ ಕಾದಂಬರಿಯ ಸಾರವನ್ನು ಕನ್ನಡದಲ್ಲಿ ಕೊಡಬಹುದಾದಂತೆ 'ಸಾರ್ಥ'ದ ಸಾರವನ್ನು ಪ್ರಾರಂಭದಲ್ಲಿ ಕೊಡಲಾಗಿದೆ. ಅಗತ್ಯವಿದ್ದವರು ಅದರ ಪ್ರಯೋಜನ ಪಡೆಯಬಹುದು.

* * * * *

ಸಾರ್ಥ

ಸಾರ್ಥು

ಒಂಡು

‘ನಾಗಭಟ್ಟನಾ! ಅ್ರಪ್ಪಡಿಯೂ ಅತ್ಥನ ಧೂರು ಪೊಹಣಿ. ಮುಂತೀಕ್[1] ಮೂಡು ದಿನತ್ತೇ ವಳಿ. ಕಾಶೀಕೇ ಪೋಯಿಟ್ ಉನ್ನಾ ಹುಡುಕೀ ಶುದ್ಧೀ ಚೊಲ್ಲಣು ಅಂಢ್ಂಡಿಂದೆ. ನೀ ಇಂಗೇ ಶಿಕ್ಕೀ ಉಟ,’ ನಾರಾಯಣದೀಕ್ಷಿತಾ ಎನ್ನಾ ಗುರುತಿಚ್ಚ ತಕ್ಷಣು ಅ್ರಂಡ, ಎನಕ್ ಎಂದೆ ಊರು–ವಾಶಲಾ ಕಂಡತ್ಥನ ಸಂಭ್ರಮುಮಾಯಿಟ್ ವಾರ್ಥಯೇ ಪರಪಟ್ಟಿಲ್ಲ.

‘ದೀಕ್ಷಿತಾಳೆ, ಇಂತೀಕ್ ಅ್ರಪ್ಪಡಿ ವಂದಿಹ್ಯೊ?’ ಸಂಭ್ರಮು ಗೊಂದಲಂಗಡೆ ಮಧ್ಯೆ ಎಂದೆ ನಾಕ್ ಕೋಟದ್.

‘ತೋಪನಾ ತೀರಿಕಂಡ[2]. ಅಸ್ಥೀಯ ಪ್ರಯಾಗತುಳ್ಳೇ ವಿಸರ್ಜಿಯಣೂಂಟ್ ನಿಶ್ಚಯಿಚ್ಚೆ. ಒರು ಸಾರ್ಥು ಶಿಕ್ಕೀತ್. ಅತ್ತಂದೆ ಜೊತೇಲೆ ಇಂದೆ ಮಥುರೇಕ್ ವಂದೆ. ಇಂಗಣ್ಣು ಪ್ರಯಾಗತಕ್ಕ್ ಸೀದಾ ವಳೀ ರಾಂದಾಂಗೊ. ಪ್ರಯಾಣಿಕಾಡೆ ತಂಡಂಗಳೂ ಇರನ್ನ[3]. ಇಪ್ಪೊ ಪೂಜೇ ಮುಡಿಚಿ ಪರಪಡರ ಒರು ತಂಡತ್ತೇ ಜೊತೇಲೆ ಪರಪಡಣಿ. ಚೊಲ್ಲೀನೇನೆ, ಪ್ರಯಾಗತಣ್ಣು ಕಾಶೀಕ್ ಮೂಡುನಾ ನಡವಣಮಾಂಗೊ. ಉನ್ನಾ ಹುಡುಕೀ ಶುದ್ಧೀ ಚೊಲ್ಲಣೂ ಅ್ರಂಟ್ ನಿಶ್ಚಯಿಚ್ಚಿಂದೆ. ನೀ ಇಂಗೇ ಶಿಕ್ಕೀಉಟ. ಊರ್ಕ್ಕ ಪಿಂತಿರ್ಂಬೀ ಪೊಹಾಂಡ್ರಾಡಾ? ಅಥವಾ ಕಾಶೀಕ್ ಪೋಚೇ ಇಲ್ಲ? ಅ್ರಪ್ಡಿ ಪಣ್ಣೀಂದಾಲೂ ಅವಿವೇಕಮೆ! ಯಜ್ಞಭಟ್ಟಾಡೆ ಪುಳ್ಳೆಯಾಯಿಟ್ ನೀ ಇತ್ಥಾತಕ್ಕೆಲ್ಲ ಅವಕಾಶು ಕುಡಲಾಮು?’

ಕೊನೇ ವಾರ್ಥೇ ಕೋಟ್ ಎನಕ್ ಆತಂಕಮಾಚ್. ಇಂದೆ ನಾರಾಯಣದೀಕ್ಷಿತಾ ಅ್ರಪ್ಪದೂ ಕಟುವಾರ್ಥೇಕ್ ಪೇರಾನವ. ನ ಬ್ರೂಯಾತ್ ಸತ್ಯಮಪ್ರಿಯಮ್ ಅ್ರಣ್ಣರ ಹಿತೋಪದೇಶತಕ್ಕೂ ಇಥಾಳ್ಕಕ್ಕೂ ಬಲು ದೂರು. ಆನಾಕ ಪೊಯ್ಯಾ ಚೊಲ್ಲರವಾಳಂಡ್. ಅರಹಿದ್ ವರ್ಷಂಗಳಾ, ಆಮು, ಲೆಕ್ಖ್ಪೋಟಾಕ ಸುಮಾರಾ ಅರಹಿದ್ ವರ್ಷು ವಯಸ್ಸಾಯಿರಾಂದ್, ಇಪ್ಪಡಿಯೇ ಪಳಚ್ರಾಡಾ. ಅರೆನೆತ್ತಿ ಬೊಕ್ಕಾಯಿಂದಾಲೂ ಒರು ಪಲ್ಲೂ ಉಳಂದಕ್ಕಲ್ಲ. ‘ಒದಾಚ್ ದೀಕ್ಷಿತಾಳೇ?’ ಆತಂಕತಣ್ಣಮೇ ಎಂದೆ ನಾಕ್ ಕೋಟದ್.

‘ವಿದ್ಯಾಭ್ಯಾಸು, ವಿಶೇಷಮಾನ ಅಧ್ಯಯನು, ದೇಶಾಟನಹ್ಯ ಓದಿಂದಾಲೂ ಗೃಹಸ್ಥನಹರತಕ್ಕ್ ಮುದಲು[4]. ಅತ್ಥೀಮೇಲೆ ಸ್ವಾಧ್ಯಾಯತುಳ್ಳೆ, ಸ್ವಸ್ಥಳತುಳ್ಳೆ ಲಭ್ಯಮಾನ ಘೆರೀ ವಿದ್ವಾಂಸಾಡೆ ಮಾರ್ಗದರ್ಶನತುಳ್ಳೆ ತೃಪ್ತಿ ಪಟ್ಟ್ಕ್ಂಡಿರಣು. ಇಂದೆ ನಿಯಮತಾ ಪಾಲಿಯಾದೆ ನೀ ಅವಿವೇಕೂ ಪಣ್ಣಿಕಂಡ[5].’

‘ಒದಾಚಿ ದೀಕ್ಷಿತಾಳೇ?’ ಎಂದೆ ನಾಕ್ ಮಧ್ಯತುಳ್ಳೇ ಕೋಟದ್.

‘ಅ್ರಳೂಪ್ರಾಯತ್ತೆ ಹಾಂಬಡಿಯ ರಸಿಕರಾಜಂದೆ ವಜ್ರವೈಡೂರ್ಯದಿ ಆಭರಣಂಗಳ್ಕ್ಕ ಮರುಳಾನ. ಬಸರಿಯೂ ಆಯಿಟ್ ಪಶ್ಚಲಿಯೂ ಪೆತ್ತ. ಇತ್ತಾ ಪಾಕಮಾಟಾದೆ ಉಂದೆ ತಾಯಾ ಕೊರಗಿ ಪ್ರಾಣೂ ಉಟ್ಟ. ಉನಕ್ ಅ್ರಂಗೇ ಅ್ರಂಟ್ ಚೊಲ್ಲೀಉಟ್ಟುಡಾ ಅವೆ? ಆಡೆ ಕೈಯುಳ್ಳೆ? ಕಾಶಿ ಓದ್ ನಾಲಾರ್ ದಿನಂಗಡೆ ವಳಿಯಾ?’

ಎಂದೆ ಇಡೀ ಶರೀರೂ ನಡಗೀಉಟ್ಟದ್. ಯಮುನಾ ತೀರತ್ತೇ ಅಂದೆ ಕೃಷ್ಣಮಂದಿರು, ವಡ್ಚಾಲೇ ಪೋದೇಲೆ ಗಿಜಿಗುಟ್ಟರ ಭಕ್ತಾ, ದೇವಸ್ಥಾನತ್ತೇ ಘಂಟೆಹೀಡೆ ಮಧ್ಯೆ ಚೊವೀಲೆ ನಿಶ್ಯಬ್ದು ಹೆಂಬಿಕಂಡದ್. ‘ಅ್ರಳೂಪ್ರಾಯತ್ತೇ ಹಾಂಬಡಿಯಾ ಅ್ರಂಡಾಕ ಆರ್?’ ನಾಕ್ ಕೋಟದ್.

---

1 ಮೂಖಡೇಕ್ 2 ತೀರಿಹಿಂಡ 3 ಇಕ್ಕನ್ನ 4 ಮೊದಲು 5 ಪಣ್ಣ್ಹಿಂಡ

'ಇನ್ನಾರ್? ಉಂದೆ ಹಾಂಬಡಿಯಾ ಶಾಲಿನಿ. ಒರೂ ಒಡಮೆಹೀಳಕ್ಕ್ ಮರುಳಾನಾಳೋ ಅಥವಾ ರಸಿಕ ರಾಜನಕ್ಕ್ ಮರುಳಾನಾಳೋ, ಒಟ್ಟಂದುಳ್ಳೆ ಇಡೀ ಜಾತೀಕ್ ಕಟ್ಟಪೇರಾ ಕೊಳಂದಾ. ಜಾತೀಣ್ಣು ಪರಂಬಕ್ಕ್ ಪೋಟಾ. ವೀತೀತೇವಾಳೆಲ್ಲಾ ಓದ್ ವಾರ್ಥೊಲ್ಲಿಕ್ಯಾಂಡ್ ರಾಡಾ ಗೊತ್ತಾ[1]? ಅಮರುಕರಾಜನಕ್ಕ್ ಶಾಲಿನೀ ಮೇಲೆ ಕಣ್ಣುಳಂದ್‌ದ್. ಅವೆ ರಾಜಸಂಪರ್ಕತಕ್ಕ್ ಮನಸೋತಾ. ಉನ್ನಾ ದೀರ್ಘಕಾಲು ಊರಣ್ಣು ಪರಂಬಕ್ಕ್ ಉಟ್ಟುಟಾಕ ತಂಗ ಸುಲಭಮಾ ಶೇರಲಾಂ ಆ್ಂಟ್ ಅವನೇ ಉಂದೆ ತಲೇಕ್ ಕಾಶೀಲೆ ವ್ಯಾಸಂಗೂ ಪಣ್ಣರ ಹುಚ್ಚಾ ಹೆಪ್ಪಿ ಸಾಗಪೋಟಾಂ. ಪೆದ್ದಂಭಟ್ಟು ನೀ ಅವಂದೆ ತಂತ್ರತಕ್ಕ್ ಬಲಿಯಾನ. ಇದೆಲ್ಲಾ ಜನಂಗಡೆ ವಾರ್ಥಾ. ನಿಜೂ ಉನಕೇ ತೆರಂಜಿರಣು[2]. ಕಾಶೀಣ್ಣು ಪಿಂತಿರಂಬಾಂಡ್ ರಾಡೇಯಾ? ನೀ ಊರಾ ಉಟ್ಟ್ ನಾಲ್ ವರ್ಷಂಗಡೆ ಮೇಲಾಚಂಡಾ?'

ಉಳಂದರಾಣ (ಬಿದ್ದಿದ್ದಾನೆ)
ಉಂಗ, ಉಂಗಡೆ – ನಿಮ್ಮ
ಉಂಗ ಉಂಗಳುಳ್ಳೆ, ಉಂಗುಂಗಳುಳ್ಳೆ (ನಿಮ್ಮ ನಿಮ್ಮಲ್ಲಿ)
ಉಂಗುಂಗಡೆ (ನಿಮ್ಮ ನಿಮ್ಮ)
ಉಂಗಡೆ ಪೇರೋದ್? (ನಿಮ್ಮ ಹೆಸರೇನು?)
ಉಂಗಳ (ನಿಮ್ಮನ್ನು), ಉಂಗಡೇವ (ನಿಮ್ಮವರು)
ಉಂಗಳಾ ಉಟ್ಟಿರಮಾಟೆ (ನಿಮ್ಮನ್ನು ಬಿಟ್ಟಿರಲಾರೆ)
ಉಂಗಳಕ್ಕ್ (ನಿಮಗೆ)
ಉಂದೆ – ನಿನ್ನ
ಇದ್ ಉಂದೆ ಪುಸ್ತಕು (ಇದು ನಿನ್ನ ಪುಸ್ತಕ)
ಉಂದೇದ್ (ನಿನ್ನದು)
ಊಟರದ್ – ಊಡಿಸುವುದು
ಪಶ್ಶಲಕ್ಕ್ ಊಟು (ಮಗುವಿಗೆ ಊಡಿಸು)
ಊರು–ವಾಶಿಲ್ – ಊರು–ಬಾಗಿಲು
ಅತ್ತಕ್ಕ್ ಊರೂವಾಶಿಲ್ ಒಂಡೂ ಇಲ್ಲ
(ಅವನಿಗೆ ಊರೂ ಬಾಗಿಲೂ ಒಂದೂ ಇಲ್ಲ)
ಊಶಿ – ಸೂಜಿ
ಊಶೀಲೆ ಚುಚ್ಚನ್ನ (ಸೂಜಿಯಲ್ಲಿ ಚುಚ್ಚುತ್ತಾರೆ)

ಊಳ – ತಣ್
ಊಳೇ ನೀರ್ (ತಣ್ಣೀರು)
ಎದರ್ – ಎತ್ತು
ಎದರ್ ಗಾಡಿ (ಎತ್ತಿನ ಗಾಡಿ)
ಎದಿರ್ ಹಾಂ (ಎದುರು ಮನೆ)
ಎನಕ್ – ನನಗೆ
ಎನಕ್ ಅದ್ ವಾಣ (ನನಗೆ ಅದು ಬೇಡ)
ಎನಕಣ್ಣಮೂ (ನನಗಿಂತಲೂ)
ಅವುಂ ಎನಕಣ್ಣಮೂ ಮುದಲೇ ವನ್ನ
(ಆತ ನನಗಿಂತಲೂ ಮೊದಲೇ ಬಂದರು)
ಎನಕಾಯಿಟ್ (ನನಗಾಗಿ)
ಇತ್ತಾ ಎನಕಾಯಿಟ್ ಪಣ್ಣೀಕುಡು
(ಇದನ್ನು ನನಗಾಗಿ ಮಾಡಿಕೊಡು)
ಎನ್ನ – ನನ್ನನ್ನು
ಎನ್ನಾ ಅಳಿಚ? (ನನ್ನನ್ನು ಕರೆದೆಯ?)
ಎನ್ನುಳ್ಳೆ (ನನ್ನಲ್ಲಿ)
ಎನ್ನಣ್ಣು – ನನ್ನಿಂದ
ಎನ್ನಣ್ಣು ಓದಹಣು? (ನನ್ನಿಂದ ಏನಾಗಬೇಕು?)
ಎನ್ನಾ – ನನ್ನನ್ನು
ಅವಾ ಎನ್ನಾ ಅಳಿಚ (ಅವರು ನನ್ನನ್ನು ಕರೆದರು)
ಎರಿ – ಉರಿ
ಎರಿಂಜ, ಯರಿಂಜ (ಉರಿದ)
ಎರಿ ಅಡತದ್ (ಉರಿ ಎದ್ದಿತು)
ಎಶಿ – ಎಸೆ
ಎಶಿವಿಚ್ಚಿಕೊ (ಎಸೆಸಿಕೊ)
ಎಂಗಡೆ – ನಮ್ಮ
ಎಂಗಡೆ ಹಾತುಳ್ಳೆ ರಾಂದ್ (ನಮ್ಮ ಮನೆಯಲ್ಲಿದೆ)
ಎಂಗಡೇಫಿಯ (ನಮ್ಮವರು), ಎಂಗಡೂರು (ನಮ್ಮೂರು)
ಒಟ್ಟು – ಬಿಡು, ಬಿಟ್ಟು
ಒಟ್ಟೀತಿಲ್ಲೆ (ಬಿಡಲಿಲ್ಲ)
ಪುಲ್ಲಾ ಒಟ್ಟೀ ಆಚಿ (ಹುಲ್ಲನ್ನು ಒಟ್ಟಿ ಆಯಿತು)
ಒಡಮ – ಒಡವೆ
ಒಡಮೇ ಪೋಡಿಚ್ಚಿರಾಡಾಳಾಂಗೊ (ಒಡವೆ ಹಾಕಿಸಿದಾರಂತೆ)
ಒಡಂಬು – ದೇಹ
ಒಡಂಬಾ ಕಳವೀ ಆಚಾ? (ಸ್ನಾನವಾಯಿತೆ?)
ಒಡಂಬಡತ್ (ಮೈತಳೆದು)
ಒಣತು – ಒಣಗಿಸು
ಸೌದೇಯಾ ಒಣತು (ಸೌದೆಯನ್ನು ಒಣಗಿಸು)
ಒತ್ತುಂ – ಒಬ್ಬ
ಅಂಗೆ ಒತ್ತುಂ ಕಲಾವಿದು ರಾಣ
(ಅಲ್ಲಿ ಒಬ್ಬಾತ ಕಲಾವಿದ ಇದ್ದಾರೆ)

ಒಪ್ಪಡಾಳಾ – ಒಪ್ಪುತ್ತಾರೆಯೆ?
ಅವೆ ಒಪ್ಪಡಾಳಾ? (ಆಕೆ ಒಪ್ಪುತ್ತಾರೆಯೆ?)
ಒಪ್ಪಕ್ಕಹದ್, ಒಪ್ಪಲಹದ್ (ಒಪ್ಪಕೂಡದು)
ಒಪ್ಪಲಾಂ – ಒಪ್ಪಬಹುದು
ಅವುಂ ಚೊಲ್ಲೀನಾಕ ಒಪ್ಪಲಾಂ
(ಅವರು ಹೇಳಿದರೆ ಒಪ್ಪಬಹುದು)
ಒಪ್ಪರಹುಡಿ (ಒಪ್ಪುವ ಹಾಗೆ)
ಒಪ್ಪಿಯಣು (ಒಪ್ಪಿಸಬೇಕು)
ಒಪ್ಪಲಾಮಾ ? (ಒಪ್ಪಬಹುದೆ?)
ಒಪ್ಪಿಚ್ಚಿ (ಒಪ್ಪಿಸಿ)
ಒರಕು – ನಿದ್ದೆ
ಒರಕು ವಂದರಾಂದ್ (ನಿದ್ದೆ ಬಂದಿದೆ)
ಒರಮ್ಮನೆ – ಬೆತ್ತಲೆ
ಪಶ್ಮಾ ಒರಮ್ಮನೇ ರಾಂದ್ (ಮಗು ಬೆತ್ತಲೆ ಇದೆ)
ಒರಹರದ್ – ಒರಗಿಕೊಳ್ಳುವುದು
ಕಂಭತಾ ಒರಹೀ ನಿಂಡೆ (ಕಂಭವನ್ನು ಒರಗಿಕೊಂಡು ನಿಂತೆ)
ಒರು ಹೋ – ಒಂದು ಹೊತ್ತು
ಇಂಡೇನು ಒರು ಹೋ (ಇವತ್ತು 'ಒಂದುಹೊತ್ತು')
ಒರುಕ – ಒಂದು ಬಾರಿ
ಒರುಕ ವಾ (ಒಮ್ಮೆ ಬಾ)
ಒರೂ – ಬರೀ
ಒರೂ ಪೊಯ್ಯಿ (ಬರೀ ಸುಳ್ಳು)
ಒರೂ ಒರಮ್ಮನೆ (ಬರೀ ಬೆತ್ತಲೆ)
ಒರೂ ಕೈ (ಬರಿಗೈ)
ಇಪ್ಪೊ ಒರೂಕ್ಕೈ ಆಯಿರಾಂದ್ (ಈಗ ಬರಿಗೈ ಆಗಿದೆ)
ಒಳಿಂಜ – ಉಳಿದ
ಒಳಿಂಜಿತಾ ಅತ್ಥೇಮೇಲೆ ಪಾಕದೂಂ, ಇಪ್ಪೋ ಪೋ
(ಉಳಿದುದನ್ನು ಆಮೇಲೆ ನೋಡೋಣ, ಈಗ ಹೋಗು)
ಒಳಿಂಝುರದ್ – ಉಳಿದುಕೊಳ್ಳುವುದು
ಇಂಡೇನು ಒಳಿಂಝುಂಡುಡು
(ಇವತ್ತು ಉಳಿದುಕೊಂಡುಬಿಡು)
ಒಂಡಾಯಿಟ್ – ಒಂದಾಗಿ
ಎಲ್ಲಾಮೂ ಒಂಡಾಯಿಟ್ ಶೇರೀರಾಂದ್
(ಎಲ್ಲವೂ ಒಂದಾಗಿ ಸೇರಿದೆ)
ಒಂಡು – ಒಂದು
ಒಂಡಂಡ್ ಒರು ಸಮಸ್ಯ ಇಕ್ಕಂದ್
(ಒಂದಲ್ಲ ಒಂದು ಸಮಸ್ಯೆ ಇರುತ್ತದೆ)
ಓಕ್? – ಏಕೆ?
ನಾ ಓಕ್ ಮೊಹವಾ? (ನಾನು ಏಕೆ ಹೋಗಲಿ?)
ಓಡಿ – ಓಡಿಸು
ಓಡಿಚ್ಚಿ (ಓಡಿಸಿ)

ಓಡೆ – ಜೊತೆಯಲ್ಲಿ
ಪುಸ್ತಕತೋಡೆ ವಾ (ಪುಸ್ತಕದ ಜೊತೆ ಬಾ)
ರಾಮಂದೋಡೆ ಪೋ (ರಾಮನ ಜೊತೇಲಿ ಹೋಗು)
ಓಣಮಾನಪೊ – ಬೇಕಾದಾಗ
ಓಣಮಾನಪೊ ವಾ (ಬೇಕಾದಾಗ ಬಾ)
ಓಣು – ಬೇಕು
ದಾರಕ್ಕ್ ಓಣು? (ಯಾರಿಗೆ ಬೇಕು?)
ಓಣಮಾಲೂ, ಓಣಮಾನಾಲೂ (ಬೇಕಾದರೂ)
ಓಣಮಾ ಇಂದ್ (ಬೇಕಾಗಿತ್ತು)
ಎಂಕೂ ಒಂಡು ಓಣು (ನನಗೂ ಒಂದು ಬೇಕು)
ಓಣಮಾನಹುಡಿ ರಾಂದ್ (ಬೇಕಾದಹಾಗೆ ಇದೆ)
ಓಣಮಾನತ್ಥನ (ಬೇಕಾದಷ್ಟು)
ಓದ್? – ಏನು?
ಓದಾಚಿ (ಏನಾಯಿತು?), ಆನಾಕೋದ್ (ಆದರೇನು?)
ಓದಾಂಗೊ? (ಏನಂತೆ?), ಓದೋದಾಚಿ (ಏನೇನಾಯಿತು)
ಓದದ್ (ಏನದು?), ಅತ್ಥಾದೋದ್ (ಅಂಥಾದ್ದೇನು?)
ಓದೂ ಇಲ್ಲ (ಏನೂ ಇಲ್ಲ), ಓದೋ (ಯಾವುದೋ)
ಓದ್ ಓದ್, ಓದೋದ್ (ಏನೇನು)
ಓದು – ಓದು
ಓದೀ ಅ್ಥಳದೀ ಪಣ್ಣೀರಾಡೇಯೋ?
(ಓದಿಬರೆದು ಮಾಡಿದೀಯೊ?)
ಓದಣು – ಓದಬೇಕು
ಇನ್ನೊರು ಘಂಟೇಲೆ ನೀ ನಾಲ್ ಪಾಠು ಓದಣು
(ಇನ್ನೊಂದು ಘಂಟೇಲಿ ನೀನು ನಾಲ್ಕು ಪಾಠ ಓದಬೇಕು)
ಓದಕ್ಕ್ ವರಂದ? (ಓದಕ್ಕೆ ಬರುತ್ತದೆಯೆ?)
ಓಪೂ ಮರು – ಬೇವಿನ ಮರ
ಓಪೂಮರು ವಳಂಜರಾಂದ್ (ಬೇವಿನ ಮರ ಬೆಳೆದಿದೆ)
ಓರು – ಏರು
ಸಿಂಹಾಸನತ ಓರು (ಸಿಂಹಾಸನವನ್ನೇರು)
ಓರಿಚ್ಚಿ (ಏರಿಸಿ)
ಓರೆ – ಬೇರೆ
ಓರೇ ಅ್ಥಂದೆ ಕಾರಣಮೂ ಇಲ್ಲ
(ಬೇರೆ ಯಾವ ಕಾರಣವೂ ಇಲ್ಲ)
ಓರೆ ಮಾರ್ಗಮಿಲ್ಲ (ಬೇರೆ ಮಾರ್ಗವಿಲ್ಲ)
ಓರೋರೆ (ಬೇರೆ ಬೇರೆ), ಓರೇ ಹಾಂ (ಬೇರೆ ಮನೆ)
ಓರೆ ಒತ್ತುಂ, ಓರೊತ್ತುಂ (ಬೇರೊಬ್ಬ)
ಓವರದ್ – ಬೇಯುವುದು
ಎನ್ನಾ ಓವೀವಾಣ (ನನ್ನನ್ನು ಬೇಯಿಸಬೇಡ)
ಔಳ್ – ಬಿಚ್ಚು
ಅಂದೆ ಪುಲ್ಲತ್ತೇ ಕಂಥೆ ಔಳ್
(ಆ ಹುಲ್ಲಿನ ಕಂತೆಯನ್ನು ಬಿಚ್ಚು)

ಓಂದ್ – ಎದ್ದು
ಓಂದ್ ವಾ (ಎದ್ದು ಬಾ)
ಓಂದ್ ಉಕ್ಕಾಕಂಡಿ ರಾಣ (ಎದ್ದು ಕೂತಿದಾನೆ)
ಓಂದ್ರ್ – ಏಳು
ಫೆರೀ ಅಲಾ ಓಂದ್ರಾಡಿರಾಂದ್ (ದೊಡ್ಡ ಅಲೆ ಏಳುತ್ತಿದೆ)
ಓಂದರರದ್ – ಏಳುವುದು
ನಾನೇ ಅವನಾ ಓಂದರಿಚ್ಚೆ (ನಾನೇ ಅವರನ್ನು ಎಬ್ಬಿಸಿದೆ)
ಕಡಿಚಿಕೊ – ಕಚ್ಚಿಕೊ
ಪಳತಾ ಕಡಿಚಿಕಿಂಡಿ ಸಾಪಡವಾಣ
(ಹಣ್ಣನ್ನು ಕಚ್ಚಿಕೊಂಡು ತಿನ್ನಬೇಡ)
ಕದು – ಬಾಗಿಲು
ಕದು ಇಡ್ (ಬಾಗಿಲು ಹಾಕು)
ಕನ್ನಾಲು – ವಿವಾಹ
ಕನ್ನಾಲೂ ಆಚಿ (ಮದುವೆ ಆಯಿತು)
ಕಲವರದ್ – ಕಲಸು, ಜೊತೆಸೇರು, ಕಲಿಯುವುದು
ಎಲ್ಲಾಡೆ ಜೊತೇಲೆ ಕಲವಣು (ಎಲ್ಲರ ಜೊತೆ ಸೇರಬೇಕು)
ಸಾತಾ ಕಲವಣು (ಅನ್ನವನ್ನು ಕಲಸಬೇಕು)
ಕಲಂಜ್, ಕಲತ್ (ಸೇರಿ)
ಕಲಂದ್ (ಕಲಸಿ)
ಕಲವರದೆಲ್ಲಾ ಮುಡಿಂಜಿದ? (ಕಲಿಯುವುದೆಲ್ಲಾ ಮುಗಿಯಿತೆ?)
ಕಲಿಪಿ (ಕಲಿಸು), ಕಲಿಪಿಚ್ಚ (ಕಲಿಸಿದರು)
ಕವರರದ್ – ಕವರುವುದು
ನೆರಪ್ ಕವರಾಂಡ್ ರಾಂದ್ (ಬೆಂಕಿ ಕವರುತ್ತಿದೆ)
ಕಶಿ – ಕಸಿ
ಕಶ್ಚಕಂಡ್ (ಕಸಿದುಕೊಂಡು)
ಕಳತ್ – ಕತ್ತು
ಕಳತಕ್ಕ್ ವಂದರಾಂದ್ (ಕತ್ತಿಗೆ ಬಂದಿದೆ)
ಕಳನಿ – ಗದ್ದೆ
ಕಳನೀಕ್ ನೀರಾ ಕಟ್ಟಿ ವಂದೆ
(ಗದ್ದೆಗೆ ನೀರು ಕಟ್ಟಿ ಬಂದೆ)
ಕಳವ್ – ತೊಳೆ
ರಸ್ತಾ ಕಳವೀನಹುಡಿ ರಾಂದ್ (ರಸ್ತೆ ತೊಳೆದಹಾಗಿದೆ)
ಕಳಿಂಜಿ – ಕಳೆದು, ಹೋಗಿ
ಪೆನ್ನ್ ಕಳಿಂಜಿಪೋಚು (ಪೆನ್ನು ಕಳೆದುಹೋಯಿತು)
ಕಳಿಂಝುರದ್ (ಕಳೆದುಕೊಳ್ಳುವುದು)
ಕಳಿಂಝುಣಿ (ಕಳೆದುಕೊಳ್ಳುತ್ತೇನೆ)
ಕಾಚ್ – ಕಾಯಿಸು
ಕಾಂಜ (ಕಾದ)
ಕಾಟ್ – ತೋರಿಸು
ಪೆನ್ನ್ ಅ್ಥಂಗೆ ಕಾಟ್? (ಪೆನ್ನೆಲ್ಲಿ ತೋರಿಸು)
ಕಾಟೀಂದ (ತೋರಿಸಿದ್ದರು)

ಕಾದ್ – ಕಿವಿ
ಕಾದ್ ಕೋಕಲ್ಲಿಯ? (ಕಿವಿ ಕೇಳಲ್ಲವೆ?)
ಕಾದಕ್ಕ್ (ಕಿವಿಗೆ)
ಕಾದೋಡೆ (ಕಿವಿಯಾರೆ)
ಕಾಪಾತ್ – ಕಾಪಾಡು
ಉಢೇವರ್ ಕಾಪಾತಣು (ದೇವರು ಕಾಪಾಡಬೇಕು)
ಕಾಲಾ ವಾಂಕ್ಯೊ – ಕಾಲು ತೆಗೆದುಕೊ
ಪುಸ್ತಕತ ಮೇಲಣ್ಣು ಕಾಲಾ ವಾಂಕ್ಯೊ
(ಪುಸ್ತಕದ ಮೇಲಿಂದ ಕಾಲು ತೆಗೆದುಕೊ)
ಕಾವ್ – ಕಾಯಿ
ಕಾತು (ಕಾದೆವು)
ಆರಕ್ಕ್ ಕಾವಾಂಡಿರಾಡ ? (ಯಾರಿಗೆ ಕಾಯುತ್ತಿದ್ದೀಯ?)
ಕಾತಾಚಿ (ಕಾದಾಯಿತು), ಕಾತಕಂಡ್ (ಕಾದುಕೊಂಡು)
ಕಾವರದ್ – ಕಾಯುವುದು
ಸ್ವಲ್ಪೂ ಪೋ ಕಾವ್ (ಸ್ವಲ್ಪಹೊತ್ತು ಕಾಯಿ)
ಆರ್ ಇವನಕ್ಕ್ ಕಾತಿರಡ (ಯಾರು ಇವನಿಗೆ ಕಾದಿರುತ್ತಾರೆ?)
ಕಿನಾವ್ – ಕನಸು
ಕಿನಾವ್ ಉಳಂದ್‌ದಾ?, ಉಳ್‌ಂದಾ (ಕನಸು ಬಿತ್ತೇ)
ಕುಚ್ಚುಳ್ಳು – ಕೋಣೆ
ಅಂದೆ ಹಾತುಳೈ ಅ್ಹಟ್ಟ್ ಕುಚ್ಚುಳ್ಳಹಾ ರಾನ್ನ
(ಆ ಮನೆಯಲ್ಲಿ ಎಂಟು ಕೋಣೆಗಳಿವೆ)
ಕುಚ್ಚುಳ್ಳಕ್ಕ್ (ಕೋಣೆಗೆ)
ಕುಟ್ಟೆ – ಹತ್ತಿರ
ಎಂದೆ ಕುಟ್ಟೆ ಪುಸ್ತಕು ರಾಂದ್ (ನನ್ನ ಹತ್ತಿರ ಪುಸ್ತಕವಿದೆ)
ಕುಡಿ – ಕುಡಿ
ನೀರಾ ಕುಡಿಚಾ (ನೀರು ಕುಡಿದೆಯಾ?)
ಕುಡು – ಕೊಡು, ಕೊಡ
ಎನಕೇ ಕುಡು (ನನಗೇ ಕೊಡು)
ಕುಡಲಾಮ? (ಕೊಡಬಹುದೆ?)
ಕುಡಾದೆ (ಕೊಡದೆ), ಕುಡಣಿ (ಕೊಡುತ್ತೇನೆ)
ಕುಡತ (ಕೊಟ್ಟ), ಕುಡು ಹೆಂಬೀರಾಂದ್ (ಕೊಡ ತುಂಬಿದೆ)
ಕುಡಿವಿ, ಕುಡಿಪಿ (ಕೊಡಿಸು), ಕುಡಂಗೊ (ಕೊಡಿ)
ಕುಡನ್ನ (ಕೊಡುತ್ತಾರೆ)
ಕುಫಾಯು – ಕುಪ್ಪಸ
ಕುಫಾಯತಾ ತೆಯ್ಯಿಪಿಯಣು (ಕುಪ್ಪಸವನ್ನು ಹೊಲಿಸಬೇಕು)
ಕುರಿ – ಅವಲಂಬಿಸು, ಉದ್ದೇಶಿಸು, ಕುರಿ
ಅವನಾ ಕುರಿಚಿ ಚೊಲ್ಲೀನೆ (ಅವನನ್ನು ಉದ್ದೇಶಿಸಿ ಹೇಳಿದೆ)
ಎನ್ನಾ ಕುರಿಚಿಕೋ ವಾಣ (ನನ್ನನ್ನು ಅವಲಂಬಿಸಬೇಡ)
ಕುರುಪ್ – ಕುರುಹು, ಗುರುತು
ಕುರುಪು ಪತ್ತೀತ್ (ಗುರುತು ಸಿಕ್ಕಿತು)
ಕುರುಪಕ್ಕಾಹಾ (ಗುರುತಿಗಾಗಿ)

ಕೂಹು – ಕೂಗು, ಕರೆ
ಕೂಹೀ ವಾ (ಕೂಗಿ ಬಾ, ಕರೆದು ಬಾ)
ಕೂಳು – ಅನ್ನ
ಕೂಳಾ ಪೋಟರಾಣಿ ತಿನ್ನ್ (ಅನ್ನ ಹಾಕಿದೀನಿ ತಿನ್ನು)
ಕೇಡಹಾಲು – ಕೇಡಿನ ಕಾಲ
ಅತ್ತಕ್ಕ್ ಕೇಡಹಾಲು ವಂದರಾಂದ್
(ಅವನಿಗೆ ಕೆಟ್ಟಕಾಲ ಬಂದಿದೆ)
ಕೈ ಉಡು – ಕೈ ಬಿಡು
ಎಂದೆ ಕೈ ಉಡುವಾಣ (ನನ್ನ ಕೈ ಬಿಡಬೇಡ)
ಕೊದಿ – ಕುದಿ
ಮನಸ್ಸ್ ಕೊದಿಯಾಂಡಿರಾಂದ್ (ಮನಸ್ಸು ಕುದಿಯುತ್ತಿದೆ)
ಕೊಳಹು – ಕೊಳಗ
ಕೊಳಹತ್ತಕ್ಕ್ ನೆಲ್ಲಾ ಹೆಪ್ಪ್ (ಕೊಳಗಕ್ಕೆ ಭತ್ತ ತುಂಬು)
ಕೊಳಂನ್ನ – ತಂದ, ತಂದರು
ಅಣ್ಣಯ್ಯು ಪಳಂಗಳಾ ಕೊಳಂನ್ನ
(ಅಣ್ಣನವರು ಹಣ್ಣುಗಳನ್ನು ತಂದರು)
ಕೋಟಕೊ – ಕೇಳಿಕೊ
ಅ್ಹತ್ತಾ ಓಣಮಾನಾಕಲೂ ಕೋಟಕೊ
(ಏನುಬೇಕಾದರೂ ಕೇಳಿಕೊ)
ಕೋಟಕೋಟಕಂಡ್ – ಕೇಳಿಕೇಳಿಕೊಂಡು
ಕೋಟ್‌ಕೋಟೇ ಸಂಗೀತು ವಂದ್ ಅವನಕ್ಕ್
(ಕೇಳಿಕೇಳಿಕೊಂಡೇ ಸಂಗೀತ ಬಂತು ಆತನಿಗೆ)
ಕೋಟಿನ್ನು – ಕೇಳಿದ್ದೆವು
ಉಂಗಡೆ ಸಂಗೀತತಾ ಅಂಡೇನು ಕೋಟಿನ್ನು
(ನಿಮ್ಮ ಸಂಗೀತವನ್ನು ಆ ದಿನ ಕೇಳಿದ್ದೆವು)
ಕೋಡಹಾಲು – ಬೇಸಿಗೆ ಕಾಲ
ಕೋಡಹಾಲು ವಂದ್ (ಬೇಸಿಗೆ ಬಂತು)
ಕೋಳ್, ಕೋಳು – ಕೇಳು
ಕೋಟದ್
(ಅವಳು ಕೇಳಿದಳು, ಅವನು ಕೇಳಿದ, ಅದು ಕೇಳಿತು)
ಚೊವೀಲೆ ಕೋಳಕ್ಕಹಲ್ಲ (ಕಿವಿಯಲ್ಲಿ ಕೇಳಕ್ಕಾಗಲ್ಲ)
ಕೋಟ್ (ಕೇಳಿ), ಕೋಟ (ಕೇಳಿದರು)
ಕೋಟಹೀನ (ಕೇಳಿದರು)
ಕೋಳಾವದ್ (ಕೇಳದಿರುವುದು)
ಕೋಕಣು (ಕೋಳಣು) – ಕೇಳಬೇಕು
ಅವನಿಯೂ ಕೋಕಣು (ಆತನನ್ನೂ ಕೇಳಬೇಕು)
ಕಂಡ್ರ್ – ಭಾವಿ
ಕಂಡ್ರಣ್ಣು ನೀರಾ ಶೇದ್ (ಭಾವಿಯಿಂದ ನೀರು ಸೇದು)
ಕಂಡಹೀನ – ಕಾಣಿಸಿದುವು
ಅಂಗೆ ಅ್ಹತ್ತನಿಯೋ ಪುಲಿಹ ಕಂಡಹೀನ
(ಅಲ್ಲಿ ಎಷ್ಟೋ ಹುಲಿಗಳು ಕಂಡವು)

ಕೊಂಡ – ತಾ, ತೆಗೆದುಕೊಂಡು ಬಾ
ಕೊಂಡ್ರಣಿ (ತರುತ್ತೀನಿ)
ಅತ್ತಾ ಇಂಕಡೇಕ್ ಕೊಂಡ
(ಅದನ್ನು ಈಕಡೆಗೆ ತಗೊಂಡು ಬಾ)
ಕೊಂಡ್ರರದ್ (ತರುವುದು)
ಕೊಳಂದ್ (ತಂದು)
ಕೊಳಂದಹಂಡೆ (ತಂದುಕೊಂಡೆ)
ಕೊಂಡರಣಿ (ಕೊಂಡ್ರಣಿ) – ತರುತ್ತೇನೆ
ತಾಳಿ ಕೊಂಡರಣಿ (ದೀಪ ತರುತ್ತೇನೆ)
ಕೊಂಡ್ರರದ್, ಕೊಂಡರದ್ – ತರುವುದು
ಕೊಳಂದಾ (ತಂದರು)
ಕೊಂಡ್ರಕ್ಕಾಚಿ (ತರುವುದಕ್ಕಾಯಿತು)
ಖಾತ್ – ಗಾಳಿ
ಮಳೆ ಖಾತ್ (ಮಳೆ ಗಾಳಿ)
ಉನಕೂ ಅವಂದೆ ಖಾತ್ ವೀಸೀತೋ?
(ನಿನಗೂ ಅವನ ಗಾಳಿ ಬೀಸಿತೋ?)
ಖಾತಾಟಿ (ಬೀಸಣಿಗೆ)
ಖಂಯಿ – ಕಹಿ
ಓಪೂ ಎಲಾ ಖಂಯ್ಯಾಂ ರಾಂದ್
(ಬೇವಿನ ಎಲೆ ಕಹಿಯಾಗಿದೆ)
ಚಪ್ಪ – ಸಪ್ಪೆ
ಚಪ್ಪಚಪ್ಪೆಯಾ ರಾಂದ್ (ಸಪ್ಪೆ ಸಪ್ಪೆಯಾಗಿದೆ)
ಚಮಿ – ಬೇಯಿಸು, ಅಡುಗೆ ಮಾಡು
ಚಮೀಲ್ (ಅಡುಗೆ)
ತಾನ್ ಅಳಹಾ ಚಮಿಯಣು
(ಹೋಳು ಚೆನ್ನಾಗಿ ಬೇಯಬೇಕು)
ಚರಂಗ್ – ಸೆರಗು
ಚರಂಗಾ ಪೋತಿಕ್ಯೊ (ಸೆರಗು ಹೊದೆದುಕೊ)
ಚರಂಗಾ ಶಿಕ್ಕಿಚ್ಚಿಕೊ (ಸೆರಗು ಸಿಕ್ಕಿಸಿಕೊ)
ಚಾವ್ – ಸಾವು, ಸಾಯಿ
ಚಾವತ್ತೇ ಹಾಂ (ಸಾವಿನ ಮನೆ)
ನೀ ಚಾವಕ್ಕಹದ್ (ನೀನು ಸಾಯಬಾರದು)
ಚತ್ತಿಕ್ಕರ (ಸತ್ತಿರುವ)
ಚತ್ತ (ಸತ್ತಿರುವ, ಸತ್ತರು)
ಚಿರಿ (ಚಿರಿಪ್) – ನಗು
ಚಿರಿಪತ್ತೇ ಮೊಖ (ನಗುವಿನ ಮುಖ)
ಚಿರಿಚ (ನಕ್ಕರು)
ಚೀರ – ಸೀರೆ
ಚೀರೇ ಉಡಿತಿಕಿಂಡ್ ವರಣಿ
(ಸೀರೆ ಉಟ್ಟುಕೊಂಡು ಬರುತೀನಿ)
ಚೀರೇಣ್ಣ (ಸೀರೆಯಿಂದ)

ಚುಡು – ಸುಡು
ಕೈ ಚುಟ್ಟದ್ (ಕೈ ಸುಟ್ಟಿತು)
ಚುಡಿವಿಚ್ಚಿಕರದ್ (ಸುಡಿಸಿಕೊಳ್ಳುವುದು)
ಚುಟ್ಟ್‌ಪೋಡರದ್ (ಸುಟ್ಟು ಹಾಕುವುದು)
ನೀರ್ ಚುಡಾಂಡಿರಾಂದ್ (ನೀರು ಸುಡುತ್ತಿದೆ)
ಚುಣ್ಣಾಂಬ್ – ಸುಣ್ಣ
ಚೂರಕ್ಕ್ ಚುಣ್ಣಾಂಬಾ ಅ್ಟಣು
(ಗೋಡೆಗೆ ಸುಣ್ಣ ಬಳಿಯಬೇಕು)
ಚುತ್ತು – ಸುತ್ತು
ಚುತ್ತೀ ವೈಯಿ (ಸುತ್ತಿ ಇಡು)
ಚುತ್ತಾ (ಸುತ್ತಾ)
ಚುತ್ತಾಮುತ್ತಾ (ಸುತ್ತಾಮುತ್ತಾ)
ಚುತ್ತುಹೋಡು (ಸುತ್ತುಹಾಕು)
ಚುತ್ತಾಮುತ್ತಾ ದಾರೂ ಇಂದಿಲ್ಲ
(ಸುತ್ತಾ ಮುತ್ತಾ ಯಾರೂ ಇರಲಿಲ್ಲ)
ಚುಮು – ಹೊರೆ, ಭಾರ
ಚುಮೆ ಚುಮಣು
(ಭಾರ ಹೊರಬೇಕು, ಹೊರೆ ಹೊರಬೇಕು)
ಚುಮತ್ (ಹೊರಿಸು)
ಚುರುಳಿ – ಸುರುಳಿ
ಧ್ವನಿ ಚುರುಳಿ (ಧ್ವನಿ ಸುರುಳಿ)
ಚುಳಿ – ಸುಳಿ
ಅಂದೆ ಪುಳೇಲೆ ಚುಳಿ ಹೆಚ್ಚ್
(ಆ ನದಿಯಲ್ಲಿ ಸುಳಿ ಹೆಚ್ಚು)
ಚೂಟು – ಊಟ, ಮುಡಿಸು
ಪೂವಾ ಚೂಟಿಕ್ಯೊ (ಹೂವು ಮುಡಿದುಕೊ)
ಚೂಟು ಅಳಹಾ ಇಂದ್ (ಊಟ ಚೆನ್ನಾಗಿತ್ತು)
ಚೂಡು – ಊಟ ಮಾಡು
ಚೂಡಕ್ಕ್ ವಾ (ಊಟಕ್ಕೆ ಬಾ)
ಚೂಟಾಚಾ? (ಊಟವಾಯಿತೆ?)
ಚೂಡೀ ಆಚಾ? (ಊಟ ಮಾಡಿಯಾಯಿತೇ?)
ಚೂರ – ಸೂರೆ
ಚೂರೇ ಪಣ್ಣಾಂಡಿರಾಂದ್ (ಸೂರೆ ಮಾಡುತ್ತಿದ್ದಾನೆ)
ಚೂರು – ಗೋಡೆ
ಇನ್ನೂ ಚೂರು ಓಂದಿಕ್ಕಲ್ಲ (ಇನ್ನೂ ಗೋಡೆ ಎದ್ದಿಲ್ಲ)
ಚೊರಿ – ಸುರಿ
ನೀರಾ ಚೊರಿಯಾಂಡಿ ರಾಂದ್
(ನೀರನ್ನು ಸುರಿಯುತ್ತಿದ್ದಾನೆ)
ಮಳಾ ಚೊರಿಯಾಂಡಿ ರಾಂದ್
(ಮಳೆ ಸುರಿಯುತ್ತಿದೆ)
ಚೊರಿವಿಚ್ಚಿಕಿಂಡ್ (ಸುರಿಸಿಕೊಂಡು)

ಚೊಲ್ಲ್ (ಚೊಲ್ಲು) – ಹೇಳು
ಚೊಲ್ಲೀ ಕೋಟಿಂದಂಡ್ (ಹೇಳಿಕೇಳಿದ್ದಲ್ಲ)
ಚೊಲ್ಲೀ ಮುಡಿಯಾದ್ (ಹೇಳಿ ಮುಗಿಯಲ್ಲ)
ಚೊಲ್ಲ್ ಕೋಕರವ ಆರೂ ಇಲ್ಲಿಯಾ?
(ಹೇಳಿ ಕೇಳೋರು ಯಾರೂ ಇಲ್ಲವೆ?)
ಚೊಲ್ಲಣು (ಹೇಳಬೇಕು)
ಚೊಲ್ಲರವಾಳ್ಳಂಡ್ (ಹೇಳುವವರಲ್ಲ)
ಚೊಲ್ಲರವಾ (ಹೇಳುವವರು)
[ಚೊಲ್ಲರವಾಳ್ ಎಂಬ ರೂಪವು ರೂಢಿಯಲ್ಲಿಲ್ಲ]
ಚೊಲ್ಲೀ ಕುಡು (ಹೇಳಿಕೊಡು)
ಚೊಲ್ಲೀಂದ (ಹೇಳಿದ್ದರು), ಚೊಲ್ಲಮ್ಮೊ (ಹೇಳೋಣ)
ಚೊಲ್ಲಿಕೋಕಾದೇ (ಚೊಲ್ಲಾದೇ ಕೋಕಾದೇ) – ಹೇಳದೆಕೇಳದೆ
ಚೊಲ್ಲಿಕೋಕಾದೆ ಪೋಯಿರಾಂದ್
(ಹೇಳದೆ ಕೇಳದೆ ಹೋಗಿದಾನೆ)
ಚೊವಿ – ಕಿವಿ
ಚೊವೀತೇದಂಗೆ ? (ಕಿವಿಯದು ಎಲ್ಲಿ?)
ಚೊವೀಕ್ ಶಿಕ್ಕಿಚ್ಚಿಕೊ (ಕಿವಿಗೆ ಸಿಕ್ಕಿಸಿಕೊ)
ಚೊಳ್ಳಾ – ಸೊಳ್ಳೆ
ಚೊಳ್ಳಾ ಹೆಂಬೀರಾಂದ್ (ಸೊಳ್ಳೆ ತುಂಬಿದೆ)
ಚಂಗಲಿಗ್ಯ – ಚಿಲಕ
ಚಂಗಲಿಗ್ಯೆ ಪೋಡು (ಚಿಲಕ ಹಾಕು)
ಚೊಂಬಾ – ಸಂಪಿಗೆ
ಚೊಂಬಾ ಪೂ (ಸಂಪಿಗೆ ಹೂ)
ಛರಿ – ಸಣ್ಣ, ಕಿರಿಯ
ಅದೊರು ಛರೀ ಭರತಖಂಡು
(ಅದೊಂದು ಸಣ್ಣ ಭರತಖಂಡ)
ಛರೀ ಪೊಶು (ಸಣ್ಣ ಹಸು), ಛರೀ ಪುಳ್ಳ (ಕಿರಿಯ ಮಗ)
ಛಳವರದ್ – ಆಯಾಸವಾಗುವುದು, ರೋಸಿಹೋಗುವುದು, ಜುಗುಪ್ಸೆಯಾಗುವುದು
ಇಫಿಡೆ ಜಗಳತಾ ಉಡವಿಯರತ್ಥನೇಂದುಳ್ಳೆ ಛಳತಪೋಚು
(ಇವರ ಜಗಳವನ್ನು ಬಿಡಿಸುವಷ್ಟರಲ್ಲಿ ಸಾಕಾಗಿ ಹೋಯಿತು)
ಛೊಪ್ಪು – ಕೆಂಪು
ಅವಡೆ ಮೊಖ ಛೊಪ್ಪಾಪೋಚು
(ಆಕೆಯ ಮುಖ ಕೆಂಪಾಗಿ ಹೋಯಿತು)
ತನಕ್ – ತನಗೆ
ತನಕ್ ಇಷ್ಟಮಾನತ ಪಣ್ಣಣು
(ತನಗೆ ಇಷ್ಟವಾದುದನ್ನು ಮಾಡಬೇಕು)
ತನಕಾಯಿಟ್ (ತನಗೆ ಆಗಿ, ತನಗಾಗಿ)
ತಪ್ಪಿಚ್ಚಿಕಕ್ಕ್ – ತಪ್ಪಿಸಿಕೊಳ್ಳುವುದಕ್ಕೆ
ಏಟಾ ತಪ್ಪಿಚ್ಚಿಕೋ ಪಾರಮ್ಮೊ
(ಏಟು ತಪ್ಪಿಸಿಕೊ, ನೋಡೋಣ)

ತರವ್ – ತೆರೆ, ತೆಗೆ
ಕದೂ ತರವ್ (ಬಾಗಿಲು ತೆರೆ)
ತರಂಧರದ್ (ತೆರೆದುಕೊಳ್ಳುವುದು)
ವಾಶಿಲ್ ತರಂದರಾಂದ್ (ಬಾಗಿಲು ತೆರೆದಿದೆ)
ತರಂದ್ (ತೆರೆದು), ತರಂದೆ (ತೆರೆದೆ)
ತರವಣಿ (ತೆಗೆಯುತ್ತೇನೆ)
ತಲಮಾಡ್ – ತಲೆದಿಂಬು
ತಲಮಾಡ್ ಓಣಮಾ? (ತಲೆದಿಂಬು ಬೇಕೆ?)
ತಳಗ್ – ತಂಗು
ಒರುನಾ ಅಂದೂರುಳ್ಳೆ ತಳಗೀಂದು
(ಒಂದು ದಿನ ಆ ಊರಲ್ಲಿ ತಂಗಿದ್ದೆವು)
ತಾಪಾಳ – ಅಗಣಿ
ತಾಪಾಳೇ ಪೋಟರಾಂದೋ ಪಾರ್
(ಅಗಣಿ ಹಾಕಿದೆಯೋ ನೋಡು)
ತಾಯಾ – ತಾಯಿ
ತಾಯಾತೋಪ್ಪಾ (ತಂದೆತಾಯಿ)
ತಾಯಾಮಾ (ತಾಯಂದಿರು)
[ದೇವತೆಯನ್ನು ತಾಯಾ ಎನ್ನುವುದೇ ಹೆಚ್ಚು ರೂಢಿ. ಅಮ್ಮನವಾ ಎಂಬ ರೂಢಿಯೂ ಇದೆ.]
ತಾಳ್ – ತಾಳು
ತಳಂಜಿಲ್ಲ (ತಾಳಲಿಲ್ಲ)
ತಾಳಿ – ದೀಪ, ತಾಳಿ
ತಾಳಿ ಪತ್ತಿ (ದೀಪ ಹತ್ತಿಸು)
ತಾಳೀತೇ ಕುಡಿ (ದೀಪದ ಕುಡಿ)
ತಾಳಿ ಕಟ್ಟೀ ಆಚಿ (ತಾಳಿ ಕಟ್ಟಿ ಆಯಿತು)
ತಿನ್ನ್ – ತಿನ್ನು
ತಿಂಡ್ (ತಿಂದು)
ತಿನ್ನರಾಂ – ತಿಂದಾನು
ಅವುಂ ಎನ್ನಯೂ ತಿನ್ನರಾಂ (ಅವನು ನನ್ನನ್ನೂ ತಿಂದಾನು)
ತಿರುಡ್ – ಕದಿ
ಅದೊರು ತಿರುಡುಂ (ಅವನೊಬ್ಬ ಕಳ್ಳ)
ತಿರುಡಕ್ಕೂಡಾದ್ (ಕದಿಯಬಾರದು)
ತಿರುಡುಂ (ಕಳ್ಳ)
ತಿರುಡೀನಹುಡಿ, ಕದಿಂಜಪ್ಪಡಿ (ಕದ್ದ ಹಾಗೆ)
ತಿರುಪಂಡಿ – ರಂಗೋಲಿ
ತಿರುಪಂಡಿ ಅತ್ತಟ್ಟಣು (ರಂಗೋಲಿ ಬಿಡಬೇಕು)
ತಿರಂಬ್ – ತಿರುಗು, ಬದಲಾಗು
ಅಂದೆ ಬಟ್ಟೇತೇ ವಣ್ಣು ಛೊಪ್ಪಣ್ಣು ಛಳಪ್ಪಕ್ಕ್ ತಿರಂಬೀತ್
(ಆ ಬಟ್ಟೆಯ ಬಣ್ಣ ಕೆಂಪಿಂದ ಬಿಳಿಗೆ ತಿರುಗಿತು)
ಅತ್ತಕ್ಕ್ ಊರೂರಾ ತಿರಂಬರದೇ ಕಾರ್ಯು
(ಅವನಿಗೆ ಊರೂರು ತಿರುಗುವುದೇ ಕೆಲಸ)

ತೂಕರದ್ – ತೂಗಿಸುವುದು, ಸರಿದೂಗಿಸುವುದು
ತೂಕು (ತೂಕ)
ತೂಕಿಚ್ಚಿಕಿಂಡ್ ಪೊಹಣು (ಸರಿದೂಗಿಸಿಕೊಂಡು ಹೋಗಬೇಕು)
ತೂಣು – ಮುಟ್ಟು
ಇಂದೆ ನೀರಾ ತೂಣೀ ಪಾರ್
(ಈ ನೀರನ್ನು ಮುಟ್ಟಿ ನೋಡು)
ತೂಣೀನಾಕ ಶಾಕ್ ಹೊಡಿಯಂದ್
(ಮುಟ್ಟಿದರೆ ಶಾಕ್ ಹೊಡೆಯುತ್ತೆ)
ತೆಯ್ – ಹೊಲಿ
ತೆಪ್ಪಿ (ಹೊಲಿಸು), ತೆಪ್ಪಿಚ್ಚಿಕೊ (ಹೊಲಿಸಿಕೊ)
ತೆರಿ – ತಿಳಿ
[ಉಂಕ್ ಅದ್ ತೆರಿಂಜಿರಾಂದಾ? ಎನಕ್ ಅದ್ ತೆರಿಂಜಿ ವಂದ್‌ದ್. ತೆರಿಂಜಿ ವಾರ್ಥೊಲ್ಲು. ಅತ್ತಕ್ಕ್ ಆತ್ತಾಧೂ ತೆರಿಯಲ್ಲ – ಈ ರೂಪಗಳಲ್ಲಿ ಅದು ಈಗಲೂ ಬಳಕೆಯಾಗುತ್ತಿದೆ. ಎನಕ್ ಅದ್ ತೆರಿಯಾದ್ ಎಂಬ ರೂಪದ ಬಳಕೆಯು ನಿಂತು ಹಲವು ದಶಕಗಳಾಗಿವೆ.]
ತೆರಿಯಣಿ (ತಿಳಿಯುತ್ತೇನೆ), ತೆರಿಂಝೊ (ತಿಳಿದುಕೊ)
ತೆರಿಯಲ್ಲ (ತಿಳಿಯುವುದಿಲ್ಲ)
ತೆರಿಯರಹುಡಿ ಇಲ್ಲ (ತಿಳಿಯುವಹಾಗಿಲ್ಲ)
ತೆರೀವಾಣ (ತಿಳಿದುಕೊಳ್ಳಬೇಡ)
ತೆರಿಯಂದಾಕ, ತೆರಿಯಾದೇ ಇಂದಾಕ (ತಿಳಿಯದಿದ್ದರೆ)
ತೆರೀಪಡತ್ – ತಿಳಿಯಪಡಿಸು
ತೆರೀಪಡತಕ್ಕಾಹಾವೇ ವಂದೆ (ತಿಳಿಯಪಡಿಸಲೆಂದೇ ಬಂದೆ)
ತೇದ್ – ಅದು, ಅವನು, ಅವಳು
ಪ್ರವೃತ್ತೀತೇದ್
(ಪ್ರವೃತ್ತಿಯದು, ಪ್ರವೃತ್ತಿಯವನು, ಪ್ರವೃತ್ತಿಯವಳು)
ಹಾತೇದ್ (ಮನೆಯದು, ಮನೆಯವಳು, ಮನೆಯವನು)
ತೇನ್ – ಜೇನು
ತೇನಾ ಕುಡು (ಜೇನು ಕೊಡು)
ತೈರ್ – ಮೊಸರು
ತೈರ್ ಸಾಂ (ಮೊಸರನ್ನ)
ತೊಟ್ಟಕರದ್ – ನೆಂಚಿಕೊಳ್ಳುವುದು
ತೊಟ್ಟಕಕ್ಕ್ ಆತ್ತಾದ್? (ನೆಂಚಿಕೊಳ್ಳುವುದಕ್ಕೆ ಏನು?)
ತೊಡಪು – ಪೊರಕೆ
ತೊಡಪತಕ್ಕ್ ಕಾಲಾ ಸೋಕೀವಾಣ
(ಪೊರಕೆಗೆ ಕಾಲು ಸೋಕಿಸಬೇಡ)
ತೊರವರದ್ – ಬಿಟ್ಟು ದೂರವಾಗುವುದು
ಎಲ್ಲಾರಿಯೂ ತೊರವವಾಣ
(ಎಲ್ಲರನ್ನೂ ತೊರೆದು ದೂರವಾಗಬೇಡ)
ಎಲ್ಲಾರಿಯೂ ತೊರಂಧಂಡ್ ಉಕ್ಕಾಕಂಡರಾಂದ್
(ಎಲ್ಲರನ್ನೂ ಬಿಟ್ಟು ದೂರಮಾಡಿಕೊಂಡು ಕೂತಿದ್ದಾನೆ)

ತೋಚರದ್ – ಹೊಳಿ
ಎನಕ್ ಓದೂ ತೋಚಾಂಡಿಕ್ಕಲ್ಲ (ನನಗೆ ಏನೂ ಹೊಳೆಯುತ್ತಿಲ್ಲ)
ತೋಪನಾ(ರ್) – ತಂದೆ
ತೋಪನಾ ರಾಡ (ತಂದೆಯವರು ಇದಾರೆ)
ತೋಮು – ಒದ್ದೆ
ನೆಲು ತೋಮಮಾ ರಾಂದ್ (ನೆಲ ಒದ್ದೆಯಾಗಿದೆ)
ತೋಮಮಾಚಿ (ಒದ್ದೆಯಾಯಿತು)
ತೋಯಿ – ಒಗೆ
ಬಟ್ಟೆ ತೋಯಣು (ಬಟ್ಟೆ ಒಗೆಯಬೇಕು)
ತಂಗ – ತಾವು
ತಂಗ ದಯೂಪಣ್ಣಿಯಣು (ತಾವು ದಯಮಾಡಿಸಬೇಕು)
ತಂಗಡೆ ಹಾಂ (ತಮ್ಮ ಮನೆ)
ತಂಗ ಮಾತ್ರು ವಂದಿಲ್ಲಾ (ತಾವು ಮಾತ್ರ ಬರಲಿಲ್ಲ)
ತಂಗ ತಂಗ – ತಾವು ತಾವು
ತಂಗ ತಂಗ ವಾರ್ಥೊಲ್ಲಿಕಿಂಡ
(ತಾವು ತಾವು ಮಾತಾಡಿಕೊಂಡರು)
ತಂಗತಂಗಳುಳ್ಳೆ (ತಮ್ಮ ತಮ್ಮಲ್ಲಿ)
ತಂಗ್ಯ, ತಂಗಚ್ಚಿ – ತಂಗಿ
ಎಂದೆ ತಂಗ್ಯ ಇವೆ (ಈಕೆ ನನ್ನ ತಂಗಿ)
ತಂಗಳಕ್ಕ್ ತಂಗಳೇ – ತಮಗೆ ತಾವೇ
ತಂಗಳಕ್ಕ್ ತಂಗಳೇ ಗೋಚರಿಯನ್ನ
(ತಮಗೆ ತಾವೇ ಗೋಚರಿಸುತ್ತವೆ)
ತಂಗಳಾ ತಂಗಾ – ತಮ್ಮನ್ನು ತಾವು
ಎಲ್ಲಾರೂ ತಂಗಳಾ ತಂಗಾ ಪಾರ್ತಕಂಡಾಕ ಪೋರು
(ಎಲ್ಲರೂ ತಮ್ಮನ್ನು ತಾವು ನೋಡಿಕೊಂಡರೆ ಸಾಕು)
ತಂಬಿಯಾನು – ತಮ್ಮ
ಎಂದೆ ತಂಬಿಯಾನು ವಂದರಾಂದ್
(ನನ್ನ ತಮ್ಮ ಬಂದಿದಾನೆ)
ತುಂಕ್ಯೋ – ಮಲಗಿಕೊ
ಇಪ್ಪದೇ ತುಂಕ್ಯೋ ವಾಣ (ಈಗಲೇ ಮಲಗಬೇಡ)
ತುಂಕಿಂಡಪೊ (ಮಲಗಿದಾಗ), ತುಂಕಿಚ್ಚಿಕೊ (ಮಲಗಿಸಿಕೊ)
ದಾ – ಹೆಂಗಸರಿಗೆ ಗೌರವ ಸಂಬೋಧನೆ
ಸಮವಯಸ್ಕರಾದ ಪ್ರೌಢ ಮತ್ತು ಹಿರಿಯ ಹೆಂಗಸರು ತಮ್ಮತಮ್ಮಲ್ಲಿ ಸಂಬೋಧಿಸುವ ಬಗೆ
ದಾಡೆ – ಯಾರ
ದಾಡೆ ಪೇರೂ ತೆರಿಯಾದ್ (ಯಾರ ಹೆಸರೂ ಗೊತ್ತಿಲ್ಲ)
ದಾರ್ ? – ಯಾರು ?
ಅವಾ ದಾರ್? (ಅವರು ಯಾರು?)
ದಿಕ್ಕ್–ದೀವಳಿಗ್ಯ – ಗುರಿ
ಅತ್ತಕ್ಕ್ ಅಂದೆ ದಿಕ್ಕ್–ದೀವಳಿಗ್ಯೂ ಇಲ್ಲ
(ಅವನೊಬ್ಬ ಅನಾಥ)

ಧೂರು – ದೂರ
[ಸಂಕೇತಿ ಭಾಷೆಯಲ್ಲಿ ಮಹಾಪ್ರಾಣಗಳು ಹೆಚ್ಚು. ದೂರ–ಧೂರು, ಗಂಟೆ–ಘಂಟ, ಸದ್ಯ–ಸಧ್ಯ, ಸುದ್ದಿ–ಶುದ್ಧಿ – ಹೀಗೆ. ವಾಡೋ ಇಂಗೆ (ಬಾರೋ ಇಲ್ಲಿ) ಎಂದು ತಂದೆಯು ತನ್ನ ಪುಟ್ಟ ಮಗನಿಗೆ ಎಷ್ಟು ಕರೆದರೂ ಬಾರದಿದ್ದಾಗ ವಾಢೋ ಇಂಗೆ ಎನ್ನುವುದು ಉಂಟು.]
ಪಹಲ್ (ಹಗಲು) ಎಂಬುದನ್ನು ಫಹಲ್ ಎನ್ನುವುದೂ ಉಂಟು
ನಡವ್ – ನಡೆ
ಅಂಗೆ ಅ್ಥತ್ಥಧ್ ನಡವಾಂಡಿರಾಂದೋ ತೆರಿಯಲ್ಲ
(ಅಲ್ಲಿ ಏನು ನಡೆಯುತ್ತಿದೆಯೋ ತಿಳಿಯುವುದಿಲ್ಲ)
ನಡವಾಂಡಿರ್ ಇಪ್ಪೊ (ನಡೀತಿರು ಈಗ)
ನಡವಾಟು (ನಡೆದಾಟ)
ನಡವರದ್ (ನಡೆಯುವುದು)
ನಡವರಹುಡಿ (ನಡೆಯುವಂತೆ)
ನಡವಕ್ಕಹಾಂಡಿಕ್ಕಲ್ಲ (ನಡೆಯುವುದಕ್ಕಾಗುತ್ತಿಲ್ಲ)
ನಡಂಧಂಡ್ (ನಡೆದುಕೊಂಡು)
ಚರ್ಚಾ ನಡವಣು (ಚರ್ಚೆ ನಡೆಯಬೇಕು)
ನಡಂದಹಂಡ್ (ನಡೆದುಕೊಂಡು), ನಡತ್ (ನಡೆಸು)
ಸಮಾರಂಭಂಗ ನಡವನ್ನ (ಸಮಾರಂಭಗಳು ನಡೆಯುತ್ತವೆ)
ನಡವಣು (ನಡೆಯಬೇಕು)
ನರಳ್ – ನೆರಳು, ನರಳು
ರೋಗಿ ಹೆಂಬಾ ನರಳಾಂಡರಾಂದ್
(ರೋಗಿ ತುಂಬಾ ನರಳುತ್ತಿದ್ದಾನೆ)
ನರಳುಳ್ಳೆ ಉಕ್ಕಾಕೊ (ನೆರಳಲ್ಲಿ ಕೂತುಕೊ)
ನರಂಬ್ – ನರ
ನರಂಬ್ ಉಡಿಂಜಹಂಡರಾಂದ್ (ನರ ಊದಿಕೊಂಡಿದೆ)
ನಲ್ಲತನು – ಒಳ್ಳೆಯತನ
ಮನುಷ್ಯನಕ್ಕ್ ನಲ್ಲತನು ಇರಣು
(ಮನುಷ್ಯನಿಗೆ ಒಳ್ಳೆಯತನ ಇರಬೇಕು)
ನಲ್ಲದ್ – ಒಳ್ಳೆಯದು
ನಲ್ಲೀ ಕು(ದ)ದುರ (ಒಳ್ಳೆಯ ಕುದುರೆ)
ಅಹಡ್, ನಲ್ಲದ್ (ಆಗಲಿ, ಒಳ್ಳೆಯದು)
ನಾ – ನಾನು
ನಾ ವರಕ್ಕಹಲ್ಲ (ನಾನು ಬರಕ್ಕಾಗಲ್ಲ)
ಎಂದೆ (ನನ್ನ), ಎನ್ನಣ್ಣು (ನನ್ನಿಂದ)
ಎನ್ನಾ (ನನ್ನನ್ನು), ಎಂಗಡೆ (ನಮ್ಮ)
ಎನಕೂ (ನನಗೂ)
ನಂಗ (ನಾವು, ಎದುರಿಗಿರುವವನನ್ನು ಬಿಟ್ಟು)
ನಂಬ (ನಾವು, ಎದುರಿಗಿರುವವನನ್ನೂ ಸೇರಿಸಿ)
ನಂಬಳ (ನಮ್ಮನ್ನು), ನಂಬಡೆ (ನಮ್ಮ)
ಎನ್ನಣ್ಣಮೇ (ನನ್ನಿಂದಲೇ)
ನಾ(ಳ್) – ದಿನ
ಒರು ನಾ (ಒಂದು ದಿನ)
ಒರು ನಾಳೂ ಇರಲ್ಲೆ (ಒಂದು ದಿನವೂ ಇರುವುದಿಲ್ಲ)
ನಾಕ್ – ನಾಲಗೆ
ರಂಡ್ ನಾಕ್ ಇರಕ್ಕಹದ್ (ಎರಡು ನಾಲಿಗೆ ಇರಬಾರದು)
ನಾಕಾ ಮಡಿ (ನಾಲಿಗೆ ಮುದುರು, ಮಾತಾಡಬೇಡ)
ನಾಕೋ ಅ್ಥತ್ಥಧ್ ಅದ್? (ನಾಲಗೆಯೋ ಏನದು?)
ನಾಕತ್ತೇ (ನಾಲಗೆಯ)
ನಾತನಾ – ನಾದಿನಿ (ಗಂಡನ ಅಕ್ಕ [ಅತ್ತಿಗೆ], ತಂಗಿ)
ನಾತನಾಮಾ ಅಳಹಾ ರಾಡ (ನಾದಿನಿಯರು ಚೆನ್ನಾಗಿದ್ದಾರೆ)
ನಾನಾಪುಳ್ಳ – ಅಳಿಯ
ಇವುಂ ಮೂಡಾ ನಾನಾಪುಳ್ಳ (ಈತನು ಮೂರನೇ ಅಳಿಯ)
ನಾಳ – ನಾಳೆ
ನಾಳೇಕ್ (ನಾಳೆ)
ನಾಳನಂಡ್ – ನಾಡಿದ್ದು
ಹಬ್ಬು ನಾಳನಂಡ್ (ಹಬ್ಬ ನಾಡಿದ್ದು)
ನಾಳಾನಾತ್ – ಆಚೆ ನಾಡಿದ್ದು
ಅವುಂ ವರರದ್ ನಾಳಾನಾತ್ (ಆತ ಬರುವುದು ಆಚೆನಾಡಿದ್ದು)
ನಾಳೂ – ದಿನವೂ
ಓಳು ನಾಳೂ (ಏಳು ದಿನವೂ)
(ನಾಳ್=ದಿನ. ಆದರೆ ನಾಳ್ ಎಂಬ ರೂಪ ಬಳಕೆಯಿಂದ ಬಿಟ್ಟುಹೋಗಿದೆ)
ನಿಲ್ವ್ – ನಿಲವು, ಬಾಗಿಲಿನ ಚೌಕಟ್ಟು (ನಿಲುವು ಪಟ್ಟಿ)
ನಿಲ್ವಾ ಉಕ್ಕಾಕಿಚ್ಚಾಚಿ (ನಿಲುವು ಕೂರಿಸಿಯಾಯಿತು)
ನಿಲ್ಲ್ – ನಿಲ್ಲು
ನಿಲ್ಲಣು (ನಿಲ್ಲಬೇಕು), ನಿಂಡಫಿಯ (ಮಿಕ್ಕವರು)
ನಿಂಡಿಂದಫಿಯ (ನಿಂತುಕೊಂಡಿದ್ದವರು, ಮಿಕ್ಕಿದ್ದವರು)
ನಿಲ್ಲಿಚ್ಚುಡತ್ (ನಿಲ್ಲಿಸಿಬಿಟ್ಟಿತು, ನಿಲ್ಲಿಸಿಬಿಟ್ಟನು, ನಿಲ್ಲಿಸಿಬಿಟ್ಟಳು)
ನಿಂಥುಂಡುಟಿಂದು (ನಿಂತುಕೊಂಡು ಬಿಟ್ಟಿದ್ದೆವು)
ನಿಂಡರಾಣ (ನಿಂತಿದ್ದಾನೆ)
ನಿಲ್ಲರದ್ – ನಿಲ್ಲುವುದು
ನಿಂಡ್ (ನಿಂತು)
ನಿಲಾವ್ – ಬೆಳದಿಂಗಳು
ನಿಲಾವುಳ್ಳೆ ಉಕ್ಕಾಕಮ್ಮೊ
(ಬೆಳದಿಂಗಳಲ್ಲಿ ಕೂರೋಣ)
ನಿಲ್ಲಿತಿಕ್ಕರದ್ – ಉಳಿಸಿಕೊಳ್ಳುವುದು, ನಿಲ್ಲಿಸಿಕೊಳ್ಳುವುದು
ಹಾಂ ವಾಶ್ಲಾ ನಿಲ್ಲಿತಿಕ್ಕಣು
(ಮನೆ ಬಾಗಿಲನ್ನು ಉಳಿಸಿಕೊಳ್ಳಬೇಕು)
ಅವಾ ನೆಂಟಾಳ ಇನ್ನೂ ನಾಲ್ ನಾಳೇಮ್ಮಾ ನಿಲ್ಲಿಚ್ಚಿಕಂಡ್ ರಾಡ (ಅವರು ನೆಂಟರನ್ನು ಇನ್ನೂ ನಾಕು ದಿನದವರೆಗೆ ನಿಲ್ಲಿಸಿಕೊಂಡಿದಾರೆ)

ನೀ – ನೀನು
ಉನ್ನಾ ಓದಂಟಳೀವಾ (ನಿನ್ನನ್ನು ಏನೆಂದು ಕರೆಯಲಿ)
ಉಂದೆ (ನಿನ್ನ), ಉನ್ನ (ನಿನ್ನನ್ನು), ಉನ್ನಣ್ಣು (ನಿನ್ನಿಂದ)
ನಿಂಗಾ (ನೀವು), ಉನಕ್ (ನಿನಗೆ)
ನೀಟ್ – ನೀಡು
ಕೈಯಾ ನೀಟ್ (ಕೈ ನೀಡು)
ನೆತ್ತಿ – ಹಣೆ, ತಲೆಯ ಮೇಲ್ಭಾಗ, ತುದಿ, ತಲೆಯ ಸುಳಿ
ನೆತ್ತೀಕಿಟ್ಟಿಕೊ (ಹಣೆಗೆ ಇಟ್ಟುಕೊ)
ನೆತ್ತಿ ಚುಡಂದ್ (ತಲೆ ಸುಡುತ್ತದೆ)
ಮರತ್ತೇ ನೆತ್ತೀಕ್ ಪತ್ತೀರಾಂದ್ (ಮರದ ತುದಿಗೆ ಹತ್ತಿದಾನೆ)
ನೆನಿ – ನೆನೆಸು
ನೆಂಚಕಂಡ್ (ನೆನಸಿಕೊಂಡು)
ನೆಂಜ (ನೆನೆದ), ನೆನೆಂಜ (ನೆನೆದ)
ನೆನಿಯರದ್ – ನೆನೆಸುವುದು
ನೆಂಚಿ (ನೆನೆಸಿ)
ನೆರಪ್ – ಬೆಂಕಿ
ನೆರಪಾ ಕಾಚಾಂಡಿರಾಣ (ಬೆಂಕಿ ಕಾಯಿಸುತ್ತಿದ್ದಾರೆ)
ನೆಲೆಯಾಹ್ – ನೆಲೆಸು
ನೆಲೀಲಾಂ (ನೆಲೆಸಬಹುದು)
ನೆಲೀಲಾಮಾ ಇಂದ್ (ನೆಲೆಸಬಹುದಿತ್ತು)
ನೆಷ್ಟರಂಗ್ (ನೆಟ್ಟರಂಗ್) – ಮನೆಯ ಮುಂದಿನ ಅಂಗಳ
(ಮನೆಯನ್ನು ಪ್ರವೇಶಿಸುತ್ತಲೇ ಸಿಗುವ ಅಂಗಳ)
ನೇತ್, ನೇತೇನು, ನೇತೇದಿನು – ನಿನ್ನೆ
ನೇತ್ ಪೋಯಿಂದೆ (ನಿನ್ನೆ ಹೋಗಿದ್ದೆ)
ನೈಯಿ – ತುಪ್ಪ
ನೈಯಾ ಇಡ್ (ತುಪ್ಪವನ್ನು ಬಡಿಸು)
ನಂಬ – ನಾವು
ನಂಬಳಕ್ಕತ್ತಕ್ಕ್? (ನಮಗೇಕೆ?)
ನಂಬಡೇದ್ (ನಮ್ಮದು)
ನಂಬಡೆ (ನಮ್ಮ)
ನಂಬ್ಡೇವಾ – ನಮ್ಮವರು
ನಂಬ್ಡೇವಾ ತಂಗ್ಡೇವಾ ಅ್ಣಣರದ್ ಅ್ತತ್ಕ್?
(ನಮ್ಮವರು ತಮ್ಮವರು ಅನ್ನುವುದು ಏತಕ್ಕೆ?)
ನಿಂಗ – ನೀವು
ನಿಂಗ ವರಂಗೊ (ನೀವು ಬನ್ನಿ)
ನಿಂಗಾ ಅಂಗೇ ಇರಂಗೊ (ನೀವು ಅಲ್ಲೇ ಇರಿ)
ಪಡತ್ – ಮಾಡು, ಹಾಸಿ
ವ್ಯಕ್ತೊ ಪಡತ್ (ವ್ಯಕ್ತಮಾಡು)
ಭಯೊಪಡತ್ (ಭಯವನ್ನುಂಟುಮಾಡು)
ತೆರೀಪಡತ್ (ತಿಳಿಸು)
ಪಡಿಕೇ ಪಡತ್ ವಾ (ಹಾಸಿಗೆ ಹಾಸಿ ಬಾ)

ಪಡವ್ – ಹಾಸು
ಪಡಿಕೇ ಪಡವ್ (ಹಾಸಿಗೆ ಹಾಸು)
ಪಡಿತಿಕಿಂಡಾಚಿ (ಹಾಸಿಕೊಂಡಾಯಿತು)
ಪಡಿಕ್ಕ – ಹಾಸಿಗೆ
ಪಡಿಕೇ ಪೋಟುರಾಣ (ಹಾಸಿಗೆ ಹಾಸಿದಾನೆ)
ಪಣ್ಣ್ – ಮಾಡು
ಒರು ಕಾರ್ಯ್ರ ಪಣ್ಣ್ (ಒಂದು ಕೆಲಸ ಮಾಡು)
ಪಣ್ಣಮಾಟೆ (ಮಾಡಲಾರೆ)
ಪಣ್ಣೀ ಮುಡಿಯಂದ? (ಮಾಡಿ ಮುಗಿಯುತ್ತದೆಯೆ?)
ಪಣ್ಣಕ್ಕೂಡಾದ್ (ಮಾಡತಕ್ಕದ್ದಲ್ಲ)
ಪಣ್ಣಂದಾಕ (ಮಾಡದಿದ್ದರೆ)
ಪಣ್ಣಡ (ಮಾಡುತ್ತಾರೆ)
ಪಣ್ಣಣು (ಮಾಡಬೇಕು)
ಪಣ್ಣೀನಾಕ (ಮಾಡಿದರೆ)
ಪಣ್ಣಿಚ್ಚಿ (ಮಾಡಿಸಿ), ಪಣ್ಣಾವದ್ (ಮಾಡಬಾರದ್ದು)
ಪಣ್ಣರಾಂ (ಮಾಡಿಯಾನು), ಪಣ್ಣಿಕ್ಕಣು (ಮಾಡಿಕೊಳ್ಳಬೇಕು)
ಪಣ್ಣಿಕ್ಕರಾಂ – ಮಾಡಿಕೊಳ್ಳುವನು, ಮಾಡಿಕೊಂಡಾನು
ಅವುಂ ವಂದಾಲೂ ತಂದೆ ಆಯಾಸೂ ಪರಿಹಾರೂ ಪಣ್ಣಿಕ್ಕರಾಂ ಅತ್ಥನಿಯೆ (ಆತನು ಬಂದರೂ ತನ್ನ ಆಯಾಸ ಪರಿಹಾರ ಮಾಡಿಕೊಂಡಾನು ಅಷ್ಟೆ)
ಪಣ್ಣೀಕರವುಂ – ಮಾಡಿರುವವನು
ಆರ್ ಇತ್ತಾ ಪಣ್ಣೀಕರವುಂ?
(ಯಾರು ಇದನ್ನು ಮಾಡಿರುವವನು?)
ಪದು – ಪದ, ಹದ
ಉಪ್ಪು ಪದಮಾ ಶೇರೀರಾಂದ್ (ಉಪ್ಪು ಹದವಾಗಿ ಸೇರಿದೆ)
ಪನಿ – ಹನಿ
ಪನಿಯಾಂಡಿರಾಂದ್ (ಹನಿಯುತ್ತಿದೆ)
ಪಯರ್ – ಹೆಸರು
ಪಯರ್ ಪರಪ್ (ಹೆಸರು ಬೇಳೆ)
ಪಯರ್ ಪರಪ್ ರಾಂದ?
(ಹೆಸರು ಬೇಳೆ ಇದೆಯೆ?)
ಪರಿತು – ಹರಿತ
ಅರವಾಳ್ಳ್ ಪರಿತಮಾ ರಾಂದ್
(ಕುಡುಗೋಲು ಹರಿತವಾಗಿದೆ)
ಪರಪ್ – ಹರಡು
ನೆಲ್ಲಾ ವೇಲಕ್ಕ್ ಪರಪ್ (ಭತ್ತವನ್ನು ಬಿಸಿಲಿಗೆ ಹರಡು)
ಪರಪೀಂದ್ (ಹರಡಿತ್ತು), ಪರಪತ್ತೇ (ಹರವಿನ)
ಪರಪಡರದ್ – ಹೊರಡುವುದು
ಪರಪಟ್ಟ್ ಪೋ (ಹೊರಟು ಹೋಗು)
ಪರಪಡಕ್ಕ್ (ಹೊರಡುವುದಕ್ಕೆ)
ಪರಪಟ್ಟಾಂ (ಹೊರಟ)

ಪರವ್ – ಹುಟ್ಟು
ಪಶ್ಶಾ ಪರಂದಾಚಾ ? (ಮಗು ಹುಟ್ಟಿಯಾಯಿತೆ?)
ಪರವರದ್ ಚಾವರದ್ ರಾಂದೇ ರಾಂದ್
(ಹುಟ್ಟುವುದು ಸಾಯುವುದು ಇದ್ದೇ ಇದೆ)
ಪರಂದ (ಹುಟ್ಟಿದ)
ಪರವಿ – ಗಡಿಗೆ
ಪರವೀಲೆ ನೀರಾ ಕೊಂಡ (ಗಡಿಗೆಯಲ್ಲಿ ನೀರು ತಾ)
ಪರಳ್ – ಹರಳು
ಪರಳತ್ತೇ ಓಲ (ಹರಳಿನ ವಾಲೆ)
ಪರಳ್ ಗಿಡು (ಹರಳಿನ ಗಿಡ)
ಪರಂದ ಹಾಂ – ತವರು ಮನೆ
ಅವೆ ಪರಂದಹಾತಕ್ಕ್ ಪೋಯಿರಾಡ
(ಆಕೆ ಹುಟ್ಟಿದಮನೆಗೆ ಹೋಗಿದ್ದಾರೆ)
ಪರಂಬಣ್ಣು – ಹೊರಗಿನಿಂದ
ಪರಂಬಣ್ಣು ವಿದ್ಯಾರ್ಥಿಹಾ ವರನ್ನ
(ಹೊರಗಿನಿಂದ ವಿದ್ಯಾರ್ಥಿಗಳು ಬರುತ್ತಾರೆ)
ಪರಂಬೆ – ಹೊರಗೆ
ಪರಂಬಕ್ಕ್ ಪೋಡು (ಹೊರಕ್ಕೆ ಹಾಕು)
ಪರಂಬಹಡ (ಹೊರಗಡೆ)
ಪರಪರಂಬೆ (ಹೊರಹೊರಗೆ)
ಪರಿಂಝರದ್ – ತೊಡೆದುಕೊಳ್ಳುವುದು
ಕೋಪು ಪರಿಂಜಿದಾ? (ಕೋಪ ಹೋಯಿತೆ?)
ಖಾಯಿಲಾ ಪರಿಂಜಿದ್ (ಖಾಯಿಲೆ ಗುಣವಾಯಿತು)
ಪಲ್ಲ್ – ಹಲ್ಲು
ಪಲ್ಲ್ ಪರಂದರಾಂದ್ (ಹಲ್ಲು ಹುಟ್ಟಿದೆ)
ಫಲಹಾಯಿ (ಫಲಾಯಿ) – ಹಲಗೆ
ಇದ್ ಪಿಲ್ಲಾ ಫಲಾಯಿ (ಇದು ಹಲಸಿನ ಹಲಗೆ)
ಪಶ್ಶ, ಪಶ್ಶಾ – ಮಗು, ಮಕ್ಕಳು
ಪಶ್ಶಾ, ಪಶ್ಶಾಕ್ಕಾ (ಮಕ್ಕಳು)
ಪಶ್ಶಾ ಕುಟ್ಟಿ (ಮಕ್ಕಳು ಮರಿ)
ಪಶ್ಶಾ ಕುಟ್ಟಿ ಇಕ್ಕರ ಹಾಂ (ಮಕ್ಕಳು ಮರಿ ಇರುವ ಮನೆ)
ಪಶಿ – ಹಸಿವು
ಹೆಂಬಾ ಪಶಿ ಅ್ತಡತರಾಂದ್ (ತುಂಬಾ ಹಸಿವು ಎದ್ದಿದೆ)
ಪಶ್ಜ್ ಉಕ್ಕಾಕಂಡ್ ರಾಂದ್ (ಹಸಿದು ಕೂತಿದ್ದಾನೆ)
ಪಶಿಯಾಂಡಿಂದ್ (ಹಸಿಯುತ್ತಿತ್ತು)
ಪಹಲ್ – ಹಗಲು
ಪಹಲೆಲ್ಲಾ ಹಾತುಳ್ಳೇ ಇರಲ್ಲಾಂ
(ಹಗಲೆಲ್ಲಾ ಮನೆಯಲ್ಲೇ ಇರಲ್ಲ)
ಪಳಶ್ಶ (ಪಳೇತೇದ್) – ಹಳೆಯದು
ಪಳೇ ನಟಿ (ಹಳೆಯ ನಟಿ)
ಪಳೇತೇವಳಾನ ನಟಿ (ಹಳೆಯವಳಾದ ನಟಿ)
ಪಳಹ್ – ಪಳಗು
ಪಳಹೀಕರವುಂ (ಪಳಗಿರುವವನು)
ಪಳಿ – ಬದುಕು
ನಲ್ಲೀ ಪಳಪ್ (ಒಳ್ಳೇ ಬದುಕು)
ಪಳಿಚಿಕೊ (ಬದುಕಿಕೊ)
ಪಳಿಚಿರಾಣು (ಬದುಕಿದ್ದೇವೆ), ಪಳಪ್ (ಬಾಳು)
ಪಳ್ಳಿ – ಹಳ್ಳಿ
ಪಳ್ಳಿ ಹಾಡುಳ್ಳ್ ರಾಣು (ಹಳ್ಳಿಗಾಡಿನಲ್ಲಿದ್ದೇವೆ)
ಪಳು – ಹಣ್ಣು
ಪಳಮಾಯಿರಾಂದ್ (ಹಣ್ಣಾಗಿದೆ)
ಹೊಡಿಂಜ್ ಪಳೂಪಣ್ಣೀತಹೀನ
(ಹೊಡೆದು ಹಣ್ಣು ಮಾಡಿದರು)
ಪಳ್ಳು – ಹಳ್ಳ
ಪಳ್ಳು ಹರಿಯಾಂಡಿರಾಂದ್ (ಹಳ್ಳ ಹರಿಯುತ್ತಿದೆ)
ಪಾಟ್ – ಹಾಡು
ಪಾಟ್ ಅಳಹಾ ರಾಂದ್ (ಹಾಡು ಚೆನ್ನಾಗಿದೆ)
ನೀ ಪಾಡ್ (ನೀನು ಹಾಡು)
ಪಾಟಾ ಚೊಲ್ಲು (ಹಾಡು ಹೇಳು), ಪಾಡಿಕ್ಕೊ (ಹಾಡಿಕೊ)
ಪಾಡ್ – ಹಾಡು
ನೀ ಪಾಡ್ (ನೀನು ಹಾಡು)
ಪಾದಿ – ಅರ್ಧ
ಪಾದಿ ವಾಳಾಪ್ಪತಾ ಕುಡು (ಅರ್ಧ ಬಾಳೇಹಣ್ಣು ಕೊಡು)
ಪಾದಿ ಚೂಟಕ್ಕೇ ಓಂದುಡತ್ (ಅರ್ಧ ಊಟಕ್ಕೇ ಎದ್ದುಬಿಟ್ಟ)
ಪಾಯರದ್ – ಹಾಯುವುದು
ಪಾಂಜಿ (ಹಾದು), ಪಾಂಝಿಂಡ್ (ಹಾಯ್ದುಕೊಂಡು)
ಪಾಯಿ – ಚಾಪೆ, ಹಾಯಿ, ಹಾಯಿಸು
ಪಾಯಾ ಪಡವ್ (ಚಾಪೆಯನ್ನು ಹಾಸು)
ನದೀಯಾ ಪಾಯಣು (ನದಿಯನ್ನು ಹಾಯಬೇಕು)
ದೃಷ್ಟೀ ಪಾಯಿಚ್ಚಿದ್ (ದೃಷ್ಟಿ ಹಾಯಿಸಿದ)
ಪಾರ್ – ನೋಡು
ಪಾರಾಂಡೇ ಇರ್ (ನೋಡುತ್ತಲೇ ಇರು)
ಪಾರಂಗೊ (ನೋಡಿ)
ಪಾತಕಂಡ್ (ನೋಡಿಕೊಂಡು)
ಪಾರರ (ನೋಡುವ)
ಪಾತಾ? ಪಾರ್ತಾ? (ನೋಡಿದೆಯಾ?)
ಪಾಕಮಾಟೆ (ನೋಡಲಾರೆ)
ಪಾರಮ್ಮೊ (ನೋಡೋಣ), ಪಾತ್ (ನೋಡಿ)
ಪ್ಯಾರು – ಮೊಮ್ಮಗ
ಪ್ಯಾರು ವಂದರಾಣ (ಮೊಮ್ಮಗ ಬಂದಿದ್ದಾನೆ)
ಪಾಲ್ – ಹಾಲು
ಪಾಲಾ ಕಾಚಾಂಡಿರಾಣಿ (ಹಾಲು ಕಾಯಿಸುತ್ತಿದ್ದೇನೆ)

ಪಿತ್ತಾನಾ(ಳ್) – ಮರುದಿನ
ಪಿತ್ತಾ ನಾ(ಳ್) ಪೋನೆ (ಮರುದಿನ ಹೋದೆ)
ಪಿತ್ತಾನಾಳೂ ಪೋನೆ (ಮರುದಿನವೂ ಹೋದೆ)
ಪಿನ್ನ್ – ಹೆಣೆ
ಪಿನ್ನಲ್ (ಜಡೆ)
ಪಿನ್ನ, ಪಿನ್ನಾ – ಮತ್ತು, ಅಲ್ಲದೆ, ಜೊತೆಗೆ, ಹಾಗಾದರೆ, ಮತ್ತೆ
ಕದಲಿ, ತೋಂಗಾಯಿ, ಕಡಹ್ ಪಿನ್ನ ವೆಲ್ಲು ಇತ್ಥನ ಪೋರು (ಬಾಳೆಹಣ್ಣು, ತೆಂಗಿನಕಾಯಿ, ಸಾಸುವೆ ಮತ್ತು ಬೆಲ್ಲ ಇಷ್ಟು ಸಾಕು)
ಪಿನ್ನಾ ಅತ್ತಾಥತಕ್ಕ್ ಅಂಡ್ ವಂದಿಲ್ಲ ನೀ?
(ಹಾಗಾದರೆ ಏಕೆ ಅವತ್ತು ಬರಲಿಲ್ಲ ನೀನು?)
ಎನಕ್ ಚೊಲ್ಲಡಾ ಪಿನ್ನಾ? (ನನಗೆ ಹೇಳುತ್ತೀ ಮತ್ತೆ?)
ಪಿರಿ – ಹಿರಿ
ಪಿರಿಚಾಂ (ಹಿರಿದ)
ಪಿರಿಂಜಿ (ಹಿರಿದು), ಕತ್ತೀಯ ಪಿರಿ (ಕತ್ತಿಯನ್ನು ಹಿರಿ)
ಪಿಳ್ಳ – ಪಿಳ್ಳೆ, ಕಿರುಕಾಲುವೆ, ನೀರು ಕಿರಿದಾಗಿ ಹರಿವ ಹಳ್ಳ
ಇಂದೆ ತೋಟತುಳ್ಳೆ ಆರ್ ಪಿಳ್ಳ ರಾಂದ್
(ಈ ತೋಟದಲ್ಲಿ ಆರು ಪಿಳ್ಳೆ ಇದೆ)
ಪೀಖಡ – ಹಿಂದೆ
ಪೀಖಡೇಲೇ ರಾಣಾನೇ ಪಾರ್ತಿಲ್ಲ?
(ಹಿಂದೆಯೇ ಇದ್ದಾನಲ್ಲ ನೋಡಲಿಲ್ಲವೆ?)
ಪುಡಿ – ಹಿಡಿ
ಕಳ್ಳನಾ ಪುಡಿ (ಕಳ್ಳನನ್ನು ಹಿಡಿ)
ಪುಡಿಚಿಕಿಂಡ್ (ಹಿಡಿದುಕೊಂಡು)
ಪುಡಿಚಿ ವ್ಯೆಯಿ (ಹಿಡಿದಿಡು), ಪುಡಿಚಿ (ಹಿಡಿದು)
ಪುಣು – ಹೆಣ
ಚೆತ್ತ ಪುಣಮಾ ರಾಂದ್ (ಸತ್ತ ಹೆಣವಾಗಿದಾನೆ)
ಪುದಿಶ್ಮಿ – ಹೊಸದು
ಪುದಿಶ್ಮಾನ ಕುಡು (ಹೊಸದಾದ ಕೊಡ)
ಪುದಿ – ಹೂಳು
ಪುದಿಂರ್ಯಿಂಡ್ (ಹೂಳಿಕೊಂಡು)
ಪಣತ ಪುದಿಚಿ ವಯ್ಯಾಂಡಿಂದ
(ಹಣವನ್ನು ಹೂತಿಡುತ್ತಿದ್ದರು)
ಪುಬ್ಬು – ಹುಬ್ಬು
ಪುಬ್ಬಾ ತಿದ್ದಣು (ಹುಬ್ಬನ್ನು ತಿದ್ದಬೇಕು)
ಪುಲಿ – ಹುಲಿ
ಅಂಗೆ ಪುಲಿಯೂ ರಾಂದ್ (ಅಲ್ಲಿ ಹುಲಿಯೂ ಇದೆ)
ಪುಹ್ಯ – ಹೊಗೆ
ಪುಹ್ಯ ಹೆಂಬಿಕಿಂಡಿದ್ (ಹೊಗೆ ತುಂಬಿಕೊಂಡಿತು)
ಪುಳ – ನದಿ
ಪುಳೇಕ್ ಪೊಹಣು (ನದಿಗೆ ಹೋಗಬೇಕು)
ಪುಳ್ಳ – ಮಗ, ಗಂಡು
ಪುಳ್ಳ ಪಶ್ಮ (ಗಂಡು ಮಗು)
ಆಡೆ ಪುಳ್ಳ? (ಯಾರ ಮಗ?)
ಒರು ಪುಳ್ಳ ಒರು ಪೊಣ್ಣು (ಒಂದು ಗಂಡು [ಮಗ], ಒಂದು ಹೆಣ್ಣು [ಮಗಳು])
ಪುಳಿ – ಹುಳಿ, ಹಿಂಡು
ಇಂದೆ ಮಾಂಗಾ ಪುಳಿಯಾ ರಾಂದ್
(ಈ ಮಾವಿನಕಾಯಿ ಹುಳಿಯಾಗಿದೆ)
ಪೂ – ಹೂ
ಪೂವತ್ತೇ (ಹೂವಿನ)
ಪೂರ – ಬಟ್ಟೆಯ ತುಂಡು
ಪೂರೇಣ್ಣು (ಬಟ್ಟೆಯ ತುಂಡಿನಿಂದ)
ಪೆತ್ತ ಹಾಂ – ತಾಯಿಯ ಮನೆ
ಪೆತ್ತ ಹಾತಕ್ಕ್ ಪೋಯಿರಾಡಾ (ಹೆತ್ತಮನೆಗೆ ಹೋಗಿದಾರೆ)
ಪೆರ್ – ಹೆರು
ಪೆರಣು (ಹೆರಬೇಕು)
ಪೆರರದ್ (ಹೆರುವುದು), ಪೆರಮಾಟೆ (ಹೆರಲಾರೆ)
ಪೆತ್ತಾಚಾ? (ಹೆತ್ತಾಯಿತೆ?)
ಪೆರಕ್ – ಗುಡಿಸು
ಕಸೂ ಪೆರಕ್ (ಕಸ ಗುಡಿಸು)
ಪೇರ್ – ಹೆಸರು, ಕೀರ್ತಿ, ಅಪಕೀರ್ತಿ, ಜನ
ಪೇರ್ ವರಂದ್ ಜೋಪಾನು
(ಕೆಟ್ಟ ಹೆಸರು ಬರುತ್ತೆ, ಜೋಪಾನ)
ಅವುಂ ಹೆಂಬಾ ಪೇರತ್ತೇವುಂ, ಪೇರಾನವುಂ
(ಆತ ತುಂಬಾ ಖ್ಯಾತನಾದವನು)
ಉಂದೆ ಪೇರೋದ್ ? (ನಿನ್ನ ಹೆಸರೇನು?)
ರಂಡೇ ಪೇರ್ (ಇಬ್ಬರೇ)
ರಂಡ್ ಪೇರ್ (ಎರಡು ಜನ, ಇಬ್ಬರು)
ಪೊಟ್ಟು – ಹೊಟ್ಟು, ತೌಡು
ಮರತ್ತೇ ಪೊಟ್ಟು (ಮರದ ಹೊಟ್ಟು)
ಪೊಶಕಳಕ್ಕ್ ತೌಡಾ ಪೋಟಾಚಿ
(ಹಸುಗಳಿಗೆ ಹೊಟ್ಟು ಹಾಕಿಯಾಯಿತು)
ಪೊಣ್ಣು – ಮಗಳು, ಹೆಣ್ಣು
ಪೊಣ್ಣುಪಶ್ಮಾ ಪರಂದದ್ (ಹೆಣ್ಣು ಮಗು ಹುಟ್ಟಿತು)
ಎಂದೆ ಪೊಣ್ಣು ಓದಾಂಡಿರಾಂದ್ (ನನ್ನ ಮಗಳು ಓದುತ್ತಿದ್ದಾಳೆ)
ಪೊಯ್ – ಸುಳ್ಳು
ಪೊಯ್‌ಪಟ್ಕೆ (ಸುಳ್ಳುಸುಳ್ಳೆ)
ಪೊಯ್ ಪರಂದ್ ಪರಂದರಾಂದ್
(ಸುಳ್ಳಿನ ಜತೆ ಹುಟ್ಟಿದಾನೆ)
ಪೊಶು – ಹಸು
ಪೊಶುಕ ವರಾಂಡಿರಾನ್ನ (ಹಸುಗಳು ಬರುತ್ತಿವೆ)

ಪೊಹರತಕ್ಕ್ – ಹೋಗುವುದಕ್ಕೆ
ಅಂತೀಕ್ ಪೊಹರತಕ್ಕ್ ಇಷ್ಟಮಿಲ್ಲ
(ಅಲ್ಲಿಗೆ ಹೋಗುವುದಕ್ಕೆ ಇಷ್ಟವಿಲ್ಲ)
ಪೋ – ಹೋಗು
ಪೊಹವಾಣ (ಹೋಗಬೇಡ), ಪೋನೆ (ಹೋದೆ)
ಪೊಹಣು (ಹೋಗಬೇಕು), ಪೊಹನ್ನ (ಹೋಗುತ್ತವೆ)
ಪೋಯಿಟ್ ವಾ (ಹೋಗಿ ಬಾ)
ಪೋಯಿಣು (ಹೋಗಿಬಿಡಬೇಕು)
ಪೊಹಕ್ಕೂಡಾದ್ (ಹೋಗತಕ್ಕದ್ದಲ್ಲ)
ಪೋನಹುಡಿ (ಹೋದಹಾಗೆ)
ಪೋಕ್ಪಿಂಡೇ ರಾಂದ್ (ಹೋಗುತಾನೇ ಇದಾನೆ)
ಪೋಕಾತಕೊ (ತೊಲಗು), ಪೋನ ಕಡ (ಹೋದಕಡೆ)
ಪೋಹಣಿ (ಹೋಗುತ್ತೇನೆ), ಫೋಡ (ಹೋಗುತ್ತಾರೆ)
ಪೊಹಾಂಡರಾಣಿ (ಹೋಗುತ್ತಿದ್ದೇನೆ), ಪೊಹರ (ಹೋಗುವ)
ಪೋನವಾ (ಹೋದವರು)
ಪೋಚು (ಹೋದನು, ಹೋದಳು, ಹೋಯಿತು)
ಪೋಹುಂ (ಹೋಗುತ್ತಿತ್ತು) ಪೋಯಿಕ್ಕುಂ (ಹೋಗಿರುತ್ತಿದ್ದರು)
ಪೋಹವೋ, ಪೊಹವೊ (ಹೋಗಲೋ)
ಪೋಹಿ (ಹೋಗಿಸು), ಪೊಹಮ್ಮೊ (ಹೋಗೋಣ)
ಪೋನಹುಡಿ (ಹೋದಹಾಗೆ)
ಪೋಟಕೋ – ಹಾಕಿಕೊ
ಬಟ್ಟೆ ಪೋಟಕೋ (ಬಟ್ಟೆ ಹಾಕಿಕೊ)
ಪೋಡು – ಹಾಕು
ಪೋಟಾ (ಹಾಕಿದರು), ಲೆಕ್ಕೂ ಪೋಡು (ಲೆಕ್ಕ ಹಾಕು)
ಪೋಟಿಂದೆ (ಹಾಕಿದ್ದೆ), ಪೋಟಹೀನ (ಹಾಕಿದರು)
ಪೋತಿ – ಮೊಮ್ಮಗಳು
ಇದ್ ಎಂದೆ ಪೋತಿ (ಇವಳು ನನ್ನ ಮೊಮ್ಮಗಳು)
ಪೋತು – ಹೊದಿಸು
ಪೋಕ್ಯ (ಹೊದಿಕೆ), ಪೋತಿಕಿಂಡ್ (ಹೊದೆದುಕೊಂಡು)
ಪೋದು – ಹೊತ್ತು
ಬಹುಪೋದಾಪೋಚು (ಬಹಳ ಹೊತ್ತಾಗಿಬಿಟ್ಟಿತು)
ಪೋಡುಪೋದೇಕ್ ಚೂಡು (ಹೊತ್ತುಹೊತ್ತಿಗೆ ಊಟಮಾಡು)
ಪೋರು – ಸಾಕು
ಪೋರಮಾಪೋಚು (ಸಾಕಾಗಿ ಹೋಯಿತು)
ಪೋರಾದ್ (ಸಾಕಾಗುವುದಿಲ್ಲ)
ಪೋರಮಾಯಿಂದ್ (ಸಾಕಾಗಿತ್ತು)
ಪೋರಮಾನತ್ಥನ (ಸಾಕಷ್ಟು)
ಪೋಲೆ – ಹಾಗೆ
ಪಾಲಾಪೋಲೆ (ಹಾಲಿನ ಹಾಗೆ)
ಅತ್ತಾ ಪೋಲೆ ಆರೂ ಇಲ್ಲ ಉಡು
(ಅವನ ಹಾಗೆ ಯಾರೂ ಇಲ್ಲ ಬಿಡು)
ಪೌಳೀ – ದೇವಸ್ಥಾನದ ಮುಂದಿನ ಹಜಾರ
ಎಲ್ಲಾರೂ ಪೌಳೀಲೆ ಉಕ್ಕಾಕಿಂಡಿರಾಡ
(ಎಲ್ಲರೂ ದೇವಸ್ಥಾನದ ಮುಂದಿನ ಹಜಾರದಲ್ಲಿ ಕೂತಿದಾರೆ)
ಪಂಚ್ – ಹಂಚು
ಎಲ್ಲಾತಿಯೂ ಪಂಚಂಗೊ (ಎಲ್ಲವನ್ನೂ ಹಂಚಿ)
ಪಾಂಬ್ – ಹಾವು
ಪಾಂಬಾ ಪಾರ್ (ಹಾವನ್ನು ನೋಡು)
ಪಿಂಚಿಗಿಯರದ್ – ಹಿಂತೆಗೆಯುವುದು
ಪಿಂಚಿಗೀವಾಣ (ಹಿಂಜರಿಯಬೇಡ)
ಪಿಂತಿ – ಹಿಂದೆ
ಪಿಂತೀಹಡೆ ಪಾರ್ತಕೊ (ಹಿಂದುಗಡೆ ನೋಡಿಕೊ)
ಪಿಂತೀಕ್ (ಹಿಂದಕ್ಕೆ)
ಪಿಂತೀಲೆ (ಹಿಂದೆ, ಹಿಂದಿನ ಕಾಲದಲ್ಲಿ)
ಹೆಂಬೇ ಪಿಂತೀಕ್ ನಿಂಡದ್ (ತುಂಬಾ ಹಿಂದಕ್ಕೆ ಉಳಿದ)
ಪಿಂತಿ ಮುಂತಿ ಪಾತಕಂಡ್ ಪೋ
(ಹಿಂದೆ ಮುಂದೆ ನೋಡಿಕೊಂಡು ಹೋಗು)
ಪಿಂಬೆ (ಹಿಂದೆ, ಹಿಂದಿನ ಕಾಲದಲ್ಲಿ)
ಪಿಂತಿರಂಬರದ್ – ಹಿಂತಿರುಗುವುದು
ಪಿಂತಿರಂಬೀ ಪೋಚು (ಹಿಂತಿರುಗಿ ಹೋದ)
ಪಿಂತೀಕ್ ಪೋಚು
(ಹಿಂದಕ್ಕೆ ಹೋದ, ಹಿಂತಿರುಗಿ ಹೋದ)
ಪೀಂಜಿ – ಹೊಕ್ಕು
ಹೊಟ್ಟೆಪೀಂಜಿ ಪಾರಕ್ಕಹಂದ?
(ಹೊಟ್ಟೆಯನ್ನು ಹೊಕ್ಕು ನೋಡಲಾಗುತ್ತದೆಯೆ?)
ಪೊಂಢಾಟಿ – ಹೆಂಗಸು
ಪೊಂಢಾಟಿಹ (ಹೆಂಗಸರು, ನಿಮ್ನ ಬ.ವ.)
ಪೊಂಢಾಟಿಮ (ಹೆಂಗಸರು, ಗೌರವ ಬ.ವ.)
ಫಾರಾ – ಹಾರೆ
ಫಾರೇಲೆ ಮೀಟಣು (ಹಾರೆಯಲ್ಲಿ ಮೀಟಬೇಕು)
ಫೆರಿಶ್ಶಿ (ಫೆರೀ) – ದೊಡ್ಡ
ಫೆರೀ ಹಾಂ (ದೊಡ್ಡ ಮನೆ)
ಅಂದೆ ಮರು ಇತ್ತಕ್ಕಣ್ಣಮೂ ಫೆರಿಶ್ಶಿ
(ಆ ಮರ ಇದಕ್ಕಿಂತಲೂ ದೊಡ್ಡದು)
ಫೆರಿಫೆರೀ (ದೊಡ್ಡದೊಡ್ಡ)
ಬಡೆ – ಹತ್ತಿರ
ಉಂದೆ ಬಡೆ ರಾಂದ್ (ನಿನ್ನ ಹತ್ತಿರ ಇದೆ)
ಭಳಪ್ಪ್ – ಬಿಳಿ
ಭಳತ್ತ ಬಟ್ಟೆ ಇಟ್ಟಿಕೊ (ಬಿಳೀ ಬಟ್ಟೆ ಇಟ್ಟುಕೊ)
ಮದಡ್ – ಮಂಪರು
ಒರುಕತ್ತೆ ಮದಡ್ ಪೋಯಿಕ್ಕಲ್ಲ
(ನಿದ್ದೆಯ ಮಂಪರು ಹೋಗಿಲ್ಲ)

ಮಮಟಿ – ಗುದ್ದಲಿ
ಮಮಟೀ ವಂಕಿಂಡ್ ಮಣ್ಣಾ ವಟ್ಟ್
(ಗುದ್ದಲಿ ತೊಗೊಂಡು ಮಣ್ಣನ್ನು ಅಗಿ)
ಮರಚರದ್ – ಮರೆಮಾಡುವುದು
ಕೋಡವಳೇಯಾ ಮರಚೀವಚ್ಚಿರಾಣಿ
(ಕೋಡುಬಳೆಯನ್ನು ಮರೆಮಾಡಿ ಇಟ್ಟಿದೀನಿ)
ಮರತಾ – ಮರಗೆಲಸದವರು
ಹಾತಾಕಟ್ಟಕ್ಕ್ ಮರತಾ ವಂದಿರಾನ್ನ
(ಮನೆಕಟ್ಟಲು ಮರಗೆಲಸದವರು ಬಂದಿದ್ದಾರೆ)
ಮರತಿಕ್ಕರದ್ – ಮರೆಸುವುದು
ವೇಷೂ ಮರತಿಕಿಂಡರಾನ್ನ (ವೇಷ ಮರೆಸಿಕೊಂಡಿದ್ದಾರೆ)
ಮರಮಾಪುಳ್ಳ – ಸೋದರಿಯ ಮಗ (ಸೋದರಳಿಯ)
ಇದ್ ಎಂದೆ ಮರಮಾಪುಳ್ಳ
(ಇವನು ನನ್ನ ಸೋದರಳಿಯ)
ಮರವ್ – ಮರೆ
ಮರತೆ (ಮರೆತೆ)
ಮರತುಟಾ (ಮರೆತುಬಿಟ್ಟೆಯಾ?)
ಮರವರದ್ (ಮರೆಯುವುದು)
ಮರವವಾಣ (ಮರೆಯಬೇಡ)
ಮಳಹ್ – ಮೆಣಸು
ಮಳಹತ್ತೇ ಡಬ್ಬಾ (ಮೆಣಸಿನ ಡಬ್ಬ)
ಮಳ್ಳಾ – ಮೆಲ್ಲಗೆ, ತಗ್ಗಿದ ದನಿಯಲ್ಲಿ
ಮಳ್ಳಾ ವಾರ್ಥೊಲ್ಲು (ಮೆತ್ತಗೆ ಮಾತಾಡು)
ಮಳ್ಳಾ ಪೋ (ಮೆಲ್ಲಗೆ ಹೋಗು)
ಮಳೆಹಾಲು – ಮಳೆಗಾಲ
ಮಳೆಹಾಲು ಕಳಿಂಜಿದ್ (ಮಳೆಗಾಲ ಕಳೆಯಿತು)
ಮಾ – ಗಳು, ಅಂದಿರು (ಬಹುವಚನ ಪ್ರತ್ಯಯ)
ತಾಯಾಮಾ (ತಾಯಂದಿರು)
ತೋಪನಾಮಾ (ತಂದೆಯರು)
ಮಾಗೀಕಾಲು – ಚಳಿಗಾಲ
ಮಾಗೀವೇಲಾ ಕಾಚಿವಾಣ
(ಚಳಿಗಾಲದ ಬಿಸಿಲು ಕಾಯಿಸಬೇಡ)
ಮಾಟ್ – ಆಗು
ಮಾಟೀಉಡಲ್ಲ (ಆಗಿಬಿಡಲ್ಲ)
ಮಾಟಾದ ಮೇಲೆ ಅತ್ತಕ್ಕ ಪೊಹಣು?
(ಕೈಲಾಗದಮೇಲೆ ಏಕೆ ಹೋಗಬೇಕು)
ಮಾಟಾದವೆ – ಬಸುರಿ, ಕೈಲಾಗದವರು
ಹಾತುಳ್ಳೆ ಮಾಟಾದವೆ ರಾಡಾ (ಮನೆಯಲ್ಲಿ ಬಸುರಿ ಇದ್ದಾರೆ)
ನಾ ಮಾಟಾದವೆ ಆಯಿಪೋನೆ (ನಾನು ಕೈಲಾಗದವಳಾದೆ)
ಮಾಟೆ – ಆರೆ
ನಿಲ್ಲಮಾಟೆ (ನಿಲ್ಲಲಾರೆ), ವಳೀಮಾಟೆ (ಬಳಿಯಲಾರೆ)

ಮಾಮಿಯಾ, ಮಾಮ್ಯಾ – ಅತ್ತೆ
[ಗಂಡನ ತಾಯಿ, ಹೆಂಡತಿಯ ತಾಯಿ]
ಮಾಮ್ಯಾ ವಂದರಾಡ (ಅತ್ತೆ ಬಂದಿದಾರೆ)
ಮಾಸು – ತಿಂಗಳು
ಒರು ಮಾಸಮಾಚಿ (ಒಂದು ತಿಂಗಳಾಯಿತು)
ಮಾಳು, ವಯಿಲ್ – ಬಯಲು
ಅದ್ ಫೆರೀ ಮಾಳು (ಅದು ದೊಡ್ಡ ಬಯಲು)
ಮೀಂಹ್ಯಾ – ಬೀಗ
ಹಾತಕ್ಕ್ ಮೀಂಹ್ಯಾ ಪೋಟರಾಂದ್
(ಮನೆಗೆ ಬೀಗ ಹಾಕಿದೆ)
ಮೀಹ್ಯಾಂ ಕೋಲು (ಬೀಗದ ಕೈ)
ಮುಡಿ – ಮುಗಿಸು
ಬೇಗು ಮುಡಿ (ಬೇಗ ಮುಗಿಸು)
ಮುಡಿಚಿ ವಾ (ಮುಗಿಸಿ ಬಾ), ಮುಡಿಂಜಿ (ಮುಗಿದು)
ಮುದಲಿಡ್ – ಪ್ರಾರಂಭಿಸು
ಅವುಂ ಪಾಡಕ್ಕ್ ಮುದಲಿಟ್ಟಾಚಿ
(ಆತ ಹಾಡಲು ಪ್ರಾರಂಭಿಸಿಯಾಯಿತು)
ಮುದಲು – ಮೊದಲು
ಮುದಲಿಟ್ಟದ್ (ಮೊದಲಿಟ್ಟಿತು, ಮೊದಲಿಟ್ಟನು, ಮೊದಲಿಟ್ಟಳು)
ಮುನ್ – ಮೊದಲು, ಹಿಂದಿನ, ಕಕ್ಕಸು ಮೈಲಿಗೆ
ಅತ್ತಕ್ಕೂ ಮುನ್ನಾ ಪಾರ್ತಿಂದಿಲ್ಲೆ
(ಅದಕ್ಕೂ ಮೊದಲು ನೋಡಿರಲಿಲ್ಲ)
ಮುನ್ನಂನಾಳೇ ವಂದುಡು (ಹಿಂದಿನ ದಿನವೇ ಬಂದುಬಿಡು)
ಮುನ್ಸೊಂಬು (ಕಕ್ಕಸು ಮೈಲಿಗೆಯ ಚೊಂಬು)
ಮುನ್ನೇತ್ – ಮೊನ್ನೆಯ ದಿನ
ಮುನ್ನೇತ್ ಆನ ಘಟನಾ ಅದ್
(ಮೊನ್ನೆ ಆದ ಘಟನೆ ಅದು)
ಮುಳಂಗು – ನುಂಗು
ಅಧಿಕಾರಿಹ ಅಳಹಾ ಮುಳುಂಗನ್ನ
(ಅಧಿಕಾರಿಗಳು ಚೆನ್ನಾಗಿ ನುಂಗುತ್ತಾರೆ)
ಮುಳುಕು – ಮುಳುಗು
ಮುಳುಕಾಪೋಡು (ಮುಳುಗುಹಾಕು), ಮುಳಕಿಚ್ಚಿ (ಮುಳುಗಿಸಿ)
ಮೂಕು – ಮೂಗು
ಮೂಕಾ ಚುಚ್ಚಿಯಣು (ಮೂಗು ಚುಚ್ಚಿಸಬೇಕು)
ಮೂಕಾ (ಮೂಗನ್ನು)
ಮೂಖಡ – ಮುಂದೆ
ಅಫಾಡೆ ಹಾತೆ ಮೂಖಢೇಲೇ ರಾಂದ್
(ಅವರ ಮನೆಯ ಮುಂದುಗಡೆಯೇ ಇದೆ)
ಅತ್ತಕ್ಕ್ ಮೂಖಡ ಪೀಖಡ ಒಂಡೂ ಇಲ್ಲ
(ಅವನಿಗೆ ಹಿಂದೆ ಮುಂದೆ ಒಂದೂ ಇಲ್ಲ)
ಮೂಖಡೇಣ್ಣು (ಮುಂದಿಂದ)

ಮೆರಿ – ತುಳಿ
ಮೆರಿಚಿ ವಚ್ಚಿರಾನ್ನ (ತುಳಿದು ಇಟ್ಟಿದ್ದಾರೆ)
ಮೆರಿ (ತುಳಿ, ನಿಯಂತ್ರಿಸು)
ಪುಲ್ಲಾ ಮೆರಿಪಿಯಣು (ಹುಲ್ಲನ್ನು ತುಳಿಸಬೇಕು)
ಮೈರ್ – ಕೂದಲು
ತಲೇ ಮೈರ್ ಅಳಹಾ ವಳಂಜರಾಂದ್
(ತಲೆಗೂದಲು ಚೆನ್ನಾಗಿ ಬೆಳೆದಿದೆ)
ಮೊತ್ತು – ಮೆತ್ತು, ತಟ್ಟು, ಮೊತ್ತ
ಮುಟ್ಟೆ ಮೊತ್ತೀ ಆಚಿ (ಬೆರಣಿ ತಟ್ಟಿ ಆಯಿತು)
ಮೊರಿ – ಮುರಿ
ಅಂದೆ ಕೊನೇಯ ಮೊರಿ (ಆ ಟಿಸಿಲನ್ನು ಮುರಿ)
ಮೊರಿಚಿ (ಮುರಿದು)
ಮೊಳಹ್ – ಮೊಳಗು
ಅ್ಯಂಗಂಗೂ ಜಯಕಾರತ ಮೊಳಹಿಚ್ಚಿಹೀನ
(ಎಲ್ಲೆಲ್ಲೂ ಜಯಕಾರವನ್ನು ಮೊಳಗಿಸಿದರು)
ಮೋರು – ಮಜ್ಜಿಗೆ
ಮೋರಾ ಅ್ಯಟ್ಟ್ (ಮಜ್ಜಿಗೆ ಹಾಕು)
ಮೋವರದ್ – ಮೊಗೆಯುವುದು
ನೀರಾ ಮೋಂದಿ ವೈಯ್ಯಿ
(ನೀರನ್ನು ಮೊಗೆದು ಇಡು)
ಮಂಜನಕ್ – ಹಳದಿ
ಉಂದೆ ಕಣ್ಣ್ ಮಂಜನಕಾ ರಾಂದ್
(ನಿನ್ನ ಕಣ್ಣು ಹಳದಿಯಾಗಿದೆ)
ಮಂಡ್ಲಂಗ್ಯ, ಮಂದಲಿಗ್ಯ – ಮಂದಲಿಗೆ
ಮಂಡ್ಲಂಗ್ಯೆ ಪೋಟುರಾಣಿ (ಮಂದಲಿಗೆ ಹಾಕಿದೀನಿ)
ಮಾಂಗಾ – ಮಾವು
ಮಾಂಗಾಮರು (ಮಾವಿನ ಮರ)
ಮುಂತಿ – ಮುಂದೆ
ಮುಂತೀಕಿ ಪೋ (ಮುಂದಕ್ಕೆ ಹೋಗು)
ಮುಂತೀಕಡೇಲೆ (ಮುಂಭಾಗದಲ್ಲಿ)
ಮುಂತಿಮುಂತೀಕ್ (ಮುಂದುಮುಂದಕ್ಕೆ)
ಮುಂತೀ ವಾಶಿಲ್ (ಮುಂತೀತೇ ವಾಶಿಲ್) – ಮುಂಬಾಗಿಲು
ಮುಂತೀವಾಶಿಲಾ ಚಾತ್ (ಮುಂಬಾಗಿಲು ಹಾಕು)
ಯಮಚಂಪಳು – ನಿಂಬೇಹಣ್ಣು
ಗಿಡತ ಹೆಪ್ಪಾ ಯಮಚಂಪಳು ಉಟ್ಟರಾಂದ್
(ಗಿಡದ ತುಂಬಾ ನಿಂಬೇಹಣ್ಣು ಬಿಟ್ಟಿದೆ)
ಯರಿ – ಉರಿ
ಯರಿಂಜಿ ಪೊಹಾಂಡಿ ರಾಂದ್
(ಉರಿದು ಹೋಗುತ್ತಿದೆ)
ರಾಡ – ಇದ್ದಾರೆ
ವಂದರಾಡ – ಬಂದಿದ್ದಾರೆ
ರಾಣಿ – ಇದ್ದೇನೆ, ರಾಣಿ
ನಾ ಸುಖಮಾ ರಾಣಿ (ನಾನು ಸುಖವಾಗಿದ್ದೇನೆ)
ರಾಣೀ ಪೋಲೆ ರಾಣಿ (ರಾಣಿಯ ಹಾಗೆ ಇದ್ದೇನೆ)
ವಂದರಾಣಿ (ಬಂದಿದ್ದೇನೆ)
ಓದಾಂಡ ರಾಣಿ (ಓದುತ್ತಿದ್ದೇನೆ)
ರಾಣು – ಇದ್ದೇವೆ
ವಾರ್ತೊಲ್ಲೀರಾಣು (ಮಾತಾಡಿದ್ದೇವೆ)
ನಂಗಳೂ ರಾಣು (ನಾವೂ ಇದ್ದೇವೆ)
ರಾಣ (ಇದ್ದಾರೆ)
ರಾಂದ್ – ಇದೆ, ಇದ್ದಾನೆ, ಇದ್ದಾಳೆ
ಇಂಗತ್ಥಿದ್ ರಾಂದ್? (ಇಲ್ಲೇನಿದೆ?)
ಕಮಲು ವರಾಂಡಿ ರಾಂದ್ (ಕಮಲ ಬರುತ್ತಿದ್ದಾಳೆ)
ರಾಮು ವರಾಂಡಿ ರಾಂದ್ (ರಾಮನು ಬರುತ್ತಿದ್ದಾನೆ)
ರಾನ್ನ (ಇವೆ, ಇದ್ದಾರೆ)
ವಚ್ಚಲ್ – ಬಚ್ಚಲು
ವಚ್ಚಲುಳ್ಳೆ ಸ್ನಾನೂ ಪಣ್ಣ್ (ಬಚ್ಚಲಲ್ಲಿ ಸ್ನಾನವನ್ನು ಮಾಡು)
ವಚ್ಚಿರಾನ್ನ – ಇಟ್ಟಿದ್ದಾರೆ
ಮೂಲೇಲೆ ವಚ್ಚಿರಾನ್ನ (ಮೂಲೆಯಲ್ಲಿಟ್ಟಿದ್ದಾರೆ)
ವಟ್ಟ್ – ಕಡಿ, ಒಟ್ಟು
ಮರತಾ ವಟ್ಟಾಂಡಿರಾಣ (ಮರವನ್ನು ಕಡಿಯುತ್ತಿದ್ದಾನೆ)
ಊರ್ ವಟ್ಟಾ ಬೀರಣು (ಊರು ಬಟ್ಟು ಬೀರಬೇಕು)
ವಟ್ಟು – ಬೆಟ್ಟ
ವಟ್ಟಂಗ ಹೆಂಬೇ ರಾನ್ನ (ಬೆಟ್ಟಗಳು ತುಂಬಾ ಇವೆ)
ವಟ್ಟಹಾಡ್ (ಗುಡ್ಡಗಾಡು)
ವಟ್ಟತಮೇಲೆ ರಾಂದ್ (ಬೆಟ್ಟದಮೇಲೆ ಇದೆ)
ವಡಮ – ಆಭರಣ
ವಡಮೆಹೀಳಯೆಲ್ಲಾ ಇಟ್ಟಕೊ (ಆಭರಣಗಳನ್ನೆಲ್ಲ ಹಾಕಿಕೊ)
ವಡಿ – ಬೆಳಗಾಗು
ವಡಿಹಿಡ್ ತಡಿ (ಬೆಳಗಾಗಲಿ ತಡಿ)
ವಡಿವಡಿಯೂ (ಬೆಳಬೆಳಗೂ)
ವಡಿಚಾಲ, ವಡಿಚಾಮು – ಬೆಳಗ್ಗೆ
ವಡಿಚಾಲಾ ಪುಳೇಕ್ ಪೊಹಣು
(ಬೆಳಗ್ಗೆ ನದಿಗೆ ಹೋಗಬೇಕು)
ವಣ್ಣು – ಬಣ್ಣ
ಹೆಂಬೇ ವಣ್ಣು ಪೋಡವಾಣ
(ತುಂಬಾ ಬಣ್ಣ ಹಾಕಬೇಡ)
ವಣ್ಣತ್ತೇ (ಬಣ್ಣದ)
ವಪ್ಪಿ – ಇರಿಸು
ವಪ್ಪಿಯನ್ನ (ಇರಿಸುತ್ತಾರೆ)
ವಯಲ್ – ಬಯಲು
ವಯಲಕ್ಕ್ ಪೋಯಿರಾಣ (ಬಯಲಿಗೆ ಹೋಗಿದಾರೆ)

ವಯ್ಯಿ – ಇಡು, ನೇಮಿಸು
ಗುಪ್ತಚರಾಳಾ ವಯ್ಯಣು
(ಗುಪ್ತಚರರನ್ನು ನೇಮಿಸಬೇಕು)
ವಚ್ಚಿ (ಇಟ್ಟು)
ವರ – ಬರೆ
ವರೇ ಪೋಡಣಿ (ಬರೇ ಹಾಕುತ್ತೀನಿ)
ವರಾ ಉಳಂದ್ (ಬರೆ ಬೀಳುತ್ತೆ)
ವರರದ್ – ಬರುವುದು
ವರಹಿಡ್ (ಬರಲಿ)
ವರಕ್ಕ್ (ಬರಲು)
ವರುಂ (ಬರೋದು)
ವಂದಿಹ್ಯೊ? (ಬಂದಿರಿ?)
ವರಕೂಡಾದ್ (ಬರಕೂಡದು)
ವರಾಂಡಿಂದಿಹೀನ (ಬರುತ್ತಿದ್ದರು)
ವರೀಕ್ – ವರೆಗೆ
ಅಂತೀವರೀಕ್ (ಅಲ್ಲಿಯವರೆಗೆ)
ನರ್ಮದಾವರೀಕ್ (ನರ್ಮದೆಯವರೆಗೆ)
ವಲ – ಬಲೆ
ಮೀನಾ ಪುಡಿಯಕ್ಕಿ ವಲೇವೀಸೀ ರಾನ್ನ
(ಮೀನು ಹಿಡಿಯಲು ಬಲೆ ಬೀಸಿದ್ದಾರೆ)
ವಲಿ – ಬಲಿ
ತೋಂಗಾ ವಲಿಂಜಿರಾಂದೋ ಪಾರ್
(ತೆಂಗಿನಕಾಯಿ ಬಲಿತಿದೆಯೋ ನೋಡು)
ವಲು – ಬಲ
ಇಂಗಣ್ಣು ವಲತಕ್ಕ್ ಪೋ (ಇಲ್ಲಿಂದ ಬಲಕ್ಕೆ ಹೋಗು)
ವಹಿ – ವಹಿಸು
ರಾಮೋತ್ಸವತಾ ನೀನೇ ವಹಿಚ್ಚಿಕೊ
(ರಾಮೋತ್ಸವವನ್ನು ನೀನೇ ವಹಿಸಿಕೊ)
ವಹಿಯಣ (ವಹಿಸುತ್ತಾನೆ)
ವಳಕ್ – ಬೆಳಕು, ತೊಳಿ
ವಳಕ್ ರಾಂದ್, ವಾ (ಬೆಳಕಿದೆ, ಬಾ)
ಅಳಹಾ ವಳಕಮ್ಮ (ಚೆನ್ನಾಗಿ ತೊಳಿಯಮ್ಮ)
ವಳಕ್ ಕಂಡಿಲ್ಲಾ ಅ್ತಂಡಾಕ (ಬೆಳಕು ಕಾಣಲಿಲ್ಲ ಅಂದರೆ, ದಾರಿ ತೋಚಲಿಲ್ಲಾ ಅಂದರೆ, ಬುದ್ಧಿ ಹೊಳೀಲಿಲ್ಲ ಅಂದರೆ)
ವಳತೀನೆ – ಬೆಳೆಸಿದೆ
ಪ್ರಯಾಣತಾ ವಳತೀನೆ (ಪ್ರಯಾಣ ಬೆಳೆಸಿದೆ)
ವಳವ್ – ನಾಚಿಕೆ
ವಳವಹಂದ್ (ನಾಚಿಕೆಯಾಗುತ್ತೆ)
ವಳವ್ ವಾಮಾನು – ಮಾನ ಮರ್ಯಾದೆ
ವಳವ್ ವಾಮಾನು ಇಲ್ಲಾದವುಂ
(ಮಾನ ಮರ್ಯಾದೆ ಇಲ್ಲದವನು)

ವಳಿ – ದಾರಿ, ಬೆಳಕು, ಸಾರಿಸು, ಬಳಿ
ವಳೀ ಪಾರ್ (ದಾರಿನೋಡು)
ವಳೀ ಉಡು (ದಾರಿ ಬಿಡು, ಕಳಿಸಿ ಬಾ)
ವಳಿ ಇಲ್ಲ (ದಾರಿ ಇಲ್ಲ)
ನೆಲತಾ ವಳಿಚಾಚಾ? (ನೆಲವನ್ನು ಸಾರಿಸಿಯಾಯಿತೇ?)
ಅ್ತಥನ ವಳಿ ರಾಂದ್ ಇಂಗೆ ! (ಎಷ್ಟು ಬೆಳಕಿದೆ ಇಲ್ಲಿ !)
ವಳೀ ಉಡರದ್ (ಹಿಂದೆ ಹಳ್ಳಿಯಿಂದ ಪಕ್ಕದ ಹಳ್ಳಿಗೆ ನಡೆದೇ ಓಡಾಡುತ್ತಿದ್ದರು. ಹೀಗೆ ಬಂದ ಗೆಳೆಯನನ್ನೋ ನೆಂಟರನ್ನೋ ಅರ್ಧದಾರಿಯವರೆಗೆ ಜೊತೆಗೆ ಹೋಗಿ ಕಳಿಸಿಕೊಟ್ಟು ಬರುತ್ತಿದ್ದರು. ಅದು ಪ್ರೀತಿಗೌರವದ ದ್ಯೋತಕ.)
ವಳಿ ಕಾಟರದ್ (ದಾರಿ ತೋರಿಸುವುದು)
ಕಾಲಕ್ಕ್ ಅ್ಣ್ಣೆ ವಳಿಯಣಿ (ಕಾಲಿಗೆ ಎಣ್ಣೆ ಬಳಿಯುತ್ತೇನೆ)
ವಳ್ಳಿ – ಬೆಳ್ಳಿ
ವಳ್ಳೀ ತಾಳಿ ಪತ್ತೀ (ಬೆಳ್ಳಿ ದೀಪ ಹತ್ತಿಸು)
ವಳ್ಳೀ ತಟ್ಟ (ಬೆಳ್ಳಿತಟ್ಟೆ)
ವಾ – ಬಾ
ನೀನೂ ವಾ (ನೀನೂ ಬಾ)
ವಂದ? (ನೀನು ಬಂದೆಯಾ, ಅದು ಬಂತೆ?)
ವಂದಿಹ್ಯೊ (ಬಂದಿರಿ), ವಂನ (ಬಂದರು)
ವಂದಿಲ್ಲ (ಬರಲಿಲ್ಲ), ವಂದ್ (ಬಂದು)
ವರಣು (ಬರಬೇಕು), ವರಡಾಳಾ? (ಬರುವರೆ?)
ವರರ (ಬರುವ), ವರಂದಾಲೂ (ಬರದಿದ್ದರೂ)
ವರಡ? (ಬರುತ್ತೀಯಾ?), ವರವಿ (ಬರಿಸು)
ವಂದರಾಡ (ಬಂದಿದ್ದಾರೆ)
ವನ್ನ (ಬಂದ, ಬಂದರು)
ವಂದಪೊ (ಬಂದಾಗ)
ವಾಡ್ – ಬಾಡು
ವಾಳೇಯಾ ವಾಡಿಯಣು
(ಬಾಳೆ ಎಲೆಯನ್ನು ಬಾಡಿಸಬೇಕು)
ವಾಣ – ಬೇಡ
ವರವಾಣ (ಬರಬೇಡ), ವಾಣಾಮಾ? (ಬೇಡವೆ?)
ವಾಣಿಹ್ಯೊ (ಬೇಡ)
ವಾರ್ಥ – ಮಾತು
ವಾರ್ಥೊಲ್ಲು, ವಾರ್ಥೆ ಚೊಲ್ಲು (ಮಾತಾಡು)
ವಾಯಿ – ಬಾಯಿ
ವಾಯಾಪೋಡವಾಣ (ಬಾಯಿ ಹಾಕಬೇಡ)
ವಾಯುಳ್ಳೆ (ಬಾಯಿಯಲ್ಲಿ)
ವಾರರದ್ – ಬಾಚುವುದು
ತಲೇ ವಾರಿಕಿಂಡಾಚ? (ತಲೆ ಬಾಚಿಕೊಂಡಾಯಿತೆ?)
ವಾರಿ – ಬಾರಿ, ಸಾರಿ
ಇಂದೆ ವಾರಿ (ಈ ಬಾರಿ, ಈ ಸಾರಿ)

ವಾವ – ವಾವೆ, ಸಂಬಂಧದ ರೀತಿ
ಇವೆ ವಾವೇಲೆ ಎನಕ್ ಮಚಿನಾಪೊಣ್ಣು
(ಇವಳು ಸಂಬಂಧವಾಗಿ ನನಗೆ ಸೋದರಸೊಸೆ)
ವಾಶಿಲ್ – ಬಾಗಿಲು
ವಾಶಿಲಾ ಇಟ್ಟಕೊ (ಬಾಗಿಲು ಹಾಕಿಕೊ)
ವಾಶಿಲಕ್ಕ್ ವಂದ್ ಅಪ್ಪಡಿಯೇ ಪೋಚು
(ಬಾಗಿಲಿಗೆ ಬಂದು ಹಾಗೇ ಹೋದ)
ವಾಶಿಲ್ ಬಡೇತೇ (ಬಾಗಿಲು ಹತ್ತಿರದ)
ವಾಹಾ – ವಾಹಕರು
ವಾಹಾಳಾ ಅಳಿ (ವಾಹಕರನ್ನು ಕರಿ)
ವಾಳ್ – ಬಾಳು
ನೀ ವಾಳೀ ವಟ್ಟೀ ಪಣ್ಣಣಮಾನವು
(ನೀನು ಬಾಳೀ ಬದುಕೀ ಮಾಡಬೇಕಾದವನು)
ವಿರಲ್ – ಬೆರಳು
ವಿರಲಕ್ಕ್ ಉಂಗುರು (ಬೆರಳಿಗೆ ಉಂಗುರ)
ವಿರಲಹೀಡೆ (ಬೆರಳುಗಳ)
ವಿರಿಕ್ – ಬಿರುಕು
ನೆಲು ವಿರಿಕ್ ಉಟ್ಟರಾಂದ್ (ನೆಲ ಬಿರುಕುಬಿಟ್ಟಿದೆ)
ವಿರಿಯರದ್ – ಬಿತ್ತುವುದು
ವಿರಿಚಾಚೋ? (ಬೀಜ ಊರಿ ಆಯಿತೋ?
ಬಿತ್ತನೆ ಮಾಡಿ ಆಯಿತೋ?)
ವೀತಿ – ದಾರಿ
ವೀತೀತೇವಾಳಕ್ಕೆಲ್ಲಾ ಚೊಲ್ಲವಾಣ
(ಬೀದಿಯೋರಿಗೆಲ್ಲಾ ಹೇಳಬೇಡ)
ವೀಶ್ (ವೀಸ್) – ಬೀಸು
ವೀಶೀರಾಂದ್ (ಬೀಸಿದೆ)
ಖಾತ್ ಅಳಹಾ ವೀಸಾಂಡಿರಾಂದ್ (ಗಾಳಿ ಚೆನ್ನಾಗಿ ಬೀಸುತ್ತಿದೆ)
ವೆನ್ನೀರ್ – ಬಿಸಿನೀರು
ವೆಚ್ಚೆನಕ್ (ಬಿಸಿ)
ವೆಚ್ಚೆನಕಾ ರಾಂದ್ (ಬಿಸಿಯಾಗಿದೆ)
ವೆನ್ನೀರಾ ಕುಡು (ಬಿಸಿನೀರು ಕೊಡು)
ವೆಲ್ಲು – ಬೆಲ್ಲ
ವೆಲ್ಲತ ಪಾಯಸ (ಬೆಲ್ಲದ ಪಾಯಸ)
ವೇರ್ಪ್ – ಬೆವರು
ವೇರ್ಪ್ ಹರಿಯಾಂಡಿ ರಾಂದ್ (ಬೆವರು ಹರಿಯುತ್ತಿದೆ)
ವೇರ್ವಕ್ಕ್ (ಬೆವರುವುದಕ್ಕೆ)
ವೇರ್ – ಬೇರು
ತೋಂಗಾವೇರ್ ಬಲು ಘಟ್ಟಿ
(ತೆಂಗಿನ ಬೇರು ಬಹಳ ಗಟ್ಟಿ)
ಅಂಗೇ ವೇರುಟ್ಟಾಚಿ ಅವ್ರುಂ
(ಅಲ್ಲೇ ಆತ ಬೇರುಬಿಟ್ಟಾಯಿತು)

ವೇಲ್ – ಬಿಸಿಲು
ವೇಲಾ ಕಾಚಿವಾಣಾ (ಬಿಸಿಲು ಕಾಯಿಸಬೇಡ)
ವೇಲಾಯಿಟ್ (ಬಿಸಿಲಾಗಿ)
ವೈ(ಯಿ) – ಇಡು, ಬಯ್ಯಿ
ಇಂಗೆ ವೈ(ಯಿ) (ಇಲ್ಲಿ ಇಡು), ವಚ್ಚ? (ಇಟ್ಟೆಯಾ?)
ವಚ್ಚಿಕೊ (ಇಟ್ಟುಕೊ), ವಚ್ಚಿಂತಾ (ಇಟ್ಟುದನ್ನು), ವಶ್ಚ (ಬೈದರು)
ವಶ್ಚುಟ (ಬೈದುಬಿಟ್ಟರು), ವಚ್ಚ್ (ಇಟ್ಟು)
ವಂಕ್ಯೊ – ತೊಗೊ
ಇಂದೆ ಪುಸ್ತಕತಾ ವಂಕ್ಯೊ (ಈ ಪುಸ್ತಕವನ್ನು ತೊಗೊ)
ವಂಕಿಂಡ್ (ತೊಗೊಂಡು)
ಇಂದೆ ಪಳತಾ ವಂಕ್ಯೊ (ಈ ಹಣ್ಣನ್ನು ತೊಗೊ)
ವಂಡ್ – ಬೆಂಡು
ವಂಡಾ ಕಟ್ಟಿಕಿಂಡ್ ಈಜಲಾಂ
(ಬೆಂಡು ಕಟ್ಟಿಕೊಂಡು ಈಜಬಹುದು)
ವಂಡಿ – ಬಂಡಿ
ವಂಡಿಹೀಡೆ (ಬಂಡಿಗಳ)
ವಂಡಿ ವಂದಾಚಿ (ಗಾಡಿ ಬಂದಾಯಿತು)
ವಂದರಾನ್ನ – ಬಂದಿವೆ, ಬಂದಿದ್ದಾರೆ
ಹುಡುಗಕ್ಕಾ ವಂದರಾನ್ನ (ಹುಡುಗರು ಬಂದಿದ್ದಾರೆ)
ಪೊಶುಕಾ ವಂದರಾನ್ನ (ಹಸುಗಳು ಬಂದಿವೆ)
ವಾಂಗ್ – ತೆಗೆ
ವಾಂಗೀ ಪೋಡು (ತೆಗೆದುಹಾಕು)
ವಾಂಗಲಾಂ (ತೆಗೆಯಬಹುದು), ಕಾಲಾವಾಂಗ್ (ಕಾಲು ತೆಗೆ)
ವಾಂಗರದ್ – ತೆಗೆಯುವುದು
ವಾಂಗೀವೈಯಿ (ತೆಗೆದಿಡು)
ವೊಂದ್ – ಬೆಂದು
ವೊಂದ್ ಪೊಹಾಂಡರಾಣಿ (ಬೆಂದುಹೋಗುತ್ತಿದ್ದೇನೆ)
ಶಿಕ್ಕ್ – ಸಿಕ್ಕು
ಶಿಕ್ಕೀ ಪೋಟಕಂಡ
(ಸಿಕ್ಕಿಹಾಕಿಕೊಂಡೆ, ಸಿಕ್ಕಿಹಾಕಿಕೊಂಡ, ಸಿಕ್ಕಿಹಾಕಿಕೊಂಡರು)
ಶಿಕ್ಕುಳು, ಶಿಕ್ಕೀ ಉಳು (ಸಿಕ್ಕಿಬೀಳು)
ಶೀಯ್ – ಸೀಯಿ
ಅತ್ಥನ ತೋಂಗಾಯೂ ಮೂಡುಕಾಶಕ್ಕ್ ಶೀಂಜುಡತ್
(ಅಷ್ಟು ತೆಂಗನ್ನೂ ಮೂರುಕಾಸಿಗೆ ಸೀದುಬಿಟ್ಟ)
ರೊಟ್ಟಿ ಶೀಯಾಂಡ್ ರಾಂದ್ (ರೊಟ್ಟಿ ಸೀಯುತ್ತಿದೆ)
ಶುದ್ಧಿ – ಸುದ್ದಿ, ತಂಟೆ, ಸ್ವಚ್ಛ
ಶುದ್ಧಿ ಕುಡತ್ ವಂದೆ (ಸುದ್ದಿ ಕೊಟ್ಟು ಬಂದೆ)
ಅತ್ತಂದೆ ಶುದ್ಧೀಕ್ ಪೊಹವಾಣ
(ಅವನ ತಂಟೆಗೆ ಹೋಗಬೇಡ)
ಹಾತಾ ಶುದ್ಧೀ ಪಣ್ಣೀ ಆಚ?
(ಮನೆಯನ್ನು ಸ್ವಚ್ಛಗೊಳಿಸಿ ಆಯಿತೆ?)

ಶೇದ್ – ಸೇದು
ನೀರಾ ಶೇದಿಕಿಂಡ್ ವಾ (ನೀರು ಸೇದಿಕೊಂಡು ಬಾ)
ಶೇರ್ – ಸೇರು
ಎಲ್ಲಾ ಶೇರೀಂದ (ಎಲ್ಲರೂ ಸೇರಿದ್ದರು)
ಒರು ಶೇರ್ ಅ್ಥರಶಿ ಓಣು (ಒಂದು ಸೇರು ಅಕ್ಕಿ ಬೇಕು)
ಶೀಂಯಿ – ಸಿಹಿ
ಇಂಡ್ ಶೀಂಯಾ ಚೂಡಣು
(ಇವತ್ತು ಸಿಹಿ ಊಟಮಾಡಬೇಕು)
ಸಾಪಡ್ – ತಿನ್ನು
ತಿಂಡೀ ಸಾಪಟ್ಟಾಚಿ (ತಿಂಡಿ ತಿಂದಾಯಿತು)
ಪಳತಾ ಸಾಪಡ್ (ಹಣ್ಣನ್ನು ತಿನ್ನು)
ಸಾಪಡಾವದ್ (ತಿನ್ನಬಾರದ್ದು)
ಸೊತ್ತಮಾ, ಸೊಸ್ತಮಾ – ಸುಮ್ಮನೆ
ಸೊತ್ತಮಾ ಇರಂಗೊ (ಸುಮ್ಮನೆ ಇರಿ)
ಸಾಂ – ಅನ್ನ
ಸಾತಾ ಪಣ್ಣೀ ಆಚಿ (ಅನ್ನ ಮಾಡಿಯಾಯಿತು)
ಸಾತಾ (ಅನ್ನವನ್ನು)
ಹಾಮಣಿಯಾಂ – ಗಂಡ
ಹಾಮಣಿಯಾಂದೆ ಕೈಯುಳ್ಳೆ ಚೊಲ್ಲು
(ಗಂಡನ ಕೈಯಲ್ಲಿ ಹೇಳು)

ಹುಡಿ – ಹಾಗೆ
ಇಲ್ಲಾದ ಹುಡಿ (ಇಲ್ಲದ ಹಾಗೆ)
ಹೆಪ್ಪ್ – ತುಂಬು
ಪಾತ್ರೇಕ್ ನೀರಾ ಹೆಪ್ಪ್ (ಪಾತ್ರೆಗೆ ನೀರು ತುಂಬು)
ಹೆಪ್ಪಾ (ಭರ್ತಿ),
ಪಾತ್ರೇ ಹೆಪ್ಪಾ ನೀರ್ ರಾಂದ್
(ಪಾತ್ರೆಯ ತುಂಬಾ ನೀರು ಇದೆ)
ಹೋತಿಕ್ಕರದ್ – ಹೋತಿರುವುದು
ಹೋತಿರಾನ್ನ (ಹೋತಿವೆ)
ಹಾಂ – ಮನೆ
ಹಾತಕ್ಕ್ ವಾ (ಮನೆಗೆ ಬಾ)
ಹಾಮೂ ಇಲ್ಲ ಅ್ಥತ್ಥಾದೂ ಇಲ್ಲ
(ಮನೆಯೂ ಇಲ್ಲ ಏನೂ ಇಲ್ಲ)
ಹಾಂ–ವಾಶ್ಲ್ (ಮನೆ ಮಾರು, ಮನೆ ಮಠ)
ಹಾಂಬಡಿಯ – ಹೆಂಡತಿ
ಹಾಂಬಡಿಯಾ ವಂದಾಚಿ (ಹೆಂಡತಿ ಬಂದಾಯಿತು)
ಹೆಂಬ್ – ತುಂಬು
ಹೆಂಬಿಕ್ಯೊ (ತುಂಬಿಕೊ), ಹೆಂಬಣು (ತುಂಬಬೇಕು)
ಹೆಪ್ಪಣು (ತುಂಬಬೇಕು)
ಹೆಂಬಾ, ಹೆಂಬೀ, ಹೆಂಬೇ – ತುಂಬ
ಹೆಂಬಾ ಫೆರೀ ಮೊಶು (ತುಂಬಾ ದೊಡ್ಡ ಹಸು)

ನಮನ

ಕೊಣನೂರು ಮೇಷ್ಟ್ರು

(ವ್ಯಾಕರಣ ವಿದ್ವಾನ್ ವೇ॥ಬ್ರ॥ಶ್ರೀ ಬಿ.ಎಸ್. ಸುಬ್ಬರಾಯಶಾಸ್ತ್ರೀ)

ನಮ್ಮ ಊರು ಜಿಟ್ಟೇನಹಳ್ಳಿ. ಬಸವಾಪಟ್ಟಣದಿಂದ 10 ಮೈಲು ದೂರದಲ್ಲಿರುವ ಹಳ್ಳಿ ಅದು. ಬಸವಾಪಟ್ಟಣದ 'ಕೊಣನೂರು ಮೇಷ್ಟ್ರು' ಎಂದರೆ ನಮ್ಮ ಜಿಟ್ಟೇನಹಳ್ಳಿಯವರಿಗೆಲ್ಲಾ ಗೊತ್ತಿತ್ತು. ಕಚ್ಚೆಪಂಚೆ ಉಟ್ಟು, ಜುಬ್ಬಾ ತೊಟ್ಟು, ಹೆಗಲಮೇಲೆ ಶಲ್ಯ ಏರಿಸಿಕೊಂಡು ಇರುವ ಚಿತ್ರ ಅದು. ಹಣೆಯಲ್ಲಿ ಗಂಧ, ಅಥವಾ ವಿಭೂತಿ. ಕಿವಿಗೆ ಕಡಕು ಹಾಕಿತ್ತು. ಬಸವಾಪಟ್ಟಣದಲ್ಲೇ ತಯಾರಾದ ಮೆಟ್ಟು ಹಾಕಿಕೊಂಡು, ಉದ್ದನೆಯ ಕೋಲಿನ ಹಿಡಿ ಇರುವ ಛತ್ರಿ ಹಿಡಿದುಕೊಂಡು ಓಡಾಡುತ್ತಿದ್ದರು. ನಿತ್ಯವೂ ಅವರು ಬಸವಾಪಟ್ಟಣದಿಂದ ಕೊಣನೂರಿನ ಶಾಲೆಗೆ ಬಸ್ಸಿನಲ್ಲಿ ಹೋಗುತ್ತಿದ್ದರು, ಅದಕ್ಕಿಂತ ಹೆಚ್ಚಿನವೇಳೆ ನಡೆದೇ ಹೋಗುತ್ತಿದ್ದರು. ನಮ್ಮೂರಿನ ಪ್ರತಿಯೊಬ್ಬರೂ ಅವರನ್ನು ಬಲ್ಲರು, ಮಾತ್ರವಲ್ಲ, ಅವರಲ್ಲಿ ಪೂಜ್ಯಭಾವವನ್ನಿಟ್ಟುಕೊಂಡಿದ್ದರು.

ಬೆಳಗ್ಗೆ ಅವರು ಕಾವೇರಿಯಲ್ಲಿ ಸ್ನಾನ ಮಾಡಿಕೊಂಡು ಮನೆಗೆ ಹಿಂದಿರುಗುವಾಗಲೂ ಅವರನ್ನು ಕಾಣುತ್ತಿದ್ದುದುಂಟು. ಆಗ ಅವರು ಒದ್ದೆ ಟವಲೊಂದನ್ನು ಸುತ್ತಿಕೊಂಡಿರುತ್ತಿದ್ದರು. ಒಗೆದ ಒದ್ದೆ ಬಟ್ಟೆಗಳನ್ನು ತಲೆಯ ಮೇಲೆ ಇರಿಸಿಕೊಂಡಿರುತ್ತಿದ್ದ ರೀತಿಯೇ ವಿಶೇಷವಾಗಿರುತ್ತಿತ್ತು. ಕೈಯಲ್ಲಿ ನೀರು ತುಂಬಿದ ಪಂಚಪಾತ್ರೆ ಹಿಡಿದುಕೊಂಡು ಹೋಗುತ್ತಿದ್ದ ಅವರು ಮೈತುಂಬ ವಿಭೂತಿಯಿಂದ ಶೋಭಿಸುತ್ತಿದ್ದರು. ಆ ಸಮಯದಲ್ಲಿ ತದೇಕಚಿತ್ತದಿಂದ ಮಂತ್ರಗಳನ್ನು ಹೇಳಿಕೊಂಡು ಗಂಭೀರವಾಗಿ ಹೋಗುತ್ತಿದ್ದ ಅವರ ಬಗೆಗೆ ನಮ್ಮ ಗೌರವ ಇನ್ನೂ ಹೆಚ್ಚುತ್ತಿತ್ತು.

ಹೀಗಾಗಿ ನಮ್ಮ ಊರಿನವರು ಏನಾದರೂ 'ಜೋಯಿಸ' ಕೇಳಬೇಕಾದರೆ ಅವರ ಬಳಿಯೇ ಹೋಗುತ್ತಿದ್ದೆವು. ನಮ್ಮ ಊರಿನ ಪ್ರತಿಯೊಬ್ಬರ ಪರಿಚಯವೂ ಅವರಿಗಿತ್ತು. ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ಮಾತಾಡಿಸುತ್ತಿದ್ದ ಅವರಲ್ಲಿ ಊರವರಿಗೆ ಅದೇನೋ ವಿಶೇಷವಾದ ನಂಬಿಕೆ ಮೂಡಿತ್ತು. 'ಜೋಯಿಸ' ಕೇಳಲು ಎರಡು ಬಾಳೆಹಣ್ಣು, ಎಲೆ, ಅಡಿಕೆ, ಎರಡು ಆಣೆ ಇಟ್ಟಿರುತ್ತಿದ್ದೆವು. ಅದನ್ನೂ ಅವರು ನಮ್ಮ ಜತೆ ಬಂದಿರುತ್ತಿದ್ದ ಪುಟ್ಟಮಕ್ಕಳಿಗೆ ಹಂಚಿಬಿಡುತ್ತಿದ್ದರು. ಅದರಿಂದಾಗಿ ಅವರು ಇನ್ನೂ ಆತ್ಮೀಯರಾಗಿಬಿಟ್ಟಿದ್ದರು.

ಹೀಗಿರುವಾಗ ನಮ್ಮೂರು ಜಿಟ್ಟೇನಹಳ್ಳಿಯಲ್ಲಿ ಒಂದು ಭೀಕರ ಪ್ರಸಂಗ ನಡೆಯಿತು. ಊರ ಗೌಡರ ಮನೆಯಲ್ಲಿ ಆದುದು ಅದು. ನೆರೆಹೊರೆಯವರ ಜಗಳ. ಹನುಮೇಗೌಡರಿಗೆ ಗಟ್ಟಿಮುಟ್ಟಾದ ನಾಲ್ಕು ಮಕ್ಕಳಿದ್ದರು. ಶಿವಲಿಂಗೇಗೌಡರಿಗೆ ಮಕ್ಕಳಿರಲಿಲ್ಲ. ಹನುಮೇಗೌಡರ ಮನೆಯವರೆಲ್ಲರೂ ಮುಂಗೋಪಿಗಳು; ಹೊಡೆದಾಟ, ಬಡಿದಾಟ ಎಂದರೆ ಅವರಿಗೆಲ್ಲ ಏನೋ ಉತ್ಸಾಹ. ಅವರ ಎದುರಿಗೆ ಸ್ವಲ್ಪ ದೂರದಲ್ಲಿ ಶಿವಲಿಂಗೇಗೌಡರ ಮನೆ ಇತ್ತು. ಅವರು ಮೆದುಸ್ವಭಾವದವರು. ಅವರನ್ನು ಎಲ್ಲರೂ ಶಿವಲಿಂಗು ಎನ್ನುತ್ತಿದ್ದರು. ಅವರ ಪಕ್ಕದ ಮನೆಯೇ ನಮ್ಮದು.

ಒಂದು ದಿನ ಊರೇ ಕಿತ್ತುಹೋಗುವ ಹಾಗೆ ರಂಪಾಟ, ಚೀರಾಟವಾಯಿತು. ಶಿವಲಿಂಗುವಿನ ಹೆಂಡತಿ ಎದೆಎದೆ ಹೊಡೆದುಕೊಂಡು ಬಾಯಿಬಾಯಿ ಬಡಿದುಕೊಂಡು ತಲೆತಲೆ ಚಚ್ಚಿಕೊಂಡು ಜೋರಾಗಿ ಅಳುತ್ತಿದ್ದಳು. ಶಿವಲಿಂಗೇಗೌಡರು ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಹೊಲದಲ್ಲಿ ಆದ ಜಗಳ ಅದು. ಶಿವಲಿಂಗೇಗೌಡರ ಹಸು ಹನುಮೇಗೌಡರ ಪೈರಿಗೆ ಬಾಯಿ ಹಾಕಿತ್ತು. ಆ ಸಂಬಂಧದಲ್ಲಿ ಮಾತಿಗೆ ಮಾತು ಬೆಳೆದಿತ್ತು. ಹನುಮೇಗೌಡರೂ ಅವರ ಮಕ್ಕಳೂ ಶಿವಲಿಂಗೇಗೌಡರಿಗೆ ಚೆನ್ನಾಗಿ ತದುಕಿ ಕೊನೆಗೆ ಗುದ್ದಲಿಯ ಕಾವಿನಲ್ಲಿ ಹಣೆಗೆ ಹೊಡೆದುಬಿಟ್ಟಿದ್ದರು. ಶಿವಲಿಂಗೇಗೌಡರ ತಲೆ ಒಡೆದು ರಕ್ತ ಚೆಲ್ಲಾಡಿತ್ತು; ಅವರಿಗೆ ಪ್ರಜ್ಞೆ ಹೋಗಿತ್ತು. ಊರಿನ ಕೆಲವರು ಅವರನ್ನು ಮೈಸೂರಿನ ಆಸ್ಪತ್ರೆಗೆ ಒಯ್ದರು. ತಿಂಗಳಮೇಲೆ ಹುಷಾರಾಗಿ ಅವರು ಊರಿಗೆ ಹಿಂದಿರುಗಿದರು.

ತಪ್ಪು ಮಾಡಿದ್ದರೂ ಹನುಮೇಗೌಡರ ಮನೆಯವರಿಗೆ ಪೊಲೀಸರ ಹೆದರಿಕೆಯಾಗಲಿ, ಊರವರ ಭೀತಿಯಾಗಲಿ ಇರಲಿಲ್ಲ. ಅವರು ದರ್ಪದಲ್ಲೇ ಇರುತ್ತಿದ್ದವರು. ಊರಿನಲ್ಲಿ ಯಾರೂ ಅವರನ್ನು ಪ್ರಶ್ನಿಸುವವರೇ ಇರಲಿಲ್ಲ. ಮೊದಲೇ ಹೆದರಿ ತತ್ತರಿಸಿಹೋಗಿದ್ದ ಶಿವಲಿಂಗೇಗೌಡರನ್ನು ಕತ್ತರಿಸಿಹಾಕುವುದಾಗಿ ಹೇಳಿಕೊಂಡು ತಿರುಗತೊಡಗಿದರು. ಅದಕ್ಕಾಗಿ ಹೊಂಚೂ ಹಾಕುತ್ತಿದ್ದರು.

ಆಗ ಇನ್ನೂ ಜನಗಳಿಗೆ ತಿಳಿವಳಿಕೆ ಬಂದಿರಲಿಲ್ಲ. ನ್ಯಾಯಧರ್ಮದಲ್ಲಿ ನಡೆಯುವವರು ಪೊಲೀಸರು ಎಂದರೆ ಇನ್ನೂ ಹೆದರುತ್ತಿದ್ದರು. ಪಂಚಾಯಿತಿ ಹಾಕುವ ಧೈರ್ಯವನ್ನೂ ಅಂಥವರು ಮಾಡುತ್ತಿರಲಿಲ್ಲ. ಆದರೆ ಮರಣಭೀತಿಯಲ್ಲಿ ಎಷ್ಟು ದಿನ ಇರಬಹುದು? ವ್ಯವಸಾಯ ನೋಡಿಕೊಳ್ಳುವವರು ಯಾರು? ಅದರಿಂದಾಗಿ ಶಿವಲಿಂಗೇಗೌಡರು ಏನಾದರೊಂದು ಪರಿಹಾರ ಕಂಡುಕೊಳ್ಳಲೇಬೇಕಿತ್ತು. ಆಗ ಅವರಿಗೆ ಆಶಾಕಿರಣವಾಗಿ ಕಂಡವರು 'ಕೊಣನೂರು ಮೇಷ್ಟ್ರು'.

ಶಿವಲಿಂಗೇಗೌಡರು ಕೋಳಿಕೂಗುವ ಮೊದಲೇ ಎದ್ದು ಗುಟ್ಟಾಗಿ ಬಸವಾಪಟ್ಟಣಕ್ಕೆ ಹೋದರು. ಮೇಷ್ಟರ ಮನೆಯ ಮುಂದೆ ಕೂತರು. ತಮ್ಮ ಗೋಳು ಹೇಳಿಕೊಂಡು ಅತ್ತರು. ಮೇಷ್ಟರೇ ತಮ್ಮನ್ನು ಬದುಕಿಸಬೇಕೆಂದು ಗೋಳಿಟ್ಟರು.

ಶಿವಲಿಂಗೇಗೌಡರು ಪರಿಪರಿಯಾಗಿ ಬೇಡಿಕೊಂಡರೇನೋ ಹೌದು. ಆದರೆ ಮೇಷ್ಟ್ರು ಯಾವ ವ್ಯವಹಾರಕ್ಕೂ ಹೋಗುತ್ತಿದ್ದವರಲ್ಲ. ತಾವಾಯಿತು ತಮ್ಮ ಶಾಲೆ, ತೋಟ, ಜಪತಪವಾಯಿತು ಎಂದು ಇದ್ದುಬಿಡುತ್ತಿದ್ದವರು ಅವರು. ಅವರು ಹೆಚ್ಚು ಮಾತಾಡುತ್ತಿದ್ದವರೂ ಅಲ್ಲ. ಶಿವಲಿಂಗೇಗೌಡರ ತಲೆಗೆ ಆಗಿದ್ದ ಪೆಟ್ಟು ಮಾಯ್ದಿದ್ದರೂ ಅದರ ಭಯಂಕರವಾದ ಗುರುತು ಇನ್ನೂ ಉಳಿದಿತ್ತು. ಇದನ್ನು ಕಂಡ ಮೇಷ್ಟರಿಗೆ ಅವರ ಮೇಲೆ ಅನುಕಂಪವೇನೋ ಇತ್ತು. ಆದರೆ ತಮಗೆ ಇವೆಲ್ಲಾ ತಿಳಿಯುವುದಿಲ್ಲ ಎಂಬ ತಮ್ಮ ಮಿತಿಯನ್ನೂ ಅವರು ಅರಿತಿದ್ದರು. ಆದರೆ ಶಿವಲಿಂಗೇಗೌಡರು ಕುಟುಂಬಸಹಿತ ಆತ್ಮಹತ್ಯೆ ಮಾಡಿಕೊಳ್ಳುವ ಅಂಚನ್ನು ತಲುಪಿದ್ದರು. ಅದನ್ನು ಉಪೇಕ್ಷಿಸುವ ಹಾಗಿರಲಿಲ್ಲ.

ಮೇಷ್ಟ್ರು ಬಸವಾಪಟ್ಟಣದಲ್ಲಿ ಇದ್ದ ಅನೇಕ ವ್ಯವಹಾರಸ್ಥರಿಗೆ ಹೇಳಿಕಳಿಸಿದರು. ಶಿವಲಿಂಗೇಗೌಡರ ಸಂಕಷ್ಟಗಳನ್ನು ವಿವರಿಸಿ ತಿಳಿಸಿದರು. ಆತನ ಜೀವನ ಉಳಿದು ನೆಮ್ಮದಿಯಾಗಿ ಬಾಳುವಂತೆ ಏನಾದರೊಂದು ಮಾಡಬೇಕೆಂದು ಹೇಳಿದರು.

ಅದು ಫಲ ಕೊಟ್ಟಿತು. ಒಂದು ದಿನ ಬಸವಾಪಟ್ಟಣದಿಂದ ಐವರು ಹಿರಿಯರು ನಮ್ಮೂರಿಗೆ ಬಂದರು. ಹನುಮೇಗೌಡರ ಮನೆಯ ಮುಂದೆಯೇ ಒಂದು ಪಂಚಾಯಿತಿ ಸೇರಿಸಿದರು. ಆ ಪಂಚಾಯಿತಿಗೆ ಕಾಲಿಡಲೂ ನಮ್ಮ ಊರವರಿಗೆ ಹೆದರಿಕೆ. ಯಾರೂ ಅತ್ತ ಸುಳಿಯಲಿಲ್ಲ. ಆ ಹಿರಿಯರೇ ಹನುಮೇಗೌಡರಿಗೂ ಅವರ ಮಕ್ಕಳಿಗೂ ವಿಧವಿಧವಾಗಿ ಬುದ್ಧಿ ಹೇಳಿದರು. ನಡುನಡುವೆ ಪೋಲೀಸರ ಹೆದರಿಕೆಯನ್ನೂ ಒಡ್ಡಿದರು. ಅಲ್ಲಿ ಬಂದಿದ್ದವರೆಲ್ಲರೂ ಶ್ರೀಮಂತರು, ರಾಜಕೀಯದಲ್ಲಿ ನುರಿತವರು, ವ್ಯವಹಾರಸ್ಥರು, ಜನಬಲ ಇದ್ದವರು. ಸುಮಾರು ಮೂರು ಗಂಟೆ ಈ ಪಂಚಾಯಿತಿ ನಡೆಯಿತು. ಹನುಮೇಗೌಡರೂ ಅವರ ಮಕ್ಕಳೂ ಮೌನವಾಗಿ ಕೂತಿದ್ದ ರೀತಿಯನ್ನು ಕಂಡು ಪಂಚಾಯಿತಿದಾರರಿಗೆ ನೆಮ್ಮದಿಯಾಯಿತು. ಕೊನೆಯದಾಗಿ ಒಂದು ಎಚ್ಚರಿಕೆಯ ಮಾತನ್ನು ಹೇಳಿ ಅವರೆಲ್ಲ ಎದ್ದರು. ತಕ್ಷಣ ಹನುಮೇಗೌಡರು ಮಕ್ಕಳಿಗೆ ಆರ್ಭಟಿಸಿ ಹೇಳಿದರು, 'ಲೇ, ಎಳ್ಕಂಡ್ಬನ್ರಲಾ ಆ.... ಮಗನ್ನ. ಕತ್ತರಿಸಿ ಹಾಕಿ ಇವ್ರೆಲ್ರಿಗೂ ಒಂದೊಂಚೂರ್ ಕೊಟ್ಟ್ ಕಳ್ಸಾನಾ.' ತಕ್ಷಣ ಮಕ್ಕಳೆಲ್ಲ ಕತ್ತಿ, ಕೊಡಲಿ ಹಿಡಿದು ಶಿವಲಿಂಗೇಗೌಡರ ಮನೆಯ ಕಡೆಗೆ ನುಗ್ಗಿದರು. ಬಂದಿದ್ದ ಪಂಚಾಯಿತಿದಾರರು ಕೈಮುಗಿದು ಕಾಡಿಬೇಡಿ ಅದನ್ನು ತಪ್ಪಿಸುವ ಹೊತ್ತಿಗೆ ಸಾಕುಸಾಕಾಯಿತು. ಎಲ್ಲರೂ ಬೆವರೊರೆಸಿಕೊಂಡು ಊರಿಗೆ ಹಿಂದಿರುಗಿದರು.

ಈಗ ಶಿವಲಿಂಗೇಗೌಡರಿಗೆ ಇನ್ನೂ ನೆಮ್ಮದಿ ಕೆಟ್ಟಿತು. ಅವರ ಬಣವೆಗಳಿಗೆ ಬೆಂಕಿಬಿತ್ತು. ರಾಸುಗಳು ಕಾಣೆಯಾದವು. ಹನುಮೇಗೌಡರ ಮಕ್ಕಳು ಮಚ್ಚುಗಳನ್ನು ಮಸೆಯುತ್ತಿದ್ದ ರೀತಿ ಭಯಂಕರವಾಗಿತ್ತು. ಶಿವಲಿಂಗೇಗೌಡರು ಮನೆಯಲ್ಲಿ ಅಡಗಿ ಕೂತರು. ಆ ಕಾಲದಲ್ಲಿ ಹಳ್ಳಿಗಳು ಒಂದೊಂದು ದ್ವೀಪದಂತೆ ಇರುತ್ತಿದ್ದವು. ಪೊಲೀಸು, ಕಾನೂನು ಇವುಗಳ ಬಳಕೆ ಇರಲೇ ಇಲ್ಲ.

ಇನ್ನು ಸಾಕಾಯಿತು ಎನಿಸಿ ಮತ್ತೆ ಶಿವಲಿಂಗೇಗೌಡರು ಬಸವಾಪಟ್ಟಣಕ್ಕೆ ಹೋದರು. ಮೇಷ್ಟರ ಮನೆಯ ಮುಂದೆ ಕೂತರು. ಮೇಷ್ಟರಿಗೇ ಈಗ ಅಪರಾಧಿ ಭಾವ ಬಂದುಬಿಟ್ಟಿತ್ತು. 'ಸುಮ್ಮನಿದ್ದರೆ ಉಪಟಳ ತಾನಾಗಿಯೇ ಶಮನವಾಗುತ್ತಿತ್ತೇನೋ, ಸಹಾಯ ಮಾಡಲು ಹೋಗಿ ಪರಿಸ್ಥಿತಿ ಇನ್ನೂ ವಿಷಮಿಸಿತಲ್ಲಾ' ಎನಿಸಿತು. ಆದರೆ ಈಗ ಮಾಡಬಹುದಾದರೂ ಏನನ್ನು? ಪೊಲೀಸರಿಗೆ ತಿಳಿಸಿದರೂ ಶಿವಲಿಂಗುವಿನ ಪ್ರಾಣಕ್ಕೆ ಯಾರು ಹೊಣೆಯಾಗಬಹುದು? ಬುದ್ಧಿವಂತರನ್ನು ಕರೆದು ಮತ್ತೆ ಪಂಚಾಯಿತಿ ಮಾಡಿಸಿದರೆ ಅವರೇ ಪ್ರಾಣ ಉಳಿಸಿಕೊಂಡು ಬರುವುದು ಕಷ್ಟವಾದರೆ ಏನು ಸಾಧಿಸಿದ ಹಾಗಾಯಿತು. ತಾನೇ ಮುಂದಾಗೋಣವೆಂದರೆ ಈ ವ್ಯವಹಾರಗಳೆಲ್ಲಾ ನನಗೆ ತಿಳಿಯುವುದಿಲ್ಲವಲ್ಲ ಎಂದು ಪೇಚಾಡಿದರು. ಏನಾದರೂ ಮಾಡಲೇ ಬೇಕಿತ್ತು. ಒಂದು ಕ್ಷಣ ಕಣ್ಣುಮುಚ್ಚಿ ಮೌನವಾಗಿ ಕೂತರು. ಅಲ್ಲಿದ್ದ ಹಸು 'ಅಂಬಾ' ಎಂದು ಕೂಗಿತು. ಕಣ್ಣು ಬಿಟ್ಟರು. ಹಸುವನ್ನೇ ದೃಷ್ಟಿಸಿ ಕ್ಷಣಹೊತ್ತು ಕೂತುಬಿಟ್ಟರು. ಏನೋ ನಿರ್ಧರಿಸಿಕೊಂಡವರಂತೆ ಹೇಳಿದರು, 'ಶಿವಲಿಂಗು, ಹೆದರಬೇಡ. ನಾನು ಭಾನುವಾರ ಬೆಳಗ್ಗೆ ಬರುತ್ತೇನೆ. ಮನೆಯಲ್ಲೇ ಇರು'. ಶಿವಲಿಂಗು ನೆಮ್ಮದಿಯೆಂಬುದನ್ನೇ ಮರೆತು ಎರಡು ತಿಂಗಳಾಗಿತ್ತು. ಈಗ ಏನೋ ಒಂದು ವಿಶ್ವಾಸ ಹುಟ್ಟಿತು. ಆಸೆಯನ್ನು ಹೊತ್ತು ಮನೆಗೆ ಹೋದರು.

ಭಾನುವಾರ ಸರಿಯಾಗಿ ಬೆಳಗ್ಗೆ 10 ಗಂಟೆಯ ಹೊತ್ತಿಗೆ ಮೇಷ್ಟರು ಜಿಟ್ಟೇನಹಳ್ಳಿಯಲ್ಲಿ ಪ್ರತ್ಯಕ್ಷರಾದರು. ಅವರು ಹೋದದ್ದು ಶಿವಲಿಂಗೇಗೌಡರ ಮನೆಗಲ್ಲ, ಹನುಮೇಗೌಡರ ಮನೆಗೆ. ಹನುಮೇಗೌಡರೂ ಅವರ ಮಕ್ಕಳೂ ಮೇಷ್ಟರನ್ನು ಉತ್ಸಾಹದಿಂದಲೇ ಸ್ವಾಗತಿಸಿದರು. ಇಷ್ಟುದೂರ ಈ ಬಿಸಿಲಲ್ಲಿ ಬಂದ ಕಷ್ಟವೇಕೆ ಎಂದೂ ಕೇಳಿದರು. ಮೇಷ್ಟರು 'ಹೀಗೇ, ಕೆಲಸವಿತ್ತು ಹನುಮೇಗೌಡ' ಎನ್ನುತ್ತಾ ಅವರ ಮನೆಯ ಮುಂದಿನ ಕಲ್ಲು ಬಂಡೆಯ ಮೇಲೆ ಮರದ ನೆರಳಲ್ಲಿ ಕೂತರು. ಉಪಚಾರದ ಮಾತುಗಳಾದವು. ಸರಿ, ಹನುಮೇಗೌಡರು ಮನೆಯವರೆಲ್ಲರ 'ಜೋಯಿಸ' ಕೇಳಲು ಶುರುಮಾಡಿದರು. 'ದೊಡ್ಡಮಗನಿಗೇಕೆ ಮಕ್ಕಳಾಗಿಲ್ಲ?' 'ಮೊಮ್ಮಗಳು ದೊಡ್ಡವಳಾದ ಸಮಯ ದೋಷವಿಲ್ಲದ್ದೆ?' 'ತನ್ನ ಹೆಂಡತಿಗೆ ಬಂದಿರುವ ಖಾಯಿಲೆ ದೇಹದ್ದೋ ದೈವದ್ದೋ?' ಹೀಗೇ ಸಾಗಿತ್ತು. ಎಲ್ಲಕ್ಕೂ ಮೇಷ್ಟರು ನಿಧಾನವಾಗಿ ಗುಣಿಸಿ ಗಂಭೀರವಾಗಿಯೇ ಉತ್ತರಗಳನ್ನು ಹೇಳುತ್ತಿದ್ದರು. ಅದಕ್ಕೆ ಸಂಬಂಧಿಸಿದಂತೆಯೇ 'ಧರ್ಮಕರ್ಮ'ವನ್ನು ವಿವರಿಸಿ ಹೇಳುತ್ತಿದ್ದರು. ಅದಕ್ಕೆ ರಾಮಾಯಣ ಮಹಾಭಾರತದ ಪ್ರಸಂಗಗಳ ನಿದರ್ಶನ ನೀಡುತ್ತಿದ್ದರು. ಹೀಗೇ ಎರಡು ಗಂಟೆ ಕಳೆಯಿತು. ಕಾಮಧೇನುವಿನ ಬಾಲದಿಂದ ಹೊಮ್ಮಿದ ಸೈನಿಕರು ಹೇಗೆ ಶತ್ರುಗಳನ್ನು ನಾಶ ಮಾಡಿದರು ಎಂಬ ವಿವರಣೆ ಸಾಗಿತ್ತು. ಈ ವಿವರಣೆ ಕೊಡುತ್ತಿರುವಾಗ ಹನುಮೇಗೌಡರ ಮುಖ ಕೊಂಚ ಕಂದಿದಂತೆ ಕಂಡಿತು. ಅವರು

ಅವತ್ತು ತಮ್ಮ ಪೈರಿಗೆ ಶಿವಲಿಂಗೇಗೌಡರ ಹಸು ಬಾಯಿ ಹಾಕಿದಾಗ ತಾವೇ ಅದರ ಬಾಲವನ್ನು ಕತ್ತರಿಸಿದ್ದನ್ನು ನೆನೆದು ಭೀತರಾಗಿದ್ದರು. ಅದರಿಂದಲೇ ಇಬ್ಬರಿಗೂ ಮಾತಿಗೆ ಮಾತು ಬೆಳೆದು ರಂಪವಾಗಿದ್ದುದು. ಗೌಡರು ಕುಂದಿದ್ದನ್ನು ಕಂಡು ಮೇಷ್ಟರು ಕಾಮಧೇನುವಿನ ಪ್ರಸಂಗವನ್ನು ನಿಧಾನವಾಗಿ ವಿಸ್ತಾರವಾಗಿ ವಿವರಿಸಿದ್ದರು.

ಕ್ಷಣಕಾಲ ಮೌನ ಆವರಿಸಿತು. ಹನುಮೇಗೌಡರು ಮಾತ್ರವಲ್ಲ, ಮನೆಯವರೆಲ್ಲ ಅಧೀರರಾಗಿದ್ದರು. ತತ್‌ಕ್ಷಣ, ಮೌನವನ್ನು ಮುರಿದು, ಮೇಷ್ಟರು, 'ಅದಾಯಿತಲ್ಲ, ಹನುಮೇಗೌಡ, ನನಗೊಂದು ಕರಾವಿನ ಹಸುಬೇಕು. ಅದಕ್ಕೇ ನಾನೀಗ ಇಷ್ಟು ದೂರ ಬಂದದ್ದು' ಎಂದರು. 'ಮನೆಯಲ್ಲಿ ದೇವರ ಅಭಿಷೇಕಕ್ಕೆ ಹಾಲಿಲ್ಲ ನೋಡು. ಒಂದು ಚೂರು ಸಗಣಿಗೂ ಬೇರೆ ಮನೆಗೆ ಹೋಗಬೇಕಾಗಿ ಬಂದಿದೆ. ಗೋಮಾತೆ ಇಲ್ಲದ ಮನೆ ಶ್ಮಶಾನ ಇದ್ದಹಾಗೆ... ನೀನೇ ನನಗೆ ಸಹಾಯ ಮಾಡಬೇಕು' ಎಂದು ಸೇರಿಸಿದರು.

ಹೆಚ್ಚುತ್ತಿದ್ದ ಭೀತಿಯನ್ನು ಅದುಮಿಟ್ಟ ಹನುಮೇಗೌಡರೂ ಅವರ ಮಕ್ಕಳೂ ಕರಾವಿನ ಹಸು ಯಾರಲ್ಲಿ ಸಿಗಬಹುದು ಎಂಬ ಚರ್ಚೆಗೆ ತೊಡಗಿದರು. ಅಲ್ಲೇ ಇದ್ದವರೊಬ್ಬರು ಹೇಳಿದರು, 'ಅಲ್ಲೆಲ್ಲ ಯಾಕೆ ಅಲೆಯಕ್ಕೆ ಹೋಯ್ತೀರಿ? ಶಿವಲಿಂಗೇಗೌಡರ ಮನೇಲೇ ಅದಲ್ಲ?' ತತ್‌ಕ್ಷಣ, ಮೇಷ್ಟರು, ಹನುಮೇಗೌಡ, ನೀನೇ ಹೋಗಿ ಶಿವಲಿಂಗೂನ ಒಪ್ಪಿಸು. ನಿನ್ನ ಮಾತು ಅವನು ಕೇಳಿಯೇ ಕೇಳುತ್ತಾನೆ. ನನಗೆ ಅಲೆಯುವ ಕಷ್ಟ ತಪ್ಪುತ್ತದೆ' ಎಂದರು. ಹನುಮೇಗೌಡರು ಏನು ಮಾಡಬಹುದೋ ಎಂದು ಅಲ್ಲಿ ಸೇರಿದ್ದ ಊರವರಿಗೆಲ್ಲ ಕುತೂಹಲ. ಅವರಾದರೋ ತಮ್ಮ ಮಕ್ಕಳಿಗೂ ಹೇಳಲಿಲ್ಲ. ಖುದ್ದಾಗಿ ತಾವೇ ಹೋದರು. ಶಿವಲಿಂಗುವಿನ ಮನೆಯ ಕದ ತಟ್ಟಿದರು. ಶಿವಲಿಂಗುವಿನ ಕೈ ಹಿಡಿದು ಹಸುವನ್ನು ಮೇಷ್ಟರಿಗೆ ಕೊಡುವಂತೆ ಒಪ್ಪಿಸಿ ಅವನನ್ನೇ ತಮ್ಮ ಜತೆ ಕರೆದುಕೊಂಡು ಬಂದು ಮೇಷ್ಟರ ಮುಂದೆ ನಿಲ್ಲಿಸಿದರು. ಅಷ್ಟುಹೊತ್ತಿಗೆ ಯಾರೋ ಹಸುವನ್ನು ಅಟ್ಟಿಕೊಂಡು ಬಂದು ಮೇಷ್ಟರ ಮುಂದೆ ನಿಲ್ಲಿಸಿದರು. ಮೇಷ್ಟರು ಎದ್ದು ಬಂದು ಅದನ್ನೊಮ್ಮೆ ನೋಡಿದರು. ತುಂಡಾದ ಬಾಲವನ್ನು ಕಂಡು ದುಃಖದಿಂದ ಅದರ ಮೋಟುಬಾಲವನ್ನು ನೇವರಿಸಿದರು. ಅವರ ಕಣ್ಣು ಹನಿಗೂಡಿತ್ತು. ತಮ್ಮ ಶಲ್ಯದಿಂದ ಕಣ್ಣು ಒರೆಸಿಕೊಂಡು ವ್ಯಾಪಾರ ಮುಗಿಸಿದರು. ಹನುಮೇಗೌಡರ ಹೆಂಡತಿ ಹಾಲಿನ ಲೋಟ ತಂದು ಮೇಷ್ಟರ ಮುಂದೆ ಇಟ್ಟು ಅಡ್ಡಬಿದ್ದು 'ನಮ್ಮ ಪಾಪ ಕಳೆದುಬಿಡಿ ಮೇಷ್ಟರೇ' ಎಂದು ಅಂಗಲಾಚಿದರು. ಮೇಷ್ಟರು 'ಅವ್ವಾ, ಗಂಡಸರ ಬುದ್ಧಿ ಹಾಳಾದಾಗ ಹೆಂಗಸರು ಸರಿ ಮಾಡಬೇಕು. ನೀನೇ ನಿನ್ನ ಕೈಯಾರ ಆ ಹಾಲನ್ನು ಶಿವಲಿಂಗೂಗೆ ಕೊಡು, ನಿತ್ಯ ಗೋಪೂಜೆ ಮಾಡು' ಎಂದರು. ಅಂದು ಶಿವಲಿಂಗೇಗೌಡರು ಹಾಲು ಕುಡಿಯುತ್ತಿದ್ದ ಆ ದೃಶ್ಯ ಇಂದೂ ಊರವರ ಕಣ್ಣಿಗೆ ಕಟ್ಟಿದಹಾಗಿದೆ.

ಮೇಷ್ಟರು, 'ಹನುಮೇಗೌಡ! ನಾನು ಹಸುವನ್ನು ಹಿಡಿದು ಹತ್ತು ಮೈಲಿ ನಡೆದುಹೋಗಲಾರೆ. ನಿನ್ನ ಮಗನೂ ಶಿವಲಿಂಗುವೂ ಅದನ್ನು ತಂದು ನನ್ನ ಮನೆಯ ಮುಂದೆ ಕಟ್ಟಲಿ. ಸಹಾಯವಾಗುತ್ತದೆ ಎಂದು ಹೇಳಿ ಹಗ್ಗವನ್ನು ಅವರಿಬ್ಬರ ಕೈಗೆ ಒಪ್ಪಿಸಿ ತಾವು ಹೊರಟರು.

ಅದನ್ನು ಕಂಡಿದ್ದವರು ಈಗಲೂ ಅದೊಂದು ಪವಾಡ ಎಂದೇ ನಂಬಿದ್ದಾರೆ.

ಜೆ.ಟಿ. ಬೋರೇಗೌಡ
ಜಿಟ್ಟೇನಹಳ್ಳಿ

ಸಾರ್ಥು

ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪನವರ 'ಸಾರ್ಥ' ಎಂಟನೇಶತಮಾನದ ಭಾರತದ ರಾಜಕೀಯ, ಧಾರ್ಮಿಕ ಮತ್ತು ಕೌಟುಂಬಿಕ ತಲ್ಲಣಗಳನ್ನು ಚಿತ್ರಿಸುವ ಸಂಕೀರ್ಣ ಕಾದಂಬರಿ. 'ಸಾರ್ಥು' ಸಂಕೇತಿಯಲ್ಲಿ ಬರುತ್ತಿರುವ ಅನುವಾದ ಮತ್ತು ಈ ಭಾಷೆಯಲ್ಲಿ ಬರುತ್ತಿರುವ ಪ್ರಪ್ರಥಮ ಗ್ರಂಥ.

* ಕನ್ನಡ, ತಮಿಳು, ಮಲೆಯಾಳಂ, ಕೊಡವ, ತುಳು ಇಂತಹ ಯಾವುದೇ ದ್ರಾವಿಡ ಭಾಷೆಯ ಅಲ್ಪಪರಿಚಯ ಇರುವವರಿಗೂ ಆಪ್ತವಾಗುವ ಪುಸ್ತಕ.

* ದ್ರಾವಿಡಭಾಷಾ ವಿಜ್ಞಾನದಲ್ಲಿ ಆಸಕ್ತರಾದವರು ಓದಲೇಬೇಕಾದ ಕೃತಿ.

* ಮೂಲದ್ರಾವಿಡದ ಬಗೆಗೆ ಆಸಕ್ತಿ ಹುಟ್ಟಿಸುವ ಗ್ರಂಥ.

* ಒಂಬತ್ತು ದೀರ್ಘ ಶತಮಾನಗಳ ಕಾಲ ಮೂಲಭಾಷೆಯೊಂದಿಗೆ ಸಂಪರ್ಕವನ್ನು ಕಡಿದುಕೊಂಡ ಭಾಷೆಯೊಂದರ ಅಧ್ಯಯನಕ್ಕೆ ಒಳ್ಳೆಯ ಆಕರ.

* ಭಾಷಾಚರಿತ್ರೆಯ ಹೊಳಹುಗಳಿಗೆ ತವನಿಧಿ.

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು